2017–18 ನೇ ಸಾಲಿನಲ್ಲಿ ಕ.ವಿ.ಪ್ರ.ನಿ.ನಿಯು ಟಿ ಮತ್ತು ಪಿ ಶಾಖೆಯಲ್ಲಿ 400 ಕೆ.ವಿ ವರೆಗಿನ ಪ್ರಮುಖ ಯಂತ್ರೋಪಕರಣಗಳಾದ ವಿದ್ಯುತ್ ಪರಿವರ್ತಕಗಳು, ಛೇದಗಳು, ಮಿಂಚು ನಿರೋಧಕಗಳನ್ನು ಖರೀದಿಸಿರುತ್ತದೆ. ಇದಲ್ಲದೇ ಪ್ರಸರಣ ವ್ಯವಸ್ಥೆಯ ನಿರ್ವಹಣೆಗಾಗಿ (D.C) ಭೂ ಸಂಪರ್ಕ ದೋಶ ಪತ್ತೆಹಚ್ಚುವ ಸಾಧನ, ಟವರ್ ಪಾದದ ಪ್ರತಿರೋಧ ಮತ್ತು ಸ್ವ ಪ್ರಚೋಧನಾ ನಿರೋಧ ಶಕ್ತಿಯನ್ನು ಅಳೆಯುವ ಸಾಧನಗಳನ್ನು ಖರೀದಿಸಲಾಗಿದೆ. ಕ.ವಿ.ಪ್ರನಿನಿ ಮತ್ತು ಎಸ್ಕಾಂಗಳಲ್ಲಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳ ಆಯ್ಕೆಗಾಗಿ ತಂತ್ರಾಂಶ ಅಭಿವೃದ್ಧಿಗಾಗಿ ಮತ್ತು ಆನ್‌ಲೈನ್ ಪರೀಕ್ಷೆ ನಡೆಸಲು ಹಾಗೂ ವೆಬ್ ಆಧಾರಿತ ವಿದ್ಯುತ್ ಸಿಮಿಲೇಷನ್ ಮತ್ತು ಇಂಜಿನಿಯರಿಂಗ್

ಪರಿಹಾರ ಸೇವೆಗಳನ್ನು ಪಡೆಯಲು ಸಹ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು.

ಆ) ಟೆಂಡರ್ ಆಹ್ವಾನಿಸಿದ ದೊಡ್ಡ ಪ್ರಮಾಣದ ಕಾಮಗಾರಿಗಳ ವಿವರ:–

i. ಬೆಂಗಳೂರಿನ ದೇವನಹಳ್ಳಿ ಹಾರ್ಡ್‌ವೇರ್ ಪಾರ್ಕ್‌ನಲ್ಲಿ 2 x 500 ಎಂ.ವಿ.ಎ 400/ 220 ಕೆ.ವಿ, 400 ಕೆ.ವಿ ಕಡೆಗೆ ಜಿ.ಐಎಸ್ ಮತ್ತು 220 ಕೆ.ವಿ ಕಡೆಗೆ ಎಐಎಸ್ ವಿದ್ಯುತ್ ಉಪ ಕೇಂದ್ರವನ್ನು ಪಾವಗಡ ಸೋಲಾರ್ ವಿದ್ಯುತ್ ಪಾರ್ಕ್ ಇಂದ ವಿದ್ಯುತ್‌ಶಕ್ತಿಯನ್ನು ಸ್ವೀಕರಿಸಲು ಪಿ.ಜಿ.ಸಿ.ಐ.ಎಲ್ ನಿರ್ಮಿಸುತ್ತಿರುವ 400 ಕೆ.ವಿ ಡಿ/ಸಿ ಪ್ರಸರಣ ಮಾರ್ಗವನ್ನು ಟರ್ಮಿನೇಟ್ ಮಾಡಲು 2 ಸಂಖ್ಯೆಯ 400 ಕೆ.ವಿ ಟರ್ಮಿನಲ್ ಬೇ ಗಳನ್ನು ಒಳಗೊಂಡಂತೆ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪನೆ ಮಾಡುವುದು.

ii. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಮೈಲಸಂದ್ರದಲ್ಲಿ 3 x 500 ಎಂ.ವಿ.ಎ, 400/220 ಕೆ.ವಿ ಜಿ.ಐ.ಎಸ್ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವುದು.

iii. ರಾಮನಗರ ಜಿಲ್ಲೆ, ಚನ್ನಪಟ್ಟಣ ದಲ್ಲಿ 1 x 100 ಎಂ.ವಿ.ಎ, 220 ಕೆ.ವಿ ಕಡೆಗೆ ಹೈಬ್ರಿಡ್ ಸ್ವಿಚ್‌ಗೇರ್ ಮತ್ತು 66 ಕೆ.ವಿ.ಯ ಕಡೆಗೆ ಕನ್‌ವೆನ್‌ಷನಲ್ ಸ್ವಿಚ್‌ಗೇರ್ ಉಳ್ಳ 220/66/11 ಕೆ.ವಿ ಯ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಿಸುವುದು.

iv. ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರ ದಲ್ಲಿ 2x100 ಎಂ.ವಿ.ಎ, 220/66/11 ಕೆ.ವಿ ವಿದ್ಯುತ್ ಉಪ ಕೇಂದ್ರವನ್ನು ಗ್ರೀನ್ ಎನರ್ಜಿ ಕಾರಿಡಾರ್ ಅಡಿಯಲ್ಲಿ ಸ್ಥಾಪಿಸುವುದು.

v. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ದಲ್ಲಿ 2 x 100 ಎಂ.ವಿ.ಎ 220/66/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಗ್ರೀನ್ ಎನರ್ಜಿ ಕಾರಿಡಾರ್ ಅಡಿಯಲ್ಲಿ ಸ್ಥಾಪಿಸುವುದು.

vi. ಯಾದಗಿರಿ ಜಿಲ್ಲೆಯ ರಾಮಸಮುದ್ರದಲ್ಲಿ 2 x 100 ಎಂ.ವಿ.ಎ 220/110/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು.

vii. ರಾಮನಗರ ಜಿಲ್ಲೆ, ಬಿಡದಿ ತಾಲ್ಲೂಕಿನ ಕುಂಬಳಗೂಡಿನಲ್ಲಿ 2 x 150 ಎಂ.ವಿ.ಎ, 220/66/11 ಕೆ.ವಿ ಜಿ.ಐ.ಎಸ್ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವುದು.

viii. ಉಡುಪಿ ಜಿಲ್ಲೆ ಹೆಗುಂಜೆಯಲ್ಲಿ 2 x 100 ಎಂ.ವಿ.ಎ 220/110/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು.

ix. 400 ಕೆ.ವಿ ಪಿ.ಜಿ.ಸಿ.ಐ.ಎಲ್ ಬೀರೇನಹಳ್ಳಿ ಉಪ ಕೇಂದ್ರದಿಂದ ಹಿರಿಯೂರು 220/66 ಕೆ.ವಿ ಉಪ ಕೇಂದ್ರದ ವರೆಗೆ ಹಾಲಿ ಇರುವ ಡಿ.ಸಿ ಗೋಪುರಗಳ ಮೇಲೆ 220 ಕೆ.ವಿ ಎಸ್.ಸಿ ಮಾರ್ಗ ನಿರ್ಮಾಣ ಹಾಗೂ 220/ 66 ಕೆ.ವಿ ಚಿತ್ರದುರ್ಗ ಉಪ ಕೇಂದ್ರದಿಂದ 220/66/11 ಕೆ.ವಿ ಹಿರಿಯೂರು ಉಪ ಕೇಂದ್ರದ ವರೆಗೆ ಹಾಲಿ ಇರುವ 220 ಕೆ.ವಿ ಎಸ್.ಸಿ ಮಾರ್ಗವನ್ನು ಡಿ.ಸಿ ಮಾರ್ಗಾವಾಗಿ ಗ್ರೀನ್ ಎನರ್ಜಿ ಕಾರಿಡಾರ್ ಅಡಿಯಲ್ಲಿ ಪರಿವರ್ತನೆಗೊಳಿಸುವುದು.

ಅಲ್ಲದೇ ವಿಶ್ವಾಸನೀಯ ಗುಣಮಟ್ಟದ ವಿದ್ಯುತ್ ಪೂರೈಕೆ ಮತ್ತು ಮುಂಬರುವ ವಿದ್ಯುಚ್ಛಕ್ತಿ ಬೇಡಿಕೆ ನೀಗಿಸಲು 220 ಕೆ.ವಿ ಮತ್ತು 66 ಯು.ಜಿ ಕೇಬಲ್ ಗಳನ್ನು ಒಳಗೊಂಡಂತೆ, ಬೆಂಗಳೂರು ಬಳಿಯ ಹೆಚ್.ಬಿ.ಆರ್ ಮತ್ತು ಸೆಸ್ನಾ ಪಾರ್ಕ್‌ಗಳಲ್ಲಿ (CESSNA) 2 x 150 ಎಂ.ವಿ.ಎ 220/66/11 ಕೆ.ವಿ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.

ಕ.ವಿ.ಪ್ರ.ನಿ.ನಿ ಯು 66ಕೆವಿ, 110ಕೆವಿ, 220ಕೆವಿ ಮತ್ತು 400ಕೆವಿಯ ಓಲ್ಟೇಜ್ ನ ಹೊಸ ವಿದ್ಯುತ್ ಉಪ ಕೇಂದ್ರಗಳು ಮತ್ತು ಯು.ಜಿ ಕೇಬಲ್‌ಗಳನ್ನು ಒಳಗೊಂಡಂತೆ ಮಾರ್ಗಗಳ ನಿರ್ಮಾಣ, ಜಿಐಎಸ್ ವಿದ್ಯುತ್ ಕೇಂದ್ರ ಮತ್ತು ಸಂಪೂರ್ಣ ಟರ್ನ್‌ಕೀ ಆಧಾರವನ್ನು ಒಳಗೊಂಡಂತೆ, ಆನಂದರಾವ್ ವೃತ್ತದ ವ್ಯಾಪ್ತಿಯಲ್ಲಿ ಕಚೇರಿ ಕಾಂಪ್ಲೆಕ್ಸ್ ನಿರ್ಮಾಣ ಮತ್ತು ಕವಿಪ್ರನಿನಿ ಹೂಡಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಬಹು ಉದ್ದೇಶದ ಆಡಿಟೋರಿಯಮ್, ಆಂಫಿ ಥಿಯೇಟರ್ ಹಾಗೂ ಅಧಿಕ ವಸತಿಗೃಹ ಬ್ಲಾಕ್‌ಗಳ ನಿರ್ಮಾಣ ಕಾಮಗಾರಿಗಳಿಗೆ ರೂ.3,32,712.02 ಲಕ್ಷ ಮೊತ್ತದ ಕಾರ್ಯಾದೇಶ ನೀಡಿರುತ್ತದೆ.

ಇ) ಮೇಲ್ಕಂಡ ಕಾರ್ಯಾದೇಶ ನೀಡಲಾಗಿರುವ ಕಾಮಗಾರಿಗಳಲ್ಲಿ ದೇವನಹಳ್ಳಿ ಮತ್ತು ಮೈಲಸಂದ್ರ ವಿದ್ಯುತ್ ಕೇಂದ್ರದಲ್ಲಿ 400 ಕೆ.ವಿ ಹಾಗೂ ಕೋರಮಂಗಲ, ಐ.ಟಿ.ಐ, ಬೃಂಧಾವನ ಮತ್ತು ಕುಂಬಳಗೂಡು ವಿದ್ಯುತ್ ಕೇಂದ್ರದಲ್ಲಿ

220 ಕೆ.ವಿ ಜಿ.ಐ.ಎಸ್ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಿಸುವ ವಿಶೇಷ ಕಾಮಗಾರಿಗಳೂ ಸೇರಿವೆ.

ಈ) 2017–18 ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ಮತ್ತು ಖರೀದಿಗೆ ಸಂಬಂಧಿಸಿದಂತೆ, ಕಾರ್ಯಾದೇಶ ನೀಡಿರುವ ವಿವರಗಳು ಕೆಳಕಂಡಂತಿದೆ.

1. ಕಾಮಗಾರಿಗಳು:

i. 400ಕೆವಿ ಮತ್ತು 220ಕೆವಿ ಕಾಮಗಾರಿಗಳು:

ಆಹ್ವಾನಿಸಿದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ	ಕಾಮಗಾರಿಗಳ ವಿವರ	ಸಂಖ್ಯೆ/ ಕಿ.ಮೀ ಗಳಲ್ಲಿ
220 ಕೆ.ವಿ ಮತ್ತು ಹೆಚ್ಚಿನ ವೋಲ್ಟೇಜ್ ಗಳ ಕಾಮಗಾರಿಗಳು	13	167419.73	400ಕೆವಿ, ಎ.ಐ.ಎಸ್	ಇಲ್ಲ
			400ಕೆವಿ ಜಿ.ಐ.ಎಸ್	2 ಸಂಖ್ಯೆ
			220 ಕೆ.ವಿ ಎ.ಐ.ಎಸ್	5 ಸಂಖ್ಯೆ
			220 ಕೆವಿ ಜಿಐಎಸ್	1 ಸಂಖ್ಯೆ
			400/220 ಕೆವಿ 500 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	5 ಸಂಖ್ಯೆ
			220/66/11 ಕೆವಿ 150 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	6 ಸಂಖ್ಯೆ
			220/110 ಕೆವಿ 100 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	5 ಸಂಖ್ಯೆ
			220/ 66/11 ಕೆವಿ 100 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	5 ಸಂಖ್ಯೆ
			110/11 ಕೆವಿ 10 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	1 ಸಂಖ್ಯೆ
			220 ಕೆವಿ ರಿಪೇರಿ ಮತ್ತು ದುರಸ್ಥಿ ಕಾಮಗಾರಿಗಳು	ಇಲ್ಲ
			400 ಕೆವಿ ಪ್ರಸರಣ ಮಾರ್ಗಗಳು	1.709 ಕಿ.ಮೀ ಗಳು
			220 ಕೆವಿ ಪ್ರಸರಣ ಮಾರ್ಗಗಳು	166.765 ಕಿ.ಮೀ ಗಳು
			110 ಕೆವಿ ಪ್ರಸರಣ ಮಾರ್ಗಗಳು	73.542 ಕಿ.ಮೀ ಗಳು
			66 ಕೆವಿ ಪ್ರಸರಣ ಮಾರ್ಗಗಳು	117.841 ಕಿ.ಮೀ ಗಳು
			400 ಕೆವಿ ಟರ್ಮಿನಲ್ ಬೇ ಗಳು	ಇಲ್ಲ
			220 ಕೆವಿ ಟರ್ಮಿನಲ್ ಬೇ ಗಳು	16 ಸಂಖ್ಯೆ
			110 ಕೆ.ವಿ ಟರ್ಮಿನಲ್ ಬೇ ಗಳು	5 ಸಂಖ್ಯೆ
			66 ಕೆವಿ ಟರ್ಮಿನಲ್ ಬೇ ಗಳು	6 ಸಂಖ್ಯೆ
			220 ಕೆ.ವಿ ಯು.ಜಿ ಕೇಬಲ್	23.999 ಕಿ.ಮೀ ಗಳು
			66 ಕೆ.ವಿ ಯು.ಜಿ ಕೇಬಲ್	7.648 ಕಿ.ಮೀ ಗಳು

ಕೈಬಿಡಲಾದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ. (ಲಕ್ಷಗಳಲ್ಲಿ)	ಕಾಮಗಾರಿಗಳ ವಿವರ	ಸಂಖ್ಯೆ/ ಕಿ.ಮೀ (ಗಳಲ್ಲಿ)
220 ಕೆ.ವಿ ಮತ್ತು ಹೆಚ್ಚಿನ ವೋಲ್ಟೇಜ್ ಕಾಮಗಾರಿಗಳು	1	821.27	220/110 ಕೆ.ವಿ 100 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	1 ಸಂಖ್ಯೆ

ಕಾರ್ಯಾದೇಶ ನೀಡಿದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ. (ಲಕ್ಷಗಳಲ್ಲಿ)	ಕಾಮಗಾರಿಗಳ ವಿವರ	ಸಂಖ್ಯೆ/ ಕಿ.ಮೀ (ಗಳಲ್ಲಿ)
220 ಕೆ.ವಿ ಮತ್ತು ಹೆಚ್ಚಿನ ವೋಲ್ಟೇಜ್ ಕಾಮಗಾರಿಗಳು	20	253186.33	400 ಕೆ.ವಿ ಎ.ಐ.ಎಸ್	ಇಲ್ಲ
			400ಕೆವಿ ಜಿಐಎಸ್	2 ಸಂಖ್ಯೆ
			220 ಕೆ.ವಿ ಎ.ಐ.ಎಸ್	7 ಸಂಖ್ಯೆ
			220 ಕೆವಿ ಜಿಐಎಸ್	4 ಸಂಖ್ಯೆ
			400/220 ಕೆವಿ 500 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	5 ಸಂಖ್ಯೆ
			220/66/11 ಕೆವಿ 150 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	10 ಸಂಖ್ಯೆ
			220/110/11 ಕೆವಿ 100 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	4 ಸಂಖ್ಯೆ
			220/ 66/11 ಕೆವಿ 100 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	9 ಸಂಖ್ಯೆ
			110/11 ಕೆವಿ 10 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು	1 ಸಂಖ್ಯೆ
			220 ಕೆವಿ ರಿಪೇರಿ ಮತ್ತು ದುರಸ್ಥಿ ಕಾಮಗಾರಿಗಳು	ಇಲ್ಲ
			400 ಕೆವಿ ಪ್ರಸರಣ ಮಾರ್ಗಗಳು	1.709 ಕಿ.ಮೀ ಗಳು
			220 ಕೆವಿ ಪ್ರಸರಣ ಮಾರ್ಗಗಳು	424.432 ಕಿ.ಮೀ ಗಳು
			110 ಕೆವಿ ಪ್ರಸರಣ ಮಾರ್ಗಗಳು	41.358 ಕಿ.ಮೀ ಗಳು
			66 ಕೆವಿ ಪ್ರಸರಣ ಮಾರ್ಗಗಳು	151.022 ಕಿ.ಮೀ ಗಳು
			400 ಕೆವಿ ಟರ್ಮಿನಲ್ ಬೇ ಗಳು	ಇಲ್ಲ
			220 ಕೆವಿ ಟರ್ಮಿನಲ್ ಬೇ ಗಳು	31 ಸಂಖ್ಯೆ
			110 ಕೆ.ವಿ ಟರ್ಮಿನಲ್ ಬೇ ಗಳು	2 ಸಂಖ್ಯೆ
			66 ಕೆವಿ ಟರ್ಮಿನಲ್ ಬೇ ಗಳು	9 ಸಂಖ್ಯೆ
			220 ಕೆ.ವಿ ಯು.ಜಿ ಕೇಬಲ್	29.879 ಕಿ.ಮೀ ಗಳು
			66 ಕೆ.ವಿ ಯು.ಜಿ ಕೇಬಲ್	13.048 ಕಿ.ಮೀ ಗಳು

ii. 110ಕೆವಿ ಮತ್ತು 66 ಕೆವಿ ಕಾಮಗಾರಿಗಳು:–

ಆಹ್ವಾನಿಸಿದ ಟೆಂಡರ್	ಸಂಖ್ಯೆ	ಒಟ್ಟು ಮೊತ್ತ ರೂ. (ಲಕ್ಷಗಳಲ್ಲಿ)	ಕಾಮಗಾರಿಗಳ ವಿವರ	ಸಂಖ್ಯೆ/ ಕಿ.ಮೀ (ಗಳಲ್ಲಿ)
110/11 ಕೆ.ವಿ ವಿದ್ಯುತ್ ಉಪ ಕೇಂದ್ರಗಳು, 66/11 ಕೆ.ವಿ ವಿದ್ಯುತ್ ಉಪ ಕೇಂದ್ರಗಳು, 66 ಕೆ.ವಿ ಪ್ರಸರಣ ಮಾರ್ಗಗಳು, 66 ಕೆ.ವಿ ಭೂಗತ ಕೇಬಲಿನ ಮಾರ್ಗಗಳು ಹಾಗೂ 110 ಕೆ.ವಿ, ಭೂಗತ ಕೇಬಲಿನ ಮಾರ್ಗಗಳು	58	51097.81	110/11 ಕೆ.ವಿ ವಿದ್ಯುತ್ ಕೇಂದ್ರಗಳು	13 ಸಂಖ್ಯೆ.
			66/11 ಕೆ.ವಿ ವಿದ್ಯುತ್ ಕೇಂದ್ರಗಳು	38 ಸಂಖ್ಯೆ
			66 ಕೆ.ವಿ ಮಾರ್ಗಗಳು (Over head lines)	46.039 ಕಿ.ಮೀ
			66 ಕೆ.ವಿ ಭೂಗತ ಕೇಬಲಿನ ಮಾರ್ಗಗಳು:– ಅ) 1 C x 1000 ಚ.ಮಿ.ಮೀ ಆ) 3 C x 300 ಚ.ಮಿ.ಮೀ	 7.098 ಕಿ.ಮೀ 17.692 ಕಿ.ಮೀ
			110 ಕೆ.ವಿ, 1 C x 240 ಚ.ಮಿ.ಮೀ ಭೂಗತ ಕೇಬಲಿನ ಮಾರ್ಗಗಳು	2.123 ಕಿ.ಮೀ

ಕೈಬಿಡಲಾದ ಟೆಂಡರ್‌ಗಳು	ಸಂಖ್ಯೆ	ಒಟ್ಟು ಮೊತ್ತ ರೂ. (ಲಕ್ಷಗಳಲ್ಲಿ)	ಕಾಮಗಾರಿಗಳ ವಿವರ	ಸಂಖ್ಯೆ/ ಕಿ.ಮೀ (ಗಳಲ್ಲಿ)
110/11 ಕೆ.ವಿ ವಿದ್ಯುತ್ ಉಪ ಕೇಂದ್ರಗಳು, 66/11 ಕೆ.ವಿ ವಿದ್ಯುತ್ ಕೇಂದ್ರಗಳು, ಹಾಗೂ 66 ಕೆ.ವಿ ಪ್ರಸರಣ ಮಾರ್ಗಗಳು	12	10874.86	110/11 ಕೆ.ವಿ ವಿದ್ಯುತ್ ಕೇಂದ್ರಗಳು	4 ಸಂಖ್ಯೆ
			66/ 11 ಕೆ.ವಿ ವಿದ್ಯುತ್ ಕೇಂದ್ರಗಳು	7 ಸಂಖ್ಯೆ
			66/11 ಕೆ.ವಿ ಮಾರ್ಗಗಳು (Over head lines)	1 ಸಂಖ್ಯೆ

ಕಾರ್ಯಾದೇಶ ನೀಡಿದ ಟೆಂಡರ್‌ಗಳ	ಸಂಖ್ಯೆ	ಒಟ್ಟು ಮೊತ್ತ ರೂ. (ಲಕ್ಷಗಳಲ್ಲಿ)	ಕಾಮಗಾರಿಗಳ ವಿವರ	ಸಂಖ್ಯೆ/ ಕಿ.ಮೀ (ಗಳಲ್ಲಿ)
110ಕೆ.ವಿ ವಿದ್ಯುತ್ ಉಪ ಕೇಂದ್ರಗಳು, 66/11 ಕೆ.ವಿ ವಿದ್ಯುತ್ ಉಪ ಕೇಂದ್ರಗಳು, 66 ಕೆ.ವಿ ಪ್ರಸರಣ ಮಾರ್ಗಗಳು, 66 ಕೆ.ವಿ 1C X 1000 ಚ.ಮಿ.ಮೀ ಭೂಗತ ಕೇಬಲಿನ ಮಾರ್ಗಗಳು ಹಾಗೂ 110 ಕೆ.ವಿ, 1 C X 240 ಚ.ಮಿ.ಮೀ ಭೂಗತ ಕೇಬಲಿನ ಮಾರ್ಗಗಳು.	55	49366.81	110/11 ಕೆ.ವಿ ವಿದ್ಯುತ್ ಉಪ ಕೇಂದ್ರಗಳು	15 ಸಂಖ್ಯೆ.
			66/11 ಕೆ.ವಿ ವಿದ್ಯುತ್ ಉಪ ಕೇಂದ್ರಗಳು	33 ಸಂಖ್ಯೆ.
			66 ಕೆ.ವಿ ಪ್ರಸರಣ ಮಾರ್ಗಗಳು (Over head lines)	68.52 ಕಿ.ಮೀ
			66, 1 C X 1000 ಚ.ಮಿ.ಮೀ ಭೂಗತ ಕೇಬಲಿನ ಪ್ರಸರಣ ಮಾರ್ಗಗಳು	13.983 ಕಿ.ಮೀ
			110 ಕೆ.ವಿ, 1 C X 240 ಚ.ಮಿ.ಮೀ ಭೂಗತ ಕೇಬಲಿನ ಪ್ರಸರಣ ಮಾರ್ಗಗಳು	2.123 ಕಿ.ಮೀ

2) **ಸರಕು ಮತ್ತು ಸೇವೆಗಳು:–**

ಸರಕು ಮತ್ತು ಸೇವೆಗಳ ಖರೀದಿಯ ವಿವರಗಳು	ಖರೀದಿ ಆದೇಶಗಳ ಮೊತ್ತ ರೂ. (ಲಕ್ಷಗಳಲ್ಲಿ)	ಕಾಮಗಾರಿ ವಿವರ
ವಿದ್ಯುತ್ ಪರಿವರ್ತಕಗಳು, 400 ಕೆ.ವಿ ಛೇದಗಳು, 220 ಕೆ.ವಿ ಮಿಂಚು ನಿರೋಧಕಗಳು, ಡಿ.ಸಿ ಭೂ ಸಂಪರ್ಕ ದೋಶ ಪತ್ತೆ ಹಚ್ಚುವ ಸಾಧನ, ಟವರ್ ಪಾದದ ಪ್ರತಿರೋಧ ಮತ್ತು ಸ್ವ–ಪ್ರಚೋಧನಾ ನಿರೋಧ ಶಕ್ತಿಯನ್ನು ಅಳೆಯುವ ಸಾಧನಗಳು ಹಾಗೂ ಬ್ಯಾಟರಿ ಸೆಟ್‌ಗಳು ಮತ್ತು ಪೀಠೋಪಕರಣಗಳ ಖರೀದಿ. ಕ.ವಿ.ಪ್ರನಿನಿ ಮತ್ತು ಎಸ್ಕಾಂಗಳಲ್ಲಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳ ಆಯ್ಕೆಗಾಗಿ ತಂತ್ರಾಂಶ ಅಭಿವೃದ್ಧಿಗಾಗಿ ಮತ್ತು ಆನ್‌ಲೈನ್ ಪರೀಕ್ಷೆ ನಡೆಸಲು ಹಾಗೂ ಅಂತರಜಾಲ ಆಧಾರಿತ ವಿದ್ಯುತ್ ಸಿಮಿಲೇಷನ್ ಮತ್ತು ಇಂಜಿನಿಯರಿಂಗ್ ಪರಿಹಾರ ಸೇವೆಗಳಿಗೆ ಸಾಫ್ಟವೇರ್ ವಿನ್ಯಾಸ ಮಾಡುವ ಸೇವೆಗಳು.	12075.00	ವಿದ್ಯುತ್ ಕೇಂದ್ರ ಸಾಮರ್ಥ್ಯ ಉನ್ನತೀಕರಣ, ವಿದ್ಯುತ್ ಉಪಕರಣಗಳ ಬದಲಾವಣೆ ಮತ್ತು ಇತರೆ ಸೇವೆಗಳಾದ ಕ.ವಿ.ಪ್ರನಿನಿ ಮತ್ತು ಎಸ್ಕಾಂಗಳಲ್ಲಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳ ಆಯ್ಕೆಗಾಗಿ ತಂತ್ರಾಂಶ ಅಭಿವೃದ್ಧಿಗಾಗಿ ಮತ್ತು ಆನ್‌ಲೈನ್ ಪರೀಕ್ಷೆ ನಡೆಸಲು ಹಾಗೂ ಅಂತರಜಾಲ ಆಧಾರಿತ ವಿದ್ಯುತ್ ಸಿಮಿಲೇಷನ್ ಮತ್ತು ಇಂಜಿನಿಯರಿಂಗ್ ಪರಿಹಾರ ಸೇವೆಗಳಿಗೆ ಸಾಫ್ಟವೇರ್ ವಿನ್ಯಾಸ ಮಾಡುವುದು.

3) **ಸಿವಿಲ್ ಕಾಮಗಾರಿಗಳು:–**

ಕಾಮಗಾರಿಗಳ ವಿವಿರ	ಕಾರ್ಯಾದೇಶಗಳ ಮೊತ್ತ ರೂ. (ಲಕ್ಷಗಳಲ್ಲಿ)
ಆನಂದರಾವ್ ವೃತ್ತದ ಬಳ ಹಳೆಯ ಮತ್ತು ಶಿಥಿಲವಾದ ಐಟಿಸಿ ಕಟ್ಟಡವನ್ನು ಮತ್ತು ಮೀಟರ್ ಪರೀಕ್ಷೆ ಶೆಡ್‌ಅನ್ನು ನೆಲಸಮ ಮಾಡಿ ಹೊಸ ಕಚೇರಿ ಸಂಕೀರ್ಣವನ್ನು ನಿರ್ಮಾಣ ಮಾಡುವುದು. ಎಚ್.ಆರ್.ಡಿ ಸೆಂಟರ್, ಕವಿಪ್ರನಿನಿ, ಹೂಡಿ ಬೆಂಗಳೂರಿನಲ್ಲಿ ವಿವಿಧೋದ್ದೇಶದ ಆಡಿಟೋರಿಯಂ, ಆಂಪಿ ಥಿಯೇಟರ್ ಮತ್ತು ಹೆಚ್ಚುವರಿ ವಸತಿ ಬ್ಲಾಕ್ ನಿರ್ಮಾಣ ಮಾಡುವುದು ಮತ್ತು ಮೇಲಿನ ಕಾಮಗಾರಿಗಳನ್ನು ತೃತೀಯ ಏಜೆನ್ಸಿಯ ನೇಮಕಾತಿಯ ಮೂಲಕ ತಪಾಸಣೆ ಮತ್ತು ಮೇಲ್ವಿಚಾರಣೆ ಮಾಡುವುದು.	18083.00

ಯೋಜನೆ ಮತ್ತು ಸಮನ್ವಯತೆ

ಯೋಜನೆ ಮತ್ತು ಸಮನ್ವಯ ಶಾಖೆಯ ಗುರಿ, ಧ್ಯೇಯ (ಉದ್ದೇಶ) ಮತ್ತು ಕರ್ತವ್ಯಗಳು:–

ಗುರಿ:–

ಸಂವಹನಾ ಜಾಲವನ್ನು ಬಲಪಡಿಸುವುದಕ್ಕಾಗಿ ಹಾಗೂ ಸಂಯೋಜಿತ ಪ್ರಸರಣ ಮಾಸ್ಟರ್ ಯೋಜನೆಯನ್ನು ರೂಪಿಸಲು ನವೀಕರಿಸಲು ಮತ್ತು ಕಾರ್ಯಗೊಳಿಸಲು ಮತ್ತು ವಿದ್ಯುತ್ ಉತ್ಪಾದನಾ ಕೇಂದ್ರದಿಂದ ಲೋಡ್ ಕೇಂದ್ರಕ್ಕೆ ಸ್ಥಳಾಂತರಿಸುವುದು.

ಉದ್ದೇಶ:

- ವಿದ್ಯುತ್ ಅಧಿನಿಯಮ 2013 ರ ಅನ್ವಯ ರಾಜ್ಯದಲ್ಲಿ ಪ್ರಸರಣ ಜಾಲವನ್ನು ಉತ್ತಮ ರೀತಿಯಲ್ಲಿ ವಿಸ್ತರಿಸಲು, ಆರ್ಥಿಕತೆ ಮತ್ತು ಸಮನ್ವಯಗೊಳಿಸುವಿಕೆ ಬಗ್ಗೆ.
- ಪ್ರಸರಣ ವ್ಯವಸ್ಥೆಯಲ್ಲಿ ವಿಶ್ವಾಸಾರ್ಹತೆ ತತ್ವಗಳು, ಆರ್ಥಿಕತೆ ಮತ್ತು ಭದ್ರತೆಯ ಬಗ್ಗೆ ಯೋಜನೆಗಳನ್ನು ರೂಪಿಸುವುದು.

ಚಟುವಟಿಕೆಗಳು:

ಅ) ವಿದ್ಯುತ್ ಪ್ರಸರಣದಲ್ಲಿ ಉಪಯೋಗಿಸುವ ಉಪಕರಣಗಳಿಗೆ ತಾಂತ್ರಿಕ ವಿಶೇಷಣಗಳನ್ನು ತಯಾರಿಸುವುದು.

ಆ) ಅಂತರ ರಾಜ್ಯ ಪ್ರಸರಣ ವ್ಯವಸ್ಥೆಗೆ ಸಂಬಂಧಿಸಿದಂತೆ ಕೇಂದ್ರ ವಿದ್ಯುತ್ ಆಯೋಗ, ಕೇಂದ್ರ ಪ್ರಸರಣ ಸಂಸ್ಥೆ, ವಿ.ಸ.ಕಂ.ಗಳು, ಕೇಂದ್ರ/ರಾಜ್ಯ ಸರ್ಕಾರ, ಸ್ವತಂತ್ರ ವಿದ್ಯುತ್ ಉತ್ಪಾದಕರುಗಳು, ಇತರೆ ಸಹಯೋಗದೊಂದಿಗೆ ಯೋಜನೆ ಮತ್ತು ಸಮನ್ವಯ ಶಾಖೆಯು ತನ್ನ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತದೆ.

ಇ) ಎಲ್.ಐ.ಓ.ಎ ಮತ್ತು ಎಮ್.ಐ.ಓ.ಎ ಗಳ ಅಡಿ ಪ್ರಸರಣ ವ್ಯವಸ್ಥೆಯಲ್ಲಿ ಪಕ್ಷಪಾತವಿಲ್ಲದ ಓಪನ್ ಅಕ್ಸಿಸ್ ಅವಕಾಶ ಮಾಡಿಕೊಡುವುದು.

2017–18ನೇ ಸಾಲಿನಲ್ಲಿ ಪ್ರಸರಣ ವ್ಯವಸ್ಥೆ ಯೋಜನೆ ಮತ್ತು ಅನುಮೋದನೆ:–

ಕವಿಪ್ರನಿನಿ ಯು ರಾಜ್ಯದ ಪ್ರಸರಣ ಸಂಸ್ಥೆಯಾಗಿದ್ದು, ವಿದ್ಯುಚ್ಛಕ್ತಿ ಕಾಯ್ದೆ, 2003 ರ ಪರಿಛೇದ 39(2) ರಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಹೊಂದಿದೆ. ತದನುಸಾರವಾಗಿ, ರಾಜ್ಯದಲ್ಲಿ ಸಾಮರ್ಥ್ಯ ಸೇರ್ಪಡೆ ಹಾಗೂ ವಿದ್ಯುತ್ ಬೇಡಿಕೆಯ ಯೋಜನೆಯನ್ನು ಪರಿಗಣಿಸಿ ಪ್ರಸರಣ ವ್ಯವಸ್ಥೆಯ ಯೋಜನೆಯನ್ನು ಹೊಂದಲಾಗಿದೆ. ಸಂಸ್ಥೆಯೊಳಗೇ ಅಧ್ಯಯನವನ್ನು ನಡೆಸಿ, ತಾಂತ್ರಿಕ ಸಮನ್ವಯ ಸಮಿತಿಯಿಂದ ಅನುಮೋದನೆ ಪಡೆದು ಕೆಳಕಂಡಂತೆ ಪ್ರಸರಣ ವ್ಯವಸ್ಥೆಯ ಯೋಜನೆಯನ್ನು ಗೊತ್ತುಪಡಿಸಲಾಗಿದೆ:

ವೋಲ್ಟೇಜ್ ವರ್ಗ (ಕೆ.ವಿ)	ಉಪಕೇಂದ್ರಗಳು (ಸಂಖ್ಯೆಗಳಲ್ಲಿ)	
	ಯೋಜಿತ	ಅನುಮೋದಿತ
400	3	2
220	12	11
110	56	49
66	23	22
ಒಟ್ಟು	**94**	**84**

2017–18 ರ ವರ್ಷಕ್ಕೆ ಮರಳಿ ಪಡಯಬಹುದಾದ ವಿದ್ಯುತ್ ಸ್ಥಾವರ ಸಾಮರ್ಥ್ಯ ಸೇರ್ಪಡೆ:

ಕ್ರಮ ಸಂಖ್ಯೆ	ಪ್ರವರ್ಗ	ಅನುಮತಿಸಿರುವ ವಿದ್ಯುತ್ ಬಳಕೆ ಸಾಮರ್ಥ್ಯ (ಮೆ.ವಾ.ಗಳಲ್ಲಿ)	ಜಾಲದೊಂದಿಗೆ ಪರಸ್ಪರ ಸಂಪರ್ಕಗೊಂಡಿರುವುದು (ಮೆ.ವಾ.ಗಳಲ್ಲಿ)
1	ಪವನ ವಿದ್ಯುತ್	1552.10	864.2
2	ಸಣ್ಣ ಜಲ ವಿದ್ಯುತ್	87	13
3	ಸಹ ಉತ್ಪಾದನೆ	73.6	89.17
4	ಜೈವಿಕ+ನಿರ್ಬಂಧಿತ	56.5	–
5	ಸೌರ ಶಕ್ತಿ	2342.175	3201.68
ಒಟ್ಟು		**4114.38**	**4168.05**

ವಿದ್ಯುತ್ ಉಪ ಕೇಂದ್ರಗಳ ಹಾಗೂ ಪ್ರಸರಣ ಮಾರ್ಗಗಳ ತಾಂತ್ರಿಕತೆಯಲ್ಲಿ ಅಳವಡಿಸಿಕೊಳ್ಳಲಾದ ಸುಧಾರಣೆಗಳು:

- 2016 ರಿಂದ 2021 ರವರೆಗೆ ಕರ್ನಾಟಕ ವಿದ್ಯುತ್ ಜಾಲಕ್ಕೆ ನವೀಕರಿಸಬಹುದಾದ ಇಂಧನಗಳಿಂದ ಪ್ರಮುಖವಾಗಿ ಪವನ ಮತ್ತು ಸೌರ ವಿದ್ಯುತ್ ಯೋಜನೆಗಳಿಂದಾಗಬಹುದಾದ ಗರಿಷ್ಠ ವಿದ್ಯುತ್ ಪ್ರವೇಶಿಸುವಿಕೆಯ ನಿರ್ಧಾರಣೆ.
- ವಿದ್ಯುತ್ ವ್ಯವಸ್ಥೆ ಅಭಿವೃದ್ಧಿ ನಿಧಿಯಿಂದ (PSDF) 74.87 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಎಲ್ಲಾ 220 ಕೆ.ವಿ. ಸ್ವೀಕರಣ ಕೇಂದ್ರಗಳಲ್ಲಿ ಮೈನ್–II ರಕ್ಷಣೆಯ ಅಳವಡಿಕೆ.
- ರಾಜ್ಯದಲ್ಲಿ 1508 ಎಂ.ವಿ.ಎ.ಆರ್. ಸಾಮರ್ಥ್ಯದ ಹೊಸ ಕೆಪಾಸಿಟರ್ ಬ್ಯಾಂಕ್‌ಗಳನ್ನು 74 ಕೋಟಿ ರೂ. ಗಳ ಮೊತ್ತದಲ್ಲಿ ಅಳವಡಿಕೆ.
- ಹಸಿರು ವಿದ್ಯುತ್ ಕಾರಿಡಾರ್ ಯೋಜನೆಯಡಿ ಎನ್.ಸಿ.ಇ.ಎಫ್. ನಿಧಿಯೊಂದಿಗೆ ರೂ.906 ಕೋಟಿಗಳ ಅಂದಾಜು ವೆಚ್ಚದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳಿಂದ ಪರಿಣಾಮಕಾರಿ ವಿದ್ಯುತ್ ಸಾಗಣೆಗಾಗಿ 7 ಸಂಖ್ಯೆಯ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.
- ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಎಲ್ಲಾ ಹೊಸ ಪವನ ಮತ್ತು ಸೌರ ವಿದ್ಯುತ್ ಉತ್ಪಾದನೆಗಳಿಗಾಗಿ ಎಲ್.ವಿ.ಆರ್.ಟಿ. ಅಳವಡಿಸಲು ಉದ್ದೇಶಿಸಲಾಗಿದೆ.
- ತುಮಕೂರು ಜಿಲ್ಲೆ ಪಾವಗಡದಲ್ಲಿ ಸ್ಥಾಪಿಸಲಾಗುತ್ತಿರುವ 2000 ಮೆ.ವ್ಯಾ. ಅಲ್ಟ್ರಾ ಮೆಗಾ ಸೌರ ವಿದ್ಯುತ್ ಯೋಜನೆಯಿಂದ ವಿದ್ಯುತ್ ಸಾಗಣೆಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಹಾರ್ಡ್‌ವೇರ್ ಪಾರ್ಕ್‌ನಲ್ಲಿ 400/220 ಕೆ.ವಿ. ವಿದ್ಯುತ್ ಕೇಂದ್ರದ ಸ್ಥಾಪನೆ.
- ನವೀಕರಿಸಬಹುದಾದ ವಿದ್ಯುತ್ ಸ್ಥಿತಿಯ ಸುಧಾರಣೆ ಮತ್ತು ವಿದ್ಯುತ್ ಸಾಗಣೆ ವ್ಯವಸ್ಥೆಗಾಗಿ ಯಲ್ವಾರ್, ಲೋಕಾಪುರ್ ಮತ್ತು ದೂಮ್ಮಸಂದ್ರದಲ್ಲಿ 400/220 ಕೆ.ವಿ. ವಿದ್ಯುತ್ ಕೇಂದ್ರದ ಸ್ಥಾಪನೆ.

ಕವಿಪ್ರನಿನಿಯ ಸಿವಿಲ್ ಶಾಖೆ ಸಿಬ್ಬಂದಿಯು ಉಪ ಕೇಂದ್ರಗಳು, ಪ್ರಸರಣ ಮಾರ್ಗಗಳು, ಕಟ್ಟಡಗಳು, ಮತ್ತು ಇತರೆ ಮೂಲಭೂತ ಕಾಮಗಾರಿಗಳ ನಿರ್ಮಾಣದ ಜೊತೆ ಹೆಚ್ಚುವರಿಯಾಗಿ ಪ್ರಸಕ್ತ ಆಸ್ತಿಗಳನ್ನು ತೃಪ್ತಕರ ನಿರ್ವಹಣೆ ಮಾಡುವಂತಹ ಮುಖ್ಯ ಚಟುವಟಿಕೆಗಳಿಗೆ ಬೆಂಬಲಿಸುವ ಕಾರ್ಯ ನಿರ್ವಹಿಸುತ್ತಿದೆ.

1 ಬೆಂಗಳೂರಿನ ಆನಂದ್ ರಾವ್ ವೃತ್ತದಲ್ಲಿ ಅಸ್ತಿತ್ವದಲ್ಲಿರುವ ಹಳೆಯ ಹಾಗೂ ಶಿತಲಗೊಂಡ ಐ.ಟಿ.ಸಿ ಕಟ್ಟಡವನ್ನು ಹಾಗೂ ತ್ಯಜಿಸಲಾದ ಮಾಪಕ ತಪಾಸಣಾ ಶೆಡ್ಡುಗಳನ್ನು ಕಳಚಿ, **"ಇಂಧನ ಭವನ"** ಬಹು ಮಹಡಿ ಕಛೇರಿ ಕಟ್ಟಡ ಸಂಕೀರ್ಣ ನಿರ್ಮಾಣ ಮಾಡಲು ಮುಖ್ಯ ಇಂಜಿನಿಯರ್ ಟಿ & ಪಿ ರವರು ಮೇ॥ ಜೆ.ಎಂ.ಸಿ ಪ್ರಾಜೆಕ್ಟ್ಸ್ (ಇಂಡಿಯಾ) ಲಿಮಿಟೆಡ್ ರವರಿಗೆ ರೂ. 147.84 ಕೋಟಿಗಳಿಗೆ ವಿವರವಾದ ಕಾರ್ಯಾದೇಶವನ್ನು ನೀಡಲಾಗಿದೆ.

2 ಹೆಚ್.ಆರ್.ಡಿ ಸೆಂಟರ್, ಕವಿಪ್ರನಿನಿ, ಹೂಡಿ ಬೆಂಗಳೂರಿನಲ್ಲಿ ವಿವಿಧೋದ್ದೇಶದ ಆಡಿಟೋರಿಯಂ, ವಸತಿ

ಬ್ಲಾಕ್ ನಿರ್ಮಾಣ ಮತ್ತು ಇತರೆ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಮುಖ್ಯ ಇಂಜಿನಿಯರ್ ಟಿ & ಪಿ ರವರು ಮೇ॥ ಕನ್‌ಸಾಲಿಡೆಟೆಡ್ ಕನ್ಸ್‌ಟ್ರಕ್ಷನ್ ಕನ್‌ಸೋರ್ಟಿಯಂ ಲಿಮಿಟೆಡ್, ಚೆನ್ನೈ ರವರಿಗೆ ರೂ. 31.46 ಕೋಟಿಗಳಿಗೆ ಈಗಾಗಲೇ ಅನುಮೋದಿಸಿದಂತೆ ವಿವರವಾದ ಕಾರ್ಯಾದೇಶವನ್ನು ನೀಡಲಾಗಿದೆ.

ಆರ್ ಟಿ ಮತ್ತು ಆರ್ & ಡಿ

ಮುಖ್ಯ ಇಂಜಿನಿಯರ್ ಆರ್ ಟಿ ಮತ್ತು ಆರ್ & ಡಿ ಕಚೇರಿಯು 3 ಪ್ರಮುಖ ಭಾಗಗಳಾದ ರಿಲೇ ಟೆಸ್ಟಿಂಗ್, ಸಂಶೋಧನೆ ಹಾಗೂ ಅಭಿವೃದ್ಧಿ ಮತ್ತು ಹಾಟ್‌ಲೈನ್ ನಿರ್ವಹಣಾ ಚಟುವಟಿಕೆಗಳನ್ನು ನಿರ್ವಹಿಸುವ ಒಂದು ತಾಂತ್ರಿಕ ಶಾಖೆಯಾಗಿದ್ದು, ರಾಜ್ಯಾದ್ಯಂತ ವ್ಯಾಪ್ತಿಯನ್ನು ಹೊಂದಿದೆ. ಈ ಕಚೇರಿಯು ರಕ್ಷಣಾ ರಿಲೇಗಳ ಕಾರ್ಯಕ್ಷಮತೆ, ಲೈವ್‌ಲೈನ್ ನಿರ್ವಹಣೆ ಹಾಗೂ ವಿವಿಧ ಪ್ರಸರಣ ಉಪಕರಣಗಳ ಸ್ಥಿತಿ ಅವಲೋಕನೆ ಇತ್ಯಾದಿ ನಿರ್ವಹಿಸುತ್ತಿದೆ.

ರಿಲೇ ಪರೀಕ್ಷಾ ವಿಭಾಗ:

ಅ) ರಿಲೇ ಪರೀಕ್ಷಾ ವಿಭಾಗದ ತಾಂತ್ರಿಕ ಕಾರ್ಯಗಳು:–

ರಿಲೇ ಪರೀಕ್ಷಾ ವಿಭಾಗವು ವಿದ್ಯುತ್ ಪ್ರಸರಣಾ ಜಾಲದ 66 ಕೆ.ವಿ ಯಿಂದ 400 ಕೆ.ವಿ ಹಂತದ ವಿವಿಧ ವಿದ್ಯುತ್ ಉಪ ಕೇಂದ್ರಗಳಲ್ಲಿ ಸ್ಥಾಪಿಸಲಾದ ಎಲ್ಲಾ ಇಊಗಿ ಪ್ರಸರಣ ಮಾರ್ಗಗಳ, ರಿಲೇ ಗಳ ಪರೀಕ್ಷೆ ಮತ್ತು ನಿರ್ವಹಣೆಯ ಚಟುವಟಿಕೆಗಳನ್ನು ನಡೆಸುವ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಈ ಪ್ರಕ್ರಿಯೆಯಲ್ಲಿ ರಾಜ್ಯಾದ್ಯಂತ ಇರುವ 1137 ವಿವಿದ ವೋಲ್ಟೇಜ್ ಹಂತದ ವಿದ್ಯುತ್ ಉಪ ಕೇಂದ್ರಗಳು ಒಳಪಟ್ಟಿರುತ್ತದೆ. (400 ಕೆ.ವಿ– 05 ಸಂ, 220 ಕೆ.ವಿ–102 ಸಂ, 110 ಕೆ.ವಿ–410 ಸಂ ಮತ್ತು 66 ಕೆ.ವಿ– 620 ಸಂ) ಸರಿಯಾದ ಆಯ್ದ ಟ್ರಿಪ್ಪಿಂಗ್ ವ್ಯವಸ್ಥೆ ಆರೋಗ್ಯಕರ ಪ್ರಸರಣ ಮಾರ್ಗವನ್ನು ದೋಶಯುಕ್ತ ಮಾರ್ಗದಿಂದ ಪ್ರತ್ಯೇಕಿಸುವಲ್ಲಿ ಸಹಾಯ ಮಾಡುವ ಪ್ರಕ್ರಿಯೆಯು ಯಾವುದೇ ಪ್ರಸರಣಾ ವ್ಯವಸ್ಥೆಯ ಬೆನ್ನೆಲುಬಾಗಿದೆ. ಈ ಮೂಲಕ ಪ್ರಮುಖ ಮಾರ್ಗಗಳ ಅನವಶ್ಯಕ ಟ್ರಿಪ್ಪಿಂಗ್ ತಡೆಗಟ್ಟುವಿಕೆಯಿಂದ ಪ್ರಸರಣಾ ಜಾಲದ ಕುಸಿತವನ್ನು ತಡೆಯಲು ಸಹಾಯ ಮಾಡುತ್ತದೆ. ಇದಲ್ಲದೇ ಯಾವುದೇ ಪ್ರಸರಣ ಮಾರ್ಗಗಳ ಅನವಶ್ಯಕ ಟ್ರಿಪ್ಪಿಂಗ್ ಗಳನ್ನು ವಿಶ್ಲೇಷಿಸಿ, ಅವಶ್ಯವಿದ್ದಲ್ಲಿ ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆಡುಕೊಳ್ಳಲಾಗುತ್ತದೆ.

ಈ ಮುಖ್ಯ ಚಟುವಟಿಕೆಗಳಲ್ಲದೇ ಕೆಳಗಿನ ಚಟುವಟಿಕಗಳನ್ನೂ ಸಹ ನಡೆಸಲಾಗುತ್ತದೆ.

ಎ) ಪ್ರಸರಣ ವ್ಯವಸ್ಥೆಯ ಪರಿಣಾಮಕಾರಿ ರಕ್ಷಣೆಗಾಗಿ CEA, SLDC ಮತ್ತು POSOCO ನಂತಹ ಇತರ ಸಂಸ್ಥೆಗಳೊಂದಿಗೆ ಸಹಕರಿಸುವುದು.

ಬಿ) ರಿಲೇಗಳು ಮತ್ತು ಮೀಟರ್ ಗಳ ನಿಯತಕಾಲಿಕ ಪರೀಕ್ಷೆ ಮಾಡುವ ಮೂಲಕ ರಕ್ಷಣಾ ವ್ಯವಸ್ಥೆ ಮತ್ತು ಮೀಟರಿಂಗ್ ವ್ಯವಸ್ಥೆಯ ನಿರ್ವಹಣೆ ಮತ್ತು ಮೇಲ್ವಿಚಾರಣೆ ಮಾಡುವುದ.

ಸಿ) ನಿಯತಕಾಲಿಕ ತಪಾಸಣೆ ನಡೆಸುವ ಮೂಲಕ ವಿವಿಧ ವಿದ್ಯುತ್ ಉಪ ಕೇಂದ್ರದ ಉಪಕರಣಗಳ ಸುಸ್ಥಿತಿ ಮೇಲ್ವಿಚಾರಣೆ ಮಾಡುವುದು.

ಡಿ) ಪ್ರಸರಣ ವ್ಯವಸ್ಥೆಯ ಕುಸಿತದ ಕಾರಣಗಳನ್ನು ತನಿಖೆ ಮಾಡಿ ಅದನ್ನು ತಗ್ಗಿಸಿ ಹಾಗೂ ಸರಿಪಡಿಸುವ ಕ್ರಮಗಳನ್ನು ಸೂಚಿಸುವುದು.

ಇ) IPP ಮತ್ತು EHT ಗ್ರಾಹಕರನ್ನು ಒಳಗೊಂಡಂತೆ ಹಲವಾರು ಪ್ರಸರಣಾ ವ್ಯವಸ್ಥೆಯ ಅಂಶಗಳ ಮೇಲೆ ಪೂರ್ವಭಾವಿ (PC) ಪರೀಕ್ಷೆಗಳನ್ನು ನಡೆಸುವುದು.

ಎಫ್) ಪರೀಕ್ಷಾ ಶುಲ್ಕದ ಆಧಾರದ ಮೇಲೆ ಸಂಬಂಧಿಸಿದ ಮೀಟರಿಂಗ್ ಸಲಕರಣೆಗಳೊಂದಿಗೆ ತೃತೀಯ/ ಇತರೆ ವ್ಯಕ್ತಿಯ ಮೀಟರ್ ಗಳ ಪರೀಕ್ಷೆಯನ್ನು ಕೈಗೊಳ್ಳುವುದು.

ಜಿ) ತಾಂತ್ರಿಕ ಪರಿಶೋಧನೆ ಮತ್ತು ಗುಣ ನಿಯಂತ್ರಣಾ ವಿಭಾಗದ ಜೊತೆಗೂಡಿ ಟರ್ನ ಕೀ ಏಜೆನ್ಸಿಗಳ ಮೂಲಕ ನೇರವಾಗಿ ಅಥವಾ ಪರೋಕ್ಷವಾಗಿ ನಿಗಮವು ಖರೀದಿಸಿದ ಸಾಮಾಗ್ರಿಗ'ಳ ಪರಿಶೋಧನೆಯನ್ನು ಕೈಗೊಳ್ಳುವುದು.

ಆ) ರೀಲೆ ಪರೀಕ್ಷಾ ವಿಭಾಗವು ನಡೆಸಿದ ಚಟುವಟಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ:–

i) ಹೊಸ ವಿದ್ಯುತ್ ಉಪ ಕೇಂದ್ರಗಳು, ಸಾಮರ್ಥ್ಯ ಹೆಚ್ಚಿಸುವಿಕೆ, ದೋಷಪೂರಿತ ಉಪಕರಣಗಳನ್ನು ಸರಿಪಡಿಸುವಿಕೆ, ಹೆಚ್ಚುವರಿ ಬೇಗಳು ಮತ್ತು IPP/EHT ಗ್ರಾಹಕ ಕೇಂದ್ರಗಳ ಪೂರ್ವ–ಕಾರ್ಯಚರಣೆಯ ಪರೀಕ್ಷೆಗಳು:–

ii) ರಿಲೇ ಮಾಪಕ ಮತ್ತು ಅನ್ಯ/ಇತರೆ ವ್ಯಕ್ತಿಗೆ ಸಂಬಂಧಿಸಿದ ಮೀಟರ್‌ಗಳನ್ನೊಳಗೊಂಡಂತೆ ಮೀಟರಿಂಗ್ ಉಪಕರಣಗಳ ನಿಯತಕಾಲಿಕ ಮಾಪನಾಂಕ ಮತ್ತು ಅದರಿಂದ ಸಂಗ್ರಹಿಸಿದ ಒಟ್ಟು ಮೊತ್ತ ರೂ ಗಳಲ್ಲಿ.

ರಕ್ಷಣಾತ್ಮಕ ರೀಲೆಗಳ ಪರೀಕ್ಷೆ ಮತ್ತು ಕ್ಯಾಲಿಬ್ರೇಶನ್‌ನ ಒಟ್ಟು ಸಂಖ್ಯೆ	79953
ಕವಿಪ್ರನಿನಿ ಉಪ ಕೇಂದ್ರಗಳಲ್ಲಿ ಅಳವಡಿಸಿದ ಮಾಪಕಗಳ ಪರೀಕ್ಷೆ ಮತ್ತು ಕ್ಯಾಲಿಬ್ರೇಶನ್‌ಗೆ ಒಳಪಟ್ಟ ಒಟ್ಟು ಮೀಟರ್‌ಗಳ ಸಂಖ್ಯೆ	19816
ಪರೀಕ್ಷೆ ಮತ್ತು ಕ್ಯಾಲಿಬ್ರೇಶನ್‌ಗೆ ಒಳ್ಳಪಟ್ಟು ಅಳವಡಿಸಿದ ಮಾಪಕಗಳ ಒಟ್ಟು IPP ಮೀಟರ್‌ಗಳ ಸಂಖ್ಯೆ	253
ಪರೀಕ್ಷೆ ಮತ್ತು ಕ್ಯಾಲಿಬ್ರೇಶನ್‌ಗೆ ಒಳ್ಳಪಟ್ಟು ಅಳವಡಿಸಿದ ಮಾಪಕಗಳ ಒಟ್ಟು EHT ಮೀಟರ್‌ಗಳ ಸಂಖ್ಯೆ	135
ಕವಿಪ್ರನಿನಿ ಉಪ ಕೇಂದ್ರಗಳನ್ನು ಹೊರತುಪಡಿಸಿ ಮೂರನೇ ವ್ಯಕ್ತಿಯ ಮೀಟರ್ ಮತ್ತು ಅದರ ಸಂಬಂಧಿತ ಮೀಟರಿಂಗ್ ಸಲಕರಣೆಗಳ ಪರೀಕ್ಷೆಗೆ ಸಂಗ್ರಹಿಸಲಾದ ಮೊತ್ತ.	ರೂ.1,97,85,709/–

iii) ಮುಂದುವರೆದು, ಕೇಂದ್ರ ವಿದ್ಯುತ್ ಪ್ರಾಧಿಕಾರ ಮತ್ತು ಗೌರವಾನ್ವಿತ ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನಗಳ ಪ್ರಕಾರ, ಆಸ್ತಿತ್ವದಲ್ಲಿರುವ ರಕ್ಷಣಾ ವ್ಯವಸ್ಥೆಯ ಮೂಲಸೌಕರ್ಯದ ನವೀಕರಣ ಮತ್ತು ಅಭಿವೃದ್ಧಿಯ ಅನುಷ್ಠಾನಕ್ಕೆ ಕವಿಪ್ರನಿನಿ ಯ 220 ಕೆ.ವಿ ಮತ್ತು ಹೆಚ್ಚಿನ ವೋಲ್ಟೇಜ್ ವರ್ಗ ವಿದ್ಯುತ್ ಉಪಕೇಂದ್ರಗಳಿಗೆ ಅಂದಾಜು ವೆಚ್ಚ ರೂ.10,111/– ಲಕ್ಷಗಳಲ್ಲಿ ಪವರ್ ಸಿಸ್ಟಮ್ ಡೆವೆಲಪ್ಮೆಂಟ್ ಫಂಡ್ (PSDF) ನಿಂದ 6042 ಲಕ್ಷ ರೂಗಳ ಅನುದಾನವನ್ನು ವಿದ್ಯುತ್ ಮಂತ್ರಾಲಯ, ಭಾರತ ಸರ್ಕಾರ ಮಂಜೂರು ಮಾಡಿದೆ ಮತ್ತು ಆರ್ಥಿಕ ವರ್ಷ–2017–18 ರ ಅವಧಿಯಲ್ಲಿ 1208.4 ಲಕ್ಷ ರೂ ಮೊತ್ತವನ್ನು ಸಹ ಬಿಡುಗಡೆ ಮಾಡಲಾಗಿದೆ. ಈ ಕಾರ್ಯವು ಪ್ರಗತಿಯಲ್ಲಿದೆ ಮತ್ತು ಅದರ ಶೀಘ್ರ ಪೂರ್ಣಗೊಳಿಸುವಿಕೆಗೆ ನಿರಂರತವಾಗಿ ರೀಲೆ ಪರೀಕ್ಷಾ ವಿಭಾಗದಿಂದ ಮೇಲ್ವಿಚಾರಣ ನಡೆಸುತ್ತಿದೆ.

ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗ:

ಅ) ಸಂಶೋಧನಾ ಮತ್ತು ಅಭಿವೃದ್ಧಿ ಶಾಖೆಯ ತಾಂತ್ರಿಕ ಕಾರ್ಯಗಳು:–

ಸಂಶೋಧನಾ ಮತ್ತು ಅಭಿವೃದ್ಧಿ ಶಾಖೆಯು ವಿದ್ಯುತ್ ಪರಿವರ್ತಕದ ತೈಲದ ಮಾದರಿಗಳ ಪರೀಕ್ಷೆಗಾಗಿ ಬೆಂಗಳೂರಿನಲ್ಲಿ ಅತ್ಯಾಧುನಿಕ ಪರೀಕ್ಷೆ ಮತ್ತು ಅಳತೆಯ ಉಪಕರಣಗಳನ್ನು ಹೊಂದಿರುವ ಸುಸರ್ಜಿತ ಪ್ರಯೋಗಾಲಯದಲ್ಲಿ ನಿರ್ವಹಿಸುತ್ತದೆ. ಕವಿಪ್ರನಿನಿಯ ವಿದ್ಯುತ್ ಉಪ ಕೇಂದ್ರಗಳಿಗೆ ಅರ್ಥ್‌ಮ್ಯಾಟ್ ವಿನ್ಯಾಸಗಳನ್ನು ಕೊಡುವ ಜವಾಬ್ದಾರಿ ಕೂಡ ನಿರ್ವಹಿಸುತ್ತದೆ. ಈ ಶಾಖೆಯ ಹಲವಾರು ಚಟುವಟಿಕೆಗಳ ಪೈಕಿ ಅರ್ಥ್ ಮ್ಯಾಟ್‌ನ ಸರಿಯಾದ ವಿನ್ಯಾಸ ತಯಾರಿಕೆಯು ಒಂದು ಪ್ರಮುಖ ಭಾಗವಾಗಿದೆ. ಇದು ಉಪ ಕೇಂದ್ರಗಳಲ್ಲಿರುವ ವಿದ್ಯುತ್ ಉಪಕರಣಗಳು ಮತ್ತು ಕಾರ್ಯಾಚರಣಾ ಸಿಬ್ಬಂದಿಗಳಿಗಾಗಿ ಹಲಾವಾರು ಪರಿಸ್ಥಿತಿಗಳ ವಿರುದ್ಧ ಸುರಕ್ಷತೆಯನ್ನು ಖಚಿತಪಡಿಸುತ್ತದೆ. ಇದಲ್ಲದೆ, ಇದು ವಿದ್ಯುತ್ ಪರಿವರ್ತಕದ ಕಂಡೀಷನ್ ಮಾನಿಟರಿಂಗನ್ನು ನಿರ್ವಹಿಸುತ್ತದೆ ಮತ್ತು ಇದು ಪ್ರಸರಣಾ ವ್ಯವಸ್ಥೆಯ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಈ ಮುಖ್ಯ ಚಟುವಟಿಕೆಗಳಲ್ಲದೆ ಈ ಕೆಳಗಿನ ಚಟುವಟಿಕೆಗಳನ್ನೂ ಸಹ ನಡೆಸಲಾಗುತ್ತದೆ.

ಎ) ಅರ್ಥ್ ಮ್ಯಾಟ್ ವಿನ್ಯಾಸಗಳನ್ನು ತಯಾರಿಸುವ ಸದಲುವಾಗಿ ಮಣ್ಣಿನ ನಿರೋಧಕ ಮಾಪನಗಳನ್ನು ನಡೆಸುತ್ತದೆ, ನಿಯತಕಾಲಿಕವಾಗಿ ಭೂ ಸಂಪರ್ಕ ಪರಿಣಾಮಕಾರಿ ಪರೀಕ್ಷೆಗಳನ್ನು ನಡೆಸುತ್ತದೆ. ಇದು ವಿದ್ಯುತ್ ಸರಬರಾಜು ಕಂಪನಿ ಮತ್ತು ಇತರೆ ಖಹ ಗಳಿಗೆ ಪರೀಕ್ಷಾ ಶುಲ್ಕದ ಆಧಾರದ ಮೇಲೆ ಕೋರಿಕೆಯ ಮೇರೆಗೆ ಅರ್ಥ್ ಮ್ಯಾಟ್ ವಿನ್ಯಾಸಕ್ಕಾಗಿ ಅದರ ಸಲಹಾ ಸೇವೆಗಳನ್ನೂ ಸಹ ವಿಸ್ತರಿಸುತ್ತವೆ.

ಬಿ) IS 335, IS 1866 ಮತ್ತು IEC 60296–2012 ಪ್ರಕಾರವಾಗಿ ಪರಿವರ್ತಕಗಳ ತೈಲದ ತುಣುಕು ಗಳನ್ನು ಪರೀಕ್ಷಿಸುವ ಮತ್ತು ವಿಶ್ಲೇಷಿಸುವ ಮೂಲಕ ಪರಿವರ್ತಕಗಳ ಸ್ಥಿತಿಯ ಮೇಲ್ವಿಚಾರಣಾ ಪರೀಕ್ಷೆಗಳನ್ನು ನಡೆಸುತ್ತದೆ ಮತ್ತು ಪರಿವರ್ತಕಗಳ ಸುಸ್ಥಿಯನ್ನು ನಿರ್ಣಯಿಸಲು ಪರೀಕ್ಷಾ ಫಲಿತಾಂಶವನ್ನು ಅದರ ಡೆಟಾ ಬೇಸ್‌ನಲ್ಲಿ ಲಭ್ಯವಿರುವ ಐತಿಹಾಸಿಕ ಡೆಟಾದ ಮೂಲಕ ಮೌಲ್ಯೀಕರಿಸುತ್ತದೆ. ಪರೀಕ್ಷಾ ಶುಲ್ಕದ ಆಧಾರದ ಮೇಲೆ, ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜು ಕಪನಿಗಳು ಮತ್ತು ಇತರ IPP ಗಳಿಗೆ ತೈಲ ಪರೀಕ್ಷೆಯ ಮತ್ತು ಅದರ ಸಲಹಾ ಸೇವೆಗಳನ್ನು ವಿಸ್ತರಿಸುತ್ತದೆ.

ಸಿ) ಪರಿವರ್ತಕಗಳ ವೈಂಡಿಂಗ್‌ಗಳು ಅದರ ಬುಷಿಂಗ್‌ಗಳು ಮತ್ತು ಇನ್‌ಸ್ಟ್ರುಮೆಂಟ್ ಟ್ರಾನ್ಸ್‌ಫಾರ್ಮರ್‌ಗಳ (CT/ PT/ CVT)ನ ಟ್ಯಾನ್ ಡೆಲ್ಟಾ ಮತ್ತು ಕ್ಯಾಪಾಸಿಟೆನ್ಸ ಪರೀಕ್ಷೆಗಳಂತಹ ಸ್ಥಿತಿಯ ಮೇಲ್ವಿಚಾರಣಾ ಪರೀಕ್ಷೆಗಳನ್ನು ನಿಯತಕಾಲಿಕವಾಗಿ ಮತ್ತು ಪರಿವರ್ತಕಗಳ ಸುಸ್ಥಿತಿಯನ್ನು ನಿರ್ಣಯಿಸಲು ಪರೀಕ್ಷಾ ಫಲಿತಾಂಶವನ್ನು ಅದರ ಡೇಟಾ ಬೇಸ್‌ನಲ್ಲಿ ಲಭ್ಯವಿರುವ ಐತಿಹಾಸಿಕ ಡೇಟಾದ ಮೂಲಕ ಫಲಿತಾಂಶವನ್ನು ಮೌಲ್ಯೀಕರಿಸುತ್ತದೆ.

ಆ) ಸಂಶೋಧನೆ ಮತ್ತು ಅಭಿವೃದ್ಧಿ ಶಾಖೆಯು ನಡೆಸಿದ ಚಟುವಟಿಗೆಗಳನ್ನು ಈ ಕೆಳಗೆ ನಮೂದಿಸಲಾಗಿದೆ:–

i) ಅರ್ಥ್ ಮ್ಯಾಟ್‌ಗೆ ಹಾಗೂ ಭೂ ಸಂಪರ್ಕ ತನಿಖೆಗಳಿಗೆ ಸಂಬಂಧಪಟ್ಟ ಚಟುವಟಿಕೆಗಳು ಈ ಕೆಳಗಿನಂತಿದೆ:–

ಕ್ರ. ಸಂ	ವಿವರಗಳು	ವೋಲ್ಟೇಜ್ ವರ್ಗ ಕೆ.ವಿ ಯಲ್ಲಿ					
		400	220	110	66	33	ಒಟ್ಟು
1	ಮಣ್ಣಿನ ನಿರೋಧಕ ಅಳತೆಗಳ (ಒಟ್ಟು ಸಂಖ್ಯೆ)	02	15	20	41	25	103
2	ಹೊಸದಾಗಿ ನಿರ್ಮಿಸಲಾದ ಕೇಂದ್ರಗಳ ಅರ್ಥ್ ಮ್ಯಾಟ್ ವಿನ್ಯಾಸಗಳು (ಒಟ್ಟು ಸಂಖ್ಯೆ)	04	28	38	65	16	151
3	ಭೂ ಸಂಪರ್ಕ ಶೋಧನೆ ತನಿಖೆಗಳು (ಒಟ್ಟು ಸಂಖ್ಯೆ)	–	13	16	68	–	97
4	ಅಸ್ತಿತ್ವದಲ್ಲಿರುವ ಕೇಂದ್ರಗಳಿಗೆ ಅರ್ಥ್ ಮ್ಯಾಟ್ ವಿನ್ಯಾಸಗಳು (ಅಭಿವೃದ್ಧಿ ಕಾರ್ಯಗಳು)						260

ii) ಕಂಡಿಶನ್ ಮಾನಿಟರಿಂಗ್ ಪರೀಕ್ಷೆಗೆ ಸಂಬಂಧಪಟ್ಟ ಚಟುವಟಿಕೆಗಳು ಈ ರೀತಿ ಇರುತ್ತದೆ:–

ಎ	ಪರಿವರ್ತಕಗಳ/ಇನ್ಸ್ಟ್ರುಮೆಂಟ್ ಟ್ರಾನ್ಸ್ಫಾರ್ಮರ್/ಮಿಂಚು ನಿರೋಧಕಗಳ ಪರೀಕ್ಷೆ	
1	ಟ್ಯಾನ್ ಡೆಲ್ಟಾ & ಕೆಪಾಸಿಟನ್ಸ್ ಪರೀಕ್ಷೆಗಳಿಗೆ ಒಳಪಡಿಸಿದ ಪರಿವರ್ತಕಗಳ ಸಂಖ್ಯೆ	55
2	ಟ್ಯಾನ್ ಡೆಲ್ಟಾ & ಕೆಪಾಸಿಟನ್ಸ್ ಪರೀಕ್ಷೆಗಳಿಗೆ ಒಳಪಡಿಸಿದ ಪರಿವರ್ತಕಗಳ ಬುಷಿಂಗ್‌ಗಳ ಸಂಖ್ಯೆ	6
3	SFRA ಪರೀಕ್ಷೆಗಳು	28
ಬಿ	ಪರಿವರ್ತಕಗಳ ಆಯಿಲ್ ಮಾದರಿ ಪರೀಕ್ಷೆಗಳು	
1	ತೈಲ ಮಾದರಿಗಳ ವಿಶ್ಲೇಷಣೆ ಸಂಖ್ಯೆ	3521
2	ನಿರೋಧನ ವಿಶ್ಲೇಷಣಾತ್ಮಕ ವಿಶ್ಲೇಷಣೆ (ವಿದ್ಯುತ್ ಪರಿವರ್ತಕದಲ್ಲಿ IDAX (Insulation Diagnostic Analysis) ಪರೀಕ್ಷೆಗಳು)	55
3	ಡಿಸಾಲ್ವೆಡ್ ಗ್ಯಾಸ್ ಅನಾಲಿಸಿಸ್	991
4	ಫ್ಯೂರಾನ್ ಅನಾಲಿಸಿಸ್	878

<u>ಹಾಟ್ ಲೈನ್ ವಿಭಾಗ:</u>

ಎ) ಹಾಟ್ ಲೈನ್ ಶಾಖೆಯ ತಾಂತ್ರಿಕ ಕಾರ್ಯಗಳು:–

ಹಾಟ್ ಲೈನ್ ವಿಭಾಗವು 220 ಕೆ.ವಿ ಮತ್ತು ಕೆಳಗಿನ ವರೆಗಿನ ಪ್ರಸರಣ ಮಾರ್ಗ ಮತ್ತು ಸ್ಟೇಷನ್ ಗಳ ತುರ್ತುಸ್ಥಿಸಿ ನಿರ್ವಹಣೆ ಮತ್ತು ಮುನ್ಸೂಚನೆಯ/ ತಡೆಗಟ್ಟುವ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದ್ದು, ಲೈವ್ ಲೈನ್ ನಿರ್ವಹಣೆ ತಂತ್ರವನ್ನು ಹಾಟ್‌ಸ್ಟಿಕ್ ವಿಧಾನ ಅಳವಡಿಸಿಕೊಳ್ಳುವ ಮೂಲಕ ನಿರ್ವಹಿಸಲಾಗುತ್ತಿದೆ. ಈ ತಂತ್ರಜ್ಞಾನವು

ಯಾವುದೇ ವಿದ್ಯುತ್ ಮಾರ್ಗ ಮುಕ್ತತೆಯನ್ನು ತೆಗೆದುಕೊಳ್ಳದೆಯೇ ಪ್ರಸರಣ ಮಾರ್ಗಗಳ ಮತ್ತು ವಿದ್ಯುತ್ ಉಪ ಕೇಂದ್ರಗಳ ನಿರ್ವಹಣೆ ಉಪಯುಕ್ತವಾಗಿದೆ. ಹೀಗಾಗಿ ಅಂತಿಮ ಬಳಕೆದಾರರಿಗೆ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ಅಡೆತಡೆಯಾಗದಂತೆ ನಿರಂತರತೆಯನ್ನು ಒದಗಿಸುತ್ತದೆ. ಹಾಟ್ ಲೈನ್ ವಿಭಾಗದ ಸಿಬ್ಬಂದಿಗಳು ಹಾಟ್ ಲೈನ್ ತರಬೇತಿ ಕೇಂದ್ರ, ರಾಷ್ಟ್ರೀಯ ತರಬೇತಿ ಕೇಂದ್ರ, ಭಾರತ ಸರ್ಕಾರ, ಸೋಮನಹಳ್ಳಿ ಹಾಟ್ ಲೈನ್ ತಂತ್ರಂಗಳಲ್ಲಿ ಪರಿಣಿತಿ ಪಡೆದು, ನೇರ ಪ್ರಸರಣ ಮಾರ್ಗಗಳಲ್ಲಿ ಮತ್ತು ಉಪ ಕೇಂದ್ರ/ ಸ್ವಿಚ್‌ಯಾರ್ಡ್‌ಗಳಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಹಾಟ್ ಲೈನ್ ಶಾಖೆಯ ಚಟುವಟಿಕೆಗಳನ್ನು ಈ ಕೆಳಗಿನಂತಿವೆ.

- ಪ್ರಸರಣ ಮಾರ್ಗಗಳಲ್ಲಿ ದೋಷಯುಕ್ತ ಇನ್ಸುಲೇಟರ್‌ಗಳನ್ನು ಪರೀಕ್ಷಿಸುವುದು ಮತ್ತು ಪತ್ತೆ ಹಚ್ಚುವಿಕೆ.
- ದೋಷಯುಕ್ತ ಇನ್ಸುಲೇಟರ್‌ಗಳನ್ನು ಬದಲಿಸುವುದು.
- ಬೈ–ಪಾಸ್–ಜಂಪ್ ಗಳನ್ನು ಒದಗಿಸುವ ಮೂಲಕ ಪ್ರಸರಣ ಮಾರ್ಗಗಳನ್ನು ಬಲಪಡಿಸುವುದು.
- ಉಪ ಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಳ ಉಷ್ಣಾಂಶವನ್ನು (ಹಾಟ್ ಸ್ಪಾಟ್) ಗುರುತಿಸಲು ಥರ್ಮೋ ವಿಷನ್ ಸ್ಕ್ಯಾನಿಂಗ್ ಬಳಸುವುದು.
- EHV ಉಪ ಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಳ ಹಾನಿ ತಡೆಗಟ್ಟುವ ನಿರ್ವಹಣೆ.
- ತುರ್ತು ಹಾಟ್ ಲೈನ್ ಕೆಲಸಗಳ ನಿರ್ವಹಣೆ.

ಬಿ) ಹಾಟ್ ಲೈನ್ ಶಾಖೆಯು ನಡೆಸಿದ ಚಟುವಟಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ:–

ಹಾಟ್‌ಲೈನ್ ಶಾಖೆಯು ನಡೆಸಿದ ವಿವಿಧ ಚಟುವಟಿಕೆಗಳನ್ನು ಈ ಕೆಳಗಿನಂತೆ ನಮೂದಿಸಲಾಗಿದೆ.

ಕ್ರ. ಸಂ	ವಿವರಗಳು	ವೋಲ್ಟೇಜ್ ವರ್ಗ ಕೆ.ವಿ ಯಲ್ಲಿ				ಒಟ್ಟು
		400	220	110	66	
1	ಪರೀಕ್ಷೆ ನಡೆಸಿದ ನಿರೋಧಕ ತಂತಿಗಳ (ಇನ್ಸುಲೇಟರ್ ಸ್ಟ್ರಿಂಗ್‌ಗಳ) ಸಂಖ್ಯೆ	–	363	908	426	1697
2	ದೋಷಯುಕ್ತ ಇನ್ಸುಲೇಟರ್ (ನಿರೋಧಕ) ಸ್ಟ್ರಿಂಗ್‌ಗಳನ್ನು ಬದಲಿಸಿದ ಸಂಖ್ಯೆ	–	09	15	–	24
3	ಹಾಟ್ ಸ್ಪಾಟ್‌ಗಳನ್ನು ಗುರುತಿಸುವುದಕ್ಕಾಗಿ ಥರ್ಮೋ ವಿಷನ್ ಸ್ಕ್ಯಾನಿಂಗ್ ಮೂಲಕ ಪರೀಕ್ಷಿಸಲ್ಪಟ್ಟ ಉಪಕೇಂದ್ರಗಳು/ ಇನ್ಸುಲೇಟರ್ ಸ್ಟ್ರಿಂಗ್‌ಗಳ ಸಂಖ್ಯೆ	07	182	206	665	1060
4	ಪರೀಕ್ಷೆ ನಡೆಸಿದ ಜಂಪರ್‌ಗಳ ಸಂಖ್ಯೆ	–	–	24	–	24
5	ಉಪ ಕೇಂದ್ರಗಳ ಸ್ವಿಚ್ ಯಾರ್ಡ್‌ಗಳಲ್ಲಿ ತಡೆಗಟ್ಟುವ ನಿರ್ವಹಣೆ (ಪ್ರಿವೆಂಟಿವ್ ಮೆಂಟೆನನ್ಸ್) ಸಂಖ್ಯೆ	07	205	280	691	1183
6	ತಡೆಗಟ್ಟುವ ನಿರ್ವಹಣೆ (ಪ್ರಿವೆಂಟಿವ್ ಮೆಂಟೆನನ್ಸ್) ನಡೆಸಿದ ಪ್ರಸರಣ ಮಾರ್ಗಗಳ ಸಂಖ್ಯೆ	–	–	06	–	06
7	ಇಳಿಗಿ ಉಪ ಕೇಂದ್ರಗಳಲ್ಲಿ ಒದಗಿಸಿರುವ ಬೈ–ಪಾಸ್–ಜಂಪ್‌ರ್‌ಗಳ ಸಂಖ್ಯೆ	–	–	59	–	59
8	ತುರ್ತುಸ್ಥಿತಿಗಳ ಸಮಯದಲ್ಲಿ ತುರ್ತುಸ್ಥಿತಿಗಳನ್ನು ನಿರ್ವಹಿಸಿದ ಮಾರ್ಗಗಳು ಮತ್ತು ಉಪ ಕೇಂದ್ರಗಳ ಸಂಖ್ಯೆ	–	–	56	–	56
9	ಟ್ರಾನ್ಸ ಮಿಷನ್ ಮಾರ್ಗಗಳ ಮೇಲೆ ಜೋಡನೆ ಮಾಡಿದ ಪೈಬ್ರೆಷನ್ ಡ್ಯಾಂಪರ್ ಗಳ ಸಂಖ್ಯೆ:	–	665	–	634	1299
10	EHT ಪ್ರಸರಣ ಮಾರ್ಗಗಳಿಂದ ಕಟ್ಟಡಗಳಿಗೆ ಇರುವ ಲಂಬ (ವರ್ಟಿಕಲ್) ಮತ್ತು ಅಡ್ಡ (ಹಾರಿಜ್ಹಾಂಟಲ್) ಕ್ಲಿಯರೆನ್ಸ್‌ಗಳ ಮಾಪನ					434

ತಾಂತ್ರಿಕ ತನಿಖೆ ಮತ್ತು ಗುಣ ನಿಯಂತ್ರಣ ಶಾಖೆ

ಮುಖ್ಯ ಇಂಜಿಯರ್ (ವಿದ್ಯುತ್) ರವರು ತಾಂತ್ರಿಕ ಪರಿಶೋಧನೆ ಮತ್ತು ಗುಣ ನಿಯಂತ್ರಣಾ ಶಾಖೆಯ ಮುಖ್ಯಸ್ಥರಾಗಿರುತ್ತಾರೆ.

<u>ತಾ.ಪ.ಗು.ನಿ, ಶಾಖೆಯ ಆದ್ಯ ಕರ್ತವ್ಯ ಮತ್ತು ಜವಬ್ದಾರಿಗಳು:–</u>

- ಕಾರ್ಖಾನೆ/ಉಗ್ರಾಣಗಳಲ್ಲಿ ಸಾಮಗ್ರಿ ಮತ್ತು ಉಪಕರಣಗಳ ಪರಿವೀಕ್ಷಣೆ.
- ವಿದ್ಯುತ್ ಕೇಂದ್ರಗಳ ಕ್ಷೇತ್ರದಲ್ಲಿನ ಸಾಮಗ್ರಿಗಳ ಪರಿವೀಕ್ಷಣೆ.
- ನಿಯಂತಕಾಲಿಕವಾಗಿ ಉಗ್ರಾಣಗಳ ಪರಿವೀಕ್ಷಣೆ.
- ನಿಯತಕಾಲಿಕವಾಗಿ ಪ್ರಗತಿಯಲ್ಲಿರುವ ವಿದ್ಯುತ್ ಉಪಕೇಂದ್ರ/ಮಾರ್ಗಗಳ ಮತ್ತು ಉನ್ನತೀಕರಿಸಲಾದ ಕಾಮಗಾರಿಗಳ ಪರಿವೀಕ್ಷಣೆ.
- ನಯತಕಾಲಿಕವಾಗಿ ಚಾಲ್ತಿಯಲ್ಲಿರುವ ವಿದ್ಯುತ್ ಉಪಕೇಂದ್ರ/ಮಾರ್ಗಗಳ ಪರಿವೀಕ್ಷಣೆ. ಪ್ರತ್ಯೇಕ ಮಾರ್ಗಗಳು ಮತ್ತು ಹೆಚ್ಚಿನ ಸಾಮರ್ಥ್ಯಕ್ಕೆ ಬಲವರ್ಧನೆಗೊಳಿಸುವ ಕಾಮಗಾರಿಗಳ ಕೆಲಸ.
- ಪೂರ್ಣಗೊಂಡ ವಿದ್ಯುತ್_ಉಪಕೇಂದ್ರಗಳ/ಮಾರ್ಗ ಕಾಮಗಾರಿಗಳ ತಾಂತ್ರಿಕ ಪರಿಶೋಧನೆ.__
- ದೂರುಗಳು ಬಂದಿರುವ ಕಾರ್ಯಗಳ ಬಗ್ಗೆ ತನಿಖೆ ಮಾಡುವುದು.
- ಪ್ರಗತಿಯ ಹಂತದಲ್ಲಿರುವ ಸ್ವತಂತ್ರ ವಿದ್ಯುತ್ ಉತ್ಪಾದಕರ, ಸ್ವಯಂ ಕಾರ್ಯನಿರ್ವಹಣೆ, ಬದಲಾವಣೆ, ಕಾಮಗಾರಿಗಳ ಸಾಮಗ್ರಿಗಳ ಪರೀವೀಕ್ಷಣೆ.
- ಸಾಮಗ್ರಿಗಳ ಉತ್ಪಾದಕರ ಕಾರ್ಖಾನೆಗಳ ಮೂಲ ಸೌಕರ್ಯಗಳ ಬಗ್ಗೆ ಮತ್ತು ತಾಂತ್ರಿಕ ವಿಷಯಗಳ ಬಗ್ಗೆ ಪರಿವೀಕ್ಷಣೆ ಕೈಗೊಳ್ಳುವುದು.
- ವಿದ್ಯುತ್ ಉಪಕೇಂದ್ರ/ಮಾರ್ಗಗಳಿಗೆ ಸಂಬಂಧಿಸಿದಂತೆ ಸಿವಿಲ್ ಕಾಮಗಾರಿಗಳ ಪರಿವೀಕ್ಷಣೆ.
- ನಿಗಮದಿಂದ ನಿರ್ದೆಶಿಸಿರುವ ಇತರೆ ಕೆಲಸ ಕಾರ್ಯಗಳನ್ನು ಕೈಗೊಳ್ಳುವುದು.

ಮೇಲೆ ತಿಳಿಸಿರುವ ಕರ್ತವ್ಯಗಳೊಂದಿಗೆ ನಿಗಮದಿಂದ ಉಲ್ಲೇಖಿಸಲಾದ ನಿರ್ದೇಶಿಸಲಾದ ಯಾವುದೇ ನಿಖರವಾದ ಪರಿವೀಕ್ಷಣೆಗಳು ಪುನರಾವಲೋಕನ/ ತಪಾಸಣೆಗಳನ್ನೂ ಸಹ ಕಾರ್ಯನಿರ್ವಹಿಸುವುದು ಹಾಗೂ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು.

ಈ ಶಾಖೆಯು ಕರ್ನಾಟಕ ರಾಜ್ಯಾದ್ಯಂತ ವ್ಯಾಪ್ತಿಯನ್ನು ಹೊಂದಿದೆ. ಈ ಶಾಖೆಯಲ್ಲಿ ನಿಯತ ಕಾಲದಲ್ಲಿ 994 ಸಂಖ್ಯೆಗಳ ಉಪ ಕೇಂದ್ರಗಳನ್ನು (66 ಕೆ.ವಿ ವರ್ಗ ಮತ್ತು ಮೇಲ್ಪಟ್ಟದ್ದು) ಮತ್ತು 1427 ಸಂಖ್ಯೆಗಳ ಇ.ಹೆಚ್.ಟಿ ಮಾರ್ಗಗಳನ್ನು (66 ಕೆ.ವಿ ವರ್ಗ ಮತ್ತು ಮೇಲ್ಪಟ್ಟದ್ದು) ಆರ್ಥಿಕ ವರ್ಷದಲ್ಲಿ ತಪಾಸಣೆ ಮಾಡಿ ವರದಿ ಸಲ್ಲಿಸಲಾಯಿತು.

2017–18 ನೇ ಸಾಲಿನ ಸಾಧನೆಗಳ ವರದಿ ಈ ಕೆಳಕಂಡಂತಿದೆ.

ಕ್ರ.ಸಂ	ವಿವರಗಳು	ವಾರ್ಷಿಕ ಗುರಿ	ತಿಂಗಳನಲ್ಲಿ		ಸಂಚಿತ		ಷರಾ
			ಗುರಿ	ಸಾಧನೆ	ಗುರಿ	ಸಾಧನೆ	
1	ಉಗ್ರಾಣ ತಪಾಸಣೆ	31	7	8	14	19	
2	**ಪ್ರಗತಿಯಲ್ಲಿರುವ ಕಾಮಗಾರಿಗಳ ತಪಾಸಣೆ**						
	(ಎ) ಕೇಂದ್ರಗಳು		38	37	549	535	ಪ್ರಗತಿಯಲ್ಲಿರುವ ಕಾಮಗಾರಿಗಳು– 38 ಪ್ರಗತಿಯಲ್ಲಿಲ್ಲದ ಕಾಮಗಾರಿಗಳು–11 ಪ್ರಾರಂಭವಾಗದ ಕಾಮಗಾರಿಗಳು–2

	(ಬಿ) ಮಾರ್ಗಗಳು		37	36	543	532	ಪ್ರಗತಿಯಲ್ಲಿರುವ ಕಾಮಗಾರಿಗಳು– 33 ಪ್ರಗತಿಯಲ್ಲಿಲ್ಲದ ಕಾಮಗಾರಿಗಳು–11 ಪ್ರಾರಂಭವಾಗದ ಕಾಮಗಾರಿಗಳು–1
	(ಸಿ) ಉನ್ನತೀಕರಣ/ಹೆಚ್ಚುವರಿ		31	31	426	425	ಪ್ರಗತಿಯಲ್ಲಿರುವ ಕಾಮಗಾರಿಗಳು– 35 ಪ್ರಗತಿಯಲ್ಲಿಲ್ಲದ ಕಾಮಗಾರಿಗಳು–28 ಪ್ರಾರಂಭವಾಗದ ಕಾಮಗಾರಿಗಳು–01
	(ಡಿ) ಪ್ರತ್ಯೇಕ ಮಾರ್ಗಗಳು		23	23	301	300	ಪ್ರಗತಿಯಲ್ಲಿರುವ ಕಾಮಗಾರಿಗಳು– 23 ಪ್ರಗತಿಯಲ್ಲಿಲ್ಲದ ಕಾಮಗಾರಿಗಳು–10 ಪ್ರಾರಂಭವಾಗದ ಕಾಮಗಾರಿಗಳು–01
3	**ಹಾಲಿ ಕೇಂದ್ರಗಳ & ಮಾರ್ಗಗಳ ತಪಾಸಣೆ**						
	(ಎ) ಕೇಂದ್ರಗಳು	994	82	66	984	665	
	(ಬಿ) ಮಾರ್ಗಗಳು	1427	109	36	1305	374	
4	ಸಾಮಾಗ್ರಿಗಳ ತಪಾಸಣೆ						
	(ಎ) ಕಾರ್ಖಾನೆಗಳಲ್ಲಿ						
	(1) ಕ.ವಿ.ಪ್ರ.ನಿ.ನಿ ಯ ಕಾಮಗಾರಿ			315	327	2291	
	(2) ಐ.ಪಿ.ಪಿ ಯ ಕಾಮಗಾರಿ			10	30	334	
	(3) ಸ್ವಯಂ ನಿರ್ಮಾಣ ಕಾಮಗಾರಿ			53	22	442	
	(ಬಿ) ಕಾಮಗಾರಿಯ ಸ್ಥಳದಲ್ಲಿ						
	(1) ಕ.ವಿ.ಪ್ರ.ನಿ.ನಿ ಯ ಕಾಮಗಾರಿ			66	327	365	
	(2) ಐ.ಪಿ.ಪಿ ಯ ಕಾಮಗಾರಿ			0	0	61	
	(3) ಸ್ವಯಂ ನಿರ್ಮಾಣ ಕಾಮಗಾರಿ			13	1	65	
	(ಸಿ) ಉಗ್ರಾಣದಲ್ಲಿ			202	291	1263	
5	**ಪೂರ್ಣಗೊಂಡ ಕಾಮಗಾರಿಗಳ ತನಿಖೆ (14–15)**						
	(ಎ) ಕೇಂದ್ರಗಳು	21	0	2	0	7	
	(ಬಿ) ಮಾರ್ಗಗಳು	32	0	3	0	8	
	(ಸಿ) ಉನ್ನತೀಕರಣ/ಹೆಚ್ಚುವರಿ	36	0	3	2	6	
6	**ಮಾರಾಟಗಾರರ ವಿಶ್ಲೇಷಣೆಯ ತನಿಖೆ**	0	0	0	3	7	
7	**ಇತರೆ**						

ಸಿವಿಲ್ ಕಾಮಗಾರಿಗಳು:

ಕ್ರ.ಸಂ	ವಿವರಗಳು	ವಾರ್ಷಿಕ ಗುರಿ	ತಿಂಗಳು		ಸಂಚಿತ		ಷರಾ
			ಗುರಿ	ಸಾಧನೆ	ಗುರಿ	ಸಾಧನೆ	
1	**ಪ್ರಗತಿಯಲ್ಲಿರುವ ಕಾಮಗಾರಿಗಳ ತನಿಖೆ**						
	(ಎ) ಕೇಂದ್ರಗಳು		12	12		233	
2	**ಹಾಲಿ ಕೇಂದ್ರಗಳ & ಮಾರ್ಗಗಳ ತಪಾಸಣೆ**						
	(ಎ) ಕೇಂದ್ರಗಳು		2	2		38	
	(ಬಿ) ಮಾರ್ಗಗಳು						
3	**ಪೂರ್ಣಗೊಂಡ ಕಾಮಗಾರಿಗಳ ತನಿಖೆ**						
	(ಎ) ಕೇಂದ್ರಗಳು/ಇತರೆ		0	0		23	
	(ಬಿ) ಮಾರ್ಗಗಳು						
	ಒಟ್ಟು		14	14		294	

ಮಾಹಿತಿ ತಂತ್ರಜ್ಞಾನ ಮತ್ತು ಎಮ್.ಐ.ಎಸ್ ಶಾಖೆಯ ಚಟುವಟಿಕೆಗಳು:–

ಮಾಹಿತಿ ತಂತ್ರಜ್ಞಾನ ಶಾಖೆಯು ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಕರ್ಯಗಳನ್ನು ನಿರ್ವಹಿಸುತ್ತದೆ ಮತ್ತು ಕ.ವಿ.ಪ್ರ.ನಿ.ನಿ.ಯ ಅಧಿಕೃತ ವೆಬ್‌ಸೈಟ್, ಅಂತರ್‌ಜಾಲ (ಇಂಟರ್‌ನೆಟ್), ಇಂಟ್ರಾನೆಟ್ ಪೋರ್ಟಲ್, ಇ–ಪ್ರಸರಣ, ಡಾಟಾ ಸೆಂಟರ್, ಕಾವೇರಿ ಭವನದಲ್ಲಿರುವ ಕಛೇರಿಗಳ ನೆಟ್‌ವರ್ಕ್, ಯಂತ್ರಾಂಶ (ಹಾರ್ಡ್‌ವೇರ್) ಹಾಗೂ ಸಿಸ್ಟಮ್ ಅಡ್ಮಿನಿಸ್ಟ್ರೇಶನ್, ದತ್ತಾಂಶ ನಿರ್ವಹಣೆ, ತಂತ್ರಾಂಶ ಅಭಿವೃದ್ಧಿಪಡಿಸುವುದು, ಯಂತ್ರಾಂಶ ಮತ್ತು ತಂತ್ರಾಂಶ ಖರೀದಿ ಮೊದಲಾದ ಕೆಲಸಗಳನ್ನು ನಿರ್ವಹಿಸುತ್ತಿದೆ.

2017–18 ನೇ ಸಾಲಿನಲ್ಲಿ ಈ ಕೆಳಗೆ ನಮೂದಿಸಿರುವ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗಿದೆ.

1. ಈ ಕೆಳಕಂಡ ಆಂತರಿಕ ತಂತ್ರಾಂಶ ನಿರ್ವಹಣೆ ಮತ್ತು ಅಭಿವೃದ್ಧಿಪಡಿಸಿರುವುದು.

- ಪೇರೋಲ್
- ಪಿಂಚಣಿ, ಕುಟುಂಬ ಪಿಂಚಣಿ, ಗ್ರಾಚ್ಯುಟಿ ಕೊಡುಗೆ.
- ಇಲಾಖಾ ಪರೀಕ್ಷೆ
- ಎ ಮತ್ತು ವಿ ಶ್ರೇಣಿ ಅಧಿಕಾರಿಗಳ ವಿವರ.
- ಕವಿಪ್ರನಿನಿ ಯೋಜನೆಗಳ ಭಾವಚಿತ್ರಗಳ ಅಪ್ಲೋಡ್.
- ಹುಂಡಿಗಳ ನಿರೂಪಣೆ ವ್ಯವಸ್ಥೆ.
- ಕಡತ ನಿರೂಪಣೆ ವ್ಯವಸ್ಥೆ (ನಿಗಮ ಕಾರ್ಯಾಲಯ)
- ಅಂತರ ಘಟಕ ಲೆಕ್ಕಗಳ– ವಹಿವಾಟು.
- ಎನ್.ಡಿ.ಸಿ.ಪಿ.ಎಸ್ ಕೊಡುಗೆಯ ವಿವರ.
- 31.03.2018 ರಂತೆ ಕವಿಪ್ರನಿನಿ ಮತ್ತು ವಿ.ಸ.ಕಂ ಗಳ ಹುದ್ದೆಗಳ ವಿವರಗಳು ಮತ್ತು ಸಿಬ್ಬಂದಿಯ ದತ್ತಾಂಶ
- ಸ್ಟೇಷನ್ ಇ–ಲಾಗ್
- ಉಪ ಕೇಂದ್ರ ಮತ್ತು ವಿದ್ಯುತ್ ಪರಿವರ್ತಕಗಳ ವಿವರಗಳು
- ಜಿ.ಎಸ್.ಟಿ ತಂತ್ರಾಂಶ

2. ಕ.ವಿ.ಪ್ರ.ನಿ.ನಿಗೆ ಸಂಬಂಧಿಸಿದ ಇ–ಪ್ರೊಕ್ಯೂರ್ಮೆಂಟ್ ಬಳಕೆದಾರರಿಗೆ ರಚನೆ, ನವೀಕರಣ, ಮ್ಯಾಪಿಂಗ್ ಮತ್ತು ಬಳಕೆದಾರರಿಗೆ ಹೊಣೆಗಾರಿಕೆ ನೀಡುವುದು.

3. ಬಯೋಮೆಟ್ರಿಕ್‌ಹಾಜರಾತಿ ಉಸ್ತುವಾರಿ ವ್ಯವಸ್ಥೆ.

4. ಮಾರಾಟಗಾರರಿಗೆ ಅನುಮೋದನೆ, ಓಪನ್ ಅಕ್ಸಿಸ್ ನಲ್ಲಿ ಕವಿಪ್ರನಿನಿ ಗೆ ಅನ್ವಯವಾಗುವ ಹೆಚ್.ಟಿ ಗ್ರಾಹಕರು ವಿದ್ಯುತ್ ಸಂಪರ್ಕ ಪಡೆಯುವುದರ ಬಗ್ಗೆ, ಆನ್‌ಲೈನ್ ಸರ್ವಿಸ್‌ನ ತಂತ್ರಾಂಶದ ಅಭಿವೃದ್ಧಿಪಡಿಸುವ ಏಜೆನ್ಸಿಯೊಂದಿಗೆ ಸಮನ್ವಯತೆ, ಹೆಚ್.ಟಿ.ಗ್ರಾಹಕರಿಂದ ಸ್ವೀಕರಿಸಿದ ಅರ್ಜಿಗಳನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಅಭಿವೃದ್ಧಿಪಡಿಸಿದ ಅಪ್ಲಿಕೇಷನ್ ಸಾಫ್ಟವೇರ್ ನೊಂದಿಗೆ ಇಂಟಗ್ರೇಷನ್ ಮಾಡುವುದು.

5. ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಕವಿಪ್ರನಿನಿ ಆಡಳಿತ ಕಚೇರಿ ಮತ್ತು ಇತರೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಒದಗಿಸಿರುವ ಮಾಹಿತಿ ದತ್ತಾಂಶ ನಿರ್ವಹಣೆ, 2017–18 ನೇ ಸಾಲಿನಲ್ಲಿ ಸ್ವೀಕರಿಸಿರುವ ಅರ್ಜಿ ಸಂಖ್ಯೆ ಮತ್ತು ವಿಲೇವಾರಿಯಾಗಿರುವ ಅರ್ಜಿ ಸಂಖ್ಯೆಯ ವಿವರಗಳು ಈ ಕೆಳಗೆ ನಮೂದಿಸಲಾಗಿದೆ.

ಒಟ್ಟು ಸಾರ್ವಜನಿಕ ಅಧಿಕಾರಿಗಳ ಸಂಖ್ಯೆ	ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ	2017–18 ನೇ ಸಾಲಿನಲ್ಲಿ ವಿಲೇವಾರಿ ಮಾಡಿರುವ ಅರ್ಜಿಗಳ ಸಂಖ್ಯೆ
108	1936	1913

ಎಂ.ಐ.ಎಸ್. ಶಾಖೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಮಾಹಿತಿಗಳು/ಅಂಕಿ–ಅಂಶಗಳನ್ನು ಕಲೆ ಹಾಕುವ ಮತ್ತು ಕ್ರೋಢೀಕರಿಸುವ ಜವಾಬ್ದಾರಿಯನ್ನು ಹಾಗೂ ಕೇಂದ್ರ ವಿದ್ಯುತ್ ಪ್ರಾಧಿಕಾರ, ವಿದ್ಯುತ್ ಮಂತ್ರಾಲಯ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯೋಜನಾ ಇಲಾಖೆ, ಶಾಸನಬದ್ಧ ಸಂಸ್ಥೆಗಳು ಕೋರುವ ಮಾಹಿತಿಗಳನ್ನು ನಿಯಮಿತವಾಗಿ ಒದಗಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ.

ಎಂ.ಐ.ಎಸ್. ಶಾಖೆಯು ಪ್ರತಿ ತಿಂಗಳು ಗ್ರಾಮೀಣ ವಿದ್ಯುದೀಕರಣ ಮತ್ತು ನೀರಾವರಿ ಪಂಪ್‌ಸೆಟ್ಟುಗಳ ವಿದ್ಯುದೀಕರಣದ ಪ್ರಗತಿಯ ವರದಿಗಳನ್ನು ಗ್ರಾಮೀಣ ವಿದ್ಯುದೀಕರಣ ನಿಗಮ, ನವದೆಹಲಿ ರವರಿಗೆ ಸಲ್ಲಿಸುವುದಲ್ಲದೇ, ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು, ಮಾಸಿಕ ವಿವಿಧ ಹಂತದ ಪರಿಶೀಲನಾ ಸಭೆ (MMR) ಮತ್ತು ಕೆ.ಡಿ.ಪಿ. ಸಭೆಗಳಿಗೆ ಒದಗಿಸುತ್ತಿದೆ.

ಎಂ.ಐ.ಎಸ್. ಶಾಖೆಯು ಬಹು ಮುಖ್ಯವಾಗಿ ವಿಧಾನ ಮಂಡಲದ ಮಾನ್ಯ ಸದಸ್ಯರುಗಳು ಕೋರುವ ಮಾಹಿತಿಗಳಿಗೆ ಮತ್ತು ಅಧಿವೇಶನದ ಸಮಯದಲ್ಲಿ ಕೋರಲಾಗುವ ಪ್ರಶ್ನೆಗಳಿಗೆ ಹಾಗೂ ವಿವಿಧ ನಿಯಮಗಳಡಿ ಕೋರಲಾದ ಸೂಚನೆಗಳಿಗೆ ಮಾಹಿತಿಗಳನ್ನು ಸಂಗ್ರಹಿಸಿ ಒದಗಿಸಲಾಗುತ್ತಿದೆ. 2017–18ನೇ ಸಾಲಿನಲ್ಲಿ ಮೂರು ಸಂಖ್ಯೆಯ ವಿಧಾನ ಮಂಡಲದ ಅಧಿವೇಶನಗಳು ಜರುಗಿದ್ದು, ವಿವರಗಳು ಈ ಕೆಳಕಂಡಂತಿವೆ:–

ಕ್ರ. ಸಂ.	ಅವಧಿ	ದಿನಗಳು	ಅಧಿವೇಶನ
1.	05–06–2017 ರಿಂದ 21–06–2017	13 ದಿನಗಳು	ಮುಂಗಾರು ಅಧಿವೇಶನ
2.	13–11–2017 ರಿಂದ 24–11–2017	10 ದಿನಗಳು	ಚಳಗಾಲದ ಅಧಿವೇಶನ(ಬೆಳಗಾವಿ)
3.	05–02–2018 ರಿಂದ 23–02–2018	11 ದಿನಗಳು	ಬಜೆಟ್ ಅಧಿವೇಶನ

ಕ.ವಿ.ಪ್ರ.ನಿ.ನಿ/ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ, ವಿಧಾನ ಸಭೆಯ 165 ಪ್ರಶ್ನೆಗಳು, ವಿಧಾನ ಪರಿಷತ್ತಿನ 135 ಪ್ರಶ್ನೆಗಳೂ ಸೇರಿದಂತೆ ಒಟ್ಟಾರೆ 300 ಸಂಖ್ಯೆಯ ಪ್ರಶ್ನೆಗಳಿಗೆ ಮತ್ತು ವಿವಿಧ ನಿಯಮಗಳಡಿಯಲ್ಲಿ/ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾದ 8 ಸಂಖ್ಯೆಯ ಗಮನ ಸೆಳೆಯುವ ಸೂಚನೆಗಳಿಗೆ ಉತ್ತರಿಸಲಾಗಿದೆ.

ಎಂ.ಐ.ಎಸ್. ಶಾಖೆಯಿಂದ ಕ.ವಿ.ಪ್ರ.ನಿ.ನಿ/ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಲೋಕಸಭೆ/ ರಾಜ್ಯಸಭೆಯ ಪ್ರಶ್ನೆಗಳಿಗೂ ಸಹ ಉತ್ತರಿಸಲಾಗಿದೆ. 2017–18 ನೇ ಸಾಲಿನಲ್ಲಿ 2 ಸಂಖ್ಯೆಯ ಲೋಕಸಭೆ ಮತ್ತು 1 ಸಂಖ್ಯೆಯ ರಾಜ್ಯಸಭೆ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ.

ಮುಂದುವರೆದು, ವಿಧಾನ ಮಂಡಲದ ಅರ್ಜಿ ಸಮಿತಿಗಳು, ಭರವಸೆ ಸಮಿತಿಗಳು ಹಾಗೂ ಇತರೆ ಸಮಿತಿಗಳು ಕೋರಿರುವ ಮಾಹಿತಿಗಳನ್ನು ಸಹ ಒದಗಿಸಲಾಗಿದೆ.

ಎ.ಪಿ.ಆರ್. ಮತ್ತು ಪ್ರಸರಣ ವಿದ್ಯುತ್ ದರ:

ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಅರ್ಜಿ:

1. ವಾರ್ಷಿಕ ರೆವಿನ್ಯೂ ಅಗತ್ಯತೆ ಹಾಗೂ ಪ್ರಸರಣ ವಿದ್ಯುತ್ ದರವನ್ನು ನಿರ್ಧರಿಸಲು, ಪರಿಶೋಧಿತ ವಾರ್ಷಿಕ ಲೆಕ್ಕಗಳನ್ನು ಆಧರಿಸಿ, ಕ.ವಿ.ಪ್ರ.ನಿ.ನಿ.ಯು ಆರ್ಥಿಕ ವರ್ಷ 2016–17 ರ ಸಾಲಿಗೆ, ತನ್ನ ವಾರ್ಷಿಕ ಕಾರ್ಯಸಾಧನಾ ಪರಿಶೀಲನಾ ಮನವಿಯನ್ನು ದಿನಾಂಕ 30.11.2017 ರಂದು ಅರ್ಜಿಯನ್ನು ಗೌರವಾನ್ವಿತ ಕ.ವಿ.ನಿ.ಆಯೋಗಕ್ಕೆ ಮಂಡಿಸಿತು.
2. ವಾರ್ಷಿಕ ಕಾರ್ಯಸಾಧನಾ ಪರಿಶೀಲನೆಯಲ್ಲಿ, ಕ.ವಿ.ನಿ ಅಯೋಗವು ರೂ.2708.28 ಕೋಟಿ ವಾರ್ಷಿಕ ರೆವಿನ್ಯೂ ಅಗತ್ಯತೆಯನ್ನು ಅನುಮತಿಸಿತು.
3. ಕ.ವಿ.ಪ್ರ.ನಿ.ನಿ.ಯು ಆರ್ಥಿಕ ವರ್ಷ 2016–17ರಲ್ಲಿ ಶೇ.99.60% ರಂತೆ ಉತ್ತಮ ಪ್ರಸರಣ ವ್ಯವಸ್ಥೆ ಲಭ್ಯತೆಯನ್ನು ಸಾಧಿಸಿದ್ದಕ್ಕಾಗಿ ದಿನಾಂಕ: 14.05.2018 ರ ಆದೇಶದಲ್ಲಿ ಕ.ವಿ.ನಿ ಆಯೋಗವು, ಕ.ವಿ.ಪ್ರ.ನಿ.ನಿ.ಗೆ ರೂ.22.11 ಕೋಟಿ ಉತ್ತೇಜಕ ಪ್ರೋತ್ಸಾಹಧನವನ್ನು ಅನುಮತಿಸಿತು.

2016–17ರ ಆರ್ಥಿಕ ವರ್ಷದ ಕೆಪೆಕ್ಸ್ ವಿವರಗಳನ್ನು ಕ.ವಿ.ನಿ. ಆಯೋಗಕ್ಕೆ ದಿನಾಂಕ 27–11–2017 ರಂದು ಸಲ್ಲಿಸಲಾಯಿತು. ಗೌರವಾನ್ವಿತ ಕ.ವಿ.ನಿ. ಆಯೋಗವು ಆರ್ಥಿಕ ವರ್ಷ 18 ರ ವಾರ್ಷಿಕ ಕಾರ್ಯನಿರ್ವಹಣೆಯ ಪುನರಾವಲೋಕನದಲ್ಲಿ ಆರ್ಥಿಕ ವರ್ಷ 2017 ಹಾಗೂ ಆರ್ಥಿಕ ವರ್ಷ 2018 ವಿವಿಧ ಕಾಮಗಾರಿಗಳ ಮಾದರಿಗಳನ್ನು ಮುಂದಾಲೋಚನಾ ಪರಿಶೀಲನೆಗಾಗಿ ಆಯ್ಕೆ ಮಾಡಿಕೊಂಡು ಪರಿಶೀಲನೆಗೆ ಒಳಪಡಿಸಲು ನಿರ್ಧರಿಸಿರುತ್ತಾರೆ.

ಮಾನವ ಸಂಪನ್ಮೂಲ ಅಭಿವೃದ್ಧಿ:

ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಹೂಡಿ, ಕವಿಪ್ರನಿನಿ ಯಲ್ಲಿ ಅಧಿಕಾರಿ/ ನೌಕರರುಗಳಿಗೆ ವಿದ್ಯುತ್ ಪ್ರಸರಣ ಮತ್ತು ವಿತರಣಾ ತರಬೇತಿಯ ಜೊತೆಗೆ ಪ್ರತಿಯೊಬ್ಬರ ಸರ್ವಾಂಗೀಣ ಬೆಳವಣಿಗೆಗೂ ಅನುಕೂಲವಾಗುವಂತೆ, ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ತರಬೇತಿಗಳು ಅಧಿಕಾರಿ/ ನೌಕರರ ವರ್ಗಗಳ ಕಾರ್ಯಕ್ಷಮತೆ ಮತ್ತು ಕೌಶಲ್ಯವನ್ನು ಹೆಚ್ಚಿಸುವಲ್ಲಿ ಪರಿಣಾಮಕಾರಿಯಾಗಿರುತ್ತದೆ. ಇದರಿಂದ ಸಂಸ್ಥೆಗೂ ಲಾಭದಾಯಕವಾಗುತ್ತದೆ. ಪ್ರತಿಯೊಬ್ಬ ಅಧಿಕಾರಿ/ ನೌಕರರ ಸಾಮರ್ಥ್ಯಕ್ಕನುಗುಣವಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಹೂಡಿ, ವೈಟ್‌ಫೀಲ್ಡ್ ರಸ್ತೆ, ಬೆಂಗಳೂರು 12 ಎಕರೆ ಪ್ರದೇಶದಲ್ಲಿ ವಿಸ್ತಾರಗೊಂಡಿದ್ದು, ಈ ಕೆಳಕಂಡ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.

- ಒಂಭತ್ತು ಶೈಕ್ಷಣಿಕ ಕೊಠಡಿಗಳನ್ನು ಹೊಂದಿದ್ದು, ಪ್ರತಿ ಕೊಠಡಿಯಲ್ಲೂ 50 ಅಭ್ಯರ್ಥಿಗಳಿಗೆ ಸ್ಥಳಾವಕಾಶವಿದೆ.
- ವಸತಿ ನಿಲಯಗಳ ಎರಡು ಸಂಕೀರ್ಣಗಳಿದ್ದು, ಪ್ರತಿ ಸಂಕೀರ್ಣದಲ್ಲಿ ಸುಮಾರು 50 ಅಭ್ಯರ್ಥಿಗಳಿಗೆ ಉಳಿದುಕೊಳ್ಳುವ ಅವಕಾಶವಿದೆ.
- ಒಳಾಂಗಣ ಉಪಹಾರ ಗೃಹದ ಸೌಲಭ್ಯವಿದೆ.
- ಯೋಗ ಕೊಠಡಿ.
- ಒಳಾಂಗಣ ಕ್ರೀಡೆಗಳ ಕೊಠಡಿ.
- ಒಳಾಂಗಣ ಷಟಲ್ ಬ್ಯಾಡ್‌ಮಿಂಟನ್ ಕೋರ್ಟ್.
- ಬಹುದೊಡ್ಡ ಹೊರಾಂಗಣಾ ಕ್ರೀಡಾ ಮೈದಾನ.

ಇದರ ಜೊತೆಗೆ, ಸುಮಾರು 400 ರಿಂದ 500 ಆಸನಗಳ ಬಹು ಉದ್ದೇಶೀತ ಸಭಾಂಗಣ, ಸುಮಾರು 200 ತರಬೇತುದಾರರಿಗಾಗಿ ವಿಶೇಷ ಸೌಲಭ್ಯದ ವಸತಿ ನಿಲಯದ ಸಮುಚ್ಛಯ, ವಿಶೇಷ ಸಭಾ ಕೊಠಡಿ, ಡಿಜಿಟಲ್ ಲೈಬ್ರರಿ, ವರ್ಕಿಂಗ್ ಮಾಡ್ಯೂಲ್ಸ್/ಉಪಕರಣಗಳ ಪ್ರದರ್ಶನ ಪ್ರಯೋಗಾಲಯ, ಪ್ರಮುಖ ಸಂಸ್ಥೆಗಳೊಂದಿಗೆ ಕಾರ್ಯಜಾಲ

ಸಂಪರ್ಕ, ಇತ್ಯಾದಿಗಳ ನಿರ್ಮಾಣ ಪ್ರಕ್ರಿಯೆಯಲ್ಲಿದೆ. **ಒಟ್ಟಾರೆ, ಕ.ವಿ.ಪ್ರ.ನಿ.ನಿ.ಯು ಈ ಕೇಂದ್ರವನ್ನು ವೈಶಿಷ್ಟ್ಯತೆಯ ಕೇಂದ್ರ ವನ್ನಾಗಿಸುವ ದೃಷ್ಟಿಕೋನವನ್ನು ಹೊಂದಿದೆ.**

ಆರ್ಥಿಕ ವರ್ಷ 2017–18 ರಲ್ಲಿ ನಡೆಸಿದ ತರಬೇತಿ ಕಾರ್ಯಕ್ರಮ:–

ಆರ್ಥಿಕ ವರ್ಷ 2017–18ರಲ್ಲಿ 4886 ಅಧಿಕಾರಿ/ನೌಕರರು ವಿವಿಧ ವಿಷಯಗಳಲ್ಲಿ ತರಬೇತಿಯನ್ನು ಪಡೆದಿದ್ದಾರೆ. ದಿನವೊಂದಕ್ಕೆ ಸರಾಸರಿ 93 ಅಭ್ಯರ್ಥಿಗಳು ತರಬೇತಿಯನ್ನು ಪಡೆದಿದ್ದಾರೆ.

ಕ.ವಿ.ಪ್ರ.ನಿ.ನಿ.ಯ ಉದ್ಯೋಗಿಗಳಿಗೆ ಎರಡು ವರ್ಗಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ:–

(1) ಅನುಗಮನ ತರಬೇತಿ ಕಾರ್ಯಕ್ರಮ

(2) ಸೇವೆಯಲ್ಲಿರುವ ಉದ್ಯೋಗಿಗಳಿಗೆ ತರಬೇತಿ ಕಾರ್ಯಕ್ರಮ.

1. ಅನುಗಮನ ತರಬೇತಿ ಕಾರ್ಯಕ್ರಮ :

ಕ.ವಿ.ಪ್ರ.ನಿ.ನಿ.ಯಲ್ಲಿ ಹೊಸದಾಗಿ ನೇಮಕಗೊಂಡ ಉದ್ಯೋಗಿಗಳಿಗೆ ಈ ತರಬೇತಿಯನ್ನು ನಡೆಸಲಾಗುತ್ತದೆ. ಆರ್ಥಿಕ ವರ್ಷ 2017–18ರಲ್ಲಿ ಮುಂದೆ ತಿಳಿಸಿರುವ ಅನುಗಮನ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು:

- ಹೊಸದಾಗಿ ನೇಮಕಗೊಂಡ 333 ಕಿರಿಯ ಮಾರ್ಗದಾಳುಗಳಿಗೆ 10 ಕೆಲಸದ ದಿನಗಳ ಅನುಗಮನ ತರಬೇತಿ.
- ಹೊಸದಾಗಿ ನೇಮಕಗೊಂಡ 2016 ನೇ ತಂಡದ 49 ಸಂಖ್ಯೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುಗಳಿಗೆ, 30 ಕೆಲಸದ ದಿನಗಳ ಅವಧಿಗೆ ಶಿಕ್ಷಣ ಕೊಠಡಿಯೊಳಗೆ ಹಾಗೂ 30 ಕೆಲಸದ ದಿನಗಳ ಅವಧಿಗೆ ಕಾರ್ಯಕ್ಷೇತ್ರದಲ್ಲಿ, ಒಟ್ಟು 60 ಕಚೇರಿ ಕೆಲಸದ ದಿನಗಳ ತರಬೇತಿ.
- ಹೊಸದಾಗಿ ನೇಮಕಗೊಂಡ 2016 ನೇ ತಂಡದ 25 ಸಂಖ್ಯೆಯ ಸಹಾಯಕ ಇಂಜಿನಿಯರ್ (ಕಾಮಗಾರಿ) ರವರುಗಳಿಗೆ, 30 ಕೆಲಸದ ದಿನಗಳ ಅವಧಿಗೆ ಶಿಕ್ಷಣ ಕೊಠಡಿಯೊಳಗೆ ಹಾಗೂ 30 ಕೆಲಸದ ದಿನಗಳ ಅವಧಿಗೆ ಕಾರ್ಯಕ್ಷೇತ್ರದಲ್ಲಿ, ಒಟ್ಟು 60 ಕಚೇರಿ ಕೆಲಸದ ದಿನಗಳ ತರಬೇತಿ.

2. ಸೇವೆಯಲ್ಲಿರುವ ಉದ್ಯೋಗಿಗಳಿಗೆ ತರಬೇತಿ ಕಾರ್ಯಕ್ರಮ :

ಆರ್ಥಿಕ ವರ್ಷ 2017–18 ರಲ್ಲಿ ಕ.ವಿ.ಪ್ರ.ನಿ.ನಿ.ಯಲ್ಲಿ ಸೇವೆಯಲ್ಲಿರುವ ಉದ್ಯೋಗಿಗಳಿಗೆ ಮುಂದೆ ತಿಳಿಸಿರುವ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು:

- ಸ.ಕಾ.ನಿ.ಇಂ, ಸ.ಇಂ, ಕಿ.ಇಂ, ಲೆಕ್ಕಾಧಿಕಾರಿಗಳಿಗೆ ಪುನಃಶ್ಚೇತನ ತರಬೇತಿ.
- ಎ ಮತ್ತು ಬಿ ಗುಂಪಿನ ಅಧಿಕಾರಿಗಳಿಗೆ ಮೆ॥ KEEMA ರವರಿಂದ ತಾಂತ್ರಿಕ ತರಬೇತಿ.
- ಕ.ವಿ.ಪ್ರ.ನಿ.ನಿ/ವಿದ್ಯುತ್ ಸರಬರಾಜು ಕಂಪನಿಗಳ ಅಧಿಕಾರಿ/ನೌಕರರಿಗೆ ನಿವೃತ್ತಿಪೂರ್ವ ಯೋಜನಾ ತರಬೇತಿ.
- ಪದೋನ್ನತಿ ಹೊಂದಿದ ಸಹಾಯಕ ಇಂಜಿನಿಯರ್ ರವರಿಗೆ ಪದೋನ್ನತಿ ನಂತರದ ತರಬೇತಿ.
- ಪದೋನ್ನತಿ ಹೊಂದಿದ ಸಹಾಯಕ ಲೆಕ್ಕಾಧಿಕಾರಿಗಳಿಗೆ ಅಭಿಶಿಕ್ಷಣ ತರಬೇತಿ.
- ಕವಿಪ್ರನಿನಿಯ ಅಧಿಕಾರಿ/ ನೌಕರರಿಗೆ ಜಿ.ಎಸ್.ಟಿ ತರಬೇತಿ.
- ಲೆಕ್ಕ ಸಂಕಲನಕ್ಕೆ ಸಂಬಂಧಿಸಿದ ತರಬೇತಿ.

3. ಕ.ವಿ.ಪ್ರ.ನಿ.ನಿ/ ಎಸ್ಕಾಂಗಳ ಉದ್ಯೋಗಿಗಳಿಗೆ ತರಬೇತಿ ಕಾರ್ಯಕ್ರಮ:

ಆರ್ಥಿಕ ವರ್ಷ 2017–18ರಲ್ಲಿ, ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಉದ್ಯೋಗಿಗಳಿಗೆ ಉದ್ಯೋಗಪೂರ್ವ ಮತ್ತು ಪದೋನ್ನತಿ ಪೂರ್ವ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು:

- ಎಸ್ಕಾಂ ಮತ್ತು ಕವಿಪ್ರನಿನಿಯ ಕಿರಿಯ ಸಹಾಯಕರು ಮತ್ತು ದಫ್ತರಿಗಳಿಗೆ ತರಬೇತಿ.
- ಸೆಸ್ಕ್‌ನ ಮಾರ್ಗದಾಳುಗಳಿಗೆ ಪದೋನ್ನತಿ ಪೂರ್ವ ತರಬೇತಿ.

ಆರ್ಥಿಕ ವರ್ಷ 2017–18 ನೇ ಸಾಲಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಬೆಂಗಳೂರು ಅಧಿಕಾರಿ/ನೌಕರರಿಗೆ ನೀಡಿದ ತರಬೇತಿಯ ವಿವರಗಳು

ಕ್ರ. ಸಂ.	ತರಬೇತಿ ಹೆಸರು	ತಂಡಗಳ ಸಂಖ್ಯೆ	ತರಬೇತಿಗಾಗಿ ನಿಯೋಜಿಸಿದ ಸಂಖ್ಯೆ	ತರಬೇತಿಗೆ ಹಾಜರಾದ ಸಂಖ್ಯೆ	ಅವಧಿ ದಿನಗಳಲ್ಲಿ	ಒಟ್ಟು ಮಾನವ ದಿನಗಳು	ಶೇಕಡವಾರು ತರಬೇತಿಗೆ ಹಾಜರಾದವರು
1	ಸಹಾಯಕ ಇಂಜಿನಿಯರ್ ಗಳಿಗೆ ಪದೋನ್ನತಿ ನಂತರದ ತರಬೇತಿ	8	491	433	5	2165	88%
2	ಕಿರಿಯ ಮಾರ್ಗದಾಳುಗಳಿಗೆ ಅನುಗಮನ ತರಬೇತಿ	6	362	333	10	3330	92%
3	ಜಿ.ಎಸ್.ಟಿ ತರಬೇತಿ	3	270	245	1	245	91%
4	ಕ.ವಿ.ಪ್ರ.ನಿ.ನಿ/ವಿದ್ಯುತ್ ಸರಬರಾಜು ಕಂಪನಿಗಳ ಅಧಿಕಾರಿ/ನೌಕರರಿಗೆ ನಿವೃತ್ತಿಪೂರ್ವ ಯೋಜನಾ ತರಬೇತಿ (ಕುಟುಂಬ ಸಮೇತ)	12	1264	668	2	1336	53%
5	ಸಹಾಯಕ ಇಂಜಿನಿಯರ್ ರವರುಗಳಿಗೆ ಪುನಃಚೇತನ ತರಬೇತಿ	8	477	388	2	776	81%
6	ಸಹಾಯಕ ಕಾರ್ಯನಿವಾಹ ಇಂಜಿನಿಯರ್ ಮತ್ತು ಲೆಕ್ಕಾಧಿಕಾರಿಗಳಿಗೆ ಪುನಃಚೇತನ ತರಬೇತಿ	2	120	64	2	128	53%
7	ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರುಗಳಿಗೆ ಪುನಃಚೇತನ ತರಬೇತಿ	13	820	552	2	1104	67%
8	ಪ್ರಥಮ ಚಿಕಿತ್ಸೆ ಮತ್ತು ಅಗ್ನಿಶಾಮಕ ತರಬೇತಿ	5	270	240	10	2400	89%
9	ಕಿರಿಯ ಇಂಜಿನಿಯರ್ ರವರುಗಳಿಗೆ ಪುನಃಚೇತನ ತರಬೇತಿ	28	1680	1201	2	2402	71%
10	ಎ ಮತ್ತು ಬಿ ಗುಂಪಿನ ಅಧಿಕಾರಿಗಳಿಗೆ ಮೆ॥ KEEMA ರವರಿಂದ ತಾಂತ್ರಿಕ ತರಬೇತಿ.	1	44	38	1	38	86%
11	ನೂತನವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಗೆ ನೇಮಕಾತಿ ಹೊಂದಿದ್ದ ಅಧಿಕಾರಿಗಳಿಗೆ ಅನುಗಮನ ತರಬೇತಿ.	1	52	49	30	1470	94%
12	ದಫ್ತರಿಗಳಿಗೆ ಉದ್ಯೋಗ ಪೂರ್ವ ತರಬೇತಿ	1	45	37	28	1036	82%
13	ನೂತನವಾಗಿ ಸಹಾಯಕ ಇಂಜಿನಿಯರ್ (ಕಾಮಗಾರಿ)ಹುದ್ದೆಗೆ ನೇಮಕಾತಿ ಹೊಂದಿದ್ದ ಅಧಿಕಾರಿಗಳಿಗೆ ಅನುಗಮನ ತರಬೇತಿ.	1	25	25	30	750	100%
14	ಸೆಸ್ಕ್ ಮಾರ್ಗದಾಳುಗಳಿಗೆ ಪದೋನ್ನತಿ ಪೂರ್ವ ತರಬೇತಿ.	1	49	49	40	1960	100%
15	ಕಿರಿಯ ಸಹಾಯಕರಿಗೆ ಉದ್ಯೋಗ ಪೂರ್ವ ತರಬೇತಿ	2	82	79	28	2212	96%
16	ನೂತನವಾಗಿ ಪದ್ದೋನ್ನತಿ ಹೊಂದಿದ ಸಹಾಯಕ ಲೆಕ್ಕಾಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ	1	20	20	5	100	100%
17	ಲೆಕ್ಕಗಳ ಶಾಖೆಯ ತರಬೇತಿ	1	343	341	1	341	99%
18	ಹೊರಗಿನ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜನೆ		129	124	3	372	96%
	ಕವಿಪ್ರನಿನಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಹೂಡಿಯಲ್ಲಿ ನಡೆಸಿದ ತರಬೇತಿ ಒಟ್ಟು ಸಂಖ್ಯೆ		**6543**	**4886**		**22165**	**75%**

ಒಟ್ಟು ಮಾನವ ದಿನಗಳು:– 22165
ಒಟ್ಟು ಕೆಲಸದ ದಿನಗಳು: – 238
ಒಂದು ದಿನಕ್ಕೆ ತರಬೇತಿಗೆ ಹಾಜರಾದವರು:– 93

ಆಂತರಿಕ ಪರಿಶೋಧನಾ ಚಟುವಟಿಕೆಗಳ ಸಂಕ್ಷಿಪ್ತ ವಿವರಗಳು

I. ನಿಗಮದಿಂದ ಕಾಲಕಾಲಕ್ಕೆ ಆದೇಶಿಸಲ್ಪಡುವ ಸುತ್ತೋಲೆಗಳು, ಜಾರಿಯಲ್ಲಿರುವ ನಿಬಂಧನೆಗಳು, ಲೆಕ್ಕ ಸಂಪುಟ ಹಾಗೂ ಆಂತರಿಕ ಪರಿಶೋಧನಾ ಕೈಪಿಡಿ ಪ್ರಕಾರ ಆಂತರಿಕ ಪರಿಶೋಧನೆ ಕಾರ್ಯ ಆರ್ಥಿಕ ಸಲಹೆಗಾರರ (ಆಂ.ಪ) ರವರ ಮೇಲ್ವಿಚಾರಣೆಯಲ್ಲಿ ನಿರ್ವಹಿಸಲಾಗುತ್ತಿದೆ. ನೀಡಲ್ಪಟ್ಟ ಪರಿಶೋಧನಾ ವಿಚಾರಣೆ/ಟಿಪ್ಪಣಿ, ಹೆಚ್ಚುವರಿ ಪಾವತಿ/ಅನಿಯತ ವೆಚ್ಚ ಇವುಗಳನ್ನು ಸಂಬಂಧಿತ ನಿಗಮದ ಕಛೇರಿಯ ಮುಖ್ಯಸ್ಥರೊಂದಿಗೆ ಸಮಾಲೋಚಿಸಿದ ನಂತರ ಇತ್ಯರ್ಥಗೊಳಿಸಲಾಗುತ್ತದೆ. ಆಂತರಿಕ ಪರಿಶೋಧನೆಯ ವಿಭಾಗವಾರು ಕಾರ್ಯ ಚಟುವಟಿಕೆಯ ವಿವರಗಳನ್ನು ಕಾಲಕಾಲಕ್ಕೆ ಕ್ರೋಢಿಕರಿಸಿ ಕಾರ್ಯಾಧಾರಿತ ಪ್ರಗತಿಯ ವರದಿಯನ್ನು ಸಲ್ಲಿಸಲಾಗುತ್ತಿದೆ.

II. 2017–18 ನೇ ಆರ್ಥಿಕ ವರ್ಷದಲ್ಲಿ ಆಂತರಿಕ ಪರಿಶೋದನಾ ವಿಭಾಗದ ಸಾಧನೆಗಳು ಹಾಗೂ ಮುಖ್ಯವಾಗಿ ಅವಲೋಕಿಸಿದ ವಿಷಯಗಳ ಸಂಕ್ಷಿಪ್ತ ವಿವಿರಗಳು:–

1. ಕೇಂದ್ರ ಖರೀದಿ ಸಭೆಯ ಮುಂದೆ ಮಂಡಿಸಲಾದ ಖರೀದಿ ಹಾಗೂ ಗುತ್ತಿಗೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ನಿಗಮ ಕಾರ್ಯಾಲಯದ ಆಂತರಿಕ ಪರಿಶೋಧನೆಯಿಂದ 180 ಪ್ರಸ್ತಾವೆನಗಳನ್ನು ಪರಿಶೀಲಿಸಲಾಗಿರುತ್ತದೆ. ಮುಂದುವರೆದು ವಲಯ ಮಟ್ಟದಲ್ಲಿನ ಖರೀದಿ ಮತ್ತು ಸಮಗ್ರ ಕಾರ್ಯಗುತ್ತಿಗೆ ಕಾಮಗಾರಿಗಳಿಗೆ ಸಂಬಂಧಿಸಿದ ಪ್ರಸ್ತವನೆಗಳನ್ನು ಪ್ರಸರಣ ವಲಯದ ಉಪ–ಲೆಕ್ಕ ನಿಯಂತ್ರಣಾಧಿಕಾರಿ (ಆಂ.ಪ) ರವರು ಪರಿಶೀಲಿಸಿ, ಆಂತರಿಕ ಪರಿಶೋಧನೆ ಅಭಿಪ್ರಾಯ ನೀಡಿರುತ್ತಾರೆ.
2. ಆರ್ಥಿಕ ವರ್ಷ 2017–18 ರಲ್ಲಿ ದರ ವ್ಯತ್ತಾಸದ ಬಿಲ್ಲುಗಳ (Price Variation) ಪೂರ್ವ ಆಂತರಿಕ ಪರಿಶೋಧನೆಯಲ್ಲಿ ಒಟ್ಟು 67 ಲಕ್ಷದಷ್ಟು ಮೊತ್ತವನ್ನು ಪರಿಶೀಲಿಸಿ, ನಿಗಮಕ್ಕೆ ತಗಲುವ ಹೆಚ್ಚುವರಿ ಮೋತ್ತವನ್ನು ತಡೆಹಿಡಿಯಲಾಗಿದೆ.
3. ಟಿ.ಎಲ್ ಮತ್ತು ಎಸ್.ಎಸ್ ವಿಭಾಗಗಳಲ್ಲಿ ಆಂತರಿಕ ಪರಿಶೋಧನೆಯ ಮೇಲ್ವಿಚಾರಣೆಯಿಂದ 2017–18 ರಲ್ಲಿ ರೂ.6.64 ಕೋಟಿ ಯಷ್ಟು ವಸತಿ ಸಮುಚ್ಛಯಗಳ ಬಾಡಿಗೆ ಹಾಗೂ ರೂ.5.36 ಕೋಟಿ ಯಷ್ಟು ಕಚೇರಿ ಕಟ್ಟಡಗಳ ಬಾಡಿಗೆಯನ್ನು ಬೇಡಿಕೆ ಮಾಡಿಸಲಾಗಿದೆ.
4. ಆರ್ಥಿಕ ವರ್ಷ 2017–18 ರ ಅವಧಿಯಲ್ಲಿ ಹಲವಾರು ಸರಬರಾಜು/ಕಾಮಗಾರಿ ಹುಂಡಿಗಳಲ್ಲಿ ಒಟ್ಟು ರೂ.69.54 ಲಕ್ಷದಷ್ಟು ದಂಡ (Penalty) ಕಡಿಮೆ ಲೆಕ್ಕಾಚಾರ ಮಾಡಿರುವ ಲೆಕ್ಕಾಚಾರವನ್ನು ಆಂತರಿಕ ಪರಿಶೋಧನೆಯಿಂದ ಗಮನಿಸಲಾಗಿದೆ.
5. ಆರ್ಥಿಕ ವರ್ಷ 2017–18 ರಲ್ಲಿ ಅಂತಿಮ ಪರಿಮಾಣ ವ್ಯತ್ಯಾಸದ ಏರಿಳಿತ ಪಟ್ಟಿಯಲ್ಲಿ (Final Quantity Variation Bill) ಒಟ್ಟು ರೂ. 15 ಲಕ್ಷದಷ್ಟು ಮೊತ್ತ ಹೆಚ್ಚುವರಿಯಾಗಿ ಕೋರಿರುವುದನ್ನು ಆಂತರಿಕ ಪರಿಶೋಧನೆಯಲ್ಲಿ ಗುರುತಿಸಲಾಗಿದೆ.
6. 2017–18 ನೇ ವಾರ್ಷಿಕ ಅಂತ್ಯಕ್ಕೆ ವಲಯವಾರು ಭೂ ದಾಖಲೆಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ವಲಯದ ಹೆಸರು	ಒಟ್ಟು ಆಸ್ತಿಗಳ ಸಂಖ್ಯೆ	ಪರಿಪೂರ್ಣ ದಾಖಲೆಗಳು ಲಭ್ಯವಿರುವುದು	ಭಾಗಶಃ ದಾಖಲೆಗಳು ಲಭ್ಯವಿರುವುದು	ಒಟ್ಟು ದಾಖಲೆಗಳು ಇಲ್ಲದಿರುವುದು
1	ಬೆಂಗಳೂರು	330	172	158	0
2	ತುಮಕೂರು	207	142	65	0
3	ಕಲಬುರುಗಿ	176	133	37	6
4	ಮೈಸೂರು	179	132	37	10
5	ಹಾಸನ	196	125	40	31
6	ಬಾಗಲಕೋಟೆ	233	149	69	15
ಒಟ್ಟು		**1321**	**853**	**406**	**62**

ಆರ್ಥಿಕ ವರ್ಷದಲ್ಲಿ ಆಂತರಿಕ ಪರಿಶೋಧನಾ ವಿಭಾಗದಿಂದ ನಡೆಸಿದ ನಿರಂತರ ಪರಿಶೋಧನೆ ಹಿನ್ನೆಲೆಯಲ್ಲಿ ಒಟ್ಟು 69 ಸಂಖ್ಯೆಯ ಆಸ್ತಿಗಳಿಗೆ ಸಂಪೂರ್ಣ ದಾಖಲೆಗಳನ್ನು ಸಿದ್ಧಪಡಿಸಿದ್ದು, ಉಳಿದಂತೆ 468 (406 + 62)

ಸಂಖ್ಯೆಯ ಆಸ್ತಿಗಳಿಗೆ ಕಾಮಗಾರಿ (ಸಿವಿಲ್) ವಿಭಾಗದವರು ಭೂ ದಾಖಲೆಗಳನ್ನು ಸಿದ್ದಪಡಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

7. ಆಂತರಿಕ ಪರಿಶೋಧನಾ ವಿಭಾಗವು ನಿಗಮ ಕಾರ್ಯಾಲಯಕ್ಕೆ ಆರ್ಥಿಕ ವರ್ಷ 2017–18 ರಲ್ಲಿ ಸಿಬ್ಬಂದಿ ಸೇವಾ ನಿಯಮಗಳ ವಿಷಯಗಳಿಗೆ ಸಂಬಂಧಿಸಿದಂತೆ ಆಡಳಿತ ಕಛೇರಿಗಳಿಗೆ ಸೂಕ್ತ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಅಧಿಕಾರಿಗಳ/ ಸಿಬ್ಬಂದಿ ವೇತನ ನಿಗಧೀಕರಣ, ಅಂತಿಮ ಗಳಿಕೆ ರಜೆ ನಗಧೀಕರಣ ಲೆಕ್ಕಾಚಾರ, ವೈದ್ಯಕೀಯ ವೆಚ್ಚಗಳ ಪಾವತಿ ಹಾಗೂ ಇತರೆ ವೆಚ್ಚಗಳ ಪಾವತಿಯಲ್ಲಿ ರೂ.17.26 ಲಕ್ಷದಷ್ಟು ತಪ್ಪಾಗಿ ಲೆಕ್ಕೀಕರಿಸಿರುವುದನ್ನು ಪರಿಶೀಲಿಸಿ ಕಂಡುಹಿಡಿಯಲಾಗಿದೆ.

8. ನಿಗಮ ಕಾರ್ಯಾಲಯದಲ್ಲಿ ಆಂತರಿಕ ಪರಿಶೋಧನಾ ವಿಭಾಗವು ಕೇಂದ್ರ ಖರೀದಿ ಸಮಿತಿ/ ಮಂಡಳಿಯ ಮುಂದೆ ಸಲ್ಲಿಸಲಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸುತ್ತಿದ್ದು, ಪ್ರಸಕ್ತ ಆರ್ಥಿಕ ವರ್ಷ 2017–18 ರಲ್ಲಿ ತೆರಿಗೆ ಹಾಗೂ ಪರಿಹಾರ ಪ್ರಸ್ತಾವನೆಗಳಲ್ಲಿ ತಪ್ಪು ಲೆಕ್ಕಾಚಾರ ಮಾಡಿರುವುದನ್ನು ಗಮನಿಸಿ, ಒಟ್ಟು ರೂ.1.26 ಕೋಟಿ ಯಷ್ಟು ಮೊತ್ತವನ್ನು ಕಂಡುಹಿಡಿಯಲಾಗಿದೆ.

III. 2017–18ನೇ ಸಾಲಿನ ಆಂತರಿಕ ಪರಿಶೋಧನೆಯ ಪ್ರಗತಿಯ ಹೆಚ್ಚುವರಿ ಪಾವತಿ/ ನಿಯಮಬಾಹಿರ ವೆಚ್ಚದ ಮತ್ತು ಆಡಿಟ್ ವರದಿಗಳ ಸಾರಾಂಶದ ವಿವರಗಳನ್ನು ಕೆಳಗಿನ ವಿವಿರಣಾ ಪಟ್ಟಿಯಲ್ಲಿ ಗಮನಿಸಬಹುದಾಗಿದೆ.

ಹೆಚ್ಚುವರಿ ಪಾವತಿಯ ವಿವರಗಳು				ರೂ. ಲಕ್ಷಗಳಲ್ಲಿ
ಪ್ರಾರಂಭದ ಬಾಕಿ	ಕಂಡು ಹಿಡಿದ ಮೊತ್ತ	ಒಟ್ಟು	ವಸೂಲಾದ ಮೊತ್ತ	ಅಂತಿಮ ಬಾಕಿ
28.97	694.87	723.84	657.37	66.47
ಅಕ್ಷೇಪಣಾರ್ಹ ಮೊತ್ತದ ವಿವರಗಳು				ರೂ. ಲಕ್ಷಗಳಲ್ಲಿ
ಪ್ರಾರಂಭದ ಬಾಕಿ	ಕಂಡು ಹಿಡಿದ ಮೊತ್ತ	ಒಟ್ಟು	ಸಕ್ರಮಗೊಳಿಸಿದ ಮೊತ್ತ	ಅಂತಿಮ ಬಾಕಿ
25.53	284.78	310.31	271.29	39.02
ಆಡಿಟ್ ಪ್ಯಾರಗಳ ವಿವರಗಳು				ಸಂಖ್ಯೆಗಳಲ್ಲಿ
ಪ್ರಾರಂಭಿಕ ಆಡಿಟ್ ಪ್ಯಾರಗಳ ವಿವರ ಆಡಿಟ್ ಪ್ಯಾರಗಳ ನೀಡಿದ ವಿವರ		ಒಟ್ಟು	ಆಡಿಟ್ ಪ್ಯಾರಗಳಿಗೆ ಉತ್ತರ ಪಡೆದ ವಿವರ	ಬಾಕಿ ಉಳದ ಆಡಿಟ್ ಪ್ಯಾರಗಳು
415	2108	2523	2213	310

ವಲಯವಾರು ವಿವರಗಳು:

ಆರ್ಥಿಕ ವರ್ಷ 2017–18 ರಲ್ಲಿ ಆಡಿಟ್ ಪ್ಯಾರಗಳ ವಿವರಗಳು

ಕ್ರ. ಸಂ	ವಲಯ/ಕಛೇರಿಯ ಹೆಸರು	ಪ್ರಾರಂಭಿಕ ಆಡಿಟ್ ಪ್ಯಾರಗಳ ಬಾಕಿ	ಆರ್ಥಿಕ ವರ್ಷದಲ್ಲಿ ನೀಡಲಾದ ಆಡಿಟ್ ಪ್ಯಾರಗಳ ಸಂಖ್ಯೆ	ಒಟ್ಟು	ಆರ್ಥಿಕ ವರ್ಷದಲ್ಲಿ ಉತ್ತರ ಪಡೆದು ಅಂಗೀಕರಿಸಲಾದ ಆಡಿಟ್ ಪ್ಯಾರಗಳ ಸಂಖ್ಯೆ	ಬಾಕಿ ಉಳದ ಆಡಿಟ್ ಪ್ಯಾರಗಳು
1	ಬೆಂಗಳೂರು	52	550	602	559	43
2	ತುಮಕೂರು	38	264	302	301	01
3	ಕಲಬುರಗಿ	56	193	249	142	107
4	ಮೈಸೂರು	61	210	271	226	45
5	ಹಾಸನ	49	228	277	245	32
6	ಬಾಗಲಕೋಟೆ	145	546	691	620	71
7	ಕೇಂದ್ರ ಕಛೇರಿ	10	98	108	102	6
8	ಎಸ್.ಎಲ್.ಡಿ.ಸಿ	4	19	23	18	5
	ಒಟ್ಟು	**415**	**2108**	**2523**	**2213**	**310**

ಆರ್ಥಿಕ ವರ್ಷ 2017–18 ರಲ್ಲಿ ಹೆಚ್ಚುವರಿ ಪಾವತಿಯ ವಿವರಗಳು

ಕ್ರ. ಸಂ	ವಲಯ/ ಕಛೇರಿಯ ಹೆಸರು	2017–18 ರಲ್ಲಿ ಹೆಚ್ಚುವರಿ ಪಾವತಿ				ರೂ. ಲಕ್ಷಗಳಲ್ಲಿ
		ಪ್ರಾರಂಭದ ಬಾಕಿ	ಕಂಡು ಹಿಡಿದ ಮೊತ್ತ	ಒಟ್ಟು	ವಸೂಲಾದ ಮೊತ್ತ	ಅಂತಿಮ ಬಾಕಿ
1	ಬೆಂಗಳೂರು	3.14	315.94	319.08	316.24	2.84
2	ತುಮಕೂರು	3.21	94.58	97.79	97.49	0.30
3	ಕಲಬುರಗಿ	3.57	27.84	31.41	24.11	7.30
4	ಮೈಸೂರು	5.89	42.92	48.81	8.70	40.11
5	ಹಾಸನ	9.30	63.41	72.71	67.37	5.34
6	ಬಾಗಲಕೋಟೆ	2.91	121.85	124.76	123.67	1.09
7	ಕೇಂದ್ರ ಕಛೇರಿ	0.00	23.76	23.76	15.15	8.61
8	ಎಸ್.ಎಲ್.ಡಿ.ಸಿ	0.95	4.57	5.52	4.64	0.88
	ಒಟ್ಟು	**28.97**	**694.87**	**723.84**	**657.37**	**66.47**

ಅರ್ಥಿಕ ವರ್ಷ 2017–18 ರಲ್ಲಿ ಅಕ್ಷೇಪಣಾರ್ಹ ಮೊತ್ತದ ವಿವರಗಳು

ಕ್ರ. ಸಂ	ವಲಯ/ ಕಛೇರಿಯ ಹೆಸರು	2017–18 ರಲ್ಲಿ ಅಕ್ಷೇಪಣಾರ್ಹ ಮೊತ್ತ				ರೂ. ಲಕ್ಷಗಳಲ್ಲಿ
		ಪ್ರಾರಂಭದ ಬಾಕಿ	ಕಂಡು ಹಿಡಿದ ಮೊತ್ತ	ಒಟ್ಟು	ಸಕ್ರಮಗೊಳಿಸಿದ ಮೊತ್ತ	ಅಂತಿಮ ಬಾಕಿ
1	ಬೆಂಗಳೂರು	1.47	8.93	10.40	6.82	3.58
2	ತುಮಕೂರು	4.72	101.55	106.27	106.27	0
3	ಕಲಬುರಗಿ	1.67	5.98	7.65	1.58	6.07
4	ಮೈಸೂರು	4.55	22.44	26.99	20.23	6.76
5	ಹಾಸನ	1.37	24.89	26.26	25.97	0.29
6	ಬಾಗಲಕೋಟೆ	11.26	95.10	106.36	84.25	22.11
7	ಕೇಂದ್ರ ಕಛೇರಿ	0.00	25.43	25.43	25.43	0.00
8	ಎಸ್.ಎಲ್.ಡಿ.ಸಿ	0.49	0.46	0.95	0.74	0.21
	ಒಟ್ಟು	**25.53**	**284.78**	**310.31**	**271.29**	**39.02**

ಸಿಬಂದ್ಧಿ ಶಾಖೆಯಿಂದ ಹೊರಡಿಸಲಾದ ಪ್ರಮುಖ ಆದೇಶಗಳು:–

1. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಬಿ16/ಬಿ61/5795/2008–09 ದಿನಾಂಕ: 01.04.2017 ರಲ್ಲಿ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ–7 ರ ಕ್ರಮ ಸಂಖ್ಯೆ: 11 ತಿದ್ದುಪಡಿಗೊಳಿಸುವುದರೊಂದಿಗೆ ಹೊಸದಾಗಿ ಹಿರಿಯ ಆಪ್ತ ಕಾರ್ಯದರ್ಶಿ ಹುದ್ದೆಯನ್ನು ಸೇರ್ಪಡೆಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.
2. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಬಿ16/3590(2)/89–90 ದಿನಾಂಕ: 11.04.2017 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಸ್ಟೇಷನ್ ಪರಿಚಾರಕ ದರ್ಜೆ–2 ರ 3 ಬ್ಯಾಕಲಾಗ್

ಹುದ್ದೆಗಳು ಭರ್ತಿ ಮಾಡಲು ಹಾಗೂ 24–ಸಹಾಯಕ ಮಾರ್ಗದಾಳು ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಅಹ್ವಾನಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

3. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಬಿ16/40360/2016–17 ದಿನಾಂಕ: 20.04.2017 ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಸಹಾಯಕ ಇಂಜಿನಿಯರ್(ಕಾಮಗಾರಿ) ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

4. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಬಿ16/40342/2016–17 ದಿನಾಂಕ: 28.04.2017 ರಲ್ಲಿ ಕಿರಿಯ ಮಾರ್ಗದಾಳು ಹಾಗೂ ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಗಳ ಕಾಯ್ದಿರಿಸಿದ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

5. **ನಿಗಮದ ಸಂಖ್ಯೆ:** ಕವಿಪ್ರನಿನಿ/ಬಿ16/40352/2016–17 ದಿನಾಂಕ: 02.05.2017 ರಲ್ಲಿ ಮಾಜಿ ಸೈನಿಕರಿಗೆ ಕುಟುಂಬ ಪಿಂಚಣಿಯನ್ನು ಪಾವತಿಸುವ ಕುರಿತು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

6. ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಶ್ರೀಮತಿ ಬಿ.ಕೆ.ಪವಿತ್ರ ಮತ್ತು ಇತರರು ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ: 2368–69/2011 ನ್ನು ಇತ್ಯರ್ಥಪಡಿಸಿ ಹೊರಡಿಸಿದ ದಿನಾಂಕ: 09.02.2017 ರ ತೀರ್ಪಿನ ಕುರಿತು ಸರ್ಕಾರವು ದಿನಾಂಕ: 06.05.2017 ರಂದು ಆದೇಶವನ್ನು ಹೊರಡಿಸಿದ್ದು, ಸದರಿ ಆದೇಶವನ್ನು ನಿಗಮದ ದಿನಾಂಕ: 08.05.2017 ರ ಆದೇಶದಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.

7. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಬಿ16/40360/2016–17 ದಿನಾಂಕ: 10.05.2017 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಸಹಾಯಕ ಇಂಜಿನಿಯರ್(ಕಾಮಗಾರಿ) ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

8. ಆಪರೇಟರ್/ಮಾಪಕ ಓದುಗ/ಓವರ್‌ಸೀಯರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಯಿಂದ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಬಡ್ತಿ ನೀಡುವಾಗ ನೌಕರರನ್ನು ತಾಂತ್ರಿಕ ಹಾಗೂ ತಾಂತ್ರಿಕವಲ್ಲದ ಕೋಟಾದಡಿಯಲ್ಲಿ ಪರಿಗಣಿಸುವ ಕುರಿತು ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ–2/2014–15 ದಿನಾಂಕ: 10.05.2017 ರಂದು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

9. **ನಿಗಮದ ಆದೇಶ ಸಂಖ್ಯೆ:** ಕವಿಪ್ರನಿನಿ/ಬಿ16/4681/2006–07 ದಿನಾಂಕ: 27.05.2017 ರಲ್ಲಿ ಗುತ್ತಿಗೆ ಸಹಾಯಕ ಇಂಜಿನಿಯರ್(ವಿ) ಹಾಗೂ ಗುತ್ತಿಗೆ ಕಿರಿಯ ಇಂಜಿನಿಯರ್(ವಿ) ರವರುಗಳಿಗೆ ದಿನಾಂಕ: 29.12.2010 ರಿಂದ 31.06.2016 ರವರೆಗಿನ ತತ್ವರಿಣಾಮದ ಆರ್ಥಿಕ ಸೌಲಭ್ಯವನ್ನು ಮಂಜೂರು ಮಾಡಲು ಆದೇಶಿಸಲಾಗಿರುತ್ತದೆ.

10. ನಿಗಮದ ದಿನಾಂಕ: 08.09.2017 ರ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4682/2006–07(3) ರಲ್ಲಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಪದವಿ ವಿದ್ಯಾರ್ಹತೆಯ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನ ಕಂದಾಯ ಸಹಾಯಕರುಗಳ ಗುತ್ತಿಗೆ ಸೇವೆಯನ್ನು ಜನವರಿ–2017 ರಿಂದ ಡಿಸೆಂಬರ್–2017 ರವರೆಗೆ ವಿಸ್ತರಿಸುವುದರೊಂದಿಗೆ, ಮಾಸಿಕ ಕ್ರೋಢಿಕೃತ ಸಂಭಾವನೆಯನ್ನು 10,000/– ದಿಂದ 12,500/– ಕ್ಕೆ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಯ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನ ಕಂದಾಯ ಸಹಾಯಕರುಗಳಿಗೆ ಮಾಸಿಕ ಕ್ರೋಢಿಕೃತ ಸಂಭಾವನೆಯನ್ನು 8000/– ದಿಂದ 10,500/– ಕ್ಕೆ ಹೆಚ್ಚಿಸಿ ದಿನಾಂಕ: 01.07.2017 ರಿಂದ ಅನ್ವಯವಾಗುವಂತೆ ಪರಿಷ್ಕರಿಸಲಾಗಿದೆ.

11. **ನಿಗಮದ ಆದೇಶ ಸಂಖ್ಯೆ:** ಕವಿಪ್ರನಿನಿ/ಬಿ16/ಬಿ1/1001/2016–17 ದಿನಾಂಕ: 08.09.2017 ರಲ್ಲಿ ಅಧಿಕಾರೇತರ ನಿರ್ದೇಶಕರು ಕವಿಮಂ ಮಂಡಳಿಯ ನಿರ್ದೇಶಕರುಗಳ ಸಭೆಗೆ ಹಾಜರಾಗಲು ಪ್ರಯಾಣ ಭತ್ಯೆಯನ್ನು ಪಾವತಿಸುವ ಅನುಮೋದನೆ ನೀಡಲಾಗಿರುತ್ತದೆ.

12. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಬಿ5/721/2011–12 ದಿನಾಂಕ: 08.09.2017 ರಲ್ಲಿ 2015 ರ ನಂತರ ಮತ್ತು ತರಬೇತಿ ಅವಧಿಯಲ್ಲಿ ಸೇವೆಯಲ್ಲಿರುವಾಗಲೇ ನಿಧನ ಹೊಂದಿದ ಕಿರಿಯ ಸ್ಟೇಷನ್ ಪರಿಚಾರಕ/ ಕಿರಿಯ ಮಾರ್ಗದಾಳು ರವರ ಅವಲಂಬಿತರಿಗೆ ಅನುಕಂಪ ಆಧಾರದ ಮೇಲೆ ನೌಕರಿ ನೀಡುವ ಕುರಿತು ಕವಿಮಂ ನೇಮಕಾತಿ(ಅನುಕಂಪ ಆಧಾರದ ಮೇಲೆ ನೇಮಕಾತಿ) (ತಿದ್ದುಪಡಿ) ನಿಯಮ–1997 ಕ್ಕೆ ಹೊಸದಾಗಿ ನಿಯಮ–6(5) ನ್ನು ಸೇರ್ಪಡೆಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

13. **ನಿಗಮದ ಸುತ್ತೋಲೆ ಸಂಖ್ಯೆ:** ಕವಿಪ್ರನಿನಿ/ಐ5(ಸಿ)/721(ಸಾಮಾನ್ಯ)/80–81 ದಿನಾಂಕ: 26.10.2017 ರಲ್ಲಿ ಅನುಕಂಪ ಆಧಾರದ ನೇಮಕಾತಿಗಾಗಿ ಆದಾಯದ ಮಿತಿಯನ್ನು ರೂ.35,218 ಕ್ಕೆ ನಿಗಧಿಪಡಿಸುತ್ತಾ, ದಿನಾಂಕ: 01.07.2017 ರ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸುವಾಗ ಪಾಲಿಸಬೇಕಾದ ಸುಚನೆಗಳ ಕುರಿತು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

14. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಐ16/ಐ55/25028/2011–12 ದಿನಾಂಕ: 01.12.2017 ರಲ್ಲಿ ನೌಕರನು ವಯೋನಿವೃತ್ತಿ ಹೊಂದುವಾಗ ಅಮಾನತ್ತು ಅಥವಾ ಶಿಸ್ತು ನಿಯಂತ್ರಣ/ಕ್ರಿಮಿನಲ್ ಮೊಕದ್ದಮೆ ಹೊಂದಿದ್ದಲ್ಲಿ, ನೌಕರನಿಂದ ಅಂತಿಮ ಗಳಿಕೆ ರಜೆ ಸಮನಾಂತರವಾಗಿ ಪೂರ್ತಿಯಾಗಿ ಅಥವಾ ಅರ್ಧದಷ್ಟು ಹಣವನ್ನು ಹಿಡಿತಗೊಳಿಸುವ ಕುರಿತು ಕವಿಮಂ ನೌಕರರ ಸೇವಾ ನಿಯಮಗಳ ಅಧ್ಯಾಯ–8 ಕ್ರಮ ಸಂಖ್ಯೆ: 129(ಸಿ) ಯನ್ನು ಹೊಸದಾಗಿ ಸೇರ್ಪಡೆಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

15. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಐ16/ಐ55/25028/2011–12 ದಿನಾಂಕ: 01.12.2017 ರಲ್ಲಿ ನೌಕರನು ವಯೋನಿವೃತ್ತಿ ಹೊಂದುವಾಗ ಅಮಾನತ್ತು ಅಥವಾ ಶಿಸ್ತು ನಿಯಂತ್ರಣ/ಕ್ರಿಮಿನಲ್ ಮೊಕದ್ದಮೆ ಹೊಂದಿದ್ದಲ್ಲಿ, ನೌಕರನಿಂದ ಅಂತಿಮ ಗಳಿಕೆ ರಜೆ ಸಮನಾಂತರವಾಗಿ ಪೂರ್ತಿಯಾಗಿ ಅಥವಾ ಅರ್ಧದಷ್ಟು ಹಣವನ್ನು ಹಿಡಿತಗೊಳಿಸುವ ಕುರಿತು ಕವಿಮಂ ಅಕೌಂಟ್ಸ್ ಮಾನ್ಯುಯಲ್ ವಾಲ್ಯೂಂ–2 ಪಾರ್ಟ್–ಬಿ ಯ ಕ್ರಮ ಸಂಖ್ಯೆ: 504(16) ನ್ನು ತಿದ್ದುಪಡಿಗೊಳಿಸುವುದರೊಂದಿಗೆ ಉಪಸಂಖ್ಯೆ: 16(11) ನ್ನು ಹೊಸದಾಗಿ ಸೇರ್ಪಡೆಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

16. **ನಿಗಮದ ಆದೇಶ ಸಂಖ್ಯೆ:** ಕವಿಪ್ರನಿನಿ/ಐ16/3595/98–99 ದಿನಾಂಕ: 17.01.2018 ರಲ್ಲಿ ನಿಗಮದ ನೌಕರರ ಅವಲಂಬಿತ ಅಂಧ ಅಥವಾ ಚಲನವೈಕಲ್ಯತೆ ಹೊಂದಿರುವ ಮಕ್ಕಳ ಶಿಕ್ಷಣಕ್ಕಾಗಿ ಮಾಸಿಕ ತಲಾ ರೂ.500/– ಗಳಂತೆ ಶಿಕ್ಷಣ ಭತ್ಯೆಯನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ.

17. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಐ16/40360/2016–17 ದಿನಾಂಕ: 27.01.2018 ರಲ್ಲಿ ಸಹಾಯಕ ಇಂಜಿನಿಯರ್(ವಿ), ಸಹಾಯಕ ಇಂಜಿನಿಯರ್(ವಿ) (ಎನ್.ಹೆಚ್.ಕೆ.) (ಬ್ಯಾಕಲಾಗ್), ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್(ವಿದ್ಯುತ್/ಕಾಮಗಾರಿ), ಕಿರಿಯ ಇಂಜಿನಿಯರ್(ವಿದ್ಯುತ್) (ಹೈದ್ರಾಬಾದ್ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕವಲ್ಲದ)(ಬ್ಯಾಕಲಾಗ್), ಸಹಾಯಕ ಹಾಗೂ ಕಿರಿಯ ಸಹಾಯಕ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

18. **ನಿಗಮದ ಆದೇಶ ಸಂಖ್ಯೆ:** ಕವಿಪ್ರನಿನಿ/ಐ16/5411/96–97 ದಿನಾಂಕ: 16.02.2018 ರಲ್ಲಿ ನೌಕರರ/ನೌಕರರ ಅವಲಂಬಿತ ತಂದೆ ತಾಯಿಯ ಆದಾಯದ ಹಾಗೂ ವೈದ್ಯಕೀಯ ಮರು ವೆಚ್ಚದ ಕುರಿತು ಸರ್ಕಾರ ಆದೇಶ ಸಂಖ್ಯೆ: ಡಿಪಿಎಆರ್/02/ಎಸ್ಎಂಆರ್/2015 ದಿನಾಂಕ: 27.09.2017 ನ್ನು ನಿಗಮದಲ್ಲಿ ಅಳವಡಿಸಿಕೊಂಡು ಆದೇಶಿಸಲಾಗಿರುತ್ತದೆ.

19. **ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಐ16/40360/2016–17 ದಿನಾಂಕ: 06.03.2018 ರಲ್ಲಿ ನೇರ ನೇಮಕಾತಿ ಅಡಿಯಲ್ಲಿ ಸಹಾಯಕ ಇಂಜಿನಿಯರ್(ವಿ), ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್(ವಿದ್ಯುತ್/ಕಾಮಗಾರಿ), ಸಹಾಯಕ ಹಾಗೂ ಕಿರಿಯ ಸಹಾಯಕ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

20. **ಆದೇಶ ಸಂಖ್ಯೆ:** ಕವಿಪ್ರನಿ/ಐ16/69516/2017–18 ದಿನಾಂಕ: 09.03.2018 ರಲ್ಲಿ ನಿಗಮದ ನೌಕರರಿಗೆ ದಿನಾಂಕ: 01.04.2017 ರಿಂದ ಅನ್ವಯವಾಗುವಂತೆ ಶೇಕಡ 26 ರಷ್ಟು ವೇತನ ಶ್ರೇಣಿಯನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿರುತ್ತದೆ.

21. **ಆದೇಶ ಸಂಖ್ಯೆ:** ಕವಿಪ್ರನಿ/ಐ16/69517/2017–18 ದಿನಾಂಕ: 09.03.2018 ರಲ್ಲಿ ನಿಗಮದ ಅಧಿಕಾರಿಗಳಿಗೆ ದಿನಾಂಕ: 01.04.2017 ರಿಂದ ಅನ್ವಯವಾಗುವಂತೆ ಶೇಕಡ 26 ರಷ್ಟು ವೇತನ ಶ್ರೇಣಿಯನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿರುತ್ತದೆ.

22. **ಆದೇಶ ಸಂಖ್ಯೆ:** ಕವಿಪ್ರನಿ/ಐ16/69518/2017–18 ದಿನಾಂಕ: 09.03.2018ರಲ್ಲಿ ದಿನಾಂಕ: 01.04.2017 ರಿಂದ ಅನ್ವಯವಾಗುವಂತೆ ದಿನಾಂಕ: 01.04.2017 ರ ನಂತರ ವಯೋನಿವೃತ್ತಿ ಹೊಂದುವ/ಮರಣ ಹೊಂದುವ ನೌಕರರಿಗೆ ಮತ್ತು ದಿನಾಂಕ: 31.03.2017 ರಂದು ಪಿಂಚಣಿ/ಕುಟುಂಬ ಪಿಂಚಣಿ ಪಡೆಯುವ ಪಿಂಚಣಿದಾರರಿಗೆ/ಕುಟುಂಬ ಪಿಂಚಣಿದಾರರಿಗೆ ಮತ್ತು ದಿನಾಂಕ: 01.04.2017 ಕ್ಕಿಂತ ಮೊದಲಿನ ಪಿಂಚಣಿದಾರರು/ಕುತುಂಬ ಪಿಂಚಣಿದಾರರಿಗೆ ಪಿಂಚಣಿ ಸೌಲಭ್ಯಗಳನ್ನು ಪರಿಷ್ಕರಿಸಿ ಆದೇಶ

ಹೊರಡಿಸಲಾಗಿರುತ್ತದೆ.

23. **ಸುತ್ತೋಲೆ ಸಂಖ್ಯೆ:** ಕವಿಪ್ರನಿನಿ/ಬಿ16/ಇತರೆ–2/2014–15 ದಿನಾಂಕ: 14.03.2018 ರಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಪದೋನ್ನತಿ ನೀಡುವಾಗ ನೌಕರರನ್ನು ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸುವ ಕುರಿತು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

24. **ನಿಗಮದ ಆದೇಶ ಸಂಖ್ಯೆ:** ಕವಿಪ್ರನಿನಿ/ಬಿ16/5607(2)/2000–01 ದಿನಾಂಕ: 15.03.2018 ರಲ್ಲಿ ಮಾರ್ಗದಾಳು, ಸಹಾಯಕ ಮಾರ್ಗದಾಳು, ಕಿರಿಯ ಮಾರ್ಗದಾಳು ಹುದ್ದೆಗಳನ್ನು ಪವರ್‌ಮೆನ್, ಸಹಾಯಕ ಪವರ್‌ಮೆನ್, ಕಿರಿಯ ಪವರ್‌ಮೆನ್ ಎಂದು ಮರುಹೆಸರಿಸಿ ಆದೇಶಿಸಲಾಗಿರುತ್ತದೆ.

25. **ನಿಗಮದ ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಬಿ16/67600/2017–18 ದಿನಾಂಕ: 26.03.2018 ರಲ್ಲಿ ಸೇವೆಯಲ್ಲಿರುವ ನೌಕರರಿಗೆ ಮೀಸಲಿರಿಸಿದ ಶೇಕಡ 10 ರ ಕೋಟಾದಲ್ಲಿ ನೇರ ನೇಮಕಾತಿ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ 6 ರ ಕ್ರಮ ಸಂಖ್ಯೆ: 12 ಹಾಗೂ 13, ಅಧ್ಯಾಯ 7 ರ ಕ್ರಮ ಸಂಖ್ಯೆ: 7, 8 ಹಾಗೂ 15 ಹುದೆಗಳಿಗೆ ನೇರ ನೇಮಕಾತಿ ಮಾಡುವಾಗ ನೌಕರರು ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ನೇಮಕಾತಿಯ ಇತರೆ ನಿಯಮಗಳನ್ನು ಪಾಲಿಸಿ ಭರ್ತಿ ಮಾಡುವ ಬಗ್ಗೆ ನಿಗಮದ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ನೇಮಕಾತಿ ವಿಧಾನಕ್ಕೆ ಸೂಕ್ತ ತಿದ್ದುಪಡಿ ಮಾಡಲಾಗಿರುತ್ತದೆ.

26. **ನಿಗಮದ ಆದೇಶ ಸಂಖ್ಯೆ:** ಕವಿಪ್ರನಿನಿ/ಬಿ16/4682/2006–07(ಎ) ದಿನಾಂಕ: 26.03.2018 ರಲ್ಲಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಪದವಿ ವಿದ್ಯಾರ್ಹತೆಯ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನ ಕಂದಾಯ ಸಹಾಯಕರುಗಳ ಗುತ್ತಿಗೆ ಸೇವೆಯನ್ನು ಜನವರಿ–2018 ರಿಂದ ಡಿಸೆಂಬರ್–2018 ರವರೆಗೆ ವಿಸ್ತರಿಸುವುದರೊಂದಿಗೆ, ಮಾಸಿಕ ಕ್ರೋಢಿಕೃತ ಸಂಭಾವನೆಯನ್ನು ₹12,500/– ದಿಂದ ₹18,000/– ಕ್ಕೆ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಯ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನ ಕಂದಾಯ ಸಹಾಯಕರುಗಳಿಗೆ ಮಾಸಿಕ ಕ್ರೋಢಿಕೃತ ಸಂಭಾವನೆಯನ್ನು ₹10,500/– ದಿಂದ ₹15,000/– ಕ್ಕೆ ಹೆಚ್ಚಿಸಿ ದಿನಾಂಕ: 01.01.2018 ರಿಂದ ಅನ್ವಯವಾಗುವಂತೆ ಪರಿಷ್ಕರಿಸಲಾಗಿದೆ.

27. **ನಿಗಮದ ಆದೇಶ ಸಂಖ್ಯೆ:** ಕವಿಪ್ರನಿನಿ/ಬಿ16/69516/2017–18 ದಿನಾಂಕ: 26.03.2018 ರಲ್ಲಿ ಮಕ್ಕಳ ಪಾಲನೆಗಾಗಿ ಮಂಜೂರು ಮಾಡಿದ ವಿಶೇಷ ರಜೆಯನ್ನು ದಿನಾಂಕ: 09.03.2018 ರಿಂದ ಅನ್ವಯವಾಗುವಂತೆ ಹಿಂಪಡೆಯಲಾಗಿರುತ್ತದೆ.

28. **ನಿಗಮದ ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಬಿ16/39395(5)/2013–14 ದಿನಾಂಕ: 26.03.2018 ರಲ್ಲಿ ನಿಗಮದ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ 4 ರ ಕ್ರಮ ಸಂಖ್ಯೆ: 12ಎ ಕಿರಿಯ ಇಂಜಿನಿಯರ್(ವಿ) ಹಾಗೂ 13ಎ ಕಿರಿಯ ಇಂಜಿನಿಯರ್(ಕಾಮಗಾರಿ) ಅಧ್ಯಾಯ 7 ರ ಕ್ರಮ ಸಂಖ್ಯೆ: 7ಎ, ಸಹಾಯಕ ಮತ್ತು 8ಎ ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿ ಪ್ರಾಧಿಕಾರಿಯನ್ನು ಅಧೀಕ್ಷಕ ಇಂಜಿನಿಯರ್(ಪ್ರ), ಕಾಮಗಾರಿ ಮತ್ತು ನಿರ್ವಹಣೆ ಮತ್ತು ಅಧೀಕ್ಷಕ ಇಂಜಿನಿಯರ್(ಪ್ರ) (ನಿರ್ವಹಣೆ), ಕವಿಪ್ರನಿನಿ ಎಂದು ತಿದ್ದುಪಡಿಗೊಳಿಸಲಾಗಿರುತ್ತದೆ.

29. **ನಿಗಮದ ಅಧಿಸೂಚನೆ ಸಂಖ್ಯೆ:** ಕವಿಪ್ರನಿನಿ/ಬಿ16/5607(1)/2000–01 ದಿನಾಂಕ: 26.03.2018 ರಲ್ಲಿ ನಿಗಮದ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ 6 ರ ಕ್ರಮ ಸಂಖ್ಯೆ: 2 ಮುಖ್ಯ ಇಂಜಿನಿಯರ್(ವಿ) ಹಾಗೂ ಅಧ್ಯಾಯ 7 ರ ಕ್ರಮ ಸಂಖ್ಯೆ: 1 ಆರ್ಥಿಕ ಸಲಹೆಗಾರರು ಹುದ್ದೆಗೆ ನಿಗಧಿಪಡಿಸಿದ ಕನಿಷ್ಟ ಅರ್ಹತೆಯನ್ನು 2 ವರ್ಷ ಸಡಿಲಗೊಳಿಸುವುದರೊಂದಿಗೆ ಸೂಕ್ತ ತಿದ್ದುಪಡಿಗೊಳಿಸಲಾಗಿರುತ್ತದೆ.

30. ಕವಿಪ್ರನಿನಿ/ಎಸ್ಕಾಂಗಳಲ್ಲಿ 2017–18 ರಲ್ಲಿ ಮೂರು ವರ್ಷಗಳ ಕಾಲ ನಿರಂತರ ಸೇವೆ ಸಲ್ಲಿಸಿದ 3 ಜನ ಪ್ರೊಬೇಷನರಿ ಮಜ್ದೂರ್‌ಗಳನ್ನು ಕಿರಿಯ ಮಾರ್ಗದಾಳುಗಳನ್ನಾಗಿ ಪರಿವರ್ತಿಸಲಾಗಿದೆ.

ಔದ್ಯಮಿಕ ಬಾಂಧವ್ಯ

ನಿಗಮದ ಗುರಿಸಾಧನೆಯಲ್ಲಿ ಮಾನವಶಕ್ತಿಯೂ ಅಪೂರ್ವವಾದ ಆಸ್ತಿಯೆಂದು ಪರಿಗಣಿಸಿರುವ ನಿಗಮವು ನೌಕರರ ಸಾಮಾಜಿಕ ಭದ್ರತೆ ಹಾಗೂ ಕಾರ್ಮಿಕ ಕಾರ್ಯಕ್ರಮಗಳ ಬಗ್ಗೆಯೂ ಮುತುವರ್ಜಿವಹಿಸಿರುತ್ತದೆ. ನೌಕರರ ಕುಂದು–ಕೊರತೆಗಳನ್ನು ಸಕಾಲದಲ್ಲಿ ಗುರುತಿಸಿ ಕಾರ್ಮಿಕ ಪ್ರತಿನಿಧಿಗಳೊಂದಿಗೆ ಪರಸ್ಪರ ಸಮಾಲೋಚಿಸಿ ಪರಿಹರಿಸಲಾಗುತ್ತಿದೆ. ನೌಕರರ ಸಂಘದೊಂದಿಗೆ ದಿನಾಂಕ:03.06.2004 ರಂದು ಮಾಡಿಕೊಂಡ ಒಪ್ಪಂದನ್ವಯ 2016–17ನೇ ಸಾಲಿನಲ್ಲಿ 4ಜನ ಗ್ಯಾಂಗ್ ಮನ್‌ಗಳನ್ನು ಮಜ್ದೂರುಗಳನ್ನಾಗಿ ಪರಿವರ್ತಿಸಲಾಗಿದ್ದು, 7ಜನ ಮಜ್ದೂರ್‌ಗಳನ್ನು ಕಿರಿಯ ಮಾರ್ಗದಾಳುಗಳಾಗಿ ನಿಗಮದಲ್ಲಿ ವಿಲೀನಗೊಳಿಸಲಾಗಿರುತ್ತದೆ.

ನಿಗಮವು ಸುಧಾರಣೆ ಹಾಗೂ ಪುನಃರಚನೆಯ ಮುಂಚೂಣಿಯಲ್ಲಿರುವುದರಿಂದ, ಈ ನಿಟ್ಟಿನಲ್ಲಿ ನೌಕರವರ್ಗ ಹಾಗೂ ಆಡಳಿತ ವರ್ಗ ಪರಸ್ಪರ ಸಮಾಲೋಚಿಸಿ, ಪಾರದರ್ಶಕವಾದ ಸಲಹೆಯೊಂದಿಗೆ ಮುಂದುವರಿಯುತ್ತಿರುವುದು ಆಶಾದಾಯಕ ವಿಷಯ. **"ಆಡಳಿತದಲ್ಲಿ ಕಾರ್ಮಿಕರ ಪಾತ್ರ"**ವನ್ನು ಗುರುತಿಸಿ ಮಹತ್ವ ನೀಡಿರುವ ನಿಗಮದಲ್ಲಿ ನೌಕರರ ಸಂಘವು ಗುರಿ ಸಾಧನೆಗೆ ಸಹಕರಿಸುತ್ತಿರುವುದು ಗ್ರಾಹಕರಿಗೆ ಉತ್ತಮ ಸೇವೆ ನೀಡುವಲ್ಲಿ ಸ್ಫೂರ್ತಿಯಾಗಿರುತ್ತದೆ.

ಕ.ವಿ.ಪ್ರ.ನಿ.ನಿ ನೌಕರರ ಸಂಘವು ದಿನಾಂಕ: 01.04.2017 ರಿಂದ ಜಾರಿಗೆ ಬರುವಂತೆ ಕ.ವಿ.ಪ್ರನಿನಿ ನೌಕರರಿಗೆ ವೇತನ ಪರಿಷ್ಕರಿಸುವಂತೆ ಬೇಡಿಕೆಯನ್ನು ದಿನಾಂಕ: 09.02.2017 ರಂದು ನಿಗಮಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ನಿಗಮವು ದಿನಾಂಕ: 20.12.2017 ಮತ್ತು 19.02.2018 ರಂದು ನಡೆದ ಮಂಡಳಿ ನಿರ್ದೇಶಕರು ಸಭೆಯಲ್ಲಿ ಚರ್ಚಿಸಿ ದಿನಾಂಕ 01.04.2017 ರಿಂದ ಜಾರಿಗೆ ಬರುವಂತೆ ಶೇ.26 ರಷ್ಟು ವೇತನವನ್ನು ಪರಿಷ್ಕರಿಸುವಂತೆ ತಿಳಿಸಿರುತ್ತದೆ. ಅದರಂತೆ ನಿಗಮವು ಕವಿಪ್ರನಿನಿ ನೌಕರರ ಸಂಘದೊಡನೆ ದಿನಾಂಕ: 02.03.2018 ರಂದು ವೇತನ ಪರಿಷ್ಕರಣೆ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತದೆ ಹಾಗೂ ದಿನಾಂಕ: 09.03.2018 ರಂದು ವೇತನ ಪರಿಷ್ಕರಣೆ ಆದೇಶವನ್ನು ಹೊರಡಿಸಲಾಗಿರುತ್ತದೆ.

ಇದರೊಂದಿಗೆ ನಿಗಮದಲ್ಲಿ ಈಗಾಗಲೇ ನಿವೃತ್ತಿಗೊಂಡ ಪಿಂಚಣಿ/ ಕುಟುಂಬ ಪಿಂಚಣಿದಾರರಿಗೂ ದಿನಾಂಕ: 01.04.2017 ರಿಂದ ಅನ್ವಯವಾಗುವಂತೆ ಶೇ.26 ರಷ್ಟು ಪಿಂಚಣಿಯನ್ನು ಪರಿಷ್ಕರಿಸುವಂತೆ ದಿನಾಂಕ: 09.03.2018 ರಂದು ಆದೇಶ ಹೊರಡಿಸಲಾಗಿರುತ್ತದೆ.

ಕಾರ್ಮಿಕ ಸಂಬಂಧ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿದ್ದು, ದಿನಾಂಕ: 31.03.2017 ರ ಅಂತ್ಯಕ್ಕೆ 43 ಕಾರ್ಮಿಕರ ಪ್ರಕರಣಗಳು, ವಿವಿಧ ಕಾರ್ಮಿಕ ನ್ಯಾಯಾಲಯಗಳಲ್ಲಿ 60 ಪ್ರಕರಣಗಳು ಮತ್ತು 90 ರಿಟ್ ಅರ್ಜಿಗಳು/ ರಿಟ್ ಅಫೀಲ್‌ಗಳು ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳಲ್ಲಿನ ರಾಜ್ಯ ಉಚ್ಚ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತದೆ.

ಮಹಿಳಾ ದೂರು ನಿವಾರಣ ಸಮಿತಿ

ನಿಗಮದಲ್ಲಿ ಮಹಿಳಾ ನೌಕರುಗಳಲ್ಲಿ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಕಾರ್ಯ ಕ್ಷೇತ್ರಗಳಲ್ಲಿ ತೊಂದರೆ ಮತ್ತು ಅನುಚಿತ ವರ್ತನೆಗಳ ಬಗ್ಗೆ ದೂರು ನೀಡಲು ನಿಗಮದ ಆದೇಶ ದಿನಾಂಕ:03.07.1998ರ ಅನುಸಾರ ಮಹಿಳಾ ದೂರು ನಿವಾರಣ ಸಮಿತಿಯನ್ನು ನಿಗಮದಲ್ಲಿ ರಚಿಸುತ್ತಾ ಬಂದಿದ್ದು, ಸದರಿ ಸಮಿತಿಯಲ್ಲಿ ಒಬ್ಬ ಛೇರ್‌ಮನ್ ಹಾಗೂ 7ಜನ ಸದಸ್ಯರುಗಳೊಳಗೊಂಡು ಒಬ್ಬರು ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಯಾಗಿರುತ್ತಾರೆ.

ಸಮಿತಿಯು ದೂರುಗಳನ್ನು ಪರಿಹರಿಸಲು ನಿಯಮಿತವಾಗಿ ಸಭೆಗಳಲ್ಲಿ ಚರ್ಚಿಸುತ್ತಿದ್ದು, 2017–18ನೇ ಸಾಲಿನಲ್ಲಿ ಯಾವುದೇ ದೂರುಗಳು ಸ್ವೀಕರಿಸಿರುವುದಿಲ್ಲ.

ಸಾಂಸ್ಥಿಕ ಆಡಳಿತ

ಕ.ವಿ.ಪ್ರ.ನಿ.ನಿ.ಯು ತನ್ನ ಎಲ್ಲ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಪ್ರಾಮಾಣಿಕತೆಯ ನಂಬಿಕೆಯನ್ನು ಹೊಂದಿದೆ.

ಕ.ವಿ.ಪ್ರ.ನಿ.ನಿ.ಯ ನಿರ್ದೇಶಕ ಮಂಡಳಿಯು ತನ್ನ ಎಲ್ಲ ವ್ಯವಹರಣೆಗಳಲ್ಲಿ ಉತ್ತಮ ಆಚರಣೆಯನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು ನಿಗಮ ಆಡಳಿತದಲ್ಲಿ ಹೆಚ್ಚು ಒತ್ತನ್ನು ನೀಡಿದೆ.

ಕಂಪನಿಯಲ್ಲಿನ ಆಡಳಿತದ ಪ್ರಕ್ರಿಯೆಯು, ಸಭೆಗಳ ನಂತರ ಅನುಸರಣೆ, ಪರಿಶೀಲನೆ ಹಾಗೂ ಮಂಡಳಿಯಿಂದ/ ಮಂಡಳಿಯ ಉಪ ಸಮಿತಿಗಳಿಂದ ಕೈಗೊಂಡ ಕ್ರಮಗಳಿಗೆ/ ನಿರ್ಣಯಗಳ ಬಾಕಿ ಇರುವುದಕ್ಕೆ ವರದಿ ಸಲ್ಲಿಕೆ ಇಂತಹ ಪರಿಣಾಮಕಾರಿ ಕ್ರಮಗಳನ್ನು ಒಳಗೊಂಡಿದೆ.

ಮಾರ್ಚ್ 31, 2018 ರಂದು ಇದ್ದಂತೆ, ನಿರ್ದೇಶಕ ಮಂಡಳಿಯು 25 ಸದಸ್ಯರನ್ನು ಹೊಂದಿದೆ. ಎಲ್ಲ ನಿರ್ದೇಶಕರು, ಮಂಡಳಿಯ ನಡಾವಳಿಗಳು ಹಾಗೂ ಉಪ ಸಮಿತಿಯ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವುದು ನಿರ್ಣಯ ಪ್ರಕ್ರಿಯೆಗೆ ಮೌಲ್ಯವರ್ಧಿತ ಗೌರವವನ್ನು ಒದಗಿಸಿದೆ.

ಮಂಡಳಿ ಸಭೆಗಳು :

ಮಂಡಳಿ ನಿರ್ದೇಶಕರ ಸಭೆಯನ್ನು ಮುಂಚಿತವಾಗಿಯೇ ಗೊತ್ತುಪಡಿಸಿ, ಪ್ರತಿಯೊಬ್ಬ ನಿರ್ದೇಶಕರಿಗೆ ಲಿಖಿತ ರೂಪದಲ್ಲಿ ಸಭೆಯ ಸೂಚನಾ ಪತ್ರವನ್ನು ತಲುಪಿಸಲಾಗುತ್ತದೆ. ಸಭೆಯ ಕಾರ್ಯಸೂಚಿ ಹಾಗೂ ಸಂಬಂಧಿತ ಇತರ ಟಿಪ್ಪಣಿಗಳ ಮಾಹಿತಿಗಳನ್ನು ಮುಂಚಿತವಾಗಿ ಒದಗಿಸಲಾಗುತ್ತದೆ.

2017–18ರಲ್ಲಿ ಕೆಳಕಂಡಂತೆ ಸಭೆಗಳನ್ನು ನಡೆಸಲಾಯಿತು:

ಕ್ರಮ ಸಂಖ್ಯೆ	ಸಭೆ ಸಂಖ್ಯೆ	ನಡೆದ ದಿನಾಂಕ
1	105ನೇ ಸಭೆ	04.07.2017
2	106ನೇ ಸಭೆ	06.09.2017
3	107ನೇ ಸಭೆ	06.12.2017
4	108ನೇ ಸಭೆ	20.12.2017
5	109ನೇ ಸಭೆ	19.02.2018

ಮುಖ್ಯ ವ್ಯವಸ್ಥಾಪಕೀಯ ಸಿಬ್ಬಂದಿ :

ಕಂಪನಿ ಕಾಯ್ದೆ, 2013ರ ಸೆಕ್ಷನ್ 203(2)ರ ಅನುಸಾರ, ನಿಗಮದ 93ನೆಯ ನಿರ್ದೇಶಕ ಮಂಡಳಿ ಸಭೆಯಲ್ಲಿ **ಡಾ॥ ಅದಿತಿ ರಾಜ : ನಿರ್ದೇಶಕರು (ಹಣಕಾಸು), ಕವಿಪ್ರನಿನಿ ರವರನ್ನು ಮುಖ್ಯ ಆರ್ಥಿಕ ಹಣಕಾಸು (ಮುಖ್ಯ ವ್ಯವಸ್ಥಾಪಕೀಯ ಸಿಬ್ಬಂದಿ) ಎಂದು ನೇಮಕ ಮಾಡಲಾಗಿದೆ**.

ಮಂಡಳಿ ಉಪಸಮಿತಿಗಳು:

ಮಂಡಳಿಯ ಉಪ ಸಮಿತಿಗಳನ್ನು ಕೇವಲ ಪ್ರಮುಖ ವಿಷಯಗಳ ಬಗ್ಗೆ ಹೆಚ್ಚಿನ ಕೇಂದ್ರೀಕೃತ ಗಮನ ಹರಿಸುವುದಕ್ಕಷ್ಟೇ ಅಲ್ಲದೆ, ಅಂತಹ ಪ್ರಕರಣ ಬಗ್ಗೆ ಶೀಘ್ರ ನಿರ್ಣಯಗಳನ್ನು ತೆಗೆದುಕೊಳ್ಳಲು ರಚಿಸಲಾಯಿತು. ನಿರ್ಣಯಗಳನ್ನು ತೆಗೆದುಕೊಳ್ಳಲು ಮಂಡಳಿಯು ಕೆಲವು ನಿರ್ದಿಷ್ಟ ಅಧಿಕಾರಗಳನ್ನು ನೀಡಿದೆ.

1. ಕೇಂದ್ರೀಯ ಖರೀದಿ ಸಮಿತಿ:

ಮುಖ್ಯ ಇಂಜಿನಿಯರ್(ವಿದ್ಯುತ್)ರವರಿಗೆ ವಹಿಸಿರುವ ಅಧಿಕಾರವನ್ನು ಮೀರಿದ ಹಾಗೂ ರೂ.20 ಕೋಟಿಯವರೆಗೆ ಆರ್ಥಿಕ ಪರಿಣಾಮವನ್ನು ಬೀರಬಹುದಾದ ಪ್ರಸರಣ ವಲಯ ಅಥವಾ ಯೋಜನೆಗಳ ಸಂಬಂಧವಾದ ಎಲ್ಲಾ ವಿಷಯಗಳು, ವಿದ್ಯುತ್ ಕೇಂದ್ರ/ಮಾರ್ಗ ಕಾಮಗಾರಿ ವಹಿಸುವಿಕೆ, ಖರೀದಿ ಸಂಬಂಧವಾದ ಎಲ್ಲಾ ಪ್ರಕರಣಗಳನ್ನು ಪರಿಗಣಿಸಲು ಕೇಂದ್ರೀಯ ಖರೀದಿ ಸಮಿತಿಯನ್ನು ರಚಿಸಲಾಗಿದೆ.

ಕೇಂದ್ರೀಯ ಖರೀದಿ ಸಮಿತಿಯನ್ನು ಕೆಳಕಂಡಂತೆ ರಚಿಸಲಾಗಿದೆ.

ಕ್ರ.ಸಂ	ಸದಸ್ಯರು	ಸಮಿತಿಯಲ್ಲಿನ ಹುದ್ದೆ
1.	ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಅಧ್ಯಕ್ಷರು
2.	ನಿರ್ದೇಶಕರು (ಹಣಕಾಸು), ಕವಿಪ್ರನಿನಿ	ಸದಸ್ಯರು
3.	ನಿರ್ದೇಶಕರು (ಪ್ರಸರಣ), ಕವಿಪ್ರನಿನಿ	ಸದಸ್ಯರು
	ಕಂಪನಿ ಕಾರ್ಯದರ್ಶಿಯ ಅಧಿಕೃತ ಸಹಿಗಾರರು, ಕವಿಪ್ರನಿನಿ	ಸಂಚಾಲಕರು

ಸಂಬಂಧಪಟ್ಟ ವಲಯ ಮುಖ್ಯ ಇಂಜಿನಿಯರ್ (ವಿ) ರವರು ಸಮನ್ವಯ ಅಧಿಕಾರಿಯಾಗಿರುತ್ತಾರೆ.

ಪ್ರಸಕ್ತ ವರ್ಷದಲ್ಲಿ, ಕೆಳಕಂಡಂತೆ ಕೇಂದ್ರೀಯ ಖರೀದಿ ಸಮಿತಿ ಸಭೆಗಳನ್ನು ನಡೆಸಲಾಯಿತು.

ಕ್ರಮ ಸಂಖ್ಯೆ	ಸಭೆ ಸಂಖ್ಯೆ, ವಿವರ		ಸಭೆಯ ದಿನಾಂಕ
1	ಎ)	164, ಟೆಂಡರಿಂಗ್ ಹಾಗೂ ಖರೀದಿ	19.04.2017
	ಬಿ)	137, ಪ್ರಸರಣ ವಲಯ, ಬೆಂಗಳೂರು	
	ಸಿ) ಡಿ) ಇ) ಎಫ್)	54, ಪ್ರಸರಣ ವಲಯ, ಹಾಸನ 87, ಪ್ರಸರಣ ವಲಯ, ಮೈಸೂರು 84, ಪ್ರಸರಣ ವಲಯ, ಬಾಗಲಕೋಟೆ 53, ಪ್ರಸರಣ ವಲಯ, ತುಮಕೂರು	
2	ಎ) ಬಿ)	165, ಟೆಂಡರಿಂಗ್ ಹಾಗೂ ಖರೀದಿ 138, ಪ್ರಸರಣ ವಲಯ, ಬೆಂಗಳೂರು	24.05.2017
	ಸಿ) ಡಿ) ಇ) ಎಫ್)	55, ಪ್ರಸರಣ ವಲಯ, ಹಾಸನ 88, ಪ್ರಸರಣ ವಲಯ, ಮೈಸೂರು 85, ಪ್ರಸರಣ ವಲಯ, ಬಾಗಲಕೋಟೆ 60, ಪ್ರಸರಣ ವಲಯ, ಕಲಬುರ್ಗಿ	
3	ಎ)	166, ಟೆಂಡರಿಂಗ್ ಹಾಗೂ ಖರೀದಿ	23.06.2017
4	ಎ) ಬಿ) ಸಿ) ಡಿ) ಇ) ಎಫ್)	167, ಟೆಂಡರಿಂಗ್ ಹಾಗೂ ಖರೀದಿ 139, ಪ್ರಸರಣ ವಲಯ, ಬೆಂಗಳೂರು 56, ಪ್ರಸರಣ ವಲಯ, ಹಾಸನ 54, ಪ್ರಸರಣ ವಲಯ, ತುಮಕೂರು 86, ಪ್ರಸರಣ ವಲಯ, ಬಾಗಲಕೋಟೆ 61, ಪ್ರಸರಣ ವಲಯ, ಕಲಬುರ್ಗಿ	19.07.2017 ಮತ್ತು 07.08.2017
5	ಎ) ಬಿ)	168, ಟೆಂಡರಿಂಗ್ ಹಾಗೂ ಖರೀದಿ 140, ಪ್ರಸರಣ ವಲಯ, ಬೆಂಗಳೂರು	01.09.2017
6	ಎ)	169, ಟೆಂಡರಿಂಗ್ ಹಾಗೂ ಖರೀದಿ	04.11.2017
7	ಎ) ಬಿ) ಸಿ) ಡಿ) ಇ) ಎಫ್) ಜಿ)	170, ಟೆಂಡರಿಂಗ್ ಹಾಗೂ ಖರೀದಿ 141, ಪ್ರಸರಣ ವಲಯ, ಬೆಂಗಳೂರು 57, ಪ್ರಸರಣ ವಲಯ, ಹಾಸನ 55, ಪ್ರಸರಣ ವಲಯ, ತುಮಕೂರು 89, ಪ್ರಸರಣ ವಲಯ, ಮೈಸೂರು 62, ಪ್ರಸರಣ ವಲಯ, ಕಲಬುರ್ಗಿ 87, ಪ್ರಸರಣ ವಲಯ, ಬಾಗಲಕೋಟೆ	26.12.2017
8	ಎ)	171, ಟೆಂಡರಿಂಗ್ ಹಾಗೂ ಖರೀದಿ	01.02.2018
	ಬಿ) ಸಿ) ಡಿ) ಇ)	142, ಪ್ರಸರಣ ವಲಯ, ಬೆಂಗಳೂರು 58, ಪ್ರಸರಣ ವಲಯ, ಹಾಸನ 63, ಪ್ರಸರಣ ವಲಯ, ಕಲಬುರ್ಗಿ 88, ಪ್ರಸರಣ ವಲಯ, ಬಾಗಲಕೋಟೆ	
9	ಎ)	172, ಟೆಂಡರಿಂಗ್ ಹಾಗೂ ಖರೀದಿ	07.02.2018
	ಬಿ) ಸಿ) ಡಿ) ಇ)	143, ಪ್ರಸರಣ ವಲಯ, ಬೆಂಗಳೂರು 59, ಪ್ರಸರಣ ವಲಯ, ಹಾಸನ 90, ಪ್ರಸರಣ ವಲಯ, ಮೈಸೂರು 89, ಪ್ರಸರಣ ವಲಯ, ಬಾಗಲಕೋಟೆ	
10	ಎ)	173, ಟೆಂಡರಿಂಗ್ ಹಾಗೂ ಖರೀದಿ	19.02.2018
11	ಎ) ಬಿ) ಸಿ) ಡಿ)	174, ಟೆಂಡರಿಂಗ್ ಹಾಗೂ ಖರೀದಿ 144, ಪ್ರಸರಣ ವಲಯ, ಬೆಂಗಳೂರು 56, ಪ್ರಸರಣ ವಲಯ, ತುಮಕೂರು' 64, ಪ್ರಸರಣ ವಲಯ, ಕಲಬುರ್ಗಿ	03.03.2018

2. ಸಾಲ ಪಡೆಯುವಿಕೆ ಉಪ ಸಮಿತಿ

ಮಹಾ ಸಭೆಯಲ್ಲಿ ಷೇರುದಾರರ ಅನುಮೋದನೆಯ ಮಿತಿಗೆ ಒಳಪಟ್ಟಂತೆ, ನಿಗಮದ ಪರವಾಗಿ ಬ್ಯಾಂಕು ಮತ್ತು ಆರ್ಥಿಕ ಸಂಸ್ಥೆಗಳಿಂದ ಕಾಲಕಾಲಕ್ಕೆ ದೀರ್ಘಾವಧಿ ಸಾಲಗಳನ್ನು ಪಡೆಯಲು ಸಾಲ ಪಡೆಯುವಿಕೆ ಉಪ ಸಮಿತಿಗೆ ಅಧಿಕಾರಗಳನ್ನು ವಹಿಸಲಾಗಿದೆ.

ಉಪಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಹೊಂದಿದೆ:

1) ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇಂಧನ ಇಲಾಖೆ.

2) ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಆರ್ಥಿಕ ಇಲಾಖೆ.

3) ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ.

4) ನಿರ್ದೇಶಕರು (ಹಣಕಾಸು). ಕವಿಪ್ರನಿನಿ.

ಕಂಪನಿ ಕಾರ್ಯದರ್ಶಿಗೆ, ಅಧಿಕೃತ ಸಹಿಗಾರರು, ಕವಿಪ್ರನಿನಿ: ಸಂಚಾಲಕರು

ಪ್ರಸಕ್ತ ವರ್ಷದಲ್ಲಿ ಸಾಲ ಪಡೆಯುವಿಕೆ ಉಪ ಸಮಿತಿಯು ಕೆಳಕಂಡಂತೆ ಸಭೆಗಳನ್ನು ನಡೆಸಿತು:

ಕ್ರ. ಸಂ	ಸಂಸ್ಥೆಯಿಂದ ದೀರ್ಘಾವಧಿ ಸಾಲವನ್ನು ಪಡೆಯಲು	ಮೊಬಲಗು	ಸಭೆಯ ದಿನಾಂಕ
1	ಮೆ॥ ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್ ಲಿಮಿಟೆಡ್	ರೂ.೫೫೦ ಕೋಟಿ	31.01.2018

೩. ಪರಿಶೋಧನಾ ಸಮಿತಿ:

ಕಂಪನಿ ಕಾಯ್ದೆ, 2013ರ ಅವಕಾಶಗಳ ಪ್ರಕಾರ, ಕ.ವಿ.ಪ್ರ.ನಿ.ನಿಯು ಕೆಳಕಂಡಂತೆ ಪರಿಶೋಧನಾ ಸಮಿತಿಯನ್ನು ರಚಿಸಿತು:

ಕ್ರ. ಸಂ	ಸದಸ್ಯರು	ಹುದ್ದೆ
1	ಶ್ರೀ ಪಿ. ರವಿಕುಮಾರ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇಂಧನ ಇಲಾಖೆ.	ಅಧ್ಯಕ್ಷರು
2	ಶ್ರೀ ಐ.ಎಸ್.ಎನ್ ಪ್ರಸಾದ್, ಭಾ.ಆ.ಸೇ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಆರ್ಥಿಕ ಇಲಾಖೆ.	ಸದಸ್ಯರು
೩	ಶ್ರೀ ಕೆ.ವಿ. ಶಿವಕುಮಾರ್, ನಿರ್ದೇಶಕರು(ಪ್ರಸರಣ), ಕ.ವಿ.ಪ್ರ.ನಿ.ನಿ.	ಸದಸ್ಯರು
	ಕಂಪನಿ ಕಾರ್ಯದರ್ಶಿಗೆ, ಅಧಿಕೃತ ಸಹಿಗಾರರು, ಕವಿಪ್ರನಿನಿ.	ಸಂಚಾಲಕರು

<u>ಆಧಾರಿತ ವಿಷಯಗಳು:</u>

1) ಕಂಪನಿಯ ಪರಿಶೋಧಕರ ನೇಮಕ, ಸಂಭಾವನೆ ಮತ್ತು ನೇಮಕಾತಿಯ ಷರತ್ತುಗಳ ಬಗ್ಗೆ ಶಿಫಾರಸ್ಸು.

2) ಪರಿಶೋಧಕರ ವೈಯಕ್ತಿಕತೆ ಹಾಗೂ ಕಾರ್ಯಸಾಧನೆ ಮತ್ತು ಪರಿಶೋಧನಾ ಪ್ರಕ್ರಿಯೆಯ ಪರಿಣಾಮಕತೆ ಬಗ್ಗೆ ಪರಿಶೀಲನೆ.

3) ಆರ್ಥಿಕ ನಿರೂಪಣೆ ಹಾಗೂ ಪರಿಶೋಧಕರ ತತ್ಸಂಬಂಧ ವರದಿಯ ಪರಿಶೀಲನೆ.

4) ಸಂಬಂಧಿತ ವ್ಯಕ್ತಿಗಳೊಂದಿಗೆ ಇರಬಹುದಾದ ಕಂಪನಿಯ ವ್ಯವಹಾರಗಳ ಅನುಮೋದನೆ ಅಥವಾ ತದನಂತರದಲ್ಲಿ ಮಾರ್ಪಾಡು.

5) ಅಂತರ ನಿಗಮ ಸಾಲ ಮತ್ತು ಹೂಡಿಕೆಗಳ ಪರಿಶೀಲನೆ.

6) ಅಗತ್ಯವಿರುವೆಡೆಯಲ್ಲೆಲ್ಲಾ, ಕಂಪನಿಯ ಆಸ್ತಿ ಅಥವಾ ಸ್ವಾಧೀನಪಡಿಸಿರುವಿಕೆಗಳ ಮೌಲ್ಯೀಕರಣ.

7) ಆಂತರಿಕ ಹಣಕಾಸು ನಿಯಂತ್ರಣ ಮತ್ತು ಅಪಾಯ ನಿರ್ವಹಣೆ ವ್ಯವಸ್ಥೆಯ ಮೌಲ್ಯೀಕರಣ.

8) ಸಾರ್ವಜನಿಕ ಕೊಡುಗೆ ಮೂಲಕ ಸ್ವೀಕರಿಸಿದ ನಿಧಿಯ ಪೂರ್ಣ ಬಳಕೆ ಹಾಗೂ ಸಂಬಂಧಿತ ವಿಷಯಗಳ ಮೇಲುಸ್ತುವಾರಿ.

ಪರಿಶೋಧನಾ ಸಮಿತಿಯ ಸಭೆಗಳಿಗೆ ಲೆಕ್ಕ ಪರಿಶೋಧಕರು ಹಾಗೂ ಪೂರ್ಣಾವಧಿಯ ಮುಖ್ಯ ವ್ಯವಸ್ಥಾಪಕೀಯ ಸಿಬ್ಬಂದಿ ರವರಿಗೆ ಆಮಂತ್ರಣವಿದ್ದರು, ಮತ ಚಲ್ಲಾಯಿಸಲು ಹಕ್ಕಿರುವುದಿಲ್ಲ.

ಪ್ರಸಕ್ತ ವರ್ಷದಲ್ಲಿ, ಕಂಪನಿಯ ಪರಿಶೋಧನಾ ಸಮಿತಿಯು ಕೆಳಕಂಡಂತೆ ಸಭೆಯನ್ನು ನಡೆಸಿತು:

ಕ್ರಮ ಸಂಖ್ಯೆ	ಸಭೆ ಸಂಖ್ಯೆ	ಸಭೆ ನಡೆದ ದಿನಾಂಕ
1	27ನೇ ಸಭೆ	05.09.2017
2	28ನೇ ಸಭೆ	30.11.2017

ಕಂಪನಿ ಕಾಯ್ದೆಯ ಪ್ರಕರಣ 134(3)ರ ಅವಕಾಶಗಳ ಪ್ರಕಾರ ಕೆಳಕಂಡ ಮಾಹಿತಿಗಳನ್ನು ಒದಗಿಸಲಾಗಿದೆ:

(ಅ) ವಾರ್ಷಿಕ ಸಲ್ಲಿಕೆ :

ಕಾಯ್ದೆಯ ಪ್ರಕರಣ 92ರ ಅವಕಾಶಗಳ ಅನುಸಾರವಾಗಿ ಅನುಬಂಧ 1ರಲ್ಲಿ ಸಲ್ಲಿಸಿರುವ ವಾರ್ಷಿಕ ಸಲ್ಲಿಕೆಗಳ ಸಾರಾಂಶವನ್ನು, ಈ ವರದಿಗೆ (ಎಂ.ಜಿ.ಟಿ–9) ಲಗತ್ತಿಸಿದೆ.

(ಆ) ನಿರ್ದೇಶಕರ ಜವಾಬ್ದಾರಿಯುತ ಹೇಳಿಕೆಗಳು :

ಕಂಪನಿ ಕಾಯ್ದೆ, 2013ರ ಪ್ರಕರಣ 134(5)ರ ಅಡಿಯಲ್ಲಿನ ಅಗತ್ಯತೆಯನುಸಾರ, ನಿರ್ದೇಶಕರುಗಳು ದೃಢೀಕರಿಸುವುದೇನೆಂದರೆ,

(ಎ) ವಾರ್ಷಿಕ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆಯಲ್ಲಿ, ಯಾವುದೇ ಭೌತಿಕ ಬದಲಾವಣೆ ವ್ಯತ್ಯಯಿತ ಅಂಶಗಳ ಬಗ್ಗೆ ಸೂಕ್ತ ವಿವರಣೆಗಳೊಂದಿಗೆ ಅನ್ವಯಿತ ಲೆಕ್ಕತತ್ವ ಪದ್ಧತಿಗಳನ್ನು ಅನುಸರಿಸಲಾಗಿದೆ.

(ಬಿ) ಆರ್ಥಿಕ ವರ್ಷಾಂತ್ಯಕ್ಕೆ, ನಿಗಮದ ವ್ಯವಹರಣೆಗಳ ಹಾಗೂ ಆ ಅವಧಿಗೆ ನಿಗಮದ ಲಾಭ ಮತ್ತು ನಷ್ಟದ ನೈಜ ಮತ್ತು ನ್ಯಾಯಯುತ ದೃಷ್ಟಿಕೋನವನ್ನು ಒದಗಿಸುವುದಕ್ಕಾಗಿ ನಿರ್ದೇಶಕರು ಅಂತಹ ಲೆಕ್ಕಪತ್ರ ಕಾರ್ಯನೀತಿಗಳನ್ನು ಆಯ್ಕೆ ಮಾಡಿ ನಿರಂತರವಾಗಿ ಅನ್ವಯಿಸಿ, ಯುಕ್ತ ಹಾಗೂ ವಿವೇಚನಾಯುತ ಅಂದಾಜುಗಳನ್ನು ಹಾಗೂ ನಿರ್ಣಯವನ್ನು ಕೈಗೊಂಡಿದ್ದಾರೆ.

(ಸಿ) ಕಂಪನಿಯ ಆಸ್ತಿಗಳನ್ನು ಸುರಕ್ಷಿತಗೊಳಿಸಲು ಹಾಗೂ ಮೋಸ, ವಂಚನೆ ಮತ್ತು ಇತರ ಅನಿಯತೆಗಳನ್ನು ಪತ್ತೆ ಮಾಡಿ ತಡೆಯಲು ನಿರ್ದೇಶಕರು ಈ ಕಾಯ್ದೆಯ ಪ್ರಕಾರ, ಅಗತ್ಯವಾದ ಲೆಕ್ಕಪತ್ರ ದಾಖಲೆಗಳನ್ನು ನಿರ್ವಹಿಸಲು ಯುಕ್ತ ಹಾಗೂ ಸಾಕಷ್ಟು ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ.

(ಡಿ) ನಿರ್ದೇಶಕರು, ಮುಂದುವರಿಕೆ ಆಧಾರದ ಮೇಲೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿದ್ದಾರೆ. ಮತ್ತು

(ಇ) ಎಲ್ಲ ಅನ್ವಯಿತ ಕಾನೂನುಗಳ ಪಾಲನೆಯಾಗಿರುವುದನ್ನು ಖಚಿತಪಡಿಸಿಕೊಳ್ಳಲು, ನಿರ್ದೇಶಕರು, ಸಾಕಷ್ಟು ಪ್ರಮಾಣದ ಹಾಗೂ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುವ ಸೂಕ್ತ ಕ್ರಮಬದ್ಧವಾದ ವ್ಯವಸ್ಥೆಯನ್ನು ಗೊತ್ತುಪಡಿಸಿಕೊಂಡಿದ್ದಾರೆ.

(ಇ) ಮಂಡಳಿಯ ವಿವರಣೆಗಳು ಅಥವಾ ಅಭಿಪ್ರಾಯಗಳು ಪ್ರತಿಯೊಂದು ಅರ್ಹತೆ ಬಗ್ಗೆ, ಮೀಸಲಾತಿ ಬಗ್ಗೆ, ಅಥವಾ ಪ್ರತಿಕೂಲ ಅಭಿಪ್ರಾಯ, ಅಥವಾ ಟೀಕೆಗಳು

(ಎ) ಶಾಸನ ಬದ್ಧ ಲೆಕ್ಕ ಪರಿಶೋಧಕರು ತಿಳಿಸಿರುವ ತಮ್ಮ ವರದಿಯಲ್ಲಿ ; ಅನುಬಂಧ– 2 ಲಗತ್ತಿಸಲಾಗಿದೆ.

(ಬಿ) ಪ್ರಕರಣ 186ರ ಅಡಿಯಲ್ಲಿ, ಸಾಲ, ಖಾತರಿಗಳು ಅಥವಾ ಹೂಡಿಕೆಗಳು – ಇಲ್ಲ.

(ಸಿ) ನಿಗದಿತ ನಮೂನೆಯಲ್ಲಿ, ಪ್ರಕರಣ 188ರ ಉಪಪ್ರಕರಣ (1) ರಲ್ಲಿ ಉಲ್ಲೇಖಿಸಿರುವ ಸಂಬಂಧಿತ ವ್ಯಕ್ತಿಗಳ ಗುತ್ತಿಗೆಗಳು ಅಥವಾ ಏರ್ಪಾಡುಗಳ ವಿವರಗಳು – ಇಲ್ಲ.

(ಡಿ) ಕಂಪನಿಯ ವ್ಯವಹರಣೆಯ ಸ್ಥಿತಿ – ಮೇಲೆ ತಿಳಸಲಾಗಿದೆ.

(ಇ) ಯಾವುದೇ ಮೀಸಲಿಗೆ ಒಯ್ಯಲು ಪ್ರಸ್ತಾಪಿತವಾದ ಮೊಬಲಗು – ಯಾವುದೇ ಮೊಬಲಗನ್ನು ಯಾವುದೇ ಮೀಸಲಾತಿಗೆ ಒಯ್ಯುವ ಪ್ರಸ್ತಾಪವಿಲ್ಲ.

(ಎಫ್) ಲಾಭಾಂಶದ ಮೂಲಕ ಪಾವತಿಸಲು ಶಿಫಾರಸ್ಸುಗೊಂಡಿರುವ ಮೊಬಲಗು – ಲಾಭಾಂಶದ ಪ್ರಯುಕ್ತ ಯಾವುದೇ ಮೊಬಲಗನ್ನು ಶಿಫಾರಸ್ಸು ಮಾಡಿಲ್ಲ.

(ಜಿ) ಆರ್ಥಿಕ ಲೆಕ್ಕಪತ್ರ ನಿರೂಪಣೆಗಳು ಸಂಬಂಧಿಸಿರುವ ಕಂಪನಿಯ ಆರ್ಥಿಕ ವರ್ಷಾಂತ್ಯ ಹಾಗೂ ವರದಿ

ಸಲ್ಲಿಕೆಯ ಅವಧಿಯ ನಡುವೆ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರಿರಬಹುದಾದ ಯಾವುದೇ ಭೌತಿಕ ಬದಲಾವಣೆ ಹಾಗೂ ಬದ್ಧತೆಗಳು:– ಇಲ್ಲ.

(ಹೆಚ್) ಕಂಪನಿಯಲ್ಲಿ ವಿಪತ್ತು ನಿರ್ವಹಣೆ ಕಾರ್ಯನೀತಿಯ ಅಭಿವೃದ್ಧಿ ಹಾಗೂ ಅನುಷ್ಠಾನದ ವರದಿ – ಇಲ್ಲ.

ಈ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿ.ಎಸ್.ಆರ್) ಉಪಕ್ರಮಗಳ ಪ್ರಯುಕ್ತ ಕಂಪನಿಯು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಿರುವ ಕಾರ್ಯನೀತಿ ವಿವರಗಳು:–

ಎ). ಸಿ.ಎಸ್.ಆರ್. ಸಮಿತಿ :

ಕಂಪನಿ ಕಾಯ್ದೆ, 2013ರ ಪ್ರಕರಣ 135ರ ಅನುಸರಣೆಯಾಗಿ, ಕೆಳಕಂಡ ಆಧಾರಿತ ಅಂಶಗಳಿಗೆ ಒಳಪಟ್ಟು, ನಿಗಮ ಸಾಮಾಜಿಕ ಹೊಣೆಗಾರಿಕೆ ಸಮಿತಿಯನ್ನು ರಚಿಸಲಾಗಿದೆ:

ಕ್ರ ಸಂ	ಸದಸ್ಯರು	ಹುದ್ದೆ
1	ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇಂಧನ ಇಲಾಖೆ	ಅಧ್ಯಕ್ಷರು
2	ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಆರ್ಥಿಕ ಇಲಾಖೆ,	ಸದಸ್ಯರು
3	ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಸದಸ್ಯರು
	ಕಂಪನಿ ಕಾರ್ಯದರ್ಶಿಗೆ, ಅಧಿಕೃತ ಸಹಿಗಾರರು, ಕವಿಪ್ರನಿನಿ.	ಸಂಚಾಲಕರು

ವರದಿಯಲ್ಲಿರುವ ಪ್ರಸಕ್ತ ವರ್ಷದಲ್ಲಿ, ಕಂಪನಿಯ ಸಿ.ಎಸ್.ಆರ್. ಸಮಿತಿಯು ಕೆಳಕಂಡಂತೆ ಸಭೆಯನ್ನು ನಡೆಸಿತು:–

ಕ್ರ. ಸಂ	ಸಭೆ ಸಂಖ್ಯೆ	ಸಭೆ ನಡೆದ ದಿನಾಂಕ
1	4ನೇ ಸಭೆ	23ನೇ ಮಾರ್ಚ್, 2018
2	5ನೇ ಸಭೆ	26ನೇ ಮಾರ್ಚ್, 2018

2017–18ರ ಅವಧಿಯಲ್ಲಿ ಸಿ.ಎಸ್.ಆರ್.ಗೆ ಸಂಬಂಧಿಸಿದ ವಂತಿಗೆ:

ಆರ್ಥಿಕ ವರ್ಷ 2017–18ರ ಸಾಲಿಗೆ, ಕಂಪನಿ ಕಾಯ್ದೆ 2013ರ ಷೆಡ್ಯೂಲ್ VII ರಲ್ಲಿ ಪಟ್ಟಿ ಮಾಡಿರುವ ಚಟುವಟಿಕೆಗಳ ನಿಮಿತ್ತ ರೂ. 15.4 ಕೋಟಿಗಳನ್ನು ಖರ್ಚು ಮಾಡಲಾಯಿತು.

ಕ್ರೀಡೆ

ಕವಿಪ್ರನಿನಿಯ ಅಥ್ಲೆಟಿಕ್ಸ್, ಕಬ್ಬಡಿ, ಬ್ಯಾಸ್ಕೆಟ್ ಬಾಲ್, ಷಟಲ್ ಬ್ಯಾಡ್ಮಿಂಟನ್ (ಪುರುಷರು), ಲಾನ್ ಟೆನ್ನಿಸ್ ಮತ್ತು ಮಹಿಳಾ ಕ್ರೀಡಾ ತಂಡಗಳು ಎಐಇಎಸ್ಇಬಿ ಪಂದ್ಯಾವಳಿಗೆ ಭಾಗವಹಿಸಿರುತ್ತವೆ.

ಕವಿಪ್ರನಿನಿ ಕ್ರೀಡಾ ಪಟುಗಳು ಅಂತರ್ ರಾಷ್ಟ್ರೀಯ, ರಾಷ್ಟ್ರೀಯಮತ್ತು ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಸಾಧನೆಗಳನ್ನು ಮಾಡಿದ್ದು, ನಿಗಮಕ್ಕೆ ಕೀರ್ತಿ ತಂದಿರುತ್ತಾರೆ.

<u>ಟೇಬಲ್ ಟೆನ್ನಿಸ್ :</u>	<u>ಅಂತರ ರಾಷ್ಟ್ರೀಯ ಮಟ್ಟದ ಸಾಧನೆ:–</u> ನವೆಂಬರ್–2017 ರಲ್ಲಿ ಜಾರ್ಡನ್ ದೇಶದ, ಅಮನ್ ನಗರದಲ್ಲಿ ನಡೆದ 9ನೇ ಅಂತರ ರಾಷ್ಟ್ರೀಯ ಅಂಗವಿಕಲರ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್–2017 ರಲ್ಲಿ ಶ್ರೀ ಸಂಜೀವ ಜಿ ಹಮಣ್ಣವರ್, ಸ.ಕಾ.ಇಂ, ಬೃ.ಕಾ, ಯುಡಿಐಎಸ್ ಉಪ ವಿಭಾಗ, ಕವಿಪ್ರನಿನಿ, ಬೆಳಗಾವಿ ರವರು ಭಾರತವನ್ನು ಪ್ರತಿನಿಧಿಸಿ ಭಾಗವಹಿಸಿ 2 ಬೆಳ್ಳಿಯ ಪದಕವನ್ನು ಪಡೆದಿರುತ್ತಾರೆ.
<u>ದೇಹದಾರ್ಢ್ಯ:</u>	<u>ರಾಷ್ಟ್ರೀಯ ಮಟ್ಟದ ಸಾಧನೆ:–</u> ಶ್ರೀ ರೋಷನ್ ಫೆರಾವೋ, ಕಿರಿಯ ಸಹಾಯಕ, ಉಲ್ಲಾಳು ಉಪ ವಿಭಾಗ ಇವರು ಫೆಬ್ರವರಿ–2018 ರಲ್ಲಿ ಬೆಂಗಳೂರಿನಲ್ಲಿ ನಡೆದ 66ನೇ ರಾಷ್ಟ್ರೀಯ ಫಿಟ್‌ನೆಸ್ ಮತ್ತು ದೇಹದಾದಾರ್ಢ್ಯ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಭಾಗವಹಿಸಿ ಚಿನ್ನದ ಪದಕವನ್ನು ಪಡೆದಿದ್ದಾರೆ..

ಬಿಲಿಯರ್ಡ್ಸ್ ಮತ್ತು ಸ್ನೂಕರ್:	**ರಾಷ್ಟ್ರೀಯ ಮಟ್ಟದ ಸಾಧನೆ:-** ಶ್ರೀ ಡಿ. ರಾಜ್‌ಕುಮಾರ್, ಮಾ.ಸಂ.ಅ.ಕೇಂದ್ರ, ಕವಿಪ್ರನಿನಿ ಇವರು ಜನವರಿ-2018 ರಲ್ಲಿ ಚೆನ್ನೈ ನಲ್ಲಿ ನಡೆದ ರಾಷ್ಟ್ರೀಯಾ 6 ರೆಡ್ಸ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ **ಟಾಪ್ 32** ಹಂತಕ್ಕೆ ತಲುಪಿರುತ್ತಾರೆ. ಶ್ರೀ ಡಿ. ರಾಜ್‌ಕುಮಾರ್, ಮಾ.ಸಂ.ಅ.ಕೇಂದ್ರ,, ಕವಿಪ್ರನಿನಿ ಇವರು ಫೆಬ್ರವರಿ-2018 ರಲ್ಲಿ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯಾ ಬಿಲಿಯಾರ್ಡಸ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ **ಟಾಪ್ 32** ಹಂತಕ್ಕೆ ತಲುಪಿರುತ್ತಾರೆ.
ಆರ್ಚರಿ:	**ರಾಷ್ಟ್ರೀಯ ಮಟ್ಟದ ಸಾಧನೆ :** ಶ್ರೀಮತಿ ಕೀರ್ತನಾ, ಸ.ವ್ಯ (ಆ.ನಿ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಇವರು ಏಪ್ರೀಲ್-2018 ರಲ್ಲಿ ಪೂನಾದಲ್ಲಿ ನಡೆದ 38ನೇ ಸೀನಿಯರ್ ಮಹಿಳೆಯರ ರೀಕರ್ವ್ ರೌಂಡ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್ ನಲ್ಲಿ ರಾಜ್ಯದ ಮಹಿಳೆಯರ ತಂಡವನ್ನು ಪ್ರತಿನಿಧಿಸಿ ಭಾಗವಹಿಸಿರುತ್ತಾರೆ.
ಅಥ್ಲೆಟಿಕ್ಸ್:	**ರಾಷ್ಟ್ರೀಯ ಮಟ್ಟದ ಸಾಧನೆ :** ಶ್ರೀ ಡಿ ಎಂ ಶ್ರೀನಿವಾಸ್, ಸಹಾಯಕ, ದೇವನಳ್ಳಿ ಉಪ ವಿಭಾಗ, ಬೆಸ್ಕಾಂ ಇವರು ಫೆಬ್ರವರಿ-2018 ರಲ್ಲಿ ಬೆಂಗಳೂರಿನಲ್ಲಿ ನಡೆದ 39 ನೇ ಮಾಸ್ಟರ್ಸ್ ಅಥ್ಲೆಟಿಕ್ಸ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಭಾಗವಹಿಸಿರುತ್ತಾರೆ.
ಬಿಲ್ಯಾರ್ಡ್ಸ್ ಮತ್ತು ಪೂಲ್	**ರಾಜ್ಯ ಮಟ್ಟದ ಸಾಧನೆ:** ಶ್ರೀ ಡಿ. ರಾಜ್‌ಕುಮಾರ್, ಮಾ.ಸಂ.ಅ.ಕೇಂದ್ರ, ಕವಿಪ್ರನಿನಿ ಇವರು ಈ ಕೆಳಗೆ ತಿಳಿಸಿರುವ ರಾಜ್ಯ ಮಟ್ಟದ 2017-18 ರ ಟೂರ್ನಿಮೆಂಟ್ ಗಳಲ್ಲಿ ಭಾಗವಹಿಸಿ, ಮುಂದೆ ತಿಳಿಸಿರುವ ಸ್ಥಾನಗಳನ್ನು ಪಡೆದಿರುತ್ತಾರೆ. ▯ 9 ಬಾಲ್‌ಪೂಲ್ – 2ನೇ ಸ್ಥಾನ ▯ ಬಿಲಿಯಡ್ಸ್ – 5ನೇ ಸ್ಥಾನ ▯ ಸ್ನೂಕರ್ – 5ನೇ ಸ್ಥಾನ ▯ 6ರೆಡ್ಸ್ ಸ್ನೂಕರ್ – 5ನೇ ಸ್ಥಾನ
ಅಖಿಲ ಭಾರತ ವಿದ್ಯುತ್ ಕೀಡ್ರಾ ನಿಯಂತ್ರಣ ಮಂಡಳಿಯ ಪಂದ್ಯಾವಳಿಗಳಲ್ಲಿ ಮತ್ತು ಇತರೆ ಪಂದ್ಯಾವಳಿಗಳಲ್ಲಿ ಭಾಗವಹಿಸಿರುವ ವಿವರ	
ಕಬಡ್ಡಿ:	ಕವಿಪ್ರನಿನಿ ಕಬಡ್ಡಿ ತಂಡವು ಜನವರಿ-2018 ರಲ್ಲಿ ಮಹಾರಾಷ್ಟ್ರದ ನಾಗಪೂರ ದಲ್ಲಿ ನಡೆದ 42ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಿ 2ನೇ ಸ್ಥಾನವನ್ನು ಪಡೆದಿರುತ್ತಾರೆ.
ಅಥ್ಲೆಟಿಕ್ಸ್	ಕವಿಪ್ರನಿನಿ ಅಥ್ಲೆಟಿಕ್ಸ್ ತಂಡವು ನವೆಂಬರ್-2017ರಲ್ಲಿ ಪಂಜಾಬಿನ ಪಾಟಿಯಾಲದಲ್ಲಿ ದಲ್ಲಿ ನಡೆದ 42ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಅಥ್ಲೆಟಿಕ್ಸ್ ಪಂದ್ಯಾವಳಿಯಲ್ಲಿ ಭಾಗವಹಿಸಿ 2ನೇ ಸ್ಥಾನವನ್ನು ಪಡೆದಿರುತ್ತಾರೆ.
ಲಾನ್‌ಟೆನಿಸ್	ಕವಿಪ್ರನಿನಿ ಲಾನ್‌ಟೆನಿಸ್ (ಪುರುಷರ) ತಂಡವು ಫೆಬ್ರವರಿ-2018 ರಲ್ಲಿ ಗುಜರಾತಿನ ವಡೋದರದಲ್ಲಿ ದಲ್ಲಿ ನಡೆದ 42ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಲಾನ್‌ಟೆನಿಸ್ ಪಂದ್ಯಾವಳಿಯಲ್ಲಿ ಭಾಗವಹಿಸಿ 3ನೇ ಸ್ಥಾನವನ್ನು ಪಡೆದಿರುತ್ತಾರೆ.
ಬ್ಯಾಸ್ಕೆಟ್ ಬಾಲ್:	ಕವಿಪ್ರನಿನಿ ಬ್ಯಾಸ್ಕೆಟ್ ಬಾಲ್ ತಂಡವು ಫೆಬ್ರವರಿ-2018 ರಲ್ಲಿ ತಮಿಳುನಾಡಿನ ಕೊಯಂಬತ್ತೂರಿನಲ್ಲಿ ನಡೆದ 42ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿರುತ್ತಾರೆ.
ಕ್ರಿಕೆಟ್:	ಕವಿಪ್ರನಿನಿ ಕ್ರಿಕೆಟ್ ಕ್ರೀಡಾಪಟುಗಳು ಮಾರ್ಚ್-2018 ರಲ್ಲಿ ಕೋಲ್ಕಾತ್ತಾದಲ್ಲಿ ನಡೆದ 42ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿರುತ್ತಾರೆ.
ಶಟಲ್ ಬ್ಯಾಟ್ಮಿಂಟನ್ (ಪುರುಷರು):	ಕವಿಪ್ರನಿನಿ ಶಟಲ್ ಬ್ಯಾಟ್ಮಿಂಟನ್ (ಪುರುಷರ) ತಂಡವು ಮಾರ್ಚ್-2018 ರಲ್ಲಿ ಕೇರಳದ ತಿರುವನಂತಪುರದಲ್ಲಿ ನಡೆದ 42ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಶಟಲ್ ಬ್ಯಾಟ್ಮಿಂಟನ್ (ಪುರುಷರ) ಪಂದ್ಯಾವಳಿಯಲ್ಲಿ ಭಾಗವಹಿಸಿರುತ್ತಾರೆ.
ಕ್ರಿಕೆಟ್:	ಕವಿಪ್ರನಿನಿ ಕ್ರಿಕೆಟ್ ಕ್ರೀಡಾಪಟುಗಳು ಫೆಬ್ರವರಿ-2018 ರಲ್ಲಿ ಬೆಂಗಳೂರಿನಲ್ಲಿ ನಡೆದ KSCA Group II 2nd Division League ನಲ್ಲಿ ಭಾಗವಹಿಸಿರುತ್ತಾರೆ.

ಕಬಡ್ಡಿ:	ಶ್ರೀ ಎ.ಕಿರಣ್, ಕಿರಿಯ ಮಾರ್ಗದಾಳು, ದೂರಸಂಪರ್ಕ ವಿಭಾಗ, ಕವಿಪ್ರನಿನಿ, ಶ್ರೀ ಮಂಜುನಾಥ.ಸಿ.ಪೂಜಾರ್., ಕಿರಿಯ ಸಹಾಯಕ, ಐ.ಎ. & ಕ್ಯೂ.ಸಿ, ಕವಿಪ್ರನಿನಿ, ಮತ್ತು ಶ್ರೀ ತ್ಯಾಗರಾಜ್, ಹಿರಿಯ ಸಹಾಯಕ (ಆಂ.ಪ), ಕವಿಪ್ರನಿನಿ ಇವರು ಡಿಸೆಂಬರ್–2017 ರಲ್ಲಿ ನಡೆದ ರಾಜ್ಯ ಮಟ್ಟದ ಕಬ್ಬಡಿ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಬಾಗವಹಿಸಿರುತ್ತಾರೆ.
ಕವಿಪ್ರನಿನಿ ಕ್ರೀಡಾಪಟುಗಳು ತರಬೇತುದಾರರಾಗಿ ಮತ್ತು ಸ್ಕೋರರ್‌ಗಳಾಗಿ ಭಾಗವಹಿಸಿರುವ ವಿವರ	
ಕಬಡ್ಡಿ:	ಶ್ರೀ ಮುತ್ತುರಾಜ್, ಜೆ.ಎಲ್.ಎಮ್, ಪೂರ್ವ ವಿಭಾಗ, ಬೆಸ್ಕಾಂ ರವರು ಏಪ್ರೀಲ್–2017 ರಲ್ಲಿ ತಮಿಳುನಾಡಿನ ಕೊಯಂಬತ್ತೂರಿನಲ್ಲಿ ನಡೆದ 28ನೇ ಸಬ್ ಜೂನಿಯರ್ ಪುರುಷರು ಮತ್ತು ಮಹಿಳೆಯರ ರಾಷ್ಟ್ರೀಯ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಿದ ಕರ್ನಾಟಕದ ಜೂನಿಯರ್ ಪುರುಷರ ತಂಡಕ್ಕೆ ತರಬೇತುದಾರರಾಗಿ ಭಾಗವಹಿಸಿರುತ್ತಾರೆ.

ನಿಗಮ/ಎಸ್ಕಾಂಗಳಲ್ಲಿ ಹೊಸದಾಗಿ ನೇಮಕಾತಿ ಹೊಂದಿದ ಅಧಿಕಾರಿ/ನೌಕರರಲ್ಲಿ ಇರುವ ಯುವ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂಬ ಉದ್ದೇಶದ ಹಿನ್ನೆಲೆಯಲ್ಲಿ ಕವಿಪ್ರನಿನಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿನ ಕ್ರೀಡಾ ಶಾಖೆಯು (ಸದರಿ ಅಧಿಕಾರಿ/ನೌಕರರಿಗೆ) ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಬಗ್ಗೆ, ಕ್ರೀಡಾಪಟುಗಳ ಬಗ್ಗೆ, ಕ್ರೀಡಾ ಚಟುವಟಿಕೆಗಳ ಬಗ್ಗೆ ಹಾಗೂ ರಾಷ್ಟ್ರೀಯ, ಅಂತರರಾಷ್ಟ್ರೀಯ, ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿ ಹಾಗೂ ರಾಜ್ಯ ಮಟ್ಟದ ಪಂದ್ಯಾವಳಿಗಳ ಬಗ್ಗೆ 'ಪವರ್ ಪಾಯಿಂಟ್ ಪ್ರಸೆಂಟೇಷನ್' ಮೂಲಕ ಪರಿಚಯಿಸಲಾಗುತ್ತಿದೆ. ಮುಖ್ಯವಾಗಿ ಕವಿಪ್ರನಿನಿ ತಂಡಗಳು ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯು ನಡೆಸುವ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಕುರಿತು ನಡೆಸಲಾಗುವ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ, ಕಂಪನಿ ಮಟ್ಟದ ಆಯ್ಕೆ ಪ್ರಕ್ರಿಯೆ, ಅಂತರ ಕಂಪನಿ ಪಂದ್ಯವಳಿಗಳ ಕುರಿತು ತಿಳಿಸಲಾಗಿದೆ. ಕವಿಪ್ರನಿನಿ ಕ್ರೀಡಾ ಸಂಸ್ಥೆಯು ನಿಗಮದಿಂದ ಹೊಸದಾಗಿ ನೇಮಕಾತಿ ಹೊಂದಿದ ಅಧಿಕಾರಿ ಮತ್ತು ನೌಕರರಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಏರ್ಪಡಿಸಿದ್ದ ತರಬೇತಿ ಅವಧಿಯಲ್ಲಿ ಕ್ರೀಡಾ ಚಟುವಟಿಕೆಗಳನ್ನು ಸಹ ನಡೆಸಿದೆ.

ಪ್ರಸ್ತುತ, ಅಂತರ ವಿ.ಸ.ಕಂ.ಗಳ ಪಂದ್ಯಾವಳಿಗಳನ್ನು ಆಯೋಜಿಸಬೇಕಾಗಿದ್ದು, ಈ ಸಂಬಂಧ ಎಲ್ಲಾ ಎಸ್ಕಾಂಗಳಲ್ಲಿ ತಂಡಗಳ ಆಯ್ಕೆ ಪ್ರಕ್ರಿಯೆಯನ್ನು ನಡೆಸುವಲ್ಲಿ ಕವಿಪ್ರನಿನಿ ಕ್ರೀಡಾ ಸಂಸ್ಥೆಯು ಗಮನ ಹರಿಸಿದ್ದು, ಆಯೋಜಿಸಲಾಗುವ 21 ಕ್ರೀಡಾ ಪಂದ್ಯಾವಳಿಗೆ ಎಲ್ಲಾ ಎಸ್ಕಾಂಗಳಲ್ಲಿ ಈಗಾಗಲೇ ತಂಡಗಳ ಆಯ್ಕೆ ಪ್ರಕ್ರಿಯೆಯು ಸುಸೂತ್ರವಾಗಿ ಪೂರ್ಣಗೊಂಡಿರುತ್ತದೆ.

ಮುಂದುವರಿದಂತೆ ಕವಿಪ್ರನಿನಿ ಕ್ರೀಡಾ ಸಂಸ್ಥೆಯು ರಾಜ್ಯ ಮಟ್ಟದ ಹಾಗೂ ರಾಷ್ಟ್ರೀಯ ಮಟ್ಟದ ವಿವಿಧ ಕ್ರೀಡಾ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳನ್ನು ಗುರುತಿಸಿ, ಉತ್ತೇಜಿಸುತ್ತಿದೆ ಹಾಗೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಆಯ್ಕೆಗೊಂಡ ಕ್ರೀಡಾಪಟುಗಳನ್ನು ನಿಯೋಜಿಸಲಾಗುತ್ತಿದೆ. ಕವಿಪ್ರನಿನಿಯು ರಾಷ್ಟ್ರೀಯ ರ್‍ಯಾಂಕಿಂಗ್ ಪಟ್ಟಿಯಲ್ಲಿ ಸ್ಥಾನ ಗಳಿಸುವಲ್ಲಿ ತೀವ್ರ ನಿಗಾವಹಿಸುತ್ತಿದೆ. ಒಟ್ಟಾರೆ ಕವಿಪ್ರನಿನಿ ಕ್ರೀಡಾಪಟುಗಳು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಬಂದಿರುತ್ತಾರೆ. ಇವರುಗಳಿಗೆ ನಿಗಮದ ವತಿಯಿಂದ ಅಭಿನಂದನೆಗಳು.

ಶಾಸನಬದ್ಧ ಪರಿಶೋಧಕರು:–

ನಿಯಂತ್ರಕರು ಹಾಗೂ ಭಾರತ ಮಹಾಲೇಖಪಾಲರು, ಕ.ವಿ.ಪ್ರ.ನಿ.ನಿ.ಯ. ಆ.ವ.2017–18ರ ಆರ್ಥಿಕ ಲೆಕ್ಕಪತ್ರ ನಿರೂಪಣೆಗಳ ಪರಿಶೋಧನೆ ನಡೆಸಲು ಮೆ॥ ಬಿ.ಪಿ.ರಾವ್ ಆಂಡ್ ಕಂಪನಿ, ಬೆಂಗಳೂರು ಇವರನ್ನು ಶಾಸನಬದ್ಧ ಪರಿಶೋಧಕರನಾಗಿ ನೇಮಕ ಮಾಡಿದೆ.

ವೆಚ್ಚ ಲೆಕ್ಕ ಪರಿಶೋಧಕರು:–

ಕವಿಪ್ರನಿನಿಯ ಮಂಡಳಿಯು ಆ.ವ.2017–18ರ ಕಾಸ್ಟ್ ಅಕೌಂಟಿಂಗ್ ದಾಖಲೆಗಳ ಪರಿಶೋಧನೆ ನಡೆಸಲು ಮೆ॥ ಎಸ್.ಕೆ ಟಿಕಾರೆ ಆಂಡ್ ಕಂಪನಿ ರವರನ್ನು ವೆಚ್ಚ ಲೆಕ್ಕ ಪರಿಶೋಧಕರನ್ನಾಗಿ ನೇಮಕ ಮಾಡಿದೆ.

ಸೆಕ್ರೆಟೇರಿಯಲ್ ಆಡಿಟರ್ಸ್:–

ಕಂಪನಿ ಕಾಯ್ದೆ 2013ರ ಪ್ರಕರಣ 204ರ ಅಡಿಯಲ್ಲಿ, ಮಂಡಳಿಯು ಶ್ರೀ.ಎಸ್.ವಿಶ್ವನಾಥನ್, ಅಭ್ಯಾಸನಿರತ ಕಂಪನಿ ಕಾರ್ಯದರ್ಶಿ ಇವರನ್ನು ಕ.ವಿ.ಪ್ರ.ನಿ.ನಿ.ಯ. ಆ.ವ.2017–18ರ ಸೆಕ್ರೆಟೇರಿಯಲ್ ಆಡಿಟರ್ಸ್ ಆಗಿ ನೇಮಕ ಮಾಡಿದೆ.

ಕೃತಜ್ಞತೆಗಳು

ಕ.ವಿ.ಪ್ರ.ನಿ.ನಿ.ಗೆ ಎಲ್ಲ ರೀತಿಯ ನೆರವು ಹಾಗೂ ಮಾರ್ಗದರ್ಶನ ನೀಡಿದ ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ, ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ವಿದ್ಯುತ್ ವಿತ್ತೀಯ ನಿಗಮ ನಿಯಮಿತ, ವಾಣಿಜ್ಯ ಬ್ಯಾಂಕುಗಳು ಹಾಗೂ ಇತರ ಆರ್ಥಿಕ ಸಂಸ್ಥೆಗಳು, ನಿಗಮ ವ್ಯವಹರಣೆಗಳ ಸಚಿವಾಲಯ, ರಿಜಿಸ್ಟ್ರಾರ್ ಆಫ್ ಕಂಪನೀಸ್ ಹಾಗೂ ಸಾರ್ವಜನಿಕರಿಗೆ ನಿರ್ದೇಶಕ ಮಂಡಳಿಯು ತನ್ನ ಅಭಿನಂದನೆಯನ್ನು ಸಲ್ಲಿಸುತ್ತದೆ.

ಕಂಪನಿಯು ನಿರಂತರವಾಗಿ ಬೆಳೆದು ಅಭಿವೃದ್ಧಿ ಹೊಂದಲು ಎಲ್ಲ ಹಂತಗಳಲ್ಲಿ ಅವಿರತ ಪರಿಶ್ರಮ ಹಾಗೂ ಕೊಡುಗೆಯನ್ನು ನೀಡಿದ ಅಧಿಕಾರಿ ಹಾಗೂ ನೌಕರರ ವರ್ಗಕ್ಕೆ ನಿಗಮದ ಮಂಡಳಿಯು ಅಭಿನಂದಿಸುತ್ತದೆ.

ಮಂಡಳಿಗಾಗಿ ಮತ್ತು ಮಂಡಳಿ ಪರವಾಗಿ

ಸಹಿ/–
(ಶಿವಕುಮಾರ್.ಕೆ.ವಿ)
ನಿ.ಗು.ಸಂ: 08104146
ನಿರ್ದೇಶಕರು (ಪ್ರಸರಣ) ಕವಿಪ್ರನಿನಿ

ಸಹಿ/–
ಡಾ॥ ಎಸ್. ಸೆಲ್ವಕುಮಾರ್, ಭಾ.ಅ.ಸೇ
ನಿ.ಗು.ಸಂ: 00962240
ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ

ಕಂಪನಿ ಕಾಯಿದೆ 2013 ಪ್ರಕರಣ 143(6) (ಬಿ) ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬೆಂಗಳೂರು ಇದರ 31ನೇ ಮಾರ್ಚ್ 2018ರ ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಹಾಗೂ ಲೆಕ್ಕ ಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಅಭಿಪ್ರಾಯಗಳು.

ಕಂಪನಿ ಕಾಯಿದೆ 2013ರ ಆಡಿಯಲ್ಲಿ ನಿಗದಿ ಪಡಿಸಿರುವ ಆರ್ಥಿಕ ಕಾರ್ಯನೀತಿ ಚೌಕಟ್ಟಿನ ಪ್ರಕಾರ, **31ನೇ ಮಾರ್ಚ್ 2018** ಕ್ಕೆ ಅಂತ್ಯಗೊಂಡಂತೆ, **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ** ವಾರ್ಷಿಕ ಆರ್ಥಿಕ ನಿರೂಪಣೆಯ ಲೆಕ್ಕ ಪತ್ರ ಪಟ್ಟಿಗಳನ್ನು ಸಿದ್ಧಪಡಿಸುವ ಜಮಾಬ್ದಾರಿ ಕಂಪನಿಯ ವ್ಯವಸ್ಥಾಪಕ ಮಂಡಳಿಯದ್ದಾಗಿದೆ. ಕಾಯಿದೆಯ ಪ್ರಕರಣ 139(5) ಅಥವಾ 139(7) ರ ಅಡಿಯಲ್ಲಿ ಭಾರತ ನಿಯಂತ್ರಕರು ಹಾಗೂ ಮಹಾಲೇಖಪಾಲರಿಂದ ನೇಮಿಸಲ್ಪಟ್ಟಿರುವ ಶಾಸನ ಬದ್ಧ ಲೆಕ್ಕ ಪರಿಶೋಧಕರು, ಕಾಯಿದೆಯ ಪ್ರಕರಣ 143(10) ರಲ್ಲಿ ನಿಗಧಿಪಡಿಸಿರುವ ಪರಿಶೋಧನೆ ಮತ್ತು ಖಚಿತ ಗುಣಮಟ್ಟಗಳ ಪ್ರಕಾರ, ಈ ಆರ್ಥಿಕ ನಿರೂಪಣೆ ಮತ್ತು ಲೆಕ್ಕ ಪತ್ರ ಪಟ್ಟಿಗಳ ಮೇಲೆ, ಸ್ವಾಯತ್ತ ಪರಿಶೋಧನೆ ನಡೆಸಿ ಕಾಯಿದೆಯ ಪ್ರಕರಣ 143 ರ ಅಡಿಯಲ್ಲಿ ಅಭಿಪ್ರಾಯ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಈ ಪರಿಶೋಧನಾ ಕಾರ್ಯವನ್ನು ಸದರಿ ಶಾಸನ ಬದ್ಧ ಲೆಕ್ಕ ಪರಿಶೋಧಕರು ದಿನಾಂಕ: **16.08.2018** ರಂದು ಪೂರ್ಣಗೊಳಿಸಿದ್ದಾರೆಂದು ಪರಿಶೋಧಾನ ವರದಿಯ ಮೂಲಕ ನಿರೂಪಿಸಲ್ಪಟ್ಟಿದೆ.

ಕಾಯಿದೆ ಪ್ರಕರಣ 143(6) (ಎ) ಅಡಿಯಲ್ಲಿ **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 31ನೇ ಮಾರ್ಚ್ 2018 ರ** ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಮತ್ತು ಲೆಕ್ಕ ಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ ಪೂರಕ ಪರಿಶೋಧನೆ ನಡೆಸಿದ್ದೇನೆ. ಶಾಸನಬದ್ಧ ಲೆಕ್ಕ ಪರಿಶೋಧಕರ ಪರಿಶೋಧಿತ ಕಾರ್ಯನಿರೂಪಣಾ ಮಾಹಿತಿಯನ್ನು ಪರಾಮರ್ಶಿಸದೆ ಹಾಗೂ ಕೇವಲ ಶಾಸನಬದ್ಧ ಲೆಕ್ಕ ಪರಿಶೋಧಕರು, ಕಂಪನಿ ಸಿಬ್ಬಂದಿಯೊಡನೆ ನಡೆಸಿದ ವಿಚಾರಣೆ ಹಾಗೂ ಕೆಲವು ಆಯ್ದ ಲೆಕ್ಕಪತ್ರ ದಾಖಲೆಗಳ ಪರಿಶೀಲನೆ ಮೂಲಕ ವೈಯಕ್ತಿಕವಾಗಿ ಈ ಪೂರಕ ಲೆಕ್ಕ ಪರಿಶೋಧನಾ ಕಾರ್ಯವನ್ನು ನಿರ್ವಹಿಸಲಾಗಿದೆ.

ಈ ಪೂರಕ ಲೆಕ್ಕ ಪರಿಶೋಧನಾ ಸಮಯದಲ್ಲಿ ನನ್ನ ಗಮನಕ್ಕೆ ಯಾವುದೇ ಟೀಕೆ, ಅಭಿಪ್ರಾಯಗಳಲ್ಲಿ ಅಥವಾ ಕಾಯಿದೆ ಪ್ರಕರಣ 143(6) (ಬಿ) ಅಡಿಯಲ್ಲಿ ಲೆಕ್ಕಪರಿಶೋಧಕರ ವರದಿಗೆ ಸೇರಿಸಬೇಕಾದ ಯಾವುದೇ ತಿದ್ದುಪಡಿ ಇರುವುದಿಲ್ಲ.

ಭಾರತ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ
ಸಹಿ
(ಬಿಜಿತ ಕುಮಾರ್ ಮುಖರ್ಜಿ)
ಪ್ರಧಾನ ಲೆಕ್ಕಪರಿಶೋಧಕರು
ಆರ್ಥಿಕ ಮತ್ತು ರೆವಿನ್ಯೂ ವಲಯ ಪರಿಶೋಧನೆ
ಕರ್ನಾಟಕ, ಬೆಂಗಳೂರು.

ಸ್ಥಳ : **ಬೆಂಗಳೂರು**
ದಿನಾಂಕ : 20.09.2018

ಅನುಬಂಧ–1

ನಮೂನೆ ಸಂಖ್ಯೆ ಎಂ.ಜಿ.ಟಿ–9

ದಿನಾಂಕ 31ನೇ ಮಾರ್ಚ್ 2018ರಂದು ಮುಕ್ತಾಯಗೊಂಡ ಆರ್ಥಿಕ ವರ್ಷದ ವಾರ್ಷಿಕ ಸಲ್ಲಿಕೆಗಳ ಸಾರಾಂಶ

(ಕಂಪನಿ ಕಾಯ್ದೆ, 2013ರ ಪ್ರಕರಣ 92(3) ಹಾಗೂ ಕಂಪನಿ (ವ್ಯವಸ್ಥಾಪನೆ ಮತ್ತು ಆಡಳಿತ) ನಿಯಮಗಳು,2014ರ ನಿಯಮ 12(1)ರ ಅನುಸರಣೆಯಾಗಿ)

I. ನೋಂದಾವಣಿ ಮತ್ತು ಇತರ ವಿವರಗಳು :

I.	ಸಿ.ಐ.ಎನ್.	U40109KA1999SGC025521
II.	ನೋಂದಣಿ ದಿನಾಂಕ	28–07–1999
III.	ಕಂಪನಿಯ ಹೆಸರು	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
IV.	ಕಂಪನಿಯ ವರ್ಗ/ಉಪ ವರ್ಗ	ಸರ್ಕಾರದ ಕಂಪನಿ
V.	ನೋಂದಣಿ ಕಚೇರಿಯ ವಿಳಾಸ ಹಾಗೂ ಸಂಪರ್ಕ ವಿವರ	ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು–560 009.
VI.	ಲಿಸ್ಟೆಡ್ ಕಂಪನಿಯೇ	ಲಿಸ್ಟೆಡ್ ಕಂಪನಿಯಲ್ಲ
VII.	ರಿಜಿಸ್ಟ್ರಾರ್ ಹಾಗೂ ವರ್ಗಾವಣೆ ಕಾರ್ಯಬಾರಿಯ ಹೆಸರು, ವಿಳಾಸ ಹಾಗೂ ಸಂಪರ್ಕ ವಿವರ	ಅನ್ವಯಿಸುವುದಿಲ್ಲ

II. ಕಂಪನಿಯ ಮೂಲ ವ್ಯವಹಾರಿಕ ಚಟುವಟಿಕೆಗಳು:

ಕಂಪನಿಯ ಒಟ್ಟಾರೆ ವಹಿವಾಟು ಗಳಿಕೆಯ ಶೇ.10 ಅಥವಾ ಹೆಚ್ಚಿನ ಪಾಲಿರುವ ಎಲ್ಲ ವ್ಯವಹಾರಿಕ ಚಟುವಟಿಕೆಗಳನ್ನು ತೋರಿಸತಕ್ಕದ್ದು:

ಕ್ರ.ಸಂ.	ಮುಖ್ಯ ಉತ್ಪಾದನೆ/ಸೇವೆಯ ಹೆಸರು ಹಾಗೂ ವಿವರ	ಉತ್ಪಾದಿತ/ಸೇವೆಯ ಎನ್.ಐ.ಸಿ.ಸಂಕೇತ	ಕಂಪನಿಯ ಒಟ್ಟು ವಹಿವಾಟಿನ ಶೇಕಡಾ ಪಾಲು
1	ಪ್ರಸರಣ		100%

III. ಹೊಂದಿರುವಿಕೆ, ಪೂರಕ, ಸಹ ಕಂಪನಿಗಳ ವಿವರಗಳು:

ಕ್ರ.ಸಂ.	ಕಂಪನಿಯ ಹೆಸರು ಮತ್ತು ವಿಳಾಸ	ಸಿಐಎನ್/ ಜಿಎಲ್ಎನ್	ಹೊಂದಿರುವಿಕೆ/ಪೂರಕ/ ಸಹ ಕಂಪನಿ	ಹೊಂದಿರುವ ಷೇರಿನ ಶೇ. ಪ್ರಮಾಣ	ಅನ್ವಯಿತ ಪರಿಚ್ಛೇಧ
1.	**ಇಲ್ಲ**	**ಇಲ್ಲ**	**ಇಲ್ಲ**	**ಇಲ್ಲ**	**ಇಲ್ಲ**
2.					
3.					
4.					

IV. ಷೇರು ಹೊಂದಿರುವಿಕೆಯ ಸ್ವರೂಪ (ಈಕ್ವಿಟಿ ಷೇರುಗಳ ಬಂಡವಾಳವನ್ನು ಒಟ್ಟು ಈಕ್ವಿಟಿಯ ಶೇಕಡಾ ಪ್ರಮಾಣದಂತೆ)

I. ಪ್ರವರ್ಗವಾರು ಷೇರು ಹೊಂದಿರುವುದು

ಷೇರುದಾರರ ಪ್ರವರ್ಗ	ವರ್ಷದ ಆರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ				ವರ್ಷದ ಅಂತ್ಯ'ದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ				ಪ್ರಸಕ್ತ ವರ್ಷದಲ್ಲಿ ಶೇ. ಬದಲಾವಣೆ
	ಡೀ ಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರಿನ ಶೇ. ಪ್ರಮಾಣ	ಡೀ ಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರಿನ ಶೇ. ಪ್ರಮಾಣ	
ಎ. ಪ್ರವರ್ತಕ									
1) ಭಾರತೀಯ									
ಎ.)ವೈಯಕ್ತಿಕ/ಹಿಂ.ಅ.ಕು.									
ಬಿ.) ಕೇಂದ್ರ ಸರ್ಕಾರ									
ಸಿ.) ರಾಜ್ಯ ಸರ್ಕಾರ(ಗಳು)		20753225	20753225	100%		2183225	2183225	100%	+8.95%

ಡಿ.) ನಿಗಮ ಸಂಸ್ಥೆಗಳು									
ಇ.) ಬ್ಯಾಂಕು/ಆ.ಸಂ.									
ಎಫ್.) ಇತರೆ ಯಾವುದೇ									
ಉಪ ಮೊತ್ತ ಎ (1)		20753225	20753225	100%		2183225	2183225	100%	+8.95%
2) ವಿದೇಶೀ									
ಜಿ.) ಅ.ಭಾ–ವ್ಯಕ್ತಿಗಳು									
ಎಚ್.) ಇತರೆ–ವ್ಯಕ್ತಿಗಳು									
ಐ.) ನಿಗಮ ಸಂಸ್ಥೆಗಳು									
ಜೆ.) ಬ್ಯಾಂಕು/ಆ.ಸಂ.									
ಕೆ.) ಇತರೆ ಯಾವುದೇ									
ಉಪ ಮೊತ್ತ ಎ (2)	–	–	–	–	–	–	–	–	–
ಬಿ. ಸಾರ್ವಜನಿಕ ಷೇರು ಹೊಂದಿರುವಿಕೆ									
1. ಆರ್ಥಿಕ ಸಂಸ್ಥೆಗಳು									
ಎ.) ಮ್ಯುಚುಯಲ್ ಫಂಡ್ಸ್									
ಬಿ.) ಬ್ಯಾಂಕು/ಆ.ಸಂ.									
ಸಿ.) ಕೇಂದ್ರ ಸರ್ಕಾರ									
ಡಿ.) ರಾಜ್ಯ ಸರ್ಕಾರ(ಗಳು)									
ಇ.) ವೆಂಚರ್ ಬಂಡವಾಳ ನಿಧಿ									
ಎಫ್.) ವಿಮಾ ಕಂಪನಿಗಳು									
ಜಿ.) ಎಫ್.ಐ.ಐ ಗಳು									
ಎಚ್.) ವಿದೇಶಿ ವೆಂಚರ್ ಬಂಡವಾಳ. ನಿಧಿ									
ಐ.) ಇತರೆ (ತಿಳಿಸಿ)									
ಉಪ ಮೊತ್ತ ಬಿ (1)	–	–	–	–	–	––	–	––	–
2. ಸಂಸ್ಥೇತರ									
ಎ.) ನಿಗಮ ಸಂಸ್ಥೆಗಳು									
1. ಭಾರತೀಯ (ii) ಸಾಗರೋತ್ತರ									
ಬಿ.) ವೈಯಕ್ತಿಕ									
(i) ರೂ.1 ಲಕ್ಷದವರೆಗಿನ ಸಾಧಾರಣ ಷೇರು ಬಂಡವಾಳವನ್ನು ಹೊಂದಿರುವ ವೈಯಕ್ತಿಕ ಷೇರುದಾರರು									
(ii) ರೂ.1 ಲಕ್ಷಕ್ಕೂ ಹೆಚ್ಚಿನ ಸಾಧಾರಣ ಷೇರು ಬಂಡವಾಳವನ್ನು ಹೊಂದಿರುವ ವೈಯಕ್ತಿಕ ಷೇರುದಾರರು									
ಸಿ.) ಇತರೆ (ತಿಳಿಸಿ)									
ಉಪ ಮೊತ್ತ ಬಿ (2)									
ಒಟ್ಟು ಸಾರ್ವಜನಿಕ ಷೇರು ಹೊಂದಿರುವಿಕೆ ಬಿ = ಬಿ(1)+ಬಿ(2)	–	–	–	–	–	–	––	–	–
ಸಿ.) ಜಿ.ಡಿ.ಆರ್ ಗಳು ಮತ್ತು ಎ.ಡಿ.ಆರ್ ಗಳಗಾಗಿ ಅಭರಕ್ಷಕರು ಹೊಂದಿರುವ ಷೇರುಗಳು	–	–	–	–	–	–	–	–	–
ಒಟ್ಟಾರೆ (ಎ+ಬಿ+ಸಿ)		20753225	20753225	100%		2183225	2183225	100%	+8.95%

II. ಪ್ರವರ್ತಕರ ಷೇರು ಹೊಂದಿರುವಿಕೆ :

ಕ್ರ ಸಂ	ಷೇರುದಾರರ ಹೆಸರು	ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳು			ವರ್ಷದ ಅಂತ್ಯದಲ್ಲಿ ಹೊಂದಿರುವ ಷೇರುಗಳು			
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ. ಪ್ರಮಾಣ	ಒಟ್ಟು ಷೇರುಗಳಿಗೆ ಎದಿರಾಗಿ ಒತ್ತೆ ಇಟ್ಟ/ ಭೋಗ್ಯ ಇಟ್ಟ ಷೇರು ಪ್ರಮಾಣ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.ಪ್ರಮಾಣ	ಒಟ್ಟು ಷೇರುಗಳಿಗೆ ಎದಿರಾಗಿ ಒತ್ತೆ ಇಟ್ಟ/ ಭೋಗ್ಯ ಇಟ್ಟ ಷೇರು ಪ್ರಮಾಣ	ಪ್ರಸಕ್ತ ವರ್ಷದಲ್ಲಿ ಹೊಂದಿರುವ ಷೇರುಗಳಲ್ಲಿ ಬದಲಾವಣೆ
1.	ಗೌ॥ ರಾಜ್ಯಪಾಲರು, ಕರ್ನಾಟಕ ರಾಜ್ಯ	20753218	100%	–	21823218	100%	–	+8.95%
2.	ಶ್ರೀ ಪಿ. ರವಿ ಕುಮಾರ್	1	0	–	1	0	–	–
3.	ಶ್ರೀ.ಐ.ಎಸ್.ಎನ್. ಪ್ರಸಾದ್	1	0	–	1	0	–	–
4.	ಶ್ರೀ ಜಾವೇದ್ ಅಖ್ತರ್,	1	0	–	1	0	–	–
5.	ಶ್ರೀ.ಜಿ.ಕುಮಾರ್ ನಾಯಕ್	1	0	–	1	0	–	–
6.	ಶ್ರೀ.ಪಿ.ರಾಜೇಂದ್ರ ಜೋಲನ್	0	0	–	1	0	–	+100%
7.	ಡಾ॥ ಅದಿತಿ ರಾಜಾ ನಿರ್ದೇಶಕರು (ಹಣಕಾಸು)	1	0	–	1	0	–	–
8.	ಶ್ರೀ ಟಿ.ಹೆಚ್.ಎಂ.ಕುಮಾರ್	1	0	–	0	0	–	– 100%
9.	ಶ್ರೀ.ಹೆಚ್.ನಾಗೇಶ್	1	0	–	1	0	–	–
	ಒಟ್ಟು	20753225	100%	–	21823225	100%	–	

III. ಪ್ರವರ್ತಕರಲ್ಲಿ ಷೇರು ಹೊಂದಿರುವಿಕೆ ಬದಲಾವಣೆ (ಬದಲಾವಣೆ ಇಲ್ಲದಿದ್ದರೆ, ದಯವಿಟ್ಟು ತಿಳಿಸಿ):

ಕ್ರ ಸಂ	ಷೇರುವಾರರ ಹೆಸರು	ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳು		ಪ್ರಸಕ್ತ ವರ್ಷದಲ್ಲಿ ಸಂಚಿತಗೊಂಡ ಷೇರು	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.ಪ್ರಮಾಣ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.ಪ್ರಮಾಣ
	ವರ್ಷದ ಪ್ರಾರಂಭದಲ್ಲಿ	20753225	100%	20753225	100%
	ಪ್ರಸಕ್ತ ವರ್ಷದಲ್ಲಿ ಪ್ರವರ್ತಕರ ಷೇರುಗಳ ದಿನಾಂಕವಾರು ಏರಿಕೆ/ ಇಳಕೆ, ಏರಿಕೆ/ಇಳಕೆಗೆ ಕಾರಣ ತಿಳಸುವುದು (ಉದಾ: ಹಂಚಿಕೆ / ವರ್ಗಾವಣೆ/ ಬೋನಸ್/ ರಿಯಾಯಿತಿ ದರದ ಈಕ್ವಿಟಿ)	**10,70,000 ಸಂಖ್ಯೆಯ ಈಕ್ವಿಟಿ ಶೇರುಗಳನ್ನು ರೂ.1,000– ಪ್ರತಿ ಷೇರಿನ ಮೌಲ್ಯದಂತೆ ದಿನಾಂಕ: 04.07.2017ರ ಮಂಡಳಿಯ ನಡವಳಿಯ ಪ್ರಕಾರ ಗೌ॥ರಾಜ್ಯಪಾಲರು, ಪರವಾಗಿ ನೀಡಲಾಗಿದೆ**			
	ವರ್ಷಾಂತ್ಯದಲ್ಲಿ	21823225	100	21823225	100

IV. ಋಣದ ಮೊತ್ತ : ಬಾಕಿ ಇರುವ/ಸಂಚಿತಗೊಂಡ ಆದರೆ ಪಾವತಿಗೆ ಬಾಕಿ ಇರದ ಬಡ್ಡಿಯನ್ನೂ ಒಳಗೊಂಡು ಕಂಪನಿಯ ಸಾಲದ ಮೊಬಲಗು :

ಆರ್ಥಿಕ ವರ್ಷದ ಪ್ರಾರಂಭದಲ್ಲಿ ಇದ್ದ ಸಾಲದ ಮೊಬಲಗು		ಠೇವಣಿಯನ್ನು ಹೊರತುಪಡಿಸಿದ ಸುರಕ್ಷಿತ ಸಾಲಗಳು	ಸುರಕ್ಷಿತ ಗೊಳಿಸದ ಸಾಲಗಳು	ಠೇವಣಿಗಳು	ಒಟ್ಟು ಸಾಲದ ಮೊಬಲಗು
I.	ಮೂಲ ಮೊಬಲಗು	49646330943	35644329	0	49681975272
II.	ಬಾಕಿ ಬಡ್ಡಿ, ಆದರೆ ಪಾವತಿಸದಿರುವುದು	0	0	0	0

III.	ಸಂಚಿತಗೊಂಡ ಬಡ್ಡಿ, ಆದರೆ ಪಾವತಿಯಾಗದಿರುವುದು	25206472	0	0	25206472
ಒಟ್ಟು (I + ii + iii)		**49671537415**	**35644329**	**0**	**49707181744**
ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಾಲದ ಮೊಬಲಗಿನಲ್ಲಿ ಬದಲಾವಣೆ					
ಸೇರ್ಪಡೆ		8667600000	3000000000	0	11667600000
ಇಳಿತ		6274327606	1422607599	0	7696935205
ನಿವ್ವಳ ಬದಲಾವಣೆ		**2393272394**	**1577392401**	**0**	**3970664795**
ಬಡ್ಡಿ ಮೊಬಲಗು					
ಸೇರ್ಪಡೆ		---	---	---	---
ಇಳಿತ		---	---	---	---
ನಿವ್ವಳ ಬದಲಾವಣೆ		---	---	---	---
ಆರ್ಥಿಕ ವರ್ಷದ ಅಂತ್ಯದಲ್ಲಿ ಸಾಲದ ಮೊಬಲಗು					
i) ಮೂಲ ಮೊಬಲಗು		52039603337	1613036730	0	53652640067
ii) ಬಾಕಿ ಬಡ್ಡಿ, ಆದರೆ ಪಾವತಿಸದಿರುವುದು		0	0	0	0
iii) ಸಂಚಿತಗೊಂಡ ಬಡ್ಡಿ, ಆದರೆ ಬಾಕಿ ಇರದಿರುವುದು		43074396	672603	0	43746999
ಒಟ್ಟು (i+ii+iii)		**52082677733**	**1613709333**	**0**	**53696387066**

V. ನಿರ್ದೇಶಕರು ಹಾಗೂ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ಸಂಭಾವನೆ:

ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರು:

ಕ್ರ.ಸಂ.	ಸಂಭಾವನೆಯ ವಿವರ	ವ್ಯ.ನಿ/ಪೂ.ನಿ/ವ್ಯವಸ್ಥಾಪಕರ ಹೆಸರು	ಒಟ್ಟು ಮೊಬಲಗು
1.	ಒಟ್ಟು ಸಂಬಳ **ಆ.ವ.2017–18** (ಎ) ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ (ಬಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(2)ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ (ಸಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳದ ಬದಲು ಲಾಭ	ಶ್ರೀ ಜಾವೇದ್ ಅಖ್ತರ್, ವ್ಯವಸ್ಥಾಪಕ ನಿರ್ದೇಶಕರು ರೂ.32,34,659.00	ರೂ.32,34,659.00
2	ಒಟ್ಟು ಸಂಬಳ **ಆ.ವ.2017–18** (ಎ) ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ (ಬಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(2)ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ (ಸಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳದ ಬದಲು ಲಾಭ	ಡಾ॥ ಅದಿತಿ ರಾಜಾ, ನಿರ್ದೇಶಕರು(ಹಣಕಾಸು) ರೂ.25,61,492.00	ರೂ.25,61,492.00
3	ಒಟ್ಟು ಸಂಬಳ **ಆ.ವ.2017–18** (ಎ) ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ	ಶ್ರೀ. ಹೆಚ್.ನಾಗೇಶ್ ನಿರ್ದೇಶಕರು (ಪ್ರಸರಣ) ರೂ.19,57,919.00	ರೂ.19,57,919.00

	(ಬಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(2)ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ (ಸಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳದ ಬದಲು ಲಾಭ		
4	ಒಟ್ಟು ಸಂಬಳ **ಆ.ವ.2017–18** (ಎ) ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ (ಬಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(2)ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ (ಸಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳದ ಬದಲು ಲಾಭ	ಶ್ರೀ ಶಿವಕುಮಾರ್ ಕೆವಿ, ನಿರ್ದೇಶಕರು (ಪ್ರಸರಣ) ರೂ.16,93,753.00	ರೂ. 16,93,753.00
5	ಒಟ್ಟು ಸಂಬಳ **ಆ.ವ.2017–18** (ಎ) ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ (ಬಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(2)ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ (ಸಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳದ ಬದಲು ಲಾಭ	ಶ್ರೀ.ಆರ್.ಶ್ರೀಧರ್ ನಿರ್ದೇಶಕರು & ಕಂಪನಿ ಕಾರ್ಯದರ್ಶಿ ರೂ.24,78,727.00	ರೂ.24,78,727.00
6	ಒಟ್ಟು ಸಂಬಳ **ಆ.ವ.2017–18** (ಎ) ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ (ಬಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(2)ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ (ಸಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳದ ಬದಲು ಲಾಭ	ಶ್ರೀ ಎಮ್. ರಾಮಕೃಷ್ಣ ನಿರ್ದೇಶಕರು (ಆ ಮತ್ತು ಮಾ.ಸಂ) ರೂ.10,14,589.00	ರೂ.10,14,589.00
2.	ಷೇರುಗಳ ಆಯ್ಕೆ	0	- - -
3.	ರಿಯಾಯಿತಿ ದರದ ಸ್ವಾಮ್ಯ	0	- - -
4.	ಕಾರ್ಯಭಾರಿ ಶುಲ್ಕ –ಲಾಭದ ಶೇಕಡಾ ಪ್ರಮಾಣದಂತೆ –ಇತರೆ, ತಿಳಿಸಿ	0	- - -
5.	ಇತರೆ, ತಿಳಿಸಿ	- - -	- - -
6.	ಒಟ್ಟು (ಎ)	**ರೂ. 1,29,41,139.00**	**ರೂ. 1,29,41,139.00**
	ಕಾಯ್ದೆ ಅನ್ವಯ ಮಿತಿ		

ಬಿ. ಇತರ ನಿರ್ದೇಶಕರುಗಳಿಗೆ ಸಂಭಾವನೆ :

ಕ್ರ.ಸಂ.	ಸಂಭಾವನೆಯ ವಿವರಗಳು		ವ್ಯ.ನಿ/ಪೂ.ನಿ/ವ್ಯವಸ್ಥಾಪಕರ ಹೆಸರು			ಒಟ್ಟು ಮೊಬಲಗು
1.	<u>ಸ್ವಾಯತ್ತ ನಿರ್ದೇಶಕರು</u> ▯ ಮಂಡಳಿ ಸಭೆಗಳಿಗೆ ಹಾಜರಾಗಲು ಸಂಭಾವನಾ ಶುಲ್ಕ ▯ ಕಾರ್ಯಭಾರಿ ಶುಲ್ಕ ▯ ಇತರೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ			ಮಂಡಳಿ ಸಭೆಗೆ ಹಾಜರಾಗಲು ಸಂಭಾವನಾ ಶುಲ್ಕ	ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ	
			ಡಾ॥ ರಜನೀಶ್ ಗೋಯಲ್	ರೂ.3,000/–	–	
			ಶ್ರೀ.ಪಿ ರವಿಕುಮಾರ್	ರೂ.7,000/–	–	
			ಶ್ರೀ.ಐ.ಎಸ್.ಎನ್. ಪ್ರಸಾದ್	ರೂ.7,000/–	–	
			ಶ್ರೀ.ಜಿ.ಕುಮಾರ್ ನಾಯಕ್	ರೂ.5,000/–	–	
			ಶ್ರೀ.ಎಲ್.ಕೆ.ಅತೀಕ್	ರೂ.2,000/–	–	
			ಶ್ರೀ.ಟಿ.ಹೆಚ್.ಎಂ. ಕುಮಾರ್	ರೂ.6,000/–	–	
			ಶ್ರೀ.ಎ.ಎಂ.ಮಹದೇವ ಪ್ರಸಾದ್	ರೂ.15,000/–	ರೂ.22,080/–	
			ಶ್ರೀ.ಶ್ರೀನಿವಾಸ್ ಎಂ.ಎನ್	ರೂ.15,000/–	ರೂ.18,600/–	
	ಒಟ್ಟು (1)			**ರೂ.60,000/–**	**ರೂ.40,680/–**	**ರೂ.1,00,680/–**
				ಮಂಡಳಿ ಸಭೆಗೆ ಹಾಜರಾಗಲು ಸಂಭಾವನಾ ಶುಲ್ಕ	ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ	
2.	<u>ಇತರೆ ಕಾರ್ಯವಾಹಿಯೇತರ ನಿರ್ದೇಶಕರು</u> ▯ ಮಂಡಳಿ ಸಭೆಗಳಿಗೆ ಹಾಜರಾಗಲು ಸಂಭಾವನಾ ಶುಲ್ಕ	1	ಶ್ರೀ.ಎಸ್.ಪಿ.ಸಾಕಾರಿ	ರೂ.5,000/–		ರೂ.5,000/–
		2	ಶ್ರೀ.ಟಿ.ಆರ್. ರಾಮಕೃಷ್ಣಯ್ಯ	ರೂ.4,000/–		ರೂ.4,000/–
		3	ಶ್ರೀ.ಎ.ಎನ್.ಜಯರಾಜ್	ರೂ.5,000/–		ರೂ.5,000/–
		4	ಶ್ರೀ.ಆನಂದ್ ಪ್ರಸಾದ್	ರೂ.15,000/–	ರೂ.1,536/–	ರೂ.16,536/–
		5	ಶ್ರೀ.ಬಿ.ವಿ.ಮುನಿಗೌಡ	ರೂ.15,000/–	ರೂ.7,560/–	ರೂ.22,560/–
		6	ಶ್ರೀ.ಬೈರೇಗೌಡ	ರೂ.3,000/–	ರೂ.3,480/–	ರೂ.6,480/–
		7	ಶ್ರೀ.ದೀಪಕ್ ರಾಜಾರಾಮ್ ಹೆಗ್ಗಡೆ	ರೂ.12,000/–	ರೂ.38,976/–	ರೂ.50,976/–
		8	ಶ್ರೀ.ಕೆ.ಪಿ.ಸಂಪತ್ ಕುಮಾರ್	ರೂ.15,000/–	ರೂ.24,480/–	ರೂ.39,480/–
			ಶ್ರೀ.ಮಜಾರ್ ಆಲ್ಲಮ್ ಖಾನ್	ರೂ.9,000/–	–	ರೂ.9,000/–
		9	ಶ್ರೀ.ಎನ್.ಜ್ಯೋತಿ ಪ್ರಕಾಶ್	ರೂ.15,000/–	ರೂ.1,800/–	ರೂ.16,800/–
		10	ಶ್ರೀ.ಶ್ರೀನಿವಾಸ್ ರಾಜು	ರೂ.9,000/–	–	ರೂ.9,000/–
		11	ಶ್ರೀ.ಶಿವಶಂಕರ್ ಸೋಮಲಿಂಗಪ್ಪ ಮಳಗಾಳಿ	ರೂ.9,000/–	ರೂ.39,168/–	ರೂ.48,168/–
		12	ಶ್ರೀ.ಟಿ.ಎನ್.ರಮೇಶ್	ರೂ.15,000/–	ರೂ.9,600/–	ರೂ.24,600/–

	ಒಟ್ಟು (2)			ರೂ.1,31,000./–	ರೂ.1,26,600/–	**ರೂ.2,57,600/–**
	ಒಟ್ಟು (1 + 2)					**ರೂ.3,58,280/–**
	ವ್ಯವಸ್ಥಾಪಕ ಮಂಡಳಿಯ ಒಟ್ಟು ಸಂಭಾವನೆ					**ರೂ.1,32,99,419/–**
	ಕಾಯ್ದೆ ಅನ್ವಯ ಒಟ್ಟಾರೆ ಮಿತಿ					

ಸಿ. ವ್ಯ.ನಿ/ಪೂ.ನಿ/ವ್ಯವಸ್ಥಾಪಕರನ್ನು ಹೊರತು ಪಡಿಸಿದಂತೆ ಇತರ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ಸಂಭಾವನೆ

ಕ್ರ.ಸಂ.	ಸಂಭಾವನೆಯ ವಿವರ	ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ			
		ಸಿ.ಇ.ಒ.	ಕಂ.ಕಾ.	ಸಿ.ಎಫ್.ಒ.	ಒಟ್ಟು
1.	ಒಟ್ಟು ಸಂಬಳ				
	(ಎ) ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(1)ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ				
	(ಬಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(2)ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ				
	(ಸಿ)ಆದಾಯ ತೆರಿಗೆ ಕಾಯ್ದೆ,1961ರ ಪರಿಚ್ಛೇಧ 17(3)ರ ಅಡಿಯಲ್ಲಿ ಸಂಬಳದ ಬದಲು ಲಾಭ				
2.	ಷೇರುಗಳ ಆಯ್ಕೆ				
3.	ರಿಯಾಯಿತಿ ದರದ ಸ್ವಾಮ್ಯ				
4.	ಕಾರ್ಯಭಾರಿ ಶುಲ್ಕ –ಲಾಭದ ಶೇಕಡಾ ಪ್ರಮಾಣದಂತೆ –ಇತರೆ, ತಿಳಿಸಿ				
5.	ಇತರೆ, ತಿಳಿಸಿ				
6.	**ಒಟ್ಟು**				

ಇಲ್ಲ

VI. ದಂಡ/ಶಿಕ್ಷೆ/ಅಪರಾಧಗಳಿಗೆ ಒಟ್ಟುಗೂಡಿತ ದಂಡ: ಇಲ್ಲ

ಸ್ವರೂಪ	ಕಂಪನಿ ಕಾಯ್ದೆಯ ಪ್ರಕರಣ	ಸಂಕ್ಷಿಪ್ತ ವಿವರಣೆ	ವಿಧಿಸಲ್ಪಟ್ಟ ದಂಡ/ಶಿಕ್ಷೆ/ ಒಟ್ಟುಗೂಡಿತ ದಂಡಗಳ ವಿವರ	ಪ್ರಾಧಿಕಾರ (ಆರ್.ಡಿ/ ಎನ್.ಸಿ.ಎಲ್.ಟಿ/ ನ್ಯಾಯಾಲಯ)	ಸಲ್ಲಿಸಿದ ಮನವಿ (ಇದ್ದರೆ, ವಿವರ ಒದಗಿಸಿ)
ಎ). ಕಂಪನಿ					
ದಂಡ					
ಶಿಕ್ಷೆ					
ಒಟ್ಟುಗೂಡಿದ ದಂಡ					
ಬಿ). ನಿರ್ದೇಶಕರು					
ದಂಡ					
ಶಿಕ್ಷೆ					
ಒಟ್ಟುಗೂಡಿದ ದಂಡ					
ಸಿ) ತಪ್ಪಿತಸ್ಥ ಇತರ ಅಧಿಕಾರಿಗಳು					
ದಂಡ					
ಶಿಕ್ಷೆ					
ಒಟ್ಟುಗೂಡಿದ ದಂಡ					

ಇಲ್ಲ

2017–18 ರ ಕ.ವಿ.ಪ್ರ.ನಿ.ನಿ ಲೆಕ್ಕ ಪತ್ರಗಳ ಮೇಲೆ ಶಾಸನಬದ್ಧ ಲೆಕ್ಕ ಪರಿಶೋಧಕರು ನೀಡಿರುವ ಅವಲೋಕನಗಳಿಗೆ/ ಟೀಕೆಗಳಗಳಿಗೆ ಆಡಳಿತ ವರ್ಗದ ಉತ್ತರಗಳು

ಕ್ರ.ಸಂ	ಶಾಸನ ಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು	ಆಡಳಿತ ವರ್ಗದ ಉತ್ತರಗಳು
i	ಟಿಪ್ಪಣಿ ಸಂಖ್ಯೆ :1.2 (ಬಿ) ರಲ್ಲಿ ಸೂಚಿಸಿರುವಂತೆ ಹಿಂದಿನ ವರ್ಷದ ಅಂಕಿ ಅಂಶಗಳನ್ನು ಪ್ರಾರಂಭಿಕ ಇತರೆ ಸ್ವಾಮ್ಯ ಹಾಗೂ ಸಮಗ್ರ ಆದಾಯದಲ್ಲಿ IND-AS ಗೆ ಅನುಗುಣವಾಗಿ ಅಂಕಿ ಅಂಶಗಳನ್ನು ಪುನಃಸ್ಥಾಪನೆ ಮಾಡಲಾಗಿಲ್ಲ.	ವಾಸ್ತವಿಕ, ಈ ಅವಲೋಕನವನ್ನು ಪರೀಕ್ಷಿಸಿ, ಅನುಸರಿಸಲು ಕ್ರಮ ಕೈಗೊಳ್ಳಲಾಗುವುದು.
ii	ಟಿಪ್ಪಣಿ ಸಂಖ್ಯೆ: 1.6 ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳಿಗೆ ಸಂಬಂಧಿಸಿದಂತೆ ಹಾಗೂ ಟಿಪ್ಪಣಿ ಸಂಖ್ಯೆ:2.5 (ಬಿ) ಮತ್ತು ಟಿಪ್ಪಣಿ ಸಂಖ್ಯೆ:೩೩ ರಲ್ಲಿ ಸೂಚಿಸಿದಂತೆ ಕಂಪನಿಯು ಹಿಂದಿನ ಅವಧಿಗೆ ಸಂಬಂಧಿಸಿದ ತಪ್ಪುಗಳನ್ನು ಪೂರ್ವಾನ್ವಯವಾಗಿ ಪುನಃಸ್ಥಾಪನೆ ಮಾಡದೆ ಮತ್ತು ಸದರಿ ಮೊತ್ತಗಳಿಗೆ ತುಲನಾತ್ಮಕ ಮೊತ್ತವನ್ನು ನೀಡಲಾಗದ ಕಾರಣ ಆರಂಭಿಕ ಶಿಲ್ಕು ಆಸ್ತಿ ಮತ್ತು ಹೊಣೆಗಾರಿಕೆ ಹಾಗೂ ಸ್ವಾಮ್ಯಗಳ ಆರಂಭಿಕ ಶಿಲ್ಕುಗಳನ್ನು ಪುನಸ್ಥಾಪನೆಗೊಳಿಸದಿರುವುದು IND AS 8 'ಲೆಕ್ಕ ಪತ್ರ ನೀತಿಗಳು, ಲೆಕ್ಕ ಪತ್ರ ಅಂದಾಜುಗಳಲ್ಲಿ ಬದಲಾವಣೆಗಳು ಮತ್ತು ದೋಷಗಳು" ಕಂಪನಿಯ (ಭಾರತೀಯ ಲೆಕ್ಕ ಪತ್ರ ಮಾನದಂಡ) ನಿಯಮಗಳು, 2015ರನ್ವಯ ನಿಗಧಿ ಪಡಿಸಲಾಗಿರುವುದನ್ನು ಪಾಲಿಸಿರುವುದಿಲ್ಲ. ಸದರಿ ಮಾಹಿತಿಯ ಅನುಪಸ್ಥಿತಿಯಲ್ಲಿ ಆರ್ಥಿಕ ನಿರೂಪಣ ಪಟ್ಟಗಳ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.	ವಾಸ್ತವಿಕ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗಣನೆಗೆ ತೆಗೆದುಕೊಂಡಿರುವ ಹಿಂದಿನ ವರ್ಷದ ಜಮೆ/ಖರ್ಚುಗಳಲ್ಲಿ 2000–01 ರಿಂದ 2016–17ರ ಅವಧಿಯ ಮೊತ್ತಗಳು ಒಳಗೊಂಡಿರುತ್ತದೆ. ಸದರಿ ಮೊತ್ತದಲ್ಲಿ ಬಹುಭಾಗವು ಹಿಂದಿನ ವರ್ಷದಲ್ಲಿ ಕಡಿಮೆ ಲೆಕ್ಕಿಸಿದ ಸವಕಳಿ ಮೊತ್ತವನ್ನು ಬಿಂಬಿಸುತ್ತದೆ.ಆಡಳಿತ ಮಂಡಳಿಯು ನಿವ್ವಳ ಹಿಂದಿನ ವರ್ಷದ ಮೊತ್ತವು ಗಣನೀಯವಲ್ಲದ ಮೊತ್ತವೆಂದು ಪರಿಗಣಿಸಿದೆ.ಲೆಕ್ಕಪದ್ಧತಿ ನೀತಿಯ ಪ್ರಕಾರ, ಹಿಂದಿನ ಅವಧಿಯ ಮೊತ್ತಗಳು ಗಣನೀಯವಾಗಿದಲ್ಲಿ ಲೆಕ್ಕಗಳನ್ನು ಮರುಪ್ರಸ್ತುತ್ತಪಡಿಸಲಾಗುವುದು ಆದುದ್ದರಿಂದ ಹಿಂದಿನ ಅವಧಿಯ ಮೊತ್ತಗಳನ್ನು ಪ್ರಸಕ್ತ ವರ್ಷದ ಲೆಕ್ಕಗಳಲ್ಲಿ ಮ ರುಪ್ರಸ್ತುತ್ತಪಡಿಸಲಾಗಿರುವುದಿಲ್ಲ. ಆದಾಗ್ಯೂ, ಈ ಅವಲೋಕನವನ್ನು ಪರೀಕ್ಷಿಸಿ ಆರ್ಥಿಕ ವರ್ಷ 2018–19ರಲ್ಲಿ ಅನುಸರಿಸಲು ಕ್ರಮ ಕೈಗೊಳ್ಳಲಾಗುವುದು.
iii	ಟಿಪ್ಪಣಿ ಸಂಖ್ಯೆ:1.9; ಗಮನಾರ್ಹ ಲೆಕ್ಕ ಪದ್ಧತಿ ತತ್ವ ಮತ್ತು ಟಿಪ್ಪಣಿ ಸಂಖ್ಯೆ: 31.1; ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ (ಸಿ ಇ ಆರ್ ಸಿ) ಅಧಿಸೂಚನೆ ಸಂಖ್ಯೆ:L–1/144/2013/ CERC dated: 05.11.2015 ರನ್ವಯ ಫೈಬರ್ ಆಪ್ಟಿಕ್‌ಗಳನ್ನು ಪ್ರತ್ಯೇಕವಾಗಿ ಬಂಡವಾಳಕರಣಗೊಳಿಸಿ ಸವಕಳಿಯನ್ನು ನಿಗಧಿತ ಶೇಕಡ 6.33ರಷ್ಟು ಪರಿಗಣಿಸದೆ ಕೇವಲ ಶೇಕಡ 5.28 ರಷ್ಟು ಪರಿಗಣಿಸಿ ಸವಕಳಿಯನ್ನು ಲೆಕ್ಕಿಕರಿಸಲಾಗಿದೆ. ಇದರಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲೆ ಆಗುವ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಸಿ.ಇ.ಆರ್.ಸಿ ಅಧಿಸೂಚನೆಯನ್ವಯ, 12.12.2017 ರಂದು ಎಲ್ಲಾ ಲೆಕ್ಕ ಘಟಕಗಳಿಗೆ ಫೈಬರ್ ಆಪ್ಟಿಕ್ ಅನ್ನು ಗುರುತಿಸಿ ಮರುವರ್ಗೀಕರಿಸಲು ಹಾಗೂ ಪ್ರತ್ಯೇಕ ಲೆಕ್ಕ ಸಂಕೇತ ಖಾತೆಯಡಿ ಸವಕಳಿಯನ್ನು ಲೆಕ್ಕಿಸಲು ಸೂಚನೆಯನ್ನು ಈಗಾಗಲೇ ನೀಡಲಾಗಿದೆ. ಅದರಂತೆ 2017–18ನೇ ಸಾಲಿನಲ್ಲಿ ರೂ.33.49 ಕೋಟಿ ಮೊತ್ತದಷ್ಟು ಫೈಬರ್ ಆಪ್ಟಿಕ್ ಅನ್ನು ಗುರುತಿಸಿ ಪ್ರತ್ಯೇಕವಾಗಿಲೆಕ್ಕಿಸಲಾಗಿದೆ ಹಾಗೂ ಇನ್ನೂ ಫೈಬರ್ ಆಪ್ಟಿಕ್ ಅನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ.
iv	ಟಿಪ್ಪಣಿ ಸಂಖ್ಯೆ:1.9 (ಜಿ) ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳನ್ವಯ ಮತ್ತು ಟಿಪ್ಪಣಿ ಸಂಖ್ಯೆ:2(ಎ).1(ಬಿ) ಗಳನ್ವಯ ಬಿಡುಗಡೆಗೊಳಿಸಿದ ಆಸ್ತಿಗಳನ್ನು ಪುನರ್ ಉಪಯೋಗಿಸಿದಲ್ಲಿ ಸವಕಳಿಯನ್ನು ಪರಿಗಣಿಸುವಾಗ ನೂತನವಾಗಿ ಬಂಡವಾಳಕರಿಸಿದ ಆಸ್ತಿಗಳಿಗಿರುವಂತೆ ಮೂಲ ಬಾಳಿಕೆ ಅವಧಿಯನ್ನೇ ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಸದರಿ ನಿಯಮವು IND AS 16ರ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ಸವಕಳಿಗಳ ಬಗ್ಗೆ ನಿಗಧಿಪಡಿಸಿದಂತೆ ಪಾಲಿಸಲಾಗಿರುವುದಿಲ್ಲ. IND AS 16 ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ರನ್ವಯ ಬಿಡಿಗಡೆಗೊಳಿಸಿದ ಆಸ್ತಿಯನ್ನು ಮತ್ತೊಮ್ಮೆ ಬಂಡವಾಳಕರಿಸಿದಲ್ಲಿ ಉಳಿದ ಬಾಕಿ ವರ್ಷಗಳನ್ನು ಪರಿಗಣಿಸಿ ಬಿಡುಗಡೆಗೊಳಿಸಿದ ಆಸ್ತಿಗಳ ಮೇಲೆ ಸವಕಳಿಯನ್ನು ಪರಿಗಣಿಸಬೇಕಾಗಿರುತ್ತದೆ. ಸದರಿ ಬದಲಾವಣೆಯಿಂದ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಗಳ ಮೇಲೆ ಉಂಟಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಬಿಡುಗಡೆಗೊಳಿಸಿದ ಆಸ್ತಿಯನ್ನು ಪುನರ್ ಉಪಯೋಗಕ್ಕಾಗಿ ನೀಡಿದಲ್ಲಿ ಸದರಿಯ ಆಸ್ತಿ ಮೂಲ ಬೆಲೆಯನ್ನು ಹಾಗೂ ಸಂಚಿತ ಸವಕಳಿಯನ್ನು ಪ್ರತ್ಯೇಕವಾಗಿ ದಾಖಲಿಸಿ ಪರಿಗಣಿಸುವುದು ಪ್ರಾಯೋಗಿಕವಾಗಿ ಕಷ್ಟದ ವಿಷಯ.ಬಿಡುಗಡೆಗೊಳಿಸಿದ ಆಸ್ತಿಗಳ ವಿಷಯದಲ್ಲಿ ಮೂಲ ಬೆಲೆಯಿಂದ ಸಂಚಿತ ಸವಕಳಿಯನ್ನು ಕಡಿತಗೊಳಿಸಿ ತಗ್ಗಿಸಿದ ಬೆಲೆಯನ್ನು ಪರಿಗಣಿಸಿ ಲೆಕ್ಕಿಕರಿಸಲಾಗುತ್ತಿದ್ದು ಮತ್ತೊಮ್ಮೆ ಬಿಡುಗಡೆಗೊಳಿಸಿದ ಆಸ್ತಿಯನ್ನು ಬಂಡವಾಳೀಕರಿಸಿದಲ್ಲಿ ತಗ್ಗಿಸಿದ ಬೆಲೆಯನ್ನೇ ಪರಿಗಣಿಸಲಾಗುತ್ತಿದ್ದು ಸದರಿ ನಿಯಮವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾಲದಿಂದಲೂ ಪಾಲಿಸಲಾಗುತ್ತದೆ.

v	ಟಿಪ್ಪಣಿ ಸಂಖ್ಯೆ:1.10(ಡಿ); ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳಲ್ಲಿ ಸೂಚಿಸಿದಂತೆ ಮೇಲ್ವೀಚಾರಣ ಶುಲ್ಕ, ಪರೀಕ್ಷಾ ಶುಲ್ಕ, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು (Earth mat design charges) ಮಂಡಪ್ ಕೀಪರ್ ಶುಲ್ಕ (Mandap Keeper Charges) ಆದಾಯಗಳ ಗುರುತಿಸುವಿಕೆ ನಗದು ಆಧಾರದ ಮೇಲೆ ಲೆಕ್ಕೀಕರಿಸಲಾಗಿದ್ದು ಸದರಿ ಲೆಕ್ಕೀಕರಣವು ಕಂಪನಿಯ ಕಾಯ್ದೆ (ಭಾರತೀಯ ಲೆಕ್ಕ ವಿಧಾನ) ನಿಯಮ 2015ರ ಅಡಿಯಲ್ಲಿ ಬಿಡುಗಡೆ ಮಾಡಲಾದ IND AS -18 'ರೆವಿನ್ಯೂ' ರಲ್ಲಿ ನಿಗಧಿ ಪಡಿಸಿರುವುದನ್ನು ಪಾಲಿಸದ ಕಾರಣ ಲೆಕ್ಕ ಪತ್ರಗಳ ಮೇಲೆ ಬೀರಿರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಮೇಲ್ವೀಚಾರಣ ಶುಲ್ಕ, ಪರೀಕ್ಷಾ ಶುಲ್ಕ, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು (Earth mat design charges) ಮಂಡಪ್ ಕೀಪರ್ ಶುಲ್ಕಗಳನ್ನು (Mandap Keeper Charges) ಮೊದಲೇ ಸಂಗ್ರಹಿಸಲಾಗುತ್ತಿದ್ದು ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಮೇಲೆ ತಿಳಿಸಿದ ಸೇವೆಗಳನ್ನು ಅದೇ ಆರ್ಥಿಕ ವರ್ಷದಲ್ಲಿಯೇ ಪೂರ್ಣಗೊಳಿಸಲಾಗುತ್ತಿದೆ.
vi	ಟಿಪ್ಪಣಿ ಸಂಖ್ಯೆ: 1.15: ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳು ಸಾಲಗಳ ವೆಚ್ಚ (Borrowing Cost) ಬಂಡವಾಳೀಕರಿಸುವ ನಿಯಮವನ್ನು ಸರಾಸರಿ ತೂಕದ ವಿಧಾನ (Weighted Average) ಆಧಾರದ ಮೇಲೆ ಕಂಪನಿಯು ಪರಿಗಣಿಸಿರುತ್ತದೆ. ಹಾಗೂ ಪರಿಣಾಮಕಾರಿ ಬಡ್ಡಿ ದರದ ವಿಧಾನ (Effective Interest Rate Method) ವನ್ನು ಅಳವಡಿಸಿಕೊಳ್ಳದಿರುವುದು IND AS - 23, (ಭಾರತೀಯ ಲೆಕ್ಕ ವಿಧಾನ) 2015 ರನ್ವಯ ಸಮಂಜಸವಾಗಿರುವುದಿಲ್ಲ. ಆದ ಕಾರಣ ಅದರಿಂದಾಗುವ ಪರಿಣಾಮವನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಮತ್ತು ಅವುಗಳ ಮೇಲಿನ ಸವಕಳಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಕವಿಪ್ರನಿನಿಯು ಸಾಲಗಳ ವೆಚ್ಚವನ್ನು ಬಂಡವಾಳೀಕರಣಗೊಳಿಸುವಲ್ಲಿ IND–AS 23 ರಲ್ಲಿ ತಿಳಿಯ ಪಡಿಸಿರುವ ನಿಯಮಗಳನ್ವಯ ಪಾಲಿಸುತ್ತಿದ್ದು ಸದರಿ ವಿಧಾನದಲ್ಲಿ ತಿದ್ದುಪಡಿಯ ಅವಶ್ಯಕತೆ ಇದ್ದಲ್ಲಿ ಸೂಕ್ತವಾಗಿ ಪರಿಶೀಲಿಸಿ ಅದರಂತೆ ಕ್ರಮ ಕೈಗೊಳ್ಳಲಾಗುವುದು.
vii	ಕಂಪನಿಯು IND AS ಅನ್ವಯ ಲೆಕ್ಕೀಕರಣ/ಲೆಕ್ಕ ಪತ್ರಗಳ ಪ್ರಸ್ತುತಿ/ ಪುನರ್ ಸ್ಥಾಪನೆ/ಪೂರ್ಣ ಪ್ರಕಟಣೆಯಲ್ಲಿ ಈ ಕೆಳಕಂಡ IND AS ನಿಯಮಗಳನ್ನು ಅನುಸರಿಸಿರುವುದಿಲ್ಲ. ಅ) ಇತರೆ ಸಮಗ್ರ ಆದಾಯ ಗುರುತಿಸುವಿಕೆ ಮತ್ತು ಪುನರ್ ಸ್ಥಾಪನೆ. ಆ) ರಿಯಾಯಿತಿ ದರದಲ್ಲಿ ಹಾಗೂ ಉಚಿತ ದರದಲ್ಲಿ ಖರೀದಿಸಿದ ಜಮೀನಿನ ನ್ಯಾಯಯುತ ಮೌಲ್ಯವನ್ನು ಲೆಕ್ಕಿಕರಿಸುವ ಬಗ್ಗೆ – IND AS –20. ಇ) ಗ್ರಾಹಕರ ಕೊಡುಗೆ ಕಾಮಗಾರಿಗಳ, ಆದಾಯದ ಮತ್ತು ಪಿಪಿಇ ಯನ್ನು ಗುರುತಿಸುವ ಬಗ್ಗೆ. ಅನುಬಂಧ– ಸಿ IND AS –18 . ಈ) IND AS ಪ್ರಕಾರ ಆರ್ಥಿಕ ವರ್ಷ 2015–16 ರ ಲೆಕ್ಕ ಪತ್ರಗಳಲ್ಲಿ ಮುಂದೂಡಿದ ತೆರಿಗೆ ಹೊಣೆ ಪರಿಗಣಿಸದ ಕಾರಣ ಆರ್ಥಿಕ ವರ್ಷ 2016–17 ರ ಲೆಕ್ಕ ಪತ್ರಗಳ ಮೇಲೆ ಬೀರುವ ಪ್ರಭಾವ. ಉ) ಪರಿಣಾಮಕಾರಿ ಬಡ್ಡಿ ದರದ ವಿಧಾನ (Effective Interest Rate Method) ವನ್ನು ಬಡ್ಡಿ ವೆಚ್ಚ/ ಆದಾಯವನ್ನು ಅಳವಡಿಸಿಕೊಂಡಿರುವುದಿಲ್ಲ. ಊ) ಹಣಕಾಸಿನಸ್ವತ್ತುಗಳು/ಹೊಣೆಗರಿಕೆಗಳನ್ನು ಪ್ರಸ್ತುತ ಮೌಲ್ಯಾದಲ್ಲಿ ಬಿಂಬಿಸುವುದು. ಋ) ನಗದು ಹರಿವಿನ ಪಟ್ಟಿಯನ್ನು IND AS ನಿಯಮಗಳನ್ವಯ ಬಿಂಬಿಸುವುದು.	ಅ) ರಿಂದ ಋ) ವರೆಗೆ ವಾಸ್ತವಿಕ, ಈ ಅವಲೋಕನವನ್ನು ಪರೀಕ್ಷಿಸಿ, ಅನುಸರಿಸಲು ಕ್ರಮ ಕೈಗೊಳ್ಳಲಾಗುವುದು.

viii	ಟಿಪ್ಪಣಿ ಸಂಖ್ಯೆ: 1.17 ಗಮನಾರ್ಹ ಲೆಕ್ಕ ಪದ್ಧತಿ ತತ್ವ ಹಾಗೂ ಟಿಪ್ಪಣಿ ಸಂಖ್ಯೆ: 37.7ರಂತೆ ಆಸ್ತಿಗಳ ದುರ್ಬಲತೆ ನಷ್ಟ (Impairment of Assets) ಕುರಿತು, ಕಂಪನಿಯಲ್ಲಿ ಯಾವುದೇ ದಾಖಲಾತಿಗಳನ್ನು ಅಳವಡಿಸಿಕೊಳ್ಳದೇ ಇರುವುದರಿಂದ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015 ಲೆಕ್ಕ ಪರಿಶೋಧಕ ನೀತಿಗಳನ್ವಯ ಹೊರಡಿಸುವ IND AS 36 ರಲ್ಲಿರುವಂತೆ ಆಸ್ತಿಗಳ ದುರ್ಬಲ ನಷ್ಟ ಕುರಿತು ನಿಗಧಿ ಪಡಿಸಿದಂತೆ ಕಂಪನಿಯಲ್ಲಿ ಆಸ್ತಿಗಳ ದುರ್ಬಲತೆ ನಷ್ಟ ಪರೀಕ್ಷೆಗೆ ತಾಂತ್ರಿಕ ಮೌಲ್ಯಮಾಪನಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಒದಗಿಸದೇ ಇರುವ ಕಾರಣ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ.	ಕವಿಪ್ರನಿನಿಯ ಪ್ರಮುಖ ವ್ಯವಹಾರವು ವಿದ್ಯುಚ್ಛಕ್ತಿಯ ಪ್ರಸರಣ ಚಟುವಟಿಕೆಯಾಗಿರುತ್ತದೆ. ಪ್ರಸರಣ ಕಾರ್ಯವನ್ನು ನಿರ್ವಹಿಸಲು ಉಪಕರಣಗಳು ವರ್ಷಪೂರ್ತಿ ಉತ್ತಮ ಸ್ಥಿತಿಯಲ್ಲಿ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಆಸ್ತಿಗಳ ದುರ್ಬಲತೆ ನಷ್ಟದ ಕುರಿತು ನಿಯಮವನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಕಂಡುಬರುವುದಿಲ್ಲ
ix	ಟಿಪ್ಪಣಿ ಸಂಖ್ಯೆ:2.1; ಗುತ್ತಿಗೆ ಆಧಾರದ ಮೇಲಿರುವ ಭೂಮಿ ಮತ್ತು ಮಾಲಿಕತ್ವ ಆಧಾರಿತ ಭೂಮಿ ಎಂದು ವರ್ಗಿಕರಿಸಿ ಸಮನ್ವಯಗೊಳಿಸುವುದು ಬಾಕಿ ಇರುವ ಕಾರಣ ಆರ್ಥಿಕ ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಭೂ ದಾಖಲೆಗಳ ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆಯುವುದರ ಮೂಲಕ ಉಚಿತವಾಗಿ ಪಡೆದ ಭೂಮಿಯನ್ನು ಮತ್ತು ಗುತ್ತಿಗೆ ಆಧಾರದ ಮೇಲೆ ಪಡೆದ ಭೂಮಿಯನ್ನು ಸರಿಯಾಗಿ ವರ್ಗೀಕರಿಸಲು 20.01.2018ರಂದು ಎಲ್ಲಾ ಲೆಕ್ಕ ಘಟಕಗಳಿಗೆ ಹಾಗೂ ಸಿವಿಲ್ ಶಾಖೆಗೆ ಸೂಚನೆಯನ್ನು ನೀಡಲಾಗಿರುತ್ತದೆ. ಅದರಂತೆ ಬಹುತೇಕ ಲೆಕ್ಕ ಘಟಕಗಳು ಭೂ ದಾಖಲೆಗಳನ್ನು ಸಂಗ್ರಹಿಸಿ ತಪ್ಪು ವರ್ಗೀಕರಣವನ್ನು ಸರಿಪಡಿಸಲಾಗಿದೆ. ಹಳೆಯ ಭೂ ದಾಖಲೆಗಳ ಹುಡುಕಾಟದ ಪ್ರಯತ್ನದಲ್ಲಿದ್ದು ಹಾಗೂ ತಪ್ಪು ವರ್ಗೀರಣ ಏನಾದರೂ ಇದ್ದಲ್ಲಿ ಸರಿಪಡಿಸಲಾಗುವುದು.
x	ಟಿಪ್ಪಣಿ ಸಂಖ್ಯೆ:2.2 (ಎಚ್) ಮತ್ತು 37.18 ರಲ್ಲಿ ಸೂಚಿಸಿದಂತೆ ಸರ್ಕಾರದಿಂದ ಕಡಿತ ದರದಲ್ಲಿ ಪಡೆದ ಭೂಮಿ ಹಾಗೂ ಇತರೆ ಗ್ರಾಹಕರಿಂದ ಉಚಿತ/ಕಡಿತ ದರದಲ್ಲಿ ಪಡೆದ ಭೂಮಿಯನ್ನು ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕೀಕರಿಸಿ ಬಹಿರಂಗಪಡಿಸುವಿಕೆಯು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, 20 ರಡಿಯಲ್ಲಿ ಸೂಚಿಸಲಾದ (IND AS - 20 Accounting for Government Grants and Disclosure of Government Assistance) ವಿಧಾನದಲ್ಲಿ ಲೆಕ್ಕೀಕರಿಸಿರುವುದಿಲ್ಲ ಈ ಕಾರಣದಿಂದಾಗಿ ಅನುಬಂಧ–IND AS -18ರಂತೆ ಕಂದಾಯದ ಪಿ.ಪಿ.ಇ, ಅನುದಾನ, ಋಣಮುಕ್ತತೆ, ಗ್ರಾಹಕ ಕೊಡುಗೆ ಹಾಗೂ ಇತರೆ ಆದಾಯದ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಕವಿಪ್ರನಿನಿಯ ಉಪ ಕೇಂದ್ರಗಳ ನಿರ್ಮಾಣದ ಕೆಲವು ಪ್ರಕರಣಗಳಲ್ಲಿ ಕರ್ನಾಟಕ ಸರ್ಕಾರವು ಭೂಮಿಯನ್ನು ರಿಯಾಯಿತಿ ದರದಲ್ಲಿ ನೀಡಿದೆ. ಅಂತಹ ಭೂಮಿಯ ಮೊತ್ತವನ್ನು ಕವಿಪ್ರನಿನಿಯು ಖರೀದಿಸಿದ ಬೆಲೆಯಲ್ಲಿಯೇ ಲೆಕ್ಕಪುಸ್ತಕಗಳಲ್ಲಿ ಲೆಕ್ಕಿಕರಿಸಲಾಗಿದೆ. ಕರ್ನಾಟಕ ಸರ್ಕಾರವು ಯಾವುದೇ ಅನುದಾನವನ್ನು ಕವಿಪ್ರನಿನಿಗೆ ಬಿಡುಗಡೆ ಮಾಡಿತಿಲ್ಲವಾದರಿಂದ ರಿಯಾಯಿತಿ ಮೌಲ್ಯವನ್ನು ಅನುದಾನವೆಂದು ಗಣನೆಗೆ ತೆಗೆದುಕೊಳ್ಳಲು ಸೂಕ್ತವಾಗಿರುವುದಿಲ್ಲ. ಕರ್ನಾಟಕ ಸರ್ಕಾರದಿಂದ ಸ್ವೀಕೃತಿಯಾದ ಅನುದಾನವೆಂದು ಲೆಕ್ಕಿಸುವುದರಿಂದ ಕವಿಪ್ರನಿನಿಯ ಲೆಕ್ಕ ಪುಸ್ತಕದಲ್ಲಿ ತಪ್ಪು ಚಿತ್ರಣ ಬಿಂಬಿಸಿದಂತಾಗುತ್ತದೆ. IND AS-20 ಕಂಡಿಕೆ – 3ರಲ್ಲಿ ಸಂಪನ್ಮೂಲವನ್ನು ಸರ್ಕಾರದಿಂದ ಘಟಕಗಳಿಗೆ ಬಿಡುಗಡೆಗೊಳಿಸ ಬೇಕಾಗಿರುತ್ತದೆ. ಆದುದರಿಮದ ರಿಯಾಯಿತಿ ದರದಲ್ಲಿ ಹುಚಿಕೆ ಮಾಡಿದ ಭೂಮಿಯ ಮೌಲ್ಯವೆಂದು ಬಿಡುಗಡೆಗೊಳಿಸಿದ ಸಂಪನ್ಮೂಲವೆಂದು ಲೆಕ್ಕಿಸಲು ಪರಿಶೀಲಿಸಬೇಕಾಗಿರುತ್ತದೆ.ಸದರಿ ಕಂಡಿಕೆಯಲ್ಲಿ ಆಸ್ತಿಗಳಿಗೆ ಸಂಬಂಧಿಸಿದ ಅನುದಾನವನ್ನು ಸರ್ಕಾರದ ಅನುದಾನವೆಂದು ಪರಿಗಣಿಸಲು ಹಾಗೂ ಇದಕ್ಕೆ ಅರ್ಹತೆ ಹೊಂದಲು, ಖರೀದಿ ಮಾಡುವುದು, ನಿರ್ಮಾಣ ಮಾಡುವುದು ಅಥವಾ ಧೀರ್ಘ ಅವಧಿಯ ಆಸ್ತಿಗಳನ್ನು ಸ್ವಾಧಿನಪಡಿಸಿಕೊಳ್ಳುವುದು ಪ್ರಾಥಮಿಕ ಷರತ್ತಾಗಿರುತ್ತದೆ. ಕವಿಪ್ರನಿನಿಯು ಇದುವರೆಗೂ ಯಾವುದೇ ಅನುದಾನವನ್ನು ಸ್ವೀಕರಿಸಿರುವುದಿಲ್ಲ. ಅದುದರಿಂದ ಖರೀದಿ ಮಾಡುವ, ನಿರ್ಮಾಣ ಮಾಡುವ ಅಥವಾ ದೀರ್ಘ ಅವಧಿಯ ಆಸ್ತಿಗಳನ್ನು ಸ್ವಾಧಿನಪಡಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

		IND AS - 20 ಕಂಡಿಕೆ–23 ಪ್ರಕಾರ ಸರ್ಕಾರದ ಅನುದಾನವು ಭೂಮಿ ಅಥವಾ ಇತರೆ ಸಂಪ್ಮೂಲಗಳಂತಹ ವಿತ್ತೀಯವಲ್ಲದ ಆಸ್ತಿಯ ವರ್ಗಾವಣೆಯ ರೂಪವನ್ನು ಒಂದು ಘಟಕದ ಉಪಯೋಗಕ್ಕಾಗಿ ಪಡೆದುಕೊಳ್ಳುತ್ತದೆ. ಈ ಸಂದರ್ಭಗಳಲ್ಲಿ, ವಿತ್ತೀಯವಲ್ಲದ ಆಸ್ತಿಯ ನ್ಯಾಯೋಚಿತ ಮೌಲ್ಯವನ್ನು ಗೊತ್ತುಪಡಿಸಿಕೊಂಡು, ಅನುದಾನವನ್ನು ಮತ್ತು ಆಸ್ತಿಯನ್ನು ಗೊತ್ತುಪಡಿಸಿಕೊಂಡ ನ್ಯಾಯೋಚಿತ ಬೆಲೆಯಲ್ಲಿ ಲೆಕ್ಕೆಕರಿಸಲಾಗಿದೆ. ಕರ್ನಾಟಕ ಸರ್ಕಾರವು ರಿಯಾಯಿತಿ ದರದಲ್ಲಿ ಭೂಮಿಯನ್ನು ಹಂಚಿಕೆ ಮಾಡಿರುವುದರಿಂದ, ಕವಿಪ್ರನಿನಿಯು ಸದರಿ ಭೂಮಿಯ ಮೌಲ್ಯವನ್ನು ಪಾವಿತಿಸಿದ್ದು, ಈ ವಹಿವಾಟನ್ನು ವಿತ್ತೀಯವಲ್ಲದ ಆಸ್ತಿಯ ವರ್ಗಾವಣೆ ಎಂದು ನಿರ್ಬಂಧಿಸಲು ಸಾಧ್ಯವಿಲ್ಲ. ಅದಾಗ್ಯೂ, ಸದರಿ ಅವಲೋಕನವನ್ನು ಪರಿಶೀಲಿಸಿ ಅವಶ್ಯವಿದ್ದಲ್ಲಿ ಆರ್ಥಿಕ ವರ್ಷ 2018–19ರಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
xi	ಟಿಪ್ಪಣಿ ಸಂಖ್ಯೆ:2.4 (ಸಿ) ಮತ್ತು 3.6 ರಲ್ಲಿ ಸೂಚಿಸಿದಂತೆ ಕಂಪನಿಯು ಅಂದಾಜಿಸಿದಂತೆ ರೂ.2652.86 ಲಕ್ಷಗಳಷ್ಟು ನಿರಂತರ ಜ್ಯೋತಿ ಯೋಜನೆ (NJY) ಅಡಿಯಲ್ಲಿ ಖರ್ಚು ಮಾಡಲಾಗಿದ್ದು ಸದರಿ ಖರ್ಚನ್ನು ಕಂಪನಿಯು ಆಸ್ತಿ ಸ್ಥಾವರ ಮತ್ತು ಉಪಕರಣಗಳು ಹಾಗೂ ಬಂಡವಾಳ ಕಾಮಗಾರಿ ವೆಚ್ಚಗಳಲ್ಲಿ ಲೆಕ್ಕೀಕರಿಸಿದೆ ಆದರೆ ಸದರಿ ಖರ್ಚನ್ನು ಎಸ್ಕಾಂಗಳಿಂದ ಪಡೆಯುವುದು ಬಾಕಿ ಇರುತ್ತದೆ. ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದೆ ಇರುವುದರಿಂದ ನಾವು ಹಣಕಾಸಿನ ಹೇಳಿಕೆಗಳ ಮೇಲೆ ಅದರಿಂದಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ.	ಸದರಿ ಅವಲೋಕನವನ್ನು ಪರಿಶೀಲಿಸಿ, ಎನ್. ಜೆ.ವೈ ಕಾಮಗಾರಿಗಳಿಗೆ ವೆಚ್ಚವಾಗಿರುವ ಮೌಲ್ಯವನ್ನು ಸಂಬಂಧಪಟ್ಟ ಎಸ್ಕಾಂಗಳಿಂದ ಸ್ವೀಕರಿಸುವಂತಹ ಮೊತ್ತವೆಂದು ಲೆಕ್ಕಿಸಲು ಸೂಕ್ತ ನಿರ್ದೇಶನವನ್ನು ನೀಡಲಾಗುವುದು.
xii	ಟಿಪ್ಪಣಿ ಸಂಖ್ಯೆ :2.4 (ಇ), 3.1, 26.4, 26.1 (i) ಮತ್ತು 37.18 ರಲ್ಲಿ ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡ ಸ್ವ ಕಾಮಗಾರಿಗಳ (SEW)ಕುರಿತು ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದ ಕಾರಣ ಇದರ ಕುರಿತು ಸಂಪೂರ್ಣತೆಯನ್ನು ಮತ್ತು ಸರಿಯಾಗಿರುವಿಕೆಯನ್ನು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಪೂರ್ಣಗೊಂಡ ಸ್ವ ಕಾಮಗಾರಿಗಳನ್ನು ನ್ಯಾಯಸಮ್ಮತ ಮೌಲ್ಯದಲ್ಲಿ ಬಂಡವಾಳಕರಿಸಿರುವುದಿಲ್ಲ, ಪೂರ್ಣಗೊಂಡ ಸ್ವ ಕಾಮಗಾರಿಗಳನ್ನು ಋಣಮುಕ್ತತೆ (Amortization) ಮಾಡುವಲ್ಲಿ ಒಪ್ಪಂದದ ಅವಧಿಯ ಬದಲಾಗಿ ಉಪಯುಕ್ತ ಜೀವನಾಧಾರದಲ್ಲಿ ಋಣಮುಕ್ತತೆಯನ್ನು ಮಾಡಲಾಗಿರುತ್ತದೆ. ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ (IPP) ಮೂಲ ಸೌಕರ್ಯ ವೆಚ್ಚವನ್ನು (Infrastructure Charges), ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಭೂಮಿಯನ್ನು ನೀಡಲು ಪಡೆಯಲಾಗುತ್ತಿರುವ ಒಂದು ಬಾರಿ ಹಿಂದಿರುಗಿಸದ ಠೇವಣಿ (One Time Non-Refundable Deposit) ಕುರಿತು ನಿಖರವಾದ ವಿಧಾನದ ಅನುಪಸ್ಥಿತಿಯಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣ (ಪಿಪಿಇ), ಹೊಣೆಗಾರಿಕೆ, ,ಸ್ವೀಕೃತಿ, ಕಂದಾಯಗಳ ಮೇಲೆ ಅದರಿಂದಾಗುವ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ. ಮುಂದುವರೆದು, ಕಂಪನಿಯು ರೂ.35415.67 ಲಕ್ಷಗಳಷ್ಟು ಸ್ವ ಕಾಮಗಾರಿಗಳನ್ನು ಬಂಡವಾಳಕರಿಸಿರುವುದಿಲ್ಲವೆಂದು ನಮ್ಮ ಲೆಕ್ಕ ಪರಿಶೋಧನೆಯ ಮೂಲಕ ಗುರುತಿಸಲಾಗಿದ್ದು ಸದರಿ ಪರಿಣಾಮದಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣ (ಪಿಪಿಇ) ಹೊಣೆಗಾರಿಕೆ, ಸ್ವೀಕೃತಿ, ಕಂದಾಯಗಳ ಮೇಲೆ ಬೀರುವ ಪರಿಣಾಮವನ್ನು ಖಚಿತಪಡಿಸಿ ಕೊಳ್ಳಲಾಗಿರುವುದಿಲ್ಲ.	ಗ್ರಾಹಕರು ನಿಗಮದ ಅನುಮತಿ ಪಡೆದು ಸ್ವಯಂ ಕಾರ್ಯ ನಿರ್ವಹಣೆ ಕಾಮಗಾರಿಗಳನ್ನು ಸ್ವಯಂ ನಿರ್ವಹಿಸಿ, ಕಾಮಗಾರಿ ಕಾರ್ಯಾರಂಭಗೊಂಡ ನಂತರ ಜಂಟಿ ದಾಸ್ತಾನು ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ನಿಗಮಕ್ಕೆ ಆಸ್ತಿಯನ್ನು ಹಸ್ತಾಂತರಿಸಲಾಗುತ್ತದೆ. ಕೆಲವು ಪ್ರಕರಣಗಳಲ್ಲಿ,ಸ್ವಯಂ ಕಾರ್ಯ ನಿರ್ವಹಣೆ ಕಾಮಗಾರಿಗಳಿಂದ ರಚಿಸಲ್ಪಟ್ಟ ಆಸ್ತಿಗಳ ಜಂಟಿ ದಾಸ್ತಾನು ಪ್ರಕ್ರಿಯೆಯು ಬಾಕಿ ಇರುವುದರಿಂದ ಸದರಿ ಆಸ್ತಗಳನ್ನು ಕ.ವಿ.ಪ್ರ.ನಿ.ನಿ ಯ ಆಸ್ತಿಗಳಲ್ಲಿ ಲೆಕ್ಕಿಕರಿಸಿರುವುದಿಲ್ಲ, ಸದರಿ ಆಸ್ತಿಗಳನ್ನು ಆರ್ಥಿಕ ವರ್ಷ 2018–19ರಲ್ಲಿ ಅವಶ್ಯವಿರುವ ಸೂಕ್ತ ಪ್ರಕ್ರಿಯೆಗೊಳ್ಳಪಡಿಸಿ ಕ.ವಿ.ಪ್ರ.ನಿ.ನಿ ಲೆಕ್ಕಗಳಲ್ಲಿ ಲೆಕ್ಕಿಕರಿಸಲಾಗುವುದು. ಸ್ವಯಂ ಕಾರ್ಯ ನಿರ್ವಹಣೆ ಕಾಮಗಾರಿಗಳಿಂದ ರಚಿಸಲ್ಪಟ್ಟ ಆಸ್ತಿಗಳ ಋಣಮುಕ್ತತೆಗೊಳಿಸುವುದನ್ನು ಪರೀಕ್ಷಿಸಿ, ಅದಕ್ಕನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು. ಕ.ವಿ.ಪ್ರ.ನಿ.ನಿ ಯ ಅಸ್ತಿತ್ವದಲ್ಲಿರುವ ಮೂಲ ಭೂತ ಸೌಕರ್ಯಗಳನ್ನು ಐ.ಪಿ.ಪಿ.ಗಳಿಗೆ ಬಳಸಿಕೊಳ್ಳುವಂತಹ ಪ್ರಕರಣಗಳಲ್ಲಿ, ಮೂಲ ಭೂತ ವೆಚ್ಚಗಳ ವಸೂಲಾತಿಯ ಲೆಕ್ಕಾಚಾರಕ್ಕೆ ಸಂಬಂಧಿಸಿದ ನಿರ್ದೇಶನಗಳನ್ನು ನೀಡಲಾಗುವುದು. ಪ್ರಸಕ್ತ ವರ್ಷ 2017–18 ರಲ್ಲಿ ಮರುಪಾವತಿಸಲಾಗದ ಒಂದು ಬಾರಿ ಪಡೆದುಕೊಳ್ಳುವ ಠೇವಣಿಗಳಾದ ರೂ. 26.47 ಕೋಟಿಗಳಷ್ಟು ಮೊತ್ತವನ್ನು ಆದಾಯವೆಂದು ಲೆಕ್ಕೀಕರಿಸಲಾಗಿದೆ.

xiii	ಟಿಪ್ಪಣಿ ಸಂಖ್ಯೆ: 2.5 (ಎ) ಸ್ಥಿರಾಸ್ತಿ ಪುಸ್ತಕದ ಸಮನ್ವಯ ಬಾಕಿ ಇರುವುದರಿಂದ ಬಿಡುಗಡೆ ಮಾಡಲ್ಪಟ್ಟ ಸ್ವತ್ತುಗಳನ್ನು ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆ ಮಾಡುವಾಗ ಸಾಗಿಸುವ ಮೌಲ್ಯವನ್ನು ಪರಿಗಣಿಸುವಾಗ ಕಳಚಿದ ಆಸ್ತಿಗಳ, ಆಸ್ತಿಗಳ ಮಾರಾಟ ಇವುಗಳಿಗೆ ಇಳಿಸಿದ ಆಸ್ತಿ ಮೌಲ್ಯ (ಮೂಲ ಬೆಲೆ– ಸಂಚಿತ ಸವಕಳಿ) ಗುರುತಿಸಲಾಗುವುದಿಲ್ಲ. ಪದ್ಧತಿಯು ಹಂಗಾಮಿ (Adhoc) ಪದ್ಧತಿಯಾಗಿರುತ್ತದೆ. ಮಾಹಿತಿಯ ಅನುಪಸ್ಥಿತಿಯಲ್ಲಿ ಪಿಪಿಇ, ಮಾರಟಕ್ಕಿರುವ ಆಸ್ತಿ, ಸವಕಳಿ ಇವುಗಳ ಮೇಲೆ ಬೀರಿರುವ ಲಾಭ/ನಷ್ಟಗಳಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.	ಬಹುತೇಕ ಪ್ರಕರಣಗಳಲ್ಲಿ, ಆಸ್ತಿಯ ಅಂಶಗಳ ಮೌಲ್ಯವನ್ನು ಸ್ಥಿರ ಆಸ್ತಿ ದಾಖಲಾತಿಗಳ ಆಧಾರದ ಮೇಲೆ ಗುರುತಿಸಲಾಗುತ್ತದೆ. ಅದಾಗ್ಯೂ, ಆಸ್ತಿಗಳ ನೈಜ್ಯವಾದ ಮೌಲ್ಯಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಸುಗಮಗೊಳಿಸಲು ಮತ್ತು ಸರಾಗಗೊಳಿಸುವ ಸಲುವಾಗಿ, ಆಸ್ತಿಗಳನ್ನು ಪ್ರತ್ಯೇಕಿಸಿ ಮತ್ತು ಹೊಸ ಲೆಕ್ಕ ಶೀರ್ಷಿಕೆಗಳನ್ನು ನಿಗದಿಪಡಿಸಿ ಅದರಂತೆ ಆಸ್ತಿಗಳನ್ನು ಬೇರ್ಪಡಿಸಲು ದಿನಾಂಕ 03.02.2018ರಂದು ಲೆಕ್ಕ ಘಟಕಗಳಿಗೆ ಸೂಚನೆ ನೀಡಲಾಗಿರುತ್ತದೆ. ಅಸ್ತಿತ್ವದಲ್ಲಿರುವ ಸ್ವತ್ತಗಳನ್ನು ಸೂತ್ರೋಲೆಯ ಅನುಗುಣವಾಗಿ ಆಸ್ತಿಗಳನ್ನು ಮರುವಿಂಗಡಿಸುವ ಕಾರ್ಯದಲ್ಲಿದ್ದು 2018–19ರಲ್ಲಿ ಪೂರ್ಣಗೊಳಿಸಲಾಗುವುದು.
xiv	ಟಿಪ್ಪಣಿ ಸಂಖ್ಯೆ: 2.5 (ಸಿ), 3.1, 3.2 ಮತ್ತು 3.3; ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಮಾಲಿಕತ್ವ, ದಾಖಲಾತಿಕರಣ, ಭೌತಿಕ ನಿಯಂತ್ರಣಗಳು, ಗುತ್ತಿಗೆದಾರರಿಗೆ ಪ್ರೋತ್ಸಾಹ ಧನಕ್ಕೆ ಹವಣಿಕೆ ಮಾಡದಿರುವುದು, ನಿರ್ಮಾಣ ವೆಚ್ಚ, ಕಾಮಗಾರಿ ವೆಚ್ಚ, ಅನುಪಾತವಾರು ಬಂಡವಾಳೀಕರಣ, ಸಿಬ್ಬಂದಿ ವೆಚ್ಚಗಳು, ಆಡಳಿತಾತ್ಮಕ ವೆಚ್ಚಗಳು, ಮತ್ತು ಇತರೆ ಸಾಮಾನ್ಯ ಮೇಲು ವೆಚ್ಚಗಳು, ಎರವಲು ವೆಚ್ಚಗಳು, ಹಾಗೂ ಮೇಲ್ವಿಚಾರಣ ಶುಲ್ಕ, ಸ್ವ–ಕಾಮಗಾರಿಗಳ ಮೇಲೆ ವಸೂಲಿ ಮಾಡಲಾದ ಮೇಲ್ವಿಚಾರಣ ಶುಲ್ಕಗಳ ಸೂಕ್ತ ಅನುಪಾತದಲ್ಲಿ ಬಂಡವಾಳೀಕರಣ ಕಾರ್ಯ ವಿಮುಕ್ತಿ ವೆಚ್ಚವನ್ನು ಪ್ರಸ್ತುತ ಮೌಲ್ಯದ ಆಧಾರದ ಅನ್ವಯ ಅಂದಾಜು ಮಾಡಿ 'ಪ್ರಾರಂಭಿಕ ಹಂತದಲ್ಲಿ ಬಂಡವಾಳೀಕರಣಗೊಳಿಸುವುದು ಹಾಗೂ ಸರಿಯಾದ ದಿನಾಂಕದ ಆಧಾರದ ಮೇಲೆ ಬಂಡವಾಳೀಕರಣ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015 ನಿಯಮಗಳಡಿಯಲ್ಲಿ ಹೊರಡಿಸಿರುವ IND AS 16 ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ರನ್ವಯ ನಿಗದಿಪಡಿಸಿರುವುದನ್ನು ಪಾಲಿಸಲಾಗಿರುವುದಿಲ್ಲ. ಹಾಗಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ಹಾಗೂ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ)ಗಳನ್ನು ಲೆಕ್ಕೀಕರಿಸುವ ವಿಧಾನ ಇದರಿಂದಾಗಿ ಪ್ರಗತಿಯಲ್ಲಿರುವ ಬಂಡವಾಳಕಾಮಾಗಾರಿಗಳು, ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ)ಗಳು ಮತ್ತು ಸವಕಳಿಗಳ ಮೇಲೆ ಉಂಟಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಆರ್ಥಿಕ ವರ್ಷ 2017–18ನೇ ಸಾಲಿನಲ್ಲಿ ಎಲ್ಲಾ ಲೆಕ್ಕ ಘಟಕಗಳಿಗೆ ನಿರ್ಮಾಣ ವೆಚ್ಚ, ಕಾಮಗಾರಿ ವೆಚ್ಚಗಳನ್ನು, ಬಂಡವಾಳೀಕರಣ ಮಾಡುವ ಕುರಿತು ಮತ್ತು ಸಿಬ್ಬಂದಿ ವೆಚ್ಚಗಳು, ಆಡಳಿತಾತ್ಮಕ ವೆಚ್ಚಗಳು, ಮತ್ತು ಇತರೆ ಸಾಮಾನ್ಯ ಮೇಲು ವೆಚ್ಚಗಳು, ಸಾಲಗಳ ವೆಚ್ಚಗಳನ್ನು ಹಂಚಿಕೆ ಮಾಡುವ ಬಗ್ಗೆ ಸುತ್ತೋಲೆಯನ್ನು ದಿನಾಂಕ 08.02.2018ರಂದು ಹೊರಡಿಸಲಾಗಿದ್ದು, ಆರ್ಥಿಕ ವರ್ಷ 2017–18ರಲ್ಲಿ ಜಾರಿಗೊಳಿಸಲಾಗಿದೆ.ವಾಸ್ತವಿಕ ದಿನಾಂಕಂದು ಬಂಡವಾಳೀಕರಿಸುವ ಕುರಿತು ದಿನಾಂಕ: 16.08.2018 ಮಾರ್ಗದರ್ಶನ ನೀಡಲಾಗಿದ್ದು ಅದರಂತೆ ಆಸ್ತಿಗಳನ್ನು ಲೆಕ್ಕಿರಿಸಲಾಗಿದೆ. ಹಾಗೂ ಮೇಲ್ವಿಚಾರಣ ಶುಲ್ಕ, ಸ್ವಂತ ವೆಚ್ಚ ಕಾಮಗಾರಿಗಳ ಮೇಲ್ವಿಚಾರಣ ಶುಲ್ಕಗಳನ್ನು ಅನುಪಾತದಲ್ಲಿ ಬಂಡವಾಳೀಕರಣ ಮಾಡುವ ಬಗ್ಗೆ ಪರಿಶೀಲಿಸಿ ಆರ್ಥಿಕ ವರ್ಷ 2018–19ರಲ್ಲಿ ಕ್ರಮಕೈಗೊಳ್ಳಲಾಗುವುದು. 2014–15ರಲ್ಲಿ ಪರಿಚಯಿಸಲಾಗಿರುವ ಟೆಂಡರ್‌ಗಳಲ್ಲಿ ಪ್ರೋತ್ಸಾಹ ಧನದ ಬಗ್ಗೆ ಷರತ್ತುಗಳಿದ್ದು ಸದರಿ ಷರತ್ತುಗಳನ್ನು ಏಪ್ರಿಲ್–2017ರ ನಂತರದಲ್ಲಿ ಪರಿಚಯಿಸಲಾದ ಎಲ್ಲಾ ಟೆಂಡರ್‌ಗಳಲ್ಲಿ ತೆಗೆದುಹಾಕಲಾಗಿದೆ. ಕೆಲವೇ ಗುತ್ತಿಗೆದಾರರು ಮಾತ್ರ ನಿಗಧಿತ ಅವಧಿಯಲ್ಲಿ ಕೆಲಸಗಳನ್ನು ಪೂರೈಸಿರುತ್ತಾರೆ. ಆದರೆ ಬಿಲ್ಲುಗಳನ್ನು ಸಲ್ಲಿಸಬೇಕಾಗಿರುತ್ತದೆ. ಗುತ್ತಿಗೆದಾರರಿಂದ ಪ್ರೋತ್ಸಾಹಕ ಬಿಲ್ಲುಗಳನ್ನು ಸ್ವೀಕೃತಿಯ ನಂತರ ಕ್ರಮ ಕೈಗೊಳ್ಳಲಾಗುವುದು.
xv	ಟಿಪ್ಪಣಿ ಸಂಖ್ಯೆ:2.5 (ಡಿ)ರಲ್ಲಿ ಹೇಳಿರುವಂತೆ ಹೂಡಿಕೆ ಮಾಡಲಾಗಿರುವ ಆಸ್ತಿಗಳ ಮೌಲ್ಯ ಗಮನಾರ್ಹವಾಗಿರುವುದಿಲ್ಲ. ಈ ಬಗ್ಗೆ ಕಂಪನಿಯು ಸೂಕ್ತವಾದ ದಾಖಲಾತಿಗಳನ್ನು ಒದಗಿಸದ ಕಾರಣ ಸದರಿ ಆಸ್ತಿಗಳ ಮುಂದುವರೆಸಿಕೊಂಡು ಹೋಗುವ ಮೌಲ್ಯವು (Carrying cost)ಕಂಪನಿಯ (ಭಾರತೀಯ ಲೆಕ್ಕ ವಿಧಾನ) IND AS 40"ಹೂಡಿಕೆ ಮಾಡಲಾಗಿರುವ ಆಸ್ತಿಗಳು" ನಿಯಮ 2015 ಹೊರಡಿಸಿರುವ ಅನ್ವಯ ಸದರಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಹೆಚ್ಚಿನ ಸಂಧರ್ಭಗಳಲ್ಲಿ ಕವಿಪ್ರನಿನಿಯೇ ಕಟ್ಟಡ ಹಾಗೂ ಆವರಣಗಳನ್ನು ತನ್ನ ಸ್ವಂತ ಕಾರ್ಯಗಳಿಗೆ ಬಳಸಲಾಗುತ್ತಿದೆ. ವಿರಳವಾಗಿ ತನ್ನ ಕಟ್ಟಡ ಹಾಗೂ ಆವರಣಗಳನ್ನು ವಿಸಕಂ ಗಳೊಂದಿಗೆ ಭಾಗಶಃ ಹಂಚಿಕೆ ಮಾಡಿಕೊಳ್ಳಲಾಗಿದ್ದು, ಸದರಿ ಕಟ್ಟಡ ಹಾಗೂ ಆವರಣಗಳಲ್ಲಿ ಹೆಚ್ಚಿನ ಭಾಗವು ಕವಿಪ್ರನಿನಿಯು ಬಳಸುತ್ತಿರುತ್ತದೆ ಅದುದರಿಂದ ವಿಸಕಂಗಳೊಂದಿಗೆ ಹಂಚಿಕೊಂಡಿರುವ ಕಟ್ಟಡ ಹಾಗೂ ಆವರಣಗಳ ಮೌಲ್ಯವನ್ನು ಪ್ರತ್ಯೇಕಿಸಲು ಕಷ್ಟಕರವಾಗಿರುತ್ತದೆ.

xvi	ಟಿಪ್ಪಣಿ ಸಂಖ್ಯೆ:3.1, 18, 22 ಮತ್ತು 37.18 ರಲ್ಲಿ ಸೂಚಿಸಿರುವಂತೆ ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡ ಠೇವಣಿ ವಂತಿಗೆ ಕಾಮಗಾರಿಗಳ (DCW) ಕುರಿತು ಕಾಮಗಾರಿವಾರು ಪ್ರಸ್ತುತ ಸ್ಥಿತಿ ಹಾಗೂ ಪರಿಪೂರ್ಣ ಮಾಹಿತಿಯನ್ನು ಒದಗಿಸದ ಕಾರಣ ನಾವು ಠೇವಣಿವಂತಿಗೆ ಕಾಮಗಾರಿಗಳನ್ನು ನ್ಯಾಯ ಸಮ್ಮತ ಮೌಲ್ಯದಲ್ಲಿ ಬಂಡವಾಳಕರಿಸುವ ಬಗ್ಗೆ ಹಾಗೂ ಪೂರ್ಣಗೊಂಡ ಠೇವಣಿವಂತಿಗೆ ಕಾಮಗಾರಿಗಳನ್ನು ಋಣ ಮುಕ್ತತೆ (Amortization) ಮಾಡುವಲ್ಲಿ ಒಪ್ಪಂದದ ಅವಧಿಯ ಬದಲಾಗಿ ಉಪಯುಕ್ತ ಜೀವನಾಧಾರದಲ್ಲಿ ಋಣಮುಕ್ತತೆಯನ್ನು ಮಾಡಲಾಗಿರುತ್ತದೆ. ಇದರಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣ (ಪಿಪಿಇ), ಪ್ರಸ್ತುತ / ಪ್ರಸ್ತುತವಲ್ಲದ ಹೊಣೆಗಾರಿಕೆ, ಸ್ವೀಕೃತಿ, ಕಂದಾಯಗಳ ಮೇಲೆ ಅದರಿಂದಾಗುವ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ. ಮುಂದುವರೆದು, ಕಂಪನಿಯಲ್ಲಿ ಠೇವಣಿವಂತಿಗೆ ಕಾಮಗಾರಿಗಳನ್ನು IND AS 18 ಕಂದಾಯ ಅನುಬಂಧ–ಸಿ ರಲ್ಲಿ ಸೂಚಿಸಿರುವಂತೆ ಲೆಕ್ಕೀಕರಿಸುವ ವಿಧಾನದ ಅನುಪಸ್ಥಿತಿಯಲ್ಲಿ ಆದಾಯ ಮತ್ತು ತೆರಿಗೆ ಮುಂಚಿನ ಲಾಭದ ಮೇಲೆ ಆಗುವ ಪರಿಣಾಮವನ್ನು ಗೊತ್ತು ಪಡಿಸಿಕೊಳ್ಳಲಾಗಿರುವುದಿಲ್ಲ.	ಸಂಬಂಧಿಸಿದ ಶೆಡ್ಯೂಲ್‌ಗಳು ಮತ್ತು 'ಸಿ' ದಾಖಲೆ ಪುಸ್ತಕ ಬಳಸಿಕೊಂಡು ಠೇವಣಿ ಕೊಡುಗೆ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಲಾಗುತ್ತದೆ. ಆದಾಗ್ಯೂ, ಪ್ರಸುತ್ತ ಕೆಲಸದ ಸ್ಥಿತಿಯನ್ನು ಖಚಿತ ಪಡಿಸಿಕೊಳ್ಳಲು ಸೂಕ್ತವಾದ ಸೂಚನೆಗಳನ್ನು ನೀಡಲಾಗುವುದು. IND AS 18 ಅನುಬಂಧ 'ಸಿ' ನ ನಿಯಮಗಳ ಠೇವಣಿ ಕೊಡುಗೆ ಕಾರ್ಯಗಳಿಗೆ ಅನ್ವಯಿಸಲಾಗುತ್ತದೆಯೋ ಎಂದು ಪರಿಶೀಲಿಸಲಾಗುವುದು.
xvii	ಟಿಪ್ಪಣಿ ಸಂಖ್ಯೆ:3.5 ರಲ್ಲಿ ಸೂಚಿಸಿದಂತೆ ಪಿಎಸ್‌ಡಿಎಫ್ ಅನುದಾನದಿಂದ ರೂ.5948.06 ಲಕ್ಷಗಳಷ್ಟು 220ಕೆವಿ ಮತ್ತು 400ಕೆವಿ ಉಪಕೇಂದ್ರಗಳ ನವೀಕರಣ ಹಾಗೂ ಉನ್ನತೀಕರಣ ಕಾಮಗಾರಿಗಳನ್ನು ಬಂಡವಾಳ ಕಾಮಗಾರಿಗಳಾಗಿ ಅಥವಾ ರೆವೆನ್ಯೂ ಕಾಮಗಾರಿಗಳಾಗಿ ಗುರುತಿಸಲಾಗದ ಕಾರಣ ನಾವು ಇದರಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ (CWIP), ದುರಸ್ತಿ ಮತ್ತು ನಿರ್ವಹಣೆ ಮತ್ತು ಈ ವರ್ಷದ ಲಾಭದ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.	ಪಿ.ಎಸ್.ಡಿ.ಎಫ್ ಕಾಮಗಾರಿಗಳಲ್ಲಿ ಹಲವಾರು ಸಾಮಗ್ರಿಗಳು ಒಳಗೊಂಡಿದ್ದು, ಬಹುತೇಕ ಸಂದರ್ಭಗಳಲ್ಲಿ ಅವುಗಳು ಸ್ಥಾಪನೆಗೊಳ್ಳಬೇಕಾಗಿರುತ್ತದೆ. ಈ ಅವಧಿಯಲ್ಲಿ ಬಂಡವಾಳ ಮತ್ತು ಕಂದಾಯದ ವಗಿಕರಣಕ್ಕೆ ಸಂಬಂಧಿಸಿದ ಮಾಹಿತಿ ಲಭ್ಯವಿರುವುದಿಲ್ಲ. ಪ್ರಸಕ್ತ ವರ್ಷ 2018–19 ರಲ್ಲಿ ಬಂಡವಾಳ ಮತ್ತು ಕಂದಾಯ ಕಾಮಗಾರಿಗಳನ್ನು ವರ್ಗೀಕರಿಸಲು ಪ್ರಯತ್ನಗಳನ್ನು ಮಾಡಲಾಗುವುದು.
xviii	ಟಿಪ್ಪಣಿ ಸಂಖ್ಯೆ:3.7 ರಲ್ಲಿ ಸೂಚಿಸಿದಂತೆ ಟವರ್ ನಿರ್ಮಾಣಕ್ಕೆ ನೀಡಿದ ಪರಿಹಾರ, ಕಾರಿಡಾರ್ ನಿರ್ಮಾಣಕ್ಕೆ ನೀಡಿದ ಪರಿಹಾರ, ನೆಡುತೋಪಿಗೆ (Plantation) ನೀಡಿದ ಪರಿಹಾರ, ಮರ ಕಡಿತಕ್ಕೆ ನೀಡಿದ ಪರಿಹಾರ ಮತ್ತು ಬೆಳೆ ನಾಶಕ್ಕೆ ನೀಡಿದ ಪರಿಹಾರವನ್ನು ನಗದು ಆಧಾರದ ವಿಧಾನದಲ್ಲಿ ಲೆಕ್ಕೀಕರಿಸಲಾಗುತ್ತಿದ್ದು ಸದರಿ ನಿಯಮವು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, IND AS-1 ರನ್ವಯ ಸಮಂಜಸವಾಗಿರುವುದಿಲ್ಲ. ಆದುದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಇದರಿಂದಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ.	ಪರಿಹಾರವು ವಿವರವಾದ ಕಾರ್ಯದೇಶದ ಭಾಗವಾಗಿರುವುದಿಲ್ಲ, ಈ ಪರಿಹಾರಗಳು ಕ್ಷೇತ್ರದ ಪರಿಸ್ಥಿಯಆಧಾರದ ಮೆಲೆ ನಿರ್ಧರಿಸಬೇಕಾಗುತ್ತದೆ. ಪರಿಹಾರವನ್ನು ನಿರ್ಧರಿಸಿದ ನಂತರ ಹಾಗೂ ಪಾವತಿಸುವ ಮುಂಚೆ ಕೆಲವು ಪ್ರಕರಣಗಳಲ್ಲಿ ದಾವೆಗಳಿರುತ್ತವೆ. ಆದ್ದರಿಂದ, ಫಲಾನುಭವಿಗಳಿಗೆ ವಾಸ್ತವಿಕ ಪರಿಹಾರವನ್ನು ವಿತರಿಸಿದ ನಂತರ ಲೆಕ್ಕೀಕರಿಸಲಾಗುತ್ತದೆ.
xix	ಟಿಪ್ಪಣಿ ಸಂಖ್ಯೆ:6.5 ರಲ್ಲಿ ಸೂಚಿಸಿರುವಂತೆ ಬಳಕೆಯಲ್ಲಿಲ್ಲದ ದಾಸ್ತಾನುಗಳ ಗುರುತಿಸುವಿಕೆಯು ಬಾಕಿ ಇರುವುದರಿಂದ ಲೆಕ್ಕಗಳಲ್ಲಿ ಕಂಪನಿಯ ನಿಯಮಗಳಂತೆ ಅವಕಾಶ ಕಲ್ಪಿಸಲಾಗಿರುವುದಿಲ್ಲ ಇದರಿಂದಾಗಿ ದಾಸ್ತಾನುಗಳ ಮೇಲೆ ಮತ್ತು ತೆರಿಗೆ ಮುಂಚಿನ ಲಾಭದ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ..	ಎರಡು ಪ್ರಸರಣ ವಲಯಗಳಲ್ಲಿ, ನಿರುಪಯುಕ್ತ ಸಾಮಗ್ರಿಗಳ ಅನುಮೋದನಾ ಸಮಿತಿಯು ನಿರುಪಯುಕ್ತ ಸಾಮಗ್ರಿಗಳನ್ನು ಗುರುತಿಸಿ ಹಾಗೂ ಅವುಗಳನ್ನು ಅನುಮೋದಿಸಿ, ಅದಕ್ಕನುಸಾರವಾಗಿ ಲೆಕ್ಕೀಕರಿಸಲಾಗಿದೆ.ಬಾಕಿ ಇರುವ ವಲಯಗಳಲ್ಲಿ ನಿರುಪಯುಕ್ತ ಸಾಮಗ್ರಿಗಳ ಅನುಮೋದನಾ ಸಮಿತಿಯು ಆರ್ಥಿಕ ವರ್ಷ 2018–19 ರಲ್ಲಿ ನಿರುಪಯುಕ್ತ ಸಾಮಗ್ರಿಗಳನ್ನು ಗುರುತಿಸಿ ಹಾಗೂ ಅವುಗಳನ್ನು ಅನುಮೋದಿಸಲಾಗುವುದು.

xx	ಟಿಪ್ಪಣಿ ಸಂಖ್ಯೆ: 7.2 ವಿಸಕಂಗಳೊಂದಿಗೆ ಮಾಡಿಕೊಳ್ಳಲಾಗಿರುವ ಪ್ರಸರಣ ಒಪ್ಪಂದ ಹಾಗೂ ಕ.ವಿ.ನಿ. ಆಯೋಗ 2006ರ ನಿಯಮಾವಳಿಗಳಲ್ಲಿನ ಕಲಮುನಲ್ಲಿರುವಂತೆ (Clause) ರಿಯಾಯಿತಿಯ ಕುರಿತು ವಿವಾದವಿರುವುದರಿಂದ ವಿಸಕಂಗಳಿಂದ ಸಕಾಲಕ್ಕೆ ಸರಿಯಾಗಿ ಪಾವತಿಸಿರುವ ಪ್ರಸರಣ ಶುಲ್ಕಕ್ಕೆ ಕ್ಲೇಮ್ ಮಾಡಿರುವ ರಿಯಾಯಿತಿ ಮೊತ್ತ ರೂ. 6913.23 ಲಕ್ಷಗಳು, ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ವಿಸಕಂಗಳ (ಗೌರವಾನ್ವಿತ ಆಯೋಗದಿಂದ ಅನುಮೋದಿಸಲ್ಪಟ್ಟ ನಿಗದಿತ ನಮೂನೆ) ಜೊತೆ ಇರುವ ಪ್ರಸರಣ ಒಪ್ಪಂದದ ಕಲಮು–8.7ನ್ನು ಉಲ್ಲೇಖಿಸುತ್ತಾ ಸಂಬಂಧಿಸಿದ ಕಲಮುಗಳ ಸಾರವನ್ನು ಈ ಕೆಳಗೆ ಮರುಪ್ರಸ್ತುತ ಪಡಿಸಲಾಗಿದೆ. **8.5 ರಿಯಾಯಿತಿ** 8.5.1 ಪ್ರಸರಣ ಶುಲ್ಕವನ್ನು ಪಾವತಿಸುವ ವಿಸಕಂಗಳ/ಓಪನ್ ಆಕ್ಸೆಸ್ ಗ್ರಾಹಕರು ಎಲ್‌ಸಿ ವ್ಯವಸ್ಥೆ ಇದ್ದು ಜಮೆ ಪತ್ರದ ಮೂಲಕ ನಿಗದಿತ ದಿನಾಂಕದೊಳಗೆ ಪಾವತಿಸಿದಲ್ಲಿ ಬಿಲ್ಲಿನ ಮೊತ್ತಕ್ಕೆ ಶೇ.2% ರಂತೆ ರಿಯಾಯಿತಿ ಪಡೆಯಲು ಅರ್ಹರಿರುತ್ತಾರೆ. **8.6ದಂಡ** 8.6.1 ವಿಸಕಂಗಳ/ಓಪನ್ ಆಕ್ಸೆಸ್ ಗ್ರಾಹಕರು ಎಲ್‌ಸಿ ವ್ಯವಸ್ಥೆ ಇರುವವರು ನಿಗದಿತ ದಿನಾಂಕದೊಳಗೆ ಪಾವತಿಸಿದ್ದಲ್ಲಿ ಬಿಲ್ಲಿನ ಮೊತ್ತಕ್ಕೆ ಪ್ರತಿ ತಿಂಗಳಿಗೆ ಶೇ.2% ಅಥವಾ ಅದರ ಭಾಗವನ್ನು ದಂಡ ರೂಪದಲ್ಲಿ ಕವಿಪ್ರನಿನಿ ಗೆ ಪಾವತಿಸುವ ಹೊಣೆ ಇರುತ್ತದೆ. **8.7 ಆದಾಗ್ಯೂ,** ಪ್ರಸರಣ ಶುಲ್ಕವನ್ನು ಪಾವತಿಸಲು ಎಸ್ಕ್ರೋ ವ್ಯವಸ್ಥೆ ಇರುವ ವಿಸಕಂಗಳ/ಓಪನ್ ಆಕ್ಸೆಸ್ ಗ್ರಾಹಕರಿಗೆ ಕಲಮು 8.5 ಮತ್ತು 8.6 ಅನ್ವಯಿಸುವುದಿಲ್ಲ. ಇದರನ್ವಯ, ಪ್ರಸರಣ ಶುಲ್ಕವನ್ನು ಪಾವತಿಸಲು ಎಸ್ಕ್ರೋ ವ್ಯವಸ್ಥೆ ಇರುವ ವಿಸಕಂಗಳ/ಓಪನ್ ಆಕ್ಸೆಸ್ ಗ್ರಾಹಕರಿಗೆ ಕಲಮು 8.5 (ರಿಯಾಯಿತಿ) ಮತ್ತು 8.6 (ದಂಡ) ಅನ್ವಯಿಸುವುದಿಲ್ಲ. ಮುಂದುವರೆದಂತೆ, ಸರ್ಕಾರದ ಆದೇಶದ ದಿನಾಂಕ: 10 ಮೇ 2005 ರ ಅನ್ವಯ ವಿಸಕಂಗಳು ಪ್ರಸರಣಾ ಶುಲ್ಕವನ್ನು ಪಾವತಿಸಲು ಎಸ್ಕ್ರೋ ಖಾತೆಯನ್ನು ತೆರೆಯಲು ಬದ್ಧವಾಗಿರುತ್ತವೆ. ಸರ್ಕಾರದ ಆದೇಶದ ಸಾರವನ್ನು ಈ ಕೆಳಗಿನಂತೆ ಮರುಪ್ರಸ್ತುತ ಪಡಿಸಲಾಗಿದೆ: "(12) ಪ್ರಸರಣ ಶುಲ್ಕಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ವಿಸಕಂ ಕವಿಪ್ರನಿನಿಯ ಜೊತೆ ಚಾಲ್ತಿ ಎಸ್ಕ್ರೋ ಖಾತೆಯನ್ನುತೆರೆಯಬೇಕಾಗುತ್ತದೆ" ಎಲ್ಲಾ ವಿಸಕಂಗಳಿಂದ (ಹಣಕಾಸು ಕೊರತೆಯಿರುವ ಕಂಪನಿಗಳಾದ ಹೆಸ್ಕಾಂ ಹಾಗೂ ಜೆಸ್ಕಾಂಗಳು ಒಳಗೊಂಡಿರುತ್ತವೆ) ಪಾವತಿ ವ್ಯವಸ್ಥೆಯಲ್ಲಿ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ಬ್ಯಾಂಕ್‌ಗಳ ಎಲ್‌ಸಿ ಶುಲ್ಕಗಳಿಂದ ಅಂತಿಮ ಬಳಕೆದಾರರಿಗೆ ಹೊರೆಯಾಗದಂತೆ ಎಸ್ಕ್ರೋ ಖಾತೆಯನ್ನು ತೆರೆಯಲು ಪ್ರಜ್ಞಾಪೂರ್ವಕವಾಗಿ ನಿರ್ಧರಿಸಲಾಗಿತ್ತು. ಸದರಿ ವಿಷಯವನ್ನು ಆ.ವ–16 ಮತ್ತು ಆ.ವ–17 ರ ಎಪಿಆರ್ ಫೈಲಿಂಗ್‌ನಲ್ಲಿ ಕ.ವಿ.ನಿ.ಆಯೋಗದ ಗಮನಕ್ಕೆ ತರಲಾಗಿದೆ.
xxi	ಟಿಪ್ಪಣಿ ಸಂಖ್ಯೆ: 16, 18.1 ಮತ್ತು 23, ದೀರ್ಘಾವಧಿಯ ಉದ್ಯೋಗಿ ಪ್ರಯೋಜನೆಗಳು ಮತ್ತು ನಿರ್ದಿಷ್ಟವಾದ ಲಾಭದಾಯಕ ಯೋಜನೆಗಳ ವಾಸ್ತವಿಕ ಮೌಲ್ಯಮಾಪನ ವರದಿಗೆ ಸಂಬಂಧ ಪಟ್ಟಂತೆ, ಸದರಿ ಮೌಲ್ಯಮಾಪನವನ್ನು ಪರಿಗಣಿಸುವಾಗ ಅಳವಡಿಸಿ ಕೊಂಡಿರುವ ಮಾಹಿತಿಗಳು, ಊಹೆಗಳು ಮತ್ತು ಬಹಿರಂಗ ಪಡಿಸುವಿಕೆಗಳು ಸೂಕ್ತವಾಗಿರುವುದಿಲ್ಲ, ಪ್ರತಿ ವರ್ಗದ ನೌಕರರಿಗೆ ಸಂಬಂಧಪಟ್ಟಂತೆ ರಜೆ ನಗಧಿಕರಣ ದರ, ಪ್ಲಾನ್ ಅಸೆಟ್‌ಗಳನ್ನು ಪರಿಗಣಿಸದಿರುವುದು, ಸಂಬಳದಲ್ಲಿನ ಹೆಚ್ಚಳ, ವಾರ್ಷಿಕ ವೇತನ ಬಡ್ತಿ ಮತ್ತು ವಾರ್ಷಿಕ ಗಳಿಕೆ ನಗಧೀಕರಣ ದಿನಗಳನ್ನು. ಪರಿಗಣಿಸದೇ ಇರುವುದರಿಂದ.	2017–18ರಲ್ಲಿ ಎಲ್ಲಾ ಲೆಕ್ಕ ಘಟಕಗಳಿಂದ ಪ್ರತಿ ಕೇಡರ್‌ನ ನೌಕರರಿಗೆ ಸಂಬಂಧಪಟ್ಟಂತೆ ಸ್ಕೇಲ್ ರಿಜಿಸ್ಟರ್‌ಗಳು ಹಾಗೂ ಸೇವ ಪುಸ್ತಕಗಳಲ್ಲಿ ಇರುವಂತೆ ಪ್ರಾರಂಭಿಕ ಹಾಗೂ ಅಂತ್ಯಕ್ಕೆ ಇರುವ ರಜೆಯ ಶಿಲ್ಕು, ಜಮಾ ಮಾಡಿರುವ ರಜೆ, ನಗಧೀಕರಿಣಿಸಿದ ರಜೆ, ಉಪಯೋಗಿಸಿದ ರಜೆ, ವಾರ್ಷಿಕ ಲಭ್ಯವಿರುವ ರಜೆ ನಗಧೀಕರಣ, ವೇತನ, ವೇತನ ಬಡ್ತಿ ಇವುಗಳನ್ನು ತರಿಸಿಕೊಂಡು ಅದನ್ನು ವಾಸ್ತವಿಕ ಮೌಲ್ಯಮಾಪನ ಮಾಡಲು ಸಲ್ಲಿಸಲಾಗಿರುತ್ತದೆ.

xxi	ಹಣಕಾಸಿನ ನಿರೂಪಣ ಪಟ್ಟಿಗಳಲ್ಲಿ ಅದರಿಂದಾಗುವ ಪರಿಣಾಮವನ್ನು ಖಚಿತವಾಗಿರುವುದಿಲ್ಲ. ಮುಂದುವರೆದು, ಕಂಪನಿಯು ನಿರ್ದಿಷ್ಟವಾದ ಲಾಭದಾಯಕ ಯೋಜನೆಗಳ ಲಾಭವನ್ನು ಸಿಬ್ಬಂದಿ ವೆಚ್ಚಗಳಲ್ಲಿ ಲೆಕ್ಕೀಕರಿಸಲಾಗಿದ್ದು ಸದರಿ ಲಾಭವನ್ನು ಪ್ರತ್ಯೇಕವಾಗಿ ಇತರೆ ಸಮಗ್ರ ಆದಾಯದಲ್ಲಿ ಪರಿಗಣಿಸಲಾಗಿರುವುದಿಲ್ಲ ಇದರ ಕುರಿತು ಸೂಕ್ತ ಬಹಿರಂಗಪಡಿಸುವಿಕೆಯನ್ನು ಹಣಕಾಸಿನ ನಿರೂಪಣ ಪಟ್ಟಿಯಲ್ಲಿ ನೀಡಲಾಗಿರುವುದಿಲ್ಲ ಇದರಿಂದಾಗಿ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015,IND AS 19 'EMPLOYEE BENEFITS' ರಲ್ಲಿ ನೀಡಲಾಗಿರುವ ವಿಧಾನವನ್ನು ಪರಿಗಣಿಸಿರುವುದಿಲ್ಲ. ಈ ಕಾರಣದಿಂದಾಗಿ ದೀರ್ಘಾವಧಿಯ ಉದ್ಯೋಗಿ ಪ್ರಯೋಜನೆಗಳು ಮತ್ತು ನಿರ್ದಿಷ್ಟವಾದ ಲಾಭದಾಯಕ ಯೋಜನೆಗಳಿಂದ ಹಣಕಾಸಿನ ನಿರೂಪಣೆಗಳ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.	ಅದರಂತೆ ರಜೆ ನಗಧಿಕರಣದ ವಾಸ್ತವಿಕ ಮೌಲ್ಯಮಾಪನ ವರದಿಯನ್ನು ಪಡೆಯಲಾಗಿದ್ದು ಸದರಿ ವರದಿಯ ಆಧಾರದ ಮೇಲೆ ರಜೆ ನಗಧೀಕರಣಕ್ಕೆ ಹವಣಿಕೆಯನ್ನು ಮಾಡಲಾಗಿದೆ. ವೇತನ ಹೆಚ್ಚಿಕೆ ದರವು ವಾಸ್ತವಿಕ ಆಧಾರದ ಮೇಲೆ ಹಾಲಿ ಇರುವ ನಿಯತಕಾಲಿಕ ವೇತನ ಶ್ರೇಣಿಯ ವೇತನ ಬಡ್ತಿಮತ್ತು ಪ್ರಸ್ತುತ ತುಟ್ಟಿ ಭತ್ಯೆ ದರವನ್ನು ಆಧರಿಸಿ ಪರಿಗಣಿಸಲಾಗಿದೆ.ಲೆಕ್ಕ ಪಟ್ಟಗಳಿಂದ ನೀಡಿರುವ ನೌಕರರ ಮಾಹಿತಿಯಆಧಾರದ ಮೇಲೆ ಗಳಿಕೆ ರಜೆ ನಗಧೀಕರಣದ ದರವನ್ನು ವಾಸ್ತವಿಕ ಆಧಾರದ ಮೇಲೆ ಪರಿಗಣಿಸಲಾಗಿದೆ. ಗಳಿಕೆ ರಜೆ ನಗಧೀಕರಣದ ವಾಸ್ತವಿಕ ಮೌಲ್ಯಮಾಪನ ವರದಿಯನ್ನು ಪ್ರಾಮಾಣಿಕ ಊಹೆಗಳನ್ನು ತರುವುದಕ್ಕಾಗಿ ವಾಸ್ತವಿಕವನ್ನು ಪರಿಗಣಿಸಲಾಗಿದೆ. ವಾಸ್ತವಿಕ ಮೌಲ್ಯಮಾಪನ ವರದಿಯಂತೆ ಗಳಿಕೆ ರಜೆ ನಗದಿಕರಣಕ್ಕೆ ಹವಣಿಕೆಯನ್ನು ಮಾಡಲಾಗಿದೆ.
xxii	ಕರ್ನಾಟಕ ಸರ್ಕಾರದಿಂದ ಹೊಂದಾಣಿಕೆಯ ಅಧಿಸೂಚನೆಯು ಬಾಕಿ ಇದ್ದು, ಟಿಪ್ಪಣಿ ಸಂಖ್ಯೆ:18.5ರಲ್ಲಿ ಇತರ ದೀರ್ಘಾವಧಿ ಹೊಣೆಗಾರಿಕೆಗಳ ಅಡಿಯಲ್ಲಿ ರೂ.4238.43ಲಕ್ಷ ಶಿಲ್ಕನ್ನು ತೋರಿಸಿದ್ದು, ಇದು, ದಿನಾಂಕ 01.06.2002 ರಿಂದ ಅಂತಿಮ ಅರಂಭ ಶಿಲ್ಕನ್ನು ಅಧಿಸೂಚಿಸಿದ ನಂತರ ಮಾಡಿದ ಹೊಂದಾಣಿಕೆಯನ್ನು ಬಿಂಬಿಸುತ್ತದೆ. ದಿನಾಂಕ 14.06.2012ರ ಕರ್ನಾಟಕ ಸರ್ಕಾರದ ಪತ್ರದ ಪ್ರಕಾರ, ಮೇಲಿನ ಶಿಲ್ಕುಗಳನ್ನು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಲೆಕ್ಕ ಸಮನ್ವಯಗೊಳಿಸಿಕೊಂಡು, ಅನುಮೋದನೆಗಾಗಿ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಸರ್ಕಾರವು ಕ.ವಿ.ಪ್ರ.ನಿ.ನಿ.ಗೆ ನಿರ್ದೇಶನ ನೀಡಿದೆ. ದಿನಾಂಕ: 31.03.2018ರಂದು ಇದ್ದಂತೆ, ಮೇಲಿನ ಲೆಕ್ಕಗಳ ಲೆಕ್ಕಸಮನ್ವಯ ಗೊಳಿಸುವಿಕೆಯು ಪ್ರಗತಿಯಲ್ಲಿದ್ದು, ನಿವ್ವಳ ಮೌಲ್ಯದ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸದರಿ ಮೊತ್ತವನ್ನು ಸಮನ್ವಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
xxiii	ಟಿಪ್ಪಣಿ ಸಂಖ್ಯೆ:20 ರಲ್ಲಿ ವಿದ್ಯುತ್ ಖರೀದಿಗಾಗಿ ವಿವಿಧ ದೇಣಿದಾರರು ಶೀರ್ಷಿಕೆಯಲ್ಲಿ ರೂ.4207.38/–ಲಕ್ಷಗಳನ್ನು (ಕೆಪಿಸಿಗೆ ಪಾವತಿಸಬೇಕಾದ ಬಡ್ಡಿ 66853.20 ಲಕ್ಷಗಳನ್ನು ಹೊರತುಪಡಿಸಿ) 9.06.2005ರ ವರೆಗಿನ ವಿದ್ಯುತ್ ಖರೀದಿಗೆ ಸಂಬಂಧಿಸಿದ ಪಾವತಿಯಾಗಬೇಕಾಗಿರುವ ಬಾಕಿಯೆಂದು ತೋರಿಸಲ್ಪಟ್ಟಿದ್ದು ಸದರಿ ಹೊಣೆಗಾರಿಕೆ ಅಥವಾ ಹೆಚ್ಚುವರಿ ಹೊಣೆಗಾರಿಕೆಗಳದ್ದಲ್ಲಿ ಅದರ ನಿಖರತೆಯನ್ನು ನಾವು ಗೊತ್ತುಪಡಿಸಿಕೊಳ್ಳಲಾಗಿಲ್ಲ.	ವಿದ್ಯುತ್ ಖರೀದಿ ಸಂಬಂಧವಾಗಿ, ಇತರೆ ದೇಣೀದಾರರ ಲೆಕ್ಕದಲ್ಲಿ ತೋರಿಸಿರುವ ಬಾಕಿ ಮೊಬಲಗು ಸರಿಯಾಗಿದೆ. ಈ ಮೊಬಲಗನ್ನು ಕಂಪನಿಯು ಪಾವತಿಸ ಬೇಕಾಗಿರುವುದರಿಂದ, ಬಾಕಿ ಮೊಬಲಗನ್ನು ಹೊಣೆಗಾರಿಕೆ ಲೆಕ್ಕದಲ್ಲಿ ಮುಂದುವರೆಸಲಾಗಿದೆ. ತಮಿಳುನಾಡು ವಿದ್ಯುತ್‌ಚ್ಛಕ್ತಿ ಮಡಳಿಗೆ ಸಂಬಂಧಪಟ್ಟ ಹೊಣೆಗಾರಿಕೆ ಮೊತ್ತ ರೂ. 26.34 ಕೋಟಿಗಳನ್ನು 2018–19ರಲ್ಲಿ ಪಾವತಿಸಲಾಗಿದೆ.
xxiv	ಟಿಪ್ಪಣಿ ಸಂಖ್ಯೆ:20.1 ಕೆಪಿಸಿಗೆ ವಿದ್ಯುತ್ ಖರೀದಿ ಬಾಕಿಯ ಮೇಲೆ ಬಡ್ಡಿ ಹೊಣೆಗಾರಿಕೆ ಮೊತ್ತ ರೂ.668.53 ಕೋಟಿಗಳನ್ನು ಕಂಪನಿಯು ವಿದ್ಯುತ್ ಖರೀದಿ ಬಾಕಿ ಎಂದು ಬಿಂಬಿಸುತ್ತಿರುವುದು ಸಮಜಂಸವಲ್ಲ, ಕರ್ನಾಟಕ ಸರ್ಕಾರದ ಶಾಸನ ಬದ್ಧ ಆದೇಶ ಸಂಖ್ಯೆ:ಇಓ 131 PSR 2003 ದಿನಾಂಕ:10.05.2005 ಮತ್ತು ಕ.ವಿ.ನಿ.ಆಯೋಗ ತನ್ನ ದರ ಪರಿಷ್ಕರಣ ಆದೇಶ ದಿನಾಂಕ:25.11.2009 ರಲ್ಲಿ ವಿದ್ಯುತ್ ಖರೀದಿ ವ್ಯವಹಾರವನ್ನು ವಿ.ಸ.ಕಂ ಗಳಿಗೆ ವರ್ಗಾಯಿಸುವುದರಿಂದ ಎಲ್ಲಾ ವಿದ್ಯುತ್ ಖರೀದಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ವಿ.ಸ.ಕಂ ಗಳಿಗೆ ವರ್ಗಾಯಿಸುವುದು ಎಂದು ಸೂಚಿಸಿರುವ ಕಾರಣ ರೂ.668.53 ಕೋಟಿಗಳನ್ನು ಕಂಪನಿಯು ವಿದ್ಯುತ್ ಖರೀದಿ ಬಾಕಿ ಎಂದು ಬಿಂಬಿಸುತ್ತಿರುವುದು ಸಮಂಜಸವಲ್ಲ. ಇದರಿಂದಾಗಿ ಮೀಸಲು (Reserve) ಕಡಿಮೆಯಾಗಿ ಹಾಗೂ ವ್ಯವಹಾರ ಪಾವತಿಗಳನ್ನು ಹೆಚ್ಚಾಗಿ ಬಿಂಬಿಸಿದಂತಾಗುತ್ತದೆ.	ಅಸ್ತಿತ್ವದಲ್ಲಿರುವ ಹುಣೆಗಾರಿಕೆಯನ್ನು ಎಸ್ಕಾಂ ಗಳಿಗೆ ವರ್ಗಾಯಿಸಲು ಪ್ರಯತ್ನಗಳನ್ನು ಮಾಡಲಾಗುವುದು.

xxv	ಟಿಪ್ಪಣಿ ಸಂಖ್ಯೆ:22, 26.1(ii) ಮತ್ತು 26.3 ರಲ್ಲಿ ಸೂಚಿಸಿರುವಂತೆ ಕಂಪನಿಯು ಅರ್ಧದಲ್ಲಿಯೇ ಮುಕ್ತಾಯಗೊಳಿಸಿದ ಕಾಮಗಾರಿಗಳ ಮೇಲೆ ವಿಧಿಸಿದ ದಂಡದ ಕುರಿತು ಹಾಗೂ ಗುತ್ತಿಗೆದಾರರಿಂದ ದಂಡ ಮನ್ನಣೆ ಮಾಡುವ ಕುರಿತು ಸ್ವೀಕರಿಸಿರುವ ಅರ್ಜಿಗಳ ಮಾಹಿತಿಯನ್ನು ಪರಿಪೂರ್ಣವಾಗಿ ನೀಡಿರುವುದಿಲ್ಲ. ಕಂಪನಿಯು ಇತರೆ ಪಾವತಿಗಳಲ್ಲಿ ಬಿಂಬಿಸಿರುವ ಮೊತ್ತ ರೂ.8149.17 ಲಕ್ಷಕ್ಕೆ ಹಾಗೂ ರೂ.5172 ಲಕ್ಷ ಇತರೆ ಆದಾಯದ ಮೊತ್ತಕ್ಕೆ ಪರಿಪೂರ್ಣ ಮಾಹಿತಿಯನ್ನು ನೀಡಿರುವುದಿಲ್ಲ ಇದರಿಂದಾಗಿ ಹಣಕಾಸಿನ ನಿರೂಪಣೆಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.	ಅಲ್ಪಾವಧಿ ಮುಕ್ತಾಯಗೊಂಡ ಕಾಮಗಾರಿಗಳಿಂದ ಮುರಿಕೆ ಮಾಡಿರುವ ದಂಡ ಮೊತ್ತಕ್ಕೆ2018–19 ರಲ್ಲಿ ಕಾರ್ಯನೀತಿಯನ್ನು ರೂಪಿಸಲಾಗುವುದು. ವಿಳಂಬ ಮನ್ನಣೆ ಅರ್ಜಿಯನ್ನು ದಾಖಲೆ ಮತ್ತು ಮೇಲ್ವೀಚಾರಣೆ ಮಾಡುವ ಬಗ್ಗೆ 15.12.2017ರಲ್ಲಿ ಈಗಾಗಲ್ಲೇ ಸೂಚನೆಯನ್ನು ನೀಡಲಾಗಿದೆ. ಅದಾಗ್ಯೂ, ವಿಳಂಬ ಮನ್ನಣೆ ಅರ್ಜಿಯ ದಾಖಲೆ ಪುಸ್ತಕ ಮತ್ತು ಮೇಲ್ವೀಚಾರಣೆ ದಾಖಲಾ ಪಟ್ಟಿಯನ್ನು ಪ್ರತ್ಯೇಕ ದಾಖಲಾ ಪುಸ್ತಕವನ್ನು ನಿರ್ವಹಿಸಲಾಗುವುದು.
xxvi	ಟಿಪ್ಪಣಿ ಸಂಖ್ಯೆ:22.3ಕಂಪನಿಯು ಗ್ರಾಹಕರಿಂದ ನೆಟ್‌ವರ್ಕ್ ಆಗ್‌ಮೆಂಟೇಷನ್ ಶುಲ್ಕವನ್ನು ಸಂಗ್ರಹಿಸಲು ಕ.ವಿ.ನಿ ಆಯೋಗದ ಆದೇಶ ಸಂಖ್ಯೆ: ಎನ್/64/11 ದಿನಾಂಕ:30.11.2012 ರ ಅನ್ವಯ ಅಧಿಕಾರವಿಲ್ಲದಿದ್ದರೂ ನಿರಂತರವಾಗಿ ಸಂಗ್ರಹಿಸುತ್ತಿದೆ. ಹೀಗೆ ಅನಧಿಕೃತವಾಗಿ ರೂ.1330 ಲಕ್ಷಗಳನ್ನು ಈ ವರದಿಯ ದಿನಾಂಕದವರೆಗೂ ಸಂಗ್ರಹಿಸಲಾಗಿದೆ. ಇದರಿಂದಾಗಿ ಹಣಕಾಸಿನ ನಿರೂಪಣೆಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.	ಆಗ್ಯೂಮೆಂಟೇಷನ್ ಶುಲ್ಕವನ್ನು ಸಂಗ್ರಹಿಸುವ ಕಾರ್ಯವನ್ನು ತಡೆಹಿಡಿಯಲು ಮತ್ತು ಈಗಾಗಲೇ ಸಂಗ್ರಹಿಸಿರುವ ಶುಲ್ಕವನ್ನು ಮರುಪಾವತಿಸಲು ದಿನಾಂಕ: 17.01.2018ರ ಸುತ್ತೋಲೆಯಲ್ಲಿ ಸೂಚನೆ ನೀಡಲಾಗಿದೆ.
xxvii	ಟಿಪ್ಪಣಿ ಸಂಖ್ಯೆ:22.5 'ಇತರೆ ಪ್ರಸಕ್ತ ಹೊಣೆಗಾರಿಕೆಗಳಲ್ಲಿ' ಅಂತರ ಘಟಕ ಲೆಕ್ಕ ಶೀರ್ಷಿಕೆ ಜಮ/ಖರ್ಚುಗಳ ನಿವ್ವಳ ಶುಲ್ಕ ರೂ.1572.26 ಲಕ್ಷಗಳು ಅಂತರ ಘಟಕ ಲೆಕ್ಕ ಶೀರ್ಷಿಕೆ ಸಾಮಾಗ್ರಿಗಳು ಮತ್ತು ರೂ.2357.20 ಲಕ್ಷಗಳು ಅಂತರ ಘಟಕ ಲೆಕ್ಕ ಶೀರ್ಷಿಕೆ ಬಿಡುಗಡೆಗೊಳಿಸಲಾದ ಆಸ್ತಿಗಳು ಮತ್ತು ಟಿಪ್ಪಣಿ ಸಂಖ್ಯೆ:12.1 'ಇತರೆ ಪ್ರಸಕ್ತ ಆಸ್ತಿ' ಮೊತ್ತ ರೂ.101.78 ಲಕ್ಷಗಳು (ಡೆಬಿಟ್) ಅಂತರ ಘಟಕ ಲೆಕ್ಕ ಶೀರ್ಷಿಕೆ–ಸಿಬ್ಬಂದಿ ಮತ್ತು ರೂ.19.42 ಲಕ್ಷ ಅಂತರ ಘಟಕ ಲೆಕ್ಕ ಶೀರ್ಷಿಕೆ ತೀರುವಳಿ ಲೆಕ್ಕ ಸಮನ್ವಯಗೊಳಿಸಿರುವುದಿಲ್ಲ ಹಾಗೂ ಹಿಂದಿನ ವರ್ಷದ ವಹಿವಾಟುಗಳನ್ನು ಒಳಗೊಂಡಿರುತ್ತದೆ. ಈ ಕಾರಣದಿಂದಾಗಿ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಹಿಂದಿನ ವರ್ಷಕ್ಕೆ ಸಂಬಂಧಿಸಿದ ಅಂತರ ಘಟಕ ಲೆಕ್ಕ ಶೀರ್ಷಿಕೆಗೆ ವಹಿವಾಟುಗಳನ್ನು ಸಮನ್ವಯಗೊಳಿಸಲಾಗುತ್ತಿದೆ. 01.04.2015ರಿಂದ ಮುಂದಕ್ಕೆ ಅಂತರ ಘಟಕ ಲೆಕ್ಕ ಶೀರ್ಷಿಕೆಗೆ ಸಂಬಂಧಿಸಿದ ವಹಿವಾಟುಗಳನ್ನು ಹೂಸ ತಂತ್ರಾಂಶವನ್ನು ಅಳವಡಿಸಿಕೊಂಡು ಅಂತರ ಘಟಕ ಲೆಕ್ಕ ಶೀರ್ಷಿಕೆಗಳ ವಹಿವಾಟುಗಳನ್ನು ಆನ್‌ಲೈನ್ ಮೂಲಕವೇ ನಿರ್ವಹಿಸಲಾಗುತ್ತಿದೆ. ಮುಂದುವರೆದಂತೆ ಹಿಂದಿನ ವರ್ಷಕ್ಕೆ ಸಂಬಂಧಿಸಿದ ಅಂತರ ಘಟಕ ಲೆಕ್ಕ ತೀರುವಳಿ ಶೀರ್ಷಿಕೆ ಶಿಲ್ಕುಗಳ ವಹಿವಾಟುಗಳನ್ನು ಸಮನ್ವಯಗೊಳಿಸಲು ಕ್ರಮ ವಹಿಸಲಾಗುತ್ತಿದೆ.
xxviii	ಟಿಪ್ಪಣಿ ಸಂಖ್ಯೆ: 22.6; ರಾಜ್ಯ ವಿದ್ಯುತ್ ರವಾನೆ ಕೇಂದ್ರವು (ಎಸ್ ಎಲ್ ಡಿ ಸಿ) "ಯು ಐ"ಶುಲ್ಕಕ್ಕೆ ಸಂಬಂಧಿಸಿದಂತೆ ಯು ಐ ವೆಚ್ಚ ಶೀರ್ಷಕೆಯಲ್ಲಿ ಜಮೆ ಮೊತ್ತ ರೂ. 424.29 ಲಕ್ಷಗಳಷ್ಟು ಶಿಲ್ಕು ಇದ್ದು ಸದರಿ ಶಿಲ್ಕಿಗೆ ಸಂಭಂದಿಸಿದಂತೆ ಬ್ಯಾಂಕ್ ಖಾತೆಯಲ್ಲಿ ರೂ. 230.92/– ಲಕ್ಷಗಳು ಮಾತ್ರ ಇರುವುದಾಗಿ ಬಿಂಬಿಸಲಾಗುತ್ತಿದೆ. ಇವುಗಳ ಸಮನ್ವಯ ಕಾರ್ಯವು ಬಾಕಿ ಇರುವುದರಿಂದ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಯು ಐ ಶುಲ್ಕಗಳ ಜಮೆ ಬಾಕಿಯ ಕುರಿತು ಬ್ಯಾಂಕ್ ಸಮತೋಲನದೊಂದಿಗೆ ಸಮನ್ವಯ ಕಾರ್ಯವು ಮುಕ್ತಾಯದ ಹಂತದಲ್ಲಿದೆ. ಸಮನ್ವಯ ಕಾರ್ಯವು ಮುಕ್ತಾಯದ ನಂತರ ಪರಿಣಾಮವನ್ನು ಲೆಕ್ಕಪತ್ರಗಳಲ್ಲಿ ಲೆಕ್ಕಿಸಲಾಗುವುದು.
xxix	ಟಿಪ್ಪಣಿ ಸಂಖ್ಯೆ: 26 ಇತರೆ ಆದಾಯ (16) ಮತ್ತು ಟಿಪ್ಪಣಿ ಸಂಖ್ಯೆ:26.2 ಇತರೆ ವಸೂಲಾತಿ ಇದರಲ್ಲಿ ಸ್ವತಂತ್ರ ವಿದ್ಯುತ್‌ಉತ್ಪಾದಕರನ್ನುಗುರುತಿಸಿಪಡೆಯಲಾದಕಾರ್ಯಮತ್ತು ನಿರ್ವಹಣೆ ವೆಚ್ಚಗಳ ಮೊತ್ತ ರೂ.1950.62 ಲಕ್ಷಗಳುಸೇರಿವೆ. ಇನ್ನೂ ಎಷ್ಟು ಸಂಖ್ಯೆಯ ಸ್ವತಂತ್ರ ಉತ್ಪಾದಕರಿಂದ ಕಾರ್ಯ ಮತ್ತು ನಿರ್ವಹಣೆ ವೆಚ್ಚವನ್ನು ವಸೂಲು ಮಾಡಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದ ಕಾರಣ ಕಾರ್ಯ ಮತ್ತು ನಿರ್ವಹಣೆ ವೆಚ್ಚಗಳ ಕುರಿತು ಸಂಪೂರ್ಣತೆಯನ್ನು ಮತ್ತು ಸರಿಯಾಗಿರುವಿಕೆಯನ್ನು ಕಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕಾರಣದಿಂದಾಗಿ ಲೆಕ್ಕ ಪತ್ರಗಳ ಮೇಲೆ ಬೀರಿರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಕೆ.ಇ.ಆರ್.ಸಿ ಯ ಮಧ್ಯಂತರ ಆದೇಶ ದಿನಾಂಕ: 24.04.2018ರನ್ವಯ ಆರ್ಥಿಕ ವರ್ಷ 2016–17 ಮತ್ತು 2017–18 ಸಾಲಿಗೆ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ವಸೂಲಿ ಮಾಡಬೇಕಾದ ಒ & ಎಮ್ ಶುಲ್ಕವನ್ನು ಪರಿಶ್ಕರಿಸಿ ಲೆಕ್ಕಿಕರಿಸಲಾಗಿದೆ. ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಬರಬೇಕಾದ ಒ & ಎಮ್ ಶುಲ್ಕವನ್ನು ಬೇಡಿಕೆ ಬಿಲ್ಲುಗಳಾಗಿದಲ್ಲ 2018–19ರಲ್ಲಿ ಲೆಕ್ಕಿಕರಿಸಲಾಗುವುದು.

xxx	ಟಿಪ್ಪಣಿ ಸಂಖ್ಯೆ:26.1 (iv) ಆದಾಯ ತೆರಿಗೆ ಕಾಯ್ದೆಯ ನಮೂನೆ 26ASರಲ್ಲಿ ಮೂಲ ಆದಾಯದ ಮೇಲೆ ತೆರಿಗೆ ಕಡಿತ ಮಾಡಿದ ಮೊತ್ತ (TDS) ರೂ.196/- ಲಕ್ಷಗಳನ್ನು ಕವಿಪ್ರನಿನಿಯು ಸಮನ್ವಯಗೊಳಿಸದೆ ಇರುವುದರಿಂದ ಸದರಿ ಮೊತ್ತವನ್ನು ಆದಾಯವೆಂದು ಪರಿಗಣಿಸಲಾಗಿದ್ದು ಇದರಿಂದಾಗಿ ಆದಾಯ, ಗ್ರಾಹಕರಿಂದ ಬಂದ ಮುಂಗಡ ಮತ್ತು ವ್ಯವಹಾರದ ಸ್ವೀಕೃತಿಗಳ ಮೇಲಾಗುವ ಪರಿಣಾಮವನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.	26AS ಯೊಂದಿಗೆ ಲೆಕ್ಕಗಳ ಅಂಕಿಅಂಶಗಳನ್ನು ಸಮನ್ವಯಗೊಳಿಸಲು, ಮಾರ್ಚ್ ಅಂತಿಮ ಲೆಕ್ಕಪತ್ರಗಳಲ್ಲಿ ಟಿ.ಡಿ.ಎಸ್ ನ ವಿವರಗಳನ್ನು ಪಡೆಯಲು ಹೊಸದೊಂದು ಅನುಬಂಧವನ್ನು ತಯಾರಿಸಲಾಗಿದೆ. 26AS ಯೊಂದಿಗೆ ಸಮನ್ವಯಗೊಳಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗಿದ್ದು ಕಡಿತಗೊಳ್ಳಿಸಿರುವ ಟ್ಯಾನ್ ಸಂಖ್ಯೆಯು 26AS ಪಟ್ಟಿಯಲ್ಲಿ ತೋರಿಸದೆಇರುವುದರಿಂದ ಮತ್ತು ಹೆಚ್ಚಿನ ವಹಿವಾಟುಗಳು ಇರುವುದರಿಂದ ಸಮನ್ವಯಗೊಳಿಸಲು ಕಷ್ಟಸಾಧ್ಯ. ಅದಾಗ್ಯೂ, ಲೆಕ್ಕಗಳ ಅಂಕಿಅಂಶಗಳ ಮೊತ್ತಕ್ಕೂ 26ಂಖಗೆ ಇರುವ ವ್ಯತ್ಯಾಸವನ್ನು ಆರ್ಥಿಕ ವರ್ಷ 2017-18ರ ಆದಾಯಕ್ಕೆ ಲೆಕ್ಕಿಸಲಾಗಿದೆ.
xxxi	ಟಿಪ್ಪಣಿ ಸಂಖ್ಯೆ:29 ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ವೆಚ್ಚಗಳು ರೂ.560.30 ಲಕ್ಷಗಳನ್ನು ನೇಮಕಾತಿ ಪರೀಕ್ಷೆ ನಡೆಸುವ ಸಲುವಾಗಿ ಖರ್ಚು ಮಾಡಲಾಗಿದ್ದು ಸದರಿ ಖರ್ಚನ್ನು ವಿಸಕಾಂಗಳಿಗೆ ಹಂಚಿ ವಿಸಕಾಂಗಳಿಂದ ಪಡೆಯಬೇಕಾಗಿರುತ್ತದೆ ಇದರಿಂದಾಗಿ ಕಂಪನಿಯ ಖರ್ಚಿನ ಮೇಲೆ, ತೆರಿಗೆಯ ಮುಂಚಿನ ಆದಾಯದ ಮೇಲೆ ಸ್ವೀಕೃತಿಗಳ ಮೇಲೆ ಹಾಗೂ ಇತರೆ ಸ್ವಾಮ್ಯದ ಮೇಲಾಗುವ ಪರಿಣಾಮವನ್ನು ಖಚಿತಪಡಿಸಿಕೊಳ್ಳಲಾಗಿರುವುದಿಲ್ಲ.	ನೌಕರರ ನೇಮಕಾತಿಗೆ ನಡೆಸುವ ಪರೀಕ್ಷೆಗಳಿಗೆ ಸಂಬಂಧಿಸಿದ ವೆಚ್ಚಗಳನ್ನು ಸಂಬಂಧಪಟ್ಟ ವಿಸಕಾಂಗಳಿಗೆ 2018-19ರ ಅವಧಿಯಲ್ಲಿ ಹಂಚಲಾಗುವುದು.
xxxii	ಟಿಪ್ಪಣಿ ಸಂಖ್ಯೆ 37.10 (ii) ಪ್ರಸರಣ ವ್ಯವಸ್ಥೆಯ ದಕ್ಷತೆ ಹಾಗೂ ಲಭ್ಯತೆ ಮತ್ತು ಪ್ರಸರಣ ನಷ್ಟದ ಇಳಿಕೆಗಾಗಿ ಆರ್ಥಿಕ ವರ್ಷ 2017-18ನೇ ಸಾಲಿನಲ್ಲಿ ರೂ.2331/- ಲಕ್ಷಗಳನ್ನು ವಿಸಕಂಗಳಿಂದ ಕವಿಪ್ರನಿನಿಗೆ ಪಾವತಿಸಬೇಕಾಗಿರುವ ಪ್ರೋತ್ಸಾಹ ಧನವನ್ನು ಲೆಕ್ಕೀಕರಣೆ ಮಾಡದೇ ಇರುವ ಕ್ರಮವುಲೆಕ್ಕ ವಿಧಾನ 2015ರನ್ವಯ ಹೊರಡಿಸಲಾದ IND AS - 18 "ಕಂದಾಯ" (Revenue) ರನ್ವಯ ಸಮಂಜಸವಲ್ಲ. ಇದರಿಂದಾಗಿ ಹಣಕಾಸಿನ ಹೇಳಿಕೆಗಳ ಮೇಲಾಗುವ ಪರಿಣಾಮಗಳನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.	ಪ್ರೋತ್ಸಾಹಕ ಸಂಸ್ಥೆಗೆ ಆದಾಯವಾಗಿದೆ. ಇದು ದಕ್ಷತೆ ಅಂಶದಿಂದ ಉತ್ಪತ್ತಿಯಾಗುವ ಆಂತರಿಕ ಸಂಪನ್ಮೂಲವಾಗಿದೆ. ಕೆ.ಇ.ಆರ್.ಸಿ.ಯು ಜಕಾತಿ ಆದೇಶ 2018ರಲ್ಲಿ ಪ್ರೋತ್ಸಾಹಧನದಿಂದ ಮೊದಲ ಬಾರಿಗೆ ಏನು ಮಾಡಬೇಕೆಂಬುದರ ಬಗ್ಗೆ ನಿರ್ದೇಶಿಸಿ ಮತ್ತು ಆಡಳಿತ ಮಂಡಳಿಯು ಅದನ್ನು ಗಮನಿಸಿದೆ. 2017-18ರ ಸಂಚಿತ ಪ್ರೋತ್ಸಾಹದ ಬಗ್ಗೆ ಆಯೋಗವು 2017-18ರ ಆಡಿಟ್ ಲೆಕ್ಕ ಪತ್ರದ ಆಧಾರದ ಮೇಲೆ ಪರಿಗಣಿಸಬೇಕಾಗಿರುತ್ತದೆ. ಹಾಗಾಗಿ, ಆಯೋಗವು 2017-18ರ ಪ್ರೋತ್ಸಾಹ ಅನುಮತಿಸುವ ಮುನ್ನ ಅದನ್ನು ಯಾವ ರೀತಿಯಲ್ಲಿ ಬಳಕೆಮಾಡಬೇಕೆಂಬ ಸಲಹೆಯನ್ನು ಅಂದಾಜು ಮಾಡಲು ಸಾಧ್ಯವಿಲ್ಲ.ಆದ್ದುದರಿಂದ ಟಿಪ್ಪಣಿ-37 ರಲ್ಲಿ ಅನಿಶ್ಚಿತ ಆಸ್ತಿಯೆಂದು ತೋರಿಸಲಾಗಿದೆ.
xxxiii	ಟಿಪ್ಪಣಿ ಸಂಖ್ಯೆ:37.12 (ಬಿ) ವಿದ್ಯುತ್ ಸರಬರಾಜು ಕಂಪನಿಗಳಿಂದ ಪಡೆಯಬೇಕಾದ ಒಟ್ಟು ಮೊತ್ತ ರೂ.17040.04 ಲಕ್ಷ ಹಾಗೂ(ಟಿಪ್ಪಣಿ ಸಂಖ್ಯೆ:10) ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾದ ಒಟ್ಟು ಮೊತ್ತ ರೂ.18307.58 ಲಕ್ಷಗಳಿಗೆ (ಟಿಪ್ಪಣಿ ಸಂಖ್ಯೆ:22) ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸಮನ್ವಯಗೊಳಿಸುವಿಕೆಯು ಹಾಗೂ ದೃಡಪಡಿಸಿಕೊಳ್ಳುವ ಕಾರ್ಯವು ಬಾಕಿಯಿದೆ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳ ಮೇಲಾಗುವ ಪರಿಣಾಮಗಳನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.	ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದಂತೆ ಪಡೆಯಬೇಕಾದ ಹಾಗೂ ಪಾವತಿಸಬೇಕಾದ ಮೊತ್ತವನ್ನು ಆಯಾ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಲೆಕ್ಕ ಘಟಕಗಳು ಹಾಗೂ ನಿಗಮ ಕಾರ್ಯಾಲಯವು ತ್ವರಿತವಾಗಿ ಸಮನ್ವಯಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
xxxiv	ಕವಿಪ್ರನಿನಿಯು ವಿಸಕಂಗಳಿಂದ ವಿಳಂಬವಾಗಿ ಪಾವತಿಸಿದ ಮೊತ್ತಗಳ ಮೇಲೆ ಅಧಿಕಕರ/ಮೇಲುಕರ (Surcharge) ಶೇಕಡ 1.25 ರಷ್ಟು ವಿಧಿಸಲಾಗಿರುವುದಿಲ್ಲ. ಸದರಿ ಮೇಲುಕರ/ ಅಧಿಕಕರವನ್ನು ವಿಧಿಸುವುದು ವಿಸಕಂಗಳಿಗೆ ಮಾಡಿಕೊಂಡ ಪ್ರಸರಣ ಒಪ್ಪಂದದನ್ವಯ ಹಾಗೂ ಕ.ವಿ.ನಿ.ಆಯೋಗದ ದರ ಪಟ್ಟಿ ನಿಯಮಾವಳಿ 2006ರಲ್ಲಿ ಸೂಚಿಸಿರುವಂತೆ ಪಾಲಿಸಲಾಗಿರುವುದಿಲ್ಲ. ಹಾಗೂ ವಿಳಂಬವಾಗಿ ಪಾವತಿಸಿರುವ ಪ್ರಸರಣ ಶುಲ್ಕಗಳಿಗೆ ಸಂಬಂಧಪಟ್ಟಂತೆ ಅವಶ್ಯವಿರುವ ಮಾಹಿತಿಯನ್ನು ಒದಗಿಸಲಾಗದ ಕಾರಣ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.	ಮೇಲಿನ ಕ್ರಮ ಸಂಖ್ಯೆ (xx) ರ ಪ್ರತ್ಯುತ್ತರ ನೋಡಿ.

ಆಂತರಿಕ ಆರ್ಥಿಕ ನಿಯಂತ್ರಣದ ಮೇಲಿನ ಶಾಸನಬದ್ಧ ಪರಿಶೋಧಕರ ವರದಿಗೆ ಉತ್ತರ

ಕ್ರ. ಸಂ.	ಶಾಸನಬದ್ಧ ಪರಿಶೋಧಕರ ಗಮನಿತ ಅಂಶಗಳು	ವ್ಯವಸ್ಥಾಪಕ ಮಂಡಳಿಯ ಉತ್ತರ
i)	ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಈ ಕೆಳಗೆ ಸೂಚಿಸಿರುವ ವಿಷಯಗಳಲ್ಲಿ ಕಂಪನಿಯು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ: (ಅ) ಕಾಲ ಕಾಲಕ್ಕೆ ಆಸ್ತಿ ಪುಸ್ತಕಗಳನ್ನು ಪ್ರತಿಯೊಂದು ಆಸ್ತಿಗೆ ಸಂಬಂಧಿಸಿದ ಮಾಹಿತಿಯೊಂದಿಗೆ ನವೀಕರಿಸದಿರುವುದು. (ಆ)ವರದಿಯ ದಿನಾಂಕದಂದು ದುರ್ಬಲಗೊಂಡ ಆಸ್ತಿಗಳ ಗುರುತಿಸುವಿಕೆ. (ಇ) ಚರಾಸ್ತಿಗಳನ್ನು ಹೊರತು ಪಡಿಸಿ ಸ್ತಿರಾಸ್ಥಿಗಳ ಭೌತಿಕ ಪರೀಶೀಲನೆ ವರದಿ ಬಗ್ಗೆ ಯಾವುದೇ ನಿರ್ದಿಷ್ಟ ಕಾರ್ಯ ರೂಪ ಇಲ್ಲದೆ ಇರುವುದು. (ಈ)ಚರಾಸ್ತಿ ಪರೀಶೀಲನಾ ಮಾಹಿತಿಯನ್ನು ಆಸ್ತಿ ಪುಸ್ತಕದೊಂದಿಗೆ ಸಮನ್ವಯಗೊಳಿಸದೇ ಇರುವುದು. (ಉ)ಬಂಡವಾಳೀಕರಿಸುವ ಸಮಯದಲ್ಲಿ ಕಾರ್ಯಸ್ಥಗಿತ ವೆಚ್ಚವನ್ನು (Decommissioning Cost) ಅಂದಾಜಿಸಿ ಆಸ್ತಿ ಸ್ಥಾವರ ಮತ್ತು ಉಪಕರಣದ ಭಾಗವಾಗಿ ಪರಿಗಣಿಸದೇ ಇರುವುದು. ಮೇಲಿನಕೊರತೆಗಳುಹಣಕಾಸಿನನಿರೂಪಣಾಪಟ್ಟಿಯಲ್ಲಿನಆಸ್ತಿ ಸ್ಥಾವರ ಮತ್ತು ಉಪಕರಣಗಳ ಹಾಗೂ ಅದಕ್ಕೆ ಸಂಬಂಧಿಸಿದ ಸವಕಳಿ ಮತ್ತು ನಿರ್ವಹಣ ವೆಚ್ಚಗಳ ಬಗ್ಗೆ ಗಮನಾರ್ಹ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಡಬಹುದಾಗಿದೆ.	ಅ) ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (xiii) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು ಆ) ಕಂಪನಿಯು ವಿದ್ಯುತ್ ಪ್ರಸರಣ ಕಾರ್ಯವನ್ನು ನಿರ್ವಹಿಸುತ್ತಿರುವುದರಿಂದ, ತನ್ನ ಆಸ್ತಿಗಳನ್ನು ವರ್ಷದ 365 ದಿನಗಳೂ ಉತ್ತಮಸ್ಥಿತಿಯಲ್ಲಿ ನಿರ್ವಹಿಸ ಬೇಕಾಗಿರುತ್ತದೆ ಆದುದರಿಂದ ವರದಿಯ ದಿನಾಂಕದಂದು ಯಾವುದೇ ಆಸ್ತಿಗಳ ದುರ್ಬಲತೆ ಇರುವುದಿಲ್ಲ. ಇ ಮತ್ತು ಈ). ವಿದ್ಯುತ್ ಪ್ರಸರಣ ಮಾರ್ಗಗಳು ರಾಜ್ಯಾದ್ಯಂತ ಗುಡ್ಡ ಗಾಡು ಪ್ರದೇಶದಲ್ಲಿ ಮತ್ತು ಅರಣ್ಯ ಪ್ರದೇಶದಲ್ಲಿ ವಿಸ್ತರಣೆಗೊಂಡಿರುವುದರಿಂದ ಭೌತಿಕವಾಗಿ ಸದರಿ ಪ್ರಸರಣ ಮಾರ್ಗಗಳನ್ನು ನಿಯತಕಾಲಿಕವಾಗಿ ಪರೀವಿಕ್ಷಣೆ ಮಾಡುವುದು ಪ್ರಾಯೋಗಿಕವಲ್ಲ. ಆದಾಗ್ಯೂ ವಿದ್ಯುತ್ ಪ್ರಸರಣ ಮಾರ್ಗಗಳು ಮತ್ತು ಇತರೆ ಆಸ್ತಿಗಳಿಂದ ಎಲ್ಲಿಯವರೆಗೆ ಪ್ರಸರಣ ಕಾರ್ಯವನ್ನು ನಿರ್ವಹಿಸಲಾಗುತ್ತಿರುತ್ತದೆಯೋ ಅಲ್ಲಿಯವರೆಗೆ ಭೌತಿಕವಾಗಿ ಸದರಿ ಆಸ್ತಿಗಳು ಪ್ರಸರಣ ಕಾರ್ಯಕ್ಕೆ ಲಭ್ಯವಿರುತ್ತದೆ. ಉ) ಪ್ರಸರಣ ಆಸ್ತಿಗಳ ಸೃಷ್ಟಿಗೆ ಬಳಸಲಾಗುವ ಸಾಧನಗಳ ಜೀವಿತಾವಧಿ ಅನಿಶ್ಚಿತತೆಯನ್ನು ಪರಿಗಣಿಸಿ ಬಂಡವಾಳೀಕರಣದ ಸಮಯದಲ್ಲಿ ಕಳಚಿದ ಆಸ್ತಿಗಳ ಮೌಲ್ಯವನ್ನು ಅಂದಾಜು ಮಾಡಲು ನಿಜರೂಪದಲ್ಲಿ ಸಾಧ್ಯವಿಲ್ಲ.
ii)	ಭೂಮಿಯ ಮಾಲಿಕತ್ವ ಗುರುತಿಸುವಿಕೆಯಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲದ ಕಾರಣ ಭೂಮಿಯನ್ನು ಸೂಕ್ತವಾಗಿ ಗುತ್ತಿಗೆ ಆಧಾರಿತ ಭೂಮಿ ಮತ್ತು ಮಾಲೀಕತ್ವ ಭೂಮಿ ಎಂದು ವರ್ಗೀಕರಿಸದ ಕಾರಣ ಹಾಗೂ ಅದರ ಋಣಮುಕ್ತತೆಯ ಬಗ್ಗೆ ಹಣಕಾಸಿನ ನಿರೂಪಣಾಪಟ್ಟಿಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶವಾಗಬಹುದಾಗಿದೆ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (ix) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.
iii)	ಕಂಪನಿಯು ರಿಯಾಯಿತಿ ದರದಲ್ಲಿ/ ಉಚಿತವಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, IND-AS 20 'ಸರ್ಕಾರದ ಧನ ಸಹಾಯಕ್ಕಾಗಿ ಲೆಕ್ಕ ಪತ್ರ ನಿರ್ವಹಣೆ ಮತ್ತು ಸರ್ಕಾರಿ ಕೊಡುಗೆ ಬಹಿರಂಗ ಪಡಿಸುವಿಕೆಯ' '(Accounting for Government Grants and Disclosure of Government Assistance)' ಬಗ್ಗೆ ಪರಿಣಾಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಹಣಕಾಸಿನ ನಿರೂಪಣಾ ಪಟ್ಟಗಳಲ್ಲಿ ಪಿಪಿಇ, ಋಣಮುಕ್ತತೆ (Amortization), ಕೊಡುಗೆ ಮತ್ತು ಇತರೆ ಆದಾಯಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (x) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.

iv)	ಈ ಕೆಳಗೆ ಸೂಚಿಸಿರುವ ವಿಷಯಗಳಲ್ಲಿ ಕಂಪನಿಯು ಪರಿಣಾಮಕಾರಿಯಾದ ಆಂತರಿಕ ಹಣಕಾಸು ನಿಯಂತ್ರಣ ವಿಧಾನ ಮತ್ತು ವ್ಯವಸ್ಥೆಗಳನ್ನು ಒಳಗೊಂಡಿರುವುದಿಲ್ಲ. (ಅ) ಆಸ್ತಿಯ ವೆಚ್ಚವು ಸಂಪೂರ್ಣವಾಗಿ ಆಸ್ತಿ, ಸ್ಥಾವರ ಮತ್ತು ಉಪಕರಣ ಕಾರ್ಯಾಚರಣೆಯಾಗುವ ದಿನದವರೆಗೆ ಪರಿಗಣಿಸುವ ಬಗ್ಗೆ. (ಆ) ಕಂಪನಿಯ ನಿಯಮದ ಪ್ರಕಾರ ವೆಚ್ಚ ನಮೂದು ಪುಸ್ತಕದ ಸಮರ್ಪಕ ನಿರ್ವಹಣೆ ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ, ಅದರ ಮೇಲಿನ ಸವಕಳಿ, ಗುತ್ತಿಗೆದಾರರ ಹೊಣೆಗಾರಿಕೆಗಳು ಅತಿ ಕಡಿಮೆ/ ಹೆಚ್ಚು ಬಿಂಬಿಸಿದಂತಾಗಿ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಅ) ಕವಿಪ್ರನಿನಿಯು ತನ್ನ ಆಸ್ತಿಗಳನ್ನು ಬಂಡವಾಳೀಕರಣ ಮಾಡುವಾಗ ಉಪಕರಣದ ಬೆಲೆಯನ್ನು ಹಾಗೂ ಸದರಿ ಉಪಕರಣಕ್ಕೆ ಸಂಬಂಧಿಸಿದ ಖರ್ಚುಗಳನ್ನು ಸಹ ಪರಿಗಣಿಸಿ 'ಸಿ' ರಿಜಿಸ್ಟರ್‌ನಲ್ಲಿರುವಂತೆ ಕಾರ್ಯಾರಂಭದ ದಿನದವರೆಗೆ ವೆಚ್ಚಗಳನ್ನು ಪರಿಗಣಿಸಿ ಬಂಡವಾಳೀಕರಣ ಮಾಡಲಾಗುತ್ತಿದೆ. ಮುಂದುವರೆದು ಆಸ್ತಿ ಬಂಡವಾಳೀಕರಣ ಆದ ನಂತರ ಯಾವುದೇ ಬಿಲ್ಲುಗಳು ಮತ್ತು ವೆಚ್ಚಗಳನ್ನು ನಿರ್ವಹಿಸಿದಲ್ಲಿ ಸದರಿ ವೆಚ್ಚಗಳನ್ನು ಕೂಡ ಬಂಡವಾಳೀಕರಿಸಿ ಪರಿಷ್ಕೃತ ಆಸ್ತಿಯ ಮೌಲ್ಯದ ಮೇಲೆ ಸವಕಳಿಯನ್ನು ಪೂರ್ವಾನ್ವಯವಾಗಿ ಲೆಕ್ಕೀಕರಿಸಲಾಗುವುದು. ಆದಾಗ್ಯೂ ವರದಿ ಮಾಡಿದ ದಿನಾಂಕದಂದು ಯಾವುದೇ ಬಂಡವಾಳೀಕರಣಗೊಳಿಸದೇ ಬಾಕಿ ಉಳಿದಿರುವ ವೆಚ್ಚಗಳನ್ನು ಗುರುತಿಸಿ ಕಾರ್ಯಾದೇಶದನ್ವಯ (DWA) ಲೆಕ್ಕಗಳಲ್ಲಿ ಅವಕಾಶವನ್ನು(Provisions) ಕಲ್ಪಿಸಲಾಗುವುದು. ಅ) ಬಹುತೇಕ ಪ್ರಕರಣಗಳಲ್ಲಿ ಕಂಪನಿ ನೀತಿಯ ಅನ್ವಯ 'ಸಿ' ಪುಸ್ತಕವನ್ನು ನಿರ್ವಹಿಸಲಾಗುತ್ತಿದೆ. ಇನ್ನು ಕೆಲವು ಸಂದರ್ಭಗಳಲ್ಲಿ ಪರಿಶೋಧಕರು ಭೇಟಿ ನೀಡಿದ ಸಂದರ್ಭದಲ್ಲಿ ನವೀಕರಿಸಿರುವುದಿಲ್ಲ, ತದನಂತರ ನವೀಕರಿಸಲಾಗಿದೆ.
v)	ಕಂಪನಿಯು ಸಾಲಗಳ ವೆಚ್ಚವನ್ನು ಬಂಡವಾಳೀಕರಿಸುವ ನಿಯಮವನ್ನು ಸರಾಸರಿ ವಿಧಾನದ (Weighted Average) ಆಧಾರದ ಮೇಲೆ 2015 ರಡಿಯಲ್ಲಿ ಹೊರಡಿಸಿರುವ IND AS 23 Borrowing Cost ಅನ್ವಯ ಕಂಪನಿಯ ನಿಯಮ ಪಾಲಿಸುತ್ತಿರುವ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಮೇಲಿನ ಸವಕಳಿಗಳು, ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (vi) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.
vi)	ಕಂಪನಿಯು ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಬಂಡವಾಳೀಕರಿಸುವಾಗ ಸಿಬ್ಬಂದಿ ವೆಚ್ಚಗಳು, ಸಾಲಗಳ ವೆಚ್ಚಗಳನ್ನು ಅನುಪಾತದಲ್ಲಿ ಹಂಚಿಕೆ ಮಾಡುವಾಗ ಅಸಂಗತವಾಗಿ ಒಂದೊಂದು ಘಟಕದಲ್ಲಿ ಒಂದೊಂದು ರೀತಿಯಲ್ಲಿ ಪಾಲಿಸಲಾಗುತ್ತಿದ್ದು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (xiv) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.
vii)	ಕಂಪನಿಯು ನಿಗಧಿತ ಸಮಯದಲ್ಲಿ ಕಾರ್ಯಾರಂಭ ಪ್ರಮಾಣ ಪತ್ರವನ್ನು ನಿಗಧಿತ ಅವಧಿಯಲ್ಲಿ ನೀಡುವ ಬಗ್ಗೆ ಪರಿಣಾಮಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ನಿರ್ಮಾಣ ಹಂತದಲ್ಲಿರುವ ವೆಚ್ಚಗಳು (EDC), ಸಾಲಗಳ ವೆಚ್ಚಗಳನ್ನು ಒಳಗೊಂಡಂತೆ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ಕಾರ್ಯಾರಂಭ ಪ್ರಮಾಣ ಪತ್ರವು ಮುಂಚಿತವಾಗಿ/ ವಿಳಂಬವಾಗಿ ನೀಡುವುದರಿಂದ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (xiv) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.

viii)	ಕಂಪನಿಯು ಬಿಡುಗಡೆಗೊಳಿಸಿದ ಆಸ್ತಿಗಳ ಮೇಲೆ ಸವಕಳಿಯನ್ನು ತೆಗೆದು ಆಸ್ತಿಗಳನ್ನು ಇಳಿಸಿದ ಮೌಲ್ಯದಲ್ಲಿ ಬೇರೆ ಲೆಕ್ಕ ಘಟಕಕ್ಕೆ ವರ್ಗಾಯಿಸಿದಲ್ಲಿ ಅದರ ಮೇಲಿನ ಸವಕಳಿಯನ್ನು ಹಾಗೂ ಆಸ್ತಿಯ ಬೆಲೆಯನ್ನು ಸೂಕ್ತವಾಗಿ ಪರಿಗಣಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮುಂದುವರಿಸುವ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (xiii) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.
ix)	ಕಂಪನಿಯ ಸಿಬ್ಬಂದಿ ವೆಚ್ಚ ಬೃಹತ್ ಕಾಮಗಾರಿ ವಿಭಾಗಗಳಲ್ಲಿ ಮೇಲ್ವಿಚಾರಣ ಶುಲ್ಕದೊಂದಿಗೆ ನಿವ್ವಳಗೊಳಿಸುತ್ತಿರುವುದನ್ನು ತಾಂತ್ರಿಕವಾಗಿ ರೂಪಿಸುವ ವಿಷಯಗಳಲ್ಲಿ ಸಾಕಷ್ಟು ಪರಿಣಾಮಕಾರಿಯಾದ ನಿಯಮ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮೇಲೆ ಸಿಬ್ಬಂದಿ ವೆಚ್ಚವನ್ನು ಸರಿಯಾದ ಪ್ರಮಾಣದಲ್ಲಿ ಹಂಚಿಕೆ ಮಾಡದೆ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ಸಿಬ್ಬಂದಿ ವೆಚ್ಚವು ಉತ್ಪ್ರೇಕ್ಷಿತವಾಗಿ (Over Statement) ಹಣಕಾಸಿನ ಹೇಳಿಕೆಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (xiv) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.
x)	ಕಂಪನಿಯಲ್ಲಿ ಯೋಜನೆಗಳ ಸಮೀಕ್ಷೆ ವರದಿ/ ಕಾರ್ಯಸಾಧ್ಯತೆಗಳನ್ನು ನಿಯತ ಕಾಲಿಕವಾಗಿ ಪರಾಮರ್ಶಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ: ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ನಿವ್ವಳ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ದಿನಾಂಕ: 20.03.2017 ರಂದು ನಡೆಸಲಾದ 73ನೇ ತಾಂತ್ರಿಕ ಸಹಕಾರ ಸಮಿತಿಯ ಸಭೆಯಲ್ಲಿ, ಮಾರ್ಚ್ 2012 ರ ಮುಂಚಿನ ಅವಧಿಯಲ್ಲಿ ಟಿಎಸಿ/ಟಿಸಿಸಿ ಸಭೆಯಲ್ಲಿ ತೆರವುಗೊಳಿಸಲಾದ ಆನೇಕ ಯೋಜನೆಗಳನ್ನು ಇವರೆಗೂ ಕೈಗೊಂಡಿರುವುದಿಲ್ಲ ಹಾಗೂ ಭೂ ವಿವಾದಗಳು, ನಿರ್ಬಂಧನೆಗಳು, ಇತ್ಯಾದಿಗಳು ತದನಂತರ ಬೆಳಕಿಗೆ ಬಂದ ಕಾರಣದಿಂದಾಗಿ ಪೂರ್ವ ಸಿದ್ಧತೆಗೆ ಅಂದಾಜು ಪಟ್ಟಿಯನ್ನು ಸಲ್ಲಿಸದೆ ಇರುವುದು ಸಮಿತಿಯ ಗಮನಕ್ಕೆ ಬಂದಿದ್ದು. ಮಾರ್ಚ್ 2012 ಕ್ಕೆ ಮುಂಚಿನ ಪ್ರಸ್ತಾವನೆಗಳಿಗೆ ಹೊಸ ಆಯಾಮ ನೀಡಲು ಹಾಗೂ ಆದಿಸೆಯಲ್ಲಿ ಮುಂದುವರೆಯುವ. ಮೊದಲು ಅವುಗಳನ್ನು ಪ್ರಸ್ತುತ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಆಧ್ಯಯನ ಮಾಡಬೇಕೆಂದು ಸಮಿತಿಯು ಅಭಿಪ್ರಾಯ ಪಟ್ಟಿದೆ. ಹಾಗಾಗಿ ಮಾರ್ಚ್ 2012 ರ ಮುಂಚಿನ ಅವಧಿಯಲ್ಲಿ ಟಿಎಸಿ/ ಟಿಸಿಸಿ ಸಭೆಯಲ್ಲಿ ಅನುಮೋದಿಸಲಾದ ಕಾಮಗಾರಿಗಳನ್ನು ಮರುಸಲ್ಲಿಸಲು ಸಮಿತಿಯು ನಿರ್ಧರಿಸಿತು. ಮೇಲಿನ ತೀರ್ಮಾನದಿಂದ ಮಾರ್ಚ್ 2012 ರ ಮುಂಚಿನ ಅವಧಿಯಲ್ಲಿ ಲೆಕ್ಕ ಶೀರ್ಷಕ್ಕೆ 17.301 ರ ಅಡಿಯಲ್ಲಿ ಲೆಕ್ಕಿಸಲಾಗಿದ್ದೆ ಸಮೀಕ್ಷೆ ಮತ್ತು ಕಾರ್ಯಸಾಧ್ಯತೆಯ ಅಧ್ಯಾಯನ ನಡೆಸಲು ತಗಲಿರುವ ವೆಚ್ಚವನ್ನು ಫಲದಾಯಕವಲ್ಲದ ಬಂಡಬಾಳ ವೆಚ್ಚವೆಂದು ಲೆಕ್ಕಿಸಲು ದಿನಾಂಕ: 20.12.2017ರ ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಆ ಪ್ರಕಾರವಾಗಿ ಪ್ರಸಕ್ತ ವರ್ಷ 2017–18 ರಲ್ಲಿ, ಈ ದಿನದ ವರೆಗೆ ಕಾರ್ಯಾರಂಭಗೊಳ್ಳದ ಮಾರ್ಚ್ 2012ರ ಮುಂಚಿನ ಅವಧಿಯಲ್ಲಿ ಸಮೀಕ್ಷೆ ಮತ್ತು ಕಾರ್ಯಸಾಧ್ಯತೆಯ ಅಧ್ಯಾಯನ ನಡೆಸಲು ತಗಲಿರುವ ವೆಚ್ಚದ ಮೊತ್ತ ರೂ. 79.42 ಲಕ್ಷಗಳಷ್ಟನ್ನು ಫಲದಾಯಕವಲ್ಲದ ಬಂಡವಾಳ ವೆಚ್ಚವೆಂದು (ಲೆಕ್ಕ ಶೀರ್ಷಿಕ್ಕೆ 79.532) ಲೆಕ್ಕಿಸಲಾಗಿದೆ. ಮುಂದುವರೆದಂತೆ, ಪ್ರಸಕ್ತ ವರ್ಷ 2017–18 ರಲ್ಲಿ ಯಾವ ಯಾವ ಕಾಮಗಾರಿಗಳು ಆರಂಭವಾಗಿದೆಯೊ, ಅಂತಹ, ಕಾಮಗಾರಿಗಳಿಗೆ ಸಂಬಂಧಿಸಿದ ಸಮೀಕ್ಷೆ ಮತ್ತು ಕಾರ್ಯಸಾಧ್ಯತೆಯ ಅಧ್ಯಯನ ನಡೆಸಲು ತಗಲಿರುವ ವೆಚ್ಚವನ್ನು CWIP ಗೆ ವರ್ಗಾಯಿಸಲಾಗಿದೆ.

xi)	ಕಂಪನಿಯು ಬಾಡಿಗೆ ನೀಡಿರುವ ಕಛೇರಿ ಕಟ್ಟಡಗಳು/ಸಿಬ್ಬಂದಿಯ ವಸತಿ ಗೃಹಗಳನ್ನು ಹೂಡಿಕೆ ಮಾಡಲಾಗಿರುವ ಆಸ್ತಿಗಳೆಂದು ಪರಿಗಣಿಸುವ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ಹೂಡಿಕೆ ಆಸ್ತಿಗಳ ವಿಷಯದಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (xv) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.
xii)	<u>ಸ್ವಯಂ ನಿರ್ವಹಣ ಕಾಮಗಾರಿಗಳು ಮತ್ತು ನಿಧಿ ದೇಣಿಗೆ ಕಾಮಗಾರಿಗಳು:</u> ಕಂಪನಿಯು ಪ್ರತಿಯೊಂದು ಸ್ವಯಂ ಕಾಮಗಾರಿವಾರು ಮತ್ತು ಠೇವಣಿವಂತಿಗೆ ಕಾಮಗಾರಿವಾರು ಸಂಬಂಧಪಟ್ಟ ಮಾಹಿತಿಗಳನ್ನೊಳಗೊಂಡ ನಿಗಧಿತ ನಮೂನೆಯಲ್ಲಿ ನೋಂದಣಿ ಪುಸ್ತಕಗಳನ್ನು ನಿರ್ವಹಿಸುವ ಮತ್ತು ಖಚಿತ ಪಡಿಸಿಕೊಳ್ಳುವ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ನಿಗಧಿತ ಅವಧಿಯಲ್ಲಿ ಬಂಡವಾಳೀಕರಣಗೊಳಿಸುವ ಬಗ್ಗೆ, ಸವಕಳಿ, ಗ್ರಾಹಕರ ಕೊಡುಗೆ ಮತ್ತು ಆದಾಯ ಗುರುತಿಸುವಿಕೆಯಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಸ್ವಯಂ ನಿರ್ವಹಣ ಕಾಮಗಾರಿಗಳಿಗೆ ಪ್ರಗತಿ ಪರೀಶೀಲನೆಯ ಮೇಲ್ವೀಚಾರಣೆ ಸ್ಥಾಪನ ಕಾರ್ಯ ಅಂತಿಮಗೊಳಿಸುವಿಕೆ, ಸ್ಥಾಪನೆಯ ಕಾರ್ಯರಂಭ ಹಾಗೂ ಸದರಿ ಕಾಮಗಾರಿಗಳಿಂದ ರಚಿಸಲ್ಪಟ್ಟ ಆಸ್ತಿಗಳನ್ನು ಹಸ್ತಾಂತರಿಸುವ ವಿವರಗಳನ್ನು ನಮೂದಿಸುವ ಪುಸ್ತಕವನ್ನು ಲೆಕ್ಕ ಘಟಕಗಳಲ್ಲಿ ನಿರ್ವಹಿಸಲು ಸುತ್ತೋಲೆಯಲ್ಲಿ ಈಗಾಗಲೇ ಸೂಚನೆ ನೀಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಮಾರ್ಚ್ ಅಂತಿಮ ಲೆಕ್ಕಗಳಲ್ಲಿ ಅನುಬಂಧವನ್ನು ವಿಸ್ಯಾಸಗೊಳಿಸಿ ಲೆಕ್ಕ ಘಟಕಗಳಿಂದ ಸಂಬಂಧಿತ ಮಾಹಿತಿಯನ್ನು ಪಡೆಯಲಾಗಿದೆ. ನಿಧಿ ದೇಣಿಗೆ ಕಾಮಗಾರಿಗಳ ಸಂಬಂಧಿತ ಶೆಡ್ಯೂಲ್‌ಗಳ ಹಾಗೂ 'ಸಿ' ಪುಸ್ತಕ ಅನ್ವಯ ಮೇಲ್ವಿಚಾರಣೆಯನ್ನು ಮಾಡಲಾಗುತ್ತಿದೆ. ಆದಾಗ್ಯೂ, ಪ್ರಸುತ್ತ ಕೆಲಸದ ಸ್ಥಿತಿಯನ್ನು ಖಚಿತ ಪಡಿಸಿಕೊಳ್ಳಲು ಸೂಕ್ತವಾದ ಸೂಚನೆಗಳನ್ನು ನೀಡಲಾಗುವುದು.
xiii)	ಕಂಪನಿಯು ಕರ್ನಾಟಕ ವಿದ್ಯುತ್ ಗ್ರಿಡ್ ಕೋಡ್, 2015 ರನ್ವಯ ಗ್ರಿಡ್ ಸಂಪರ್ಕಿಸುವ ಅರ್ಜಿದಾರರಿಗೆ ಸೂಕ್ತ ಅಂತರ್ ಸಂಪರ್ಕ ಅನುಮೋದನೆಯ ಹಂಚಿಕೆಗೆ ಸಂಬಂಧಿಸಿದಂತೆ ಪರಸ್ಪರ ಸಂಪರ್ಕದ ಒಪ್ಪಂದ ಸಹಿ ಮಾಡುವಿಕೆಯ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ನಿಗಧಿತ ಅವಧಿಯಲ್ಲಿ ಸ್ವ ವೆಚ್ಚ ಕಾಮಗಾರಿಗಳು/ ಠೇವಣಿವಂತಿಗೆ ಕಾಮಗಾರಿಗಳ ಬಂಡವಾಳೀಕರಣಗೊಳಿಸುವ ಬಗ್ಗೆ, ಸವಕಳಿ, ಗ್ರಾಹಕರ ಕೊಡುಗೆ ಕಾರ್ಯ ಮತ್ತು ನಿರ್ವಹಣೆ ವೆಚ್ಚ ಮತ್ತು ಆದಾಯ ಗುರುತಿಸುವಿಕೆಯಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	2015ರ ವಿದ್ಯುತ್ ಗ್ರಿಡ್ ಕೋಡ್ ಅನ್ವಯ ಕವಿಪ್ರನಿನಿಯು ವಿದ್ಯುತ್ ಸಂಪರ್ಕದ ಒಪ್ಪಂದದ ಕರಡು ಪ್ರತಿಯನ್ನು ಸಿದ್ಧಪಡಿಸಲಾಗಿದೆ. ನಿಗಮದ ಅನಮೋದನೆ ಪಡೆದ ನಂತರ ದಿನಾಂಕ 10 ಸೆಪ್ಟಂಬರ್ 2018 ರಂತೆ ಮುಂಚೆ ಕ.ವಿ.ನಿ ಆಯೋಗದ ಅನುಮೋದನೆಗಾಗಿ ಸಲ್ಲಿಸಲಾಗುವುದು.
xiv)	ಕಂಪನಿಯು ಮೇಲ್ವಿಚಾರಣ ಶುಲ್ಕವನ್ನು ಲೆಕ್ಕೀಕರಿಸುವ ವಿಷಯದಲ್ಲಿ ಕಂಪನಿಯು 'ಶೇಕಡವಾರು ಕಾಮಗಾರಿ ಪೂರ್ಣಗೊಂಡ ವಿಧಾನದನ್ವಯ' ಕ್ರಮ ವಹಿಸುವ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಮುಂಚಿತವಾಗಿಯೇ ಆದಾಯವೆಂದು ಗುರುತಿಸಲಾಗುತ್ತಿದೆ ಇದರಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಸ್ವಯಂನಿರ್ಮಾಣಕಾಮಗಾರಿಗಳನ್ನುಸ್ವತಃಗ್ರಾಹಕನೆನಿರ್ಮಾಣ ಕಾರ್ಯ ಕೈಗೊಳ್ಳುತ್ತಾನೆ, ಮತ್ತು ಸದರಿ ಕಾಮಗಾರಿಗಳನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ನಡೆಸಲು ಕವಿಪ್ರನಿನಿಯು ಮೇಲ್ವಿಚಾರಣಾ ಶುಲ್ಕಗಳನ್ನು ಸಂಗ್ರಹಿಸಲಾಗುತ್ತದೆ. ಹೆಚ್ಚು ಪ್ರಕರಣಗಳಲ್ಲಿ ಮೇಲ್ವಿಚಾರಣಾ ಶುಲ್ಕ ಸಂಗ್ರಹಿಸಿದ ವರ್ಷವೇ ಮೇಲ್ವಿಚಾರಣೆ ನಡೆಸಲಾಗುವುದು. ಕೆಲವು ಪ್ರಕರಣಗಳಲ್ಲಿ ವರ್ಷಾಂತ್ಯದಲ್ಲಿ ಸಂಗ್ರಹಿಸಲಾದ (ಅಂದರೆ ಜನವರಿ, ಫಬ್ರವರಿ ಮತ್ತು ಮಾರ್ಚ್ ತಿಂಳುಗಳಲ್ಲಿ ಸಂಗ್ರಹಿಸಿದ) ಮೇಲ್ವಿಚಾರಣಾ ಶುಲ್ಕಗಳಿಗೆ ಸಂಬಂಧಿಸಿದ ಮೇಲ್ವಿಚಾರಣೆಯನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಮಾಡಲಾಗುತ್ತದೆ, ಇದು ಲೆಕ್ಕಗಳ ಮೇಲೆ ಗಣನೀಯ ಪ್ರಭಾವ ಬೀರುವಂತಹದ್ದಲ್ಲ.

xv)	ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ (IPP) ಕಾರ್ಯ ಮತ್ತು ಪಾಲನ ವೆಚ್ಚಗಳನ್ನು ನಿಗಧಿತ ಅವಧಿಯಲ್ಲಿ ಬೇಡಿಕೆ ಅಕರಣೆ ಮಾಡಿ ವಸೂಲಾತಿ ಮಾಡಿ, ಕಾರ್ಯ ಮತ್ತು ಪಾಲನ ವೆಚ್ಚಗಳ ನಿಖರತೆ ಹಾಗೂ ಪರಿಪೂರ್ಣತೆಗಳ ಬಗ್ಗೆ ಪರೀಶೀಲನೆ ಮಾಡುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಕಂಪನಿಯ ಲಾಭಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಕೆ.ಇ.ಆರ್.ಸಿ ಯಿಂದ ಅಗತ್ಯ ನಿರ್ದೇಶನಗಳನ್ನು ಪಡೆದು ಈ ವಿಷಯದಲ್ಲಿ ಸೂಕ್ತ ಸೂಚನೆಗಳನ್ನು ನೀಡಲಾಗುವುದು.
xvi)	ಕಂಪನಿಯು ಸ್ವ ವೆಚ್ಚ ಕಾಮಗಾರಿಗಳಲ್ಲಿ ಗ್ರಾಹಕರಿಂದ ಪಡೆದ ಕೊಡುಗೆಯನ್ನು ಠೇವಣಿವಂತಿಗೆ ಕಾಮಗಾರಿಗಳಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ (IPP) ಭೂಮಿ ಒದಗಿಸುವಲ್ಲಿನ ಹಿಂದಿರುಗಿಸದ ಒಂದು ಬಾರಿ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ, ಪೂರ್ಣಗೊಂಡ ಸ್ವ ವೆಚ್ಚ/ ಠೇವಣಿವಂತಿಗೆ ಕಾಮಗಾರಿಗಳ ಮೌಲೀಕರಣದ ಬಗ್ಗೆ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, IND-AS 18 ರ ಕಂದಾಯ ಅನುಬಂಧ 'ಸಿ ರಲ್ಲಿ ಸೂಚಿಸಿರುವ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಉಪಕರಣ, ಅದರ ಸವಕಳಿಗಳ, ಆದಾಯ ಗುರುತಿಸುವಿಕೆ, ಗ್ರಾಹಕರ ಸ್ವೀಕೃತಿಗಳು/ ಪಾವತಿಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಸದರಿ ಅವಲೋಕನಕ್ಕೆ ಸಂಬಂಧಿಸಿದಂತೆ, INDAS 18 ರ ಅನುಬಂಧ 'ಸಿ' ಅನ್ವಯಿಸುವಿಕೆಯನ್ನು ಪರಿಶೀಲಿಸಿ ಅದಕ್ಕನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.
xvii)	ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರ(IPP) ಸ್ವ ವೆಚ್ಚ ಕಾಮಗಾರಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅದರ ಮೌಲ್ಯವನ್ನು ವಸೂಲಾತಿ ಮಾಡುವ ವಿಷಯದಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ.ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಉಪಕರಣ, ಅದರ ಸವಕಳಿಗಳ, ಕಾರ್ಯ ಮತ್ತು ನಿರ್ವಹಣಾ ವೆಚ್ಚ, ಮೇಲ್ವಿಚಾರಣಾ ಶುಲ್ಕಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಗೌರವಾನ್ವಿತ ಆಯೋಗದ ನಿರ್ದೇಶನದ ಅನ್ವಯ, ಕವಿಪ್ರನಿನಿಯ ಐ.ಪಿ.ಪಿಗಳಿಂದ ಸಂಗ್ರಹಿಸುವ ಓ & ಎಂ ಶುಲ್ಕಗಳ ಸಂಬಂಧಿತ ಚರ್ಚಾ ಪತ್ರಗಳನ್ನು ಕ.ವಿ.ನಿ ಆಯೋಗಕ್ಕೆ ಸಲ್ಲಿಸಿದೆ. ಆಯೋಗವು ಸದರಿ ಚರ್ಚಾ ಪತ್ರಗಳನ್ನು ಸಾರ್ವಜನಿಕ ವಿಚಾರಣೆಗೆ ಪ್ರಕಟಿಸಿದೆ ದಿನಾಂಕ: 12.09.2018 ರಂದು ಅಥವಾ ಅಕ್ಕಿಂತ ಮಂಚಿತವಾಗಿ ಎಲ್ಲಾ ಪಾಲುದಾರರು ಅಭಿಪ್ರಾಯಗಳನ್ನು ಆಯೋಗಕ್ಕೆ ಸಲ್ಲಿಸಲು ಅಹ್ವಾನಿಸಲಾಗಿದೆ.
xviii)	**<u>ಕಾಮಾಗಾರಿ ಬಿಲ್ಲುಗಳ ಪ್ರಕ್ರಿಯೆ ಕುರಿತು:</u>** ಕಂಪನಿಯು ಗುತ್ತಿಗೆದಾರರ ಬಿಲ್ಲುಗಳ ಪ್ರಕ್ರಿಯೆಯಲ್ಲಿ ಈ ಕೆಳಗೆ ಸೂಚಿಸಿರುವ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸಲಾಗಿರುವುದಿಲ್ಲ. ಅ. ಕಾಮಾಗಾರಿಗಳ ಅಳತೆಗೆ ಸಂಬಂಧವಾಗಿ, ಕವಿಪ್ರನಿನಿಯ ಅಳತೆ ನಿಯಮ ಪುಸ್ತಕದ ಕಲಮು–5ರ ಪ್ರಕಾರ, ಎಲ್ಲಾ ಅಳತೆಗಳನ್ನು ಕೆಲಸ ಮಾಡುವ ಸ್ಥಳದಲ್ಲೇ, ಆ ಕೆಲಸವು ಪ್ರಗತಿಯಲ್ಲಿರುವಾಗಲೇ ದಾಖಲಿಸತಕ್ಕದ್ದು. ಆದರೆ, ಅಭ್ಯಾಸ ಕ್ರಮದ ಪ್ರಕಾರ, ಚಾಲ್ತಿ ಬಿಲ್ಲುಗಳನ್ನು ಸಿದ್ದಪಡಿಸಿ/ ಸ್ವೀಕರಿಸಿದ ನಂತರವಷ್ಟೇ ಅಳತೆ ಪುಸ್ತಕದಲ್ಲಿ ದಾಖಲಿಸಿ ಪರಿಪೂರ್ಣಗೊಳಿಸಲಾಗುತ್ತಿದೆ. ಆ. ಲೆಕ್ಕ ಪತ್ರಗಳ ವರದಿಯ ದಿನಾಂಕದಂದು ಪೂರ್ಣಗೊಂಡ ಬಂಡವಾಳ ಕಾಮಗಾರಿಗಳು/ನವೀಕರಿಸಲಾದ ಮತ್ತು ಆಧುನಿಕರೀಸಲಾದ ಕಾಮಗಾರಿಗಳು/ದುರಸ್ತಿ ಮತ್ತು ನಿರ್ವಹಣ ಕಾಮಗಾರಿಗಳು (ಪ್ರಮಾಣ ವ್ಯತ್ಯಾಸದ ಬಿಲ್ಲುಗಳನ್ನು ಒಳಗೊಂಡಂತೆ) ಪೂರ್ಣಗೊಂಡ ಬಗ್ಗೆ ಲೆಕ್ಕಗಳಲ್ಲಿ ಸೂಕ್ತವಾದ ಅವಕಾಶ ಕಲ್ಪಿಸಲಾಗಿರುವುದಿಲ್ಲ. ಇ. ದರ ವ್ಯತ್ಯಾಸದ ಬಿಲ್ಲುಗಳು ಮತ್ತು ಪರಿಮಾಣ ವ್ಯತ್ಯಾಸದ ಬಿಲ್ಲುಗಳನ್ನು ನಿಗಧಿತ ಸಮಯದಲ್ಲಿ ಪ್ರಕ್ರಿಯೆಗೊಳಿಸದಿರುವ ಬಗ್ಗೆ. ಈ. ಕಾಮಗಾರಿಗಳ ಆರ್.ಎ.ಬಿಲ್ಲುಗಳನ್ನು ಆಂತರಿಕ ಪರಿಶೋಧರು ಪರಿಶೀಲಿಸುತ್ತಿಲ್ಲ, ಕೇವಲ ಅಂತಿಮ ಬಿಲ್ಲುಗಳನ್ನು ಪರಿಶೀಲಿಸಲಾಗುತ್ತಿದೆ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಹೊಣೆಗಾರಿಕೆಗಳು ಮತ್ತು ಅವಕಾಶಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು, ಸ್ಥಿರಾಸ್ತಿಗಳು, ನಿರ್ಮಾಣ ಸಮದಲ್ಲಿ ಖರ್ಚಿನ ಹಂಚಿಕೆ (ಇಆಅ) ಸಾಲಗಳ ವೆಚ್ಚ, ಸವಕಳಿ ಮತ್ತು ಆಸ್ತಿ ನಿರ್ವಾಹಣೆ ವೆಚ್ಚಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.	ಅ) ಕಾಮಗಾರಿಗಳ ಪ್ರಗತಿಗೆ ಸಂಬಂಧಿಸಿದ ಎಲ್ಲಾ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸಲು ಸೂಚಿಸಲಾಗಿದೆ. ಆ) ಹೆಚ್ಚಿನ ಪ್ರಕರಣಗಳಲ್ಲಿ ಲೆಕ್ಕ ಪತ್ರ ವರದಿಯ ದಿನಾಂಕದೊಂದು ಪೂರ್ಣಗೊಂಡ ಎಲ್ಲಾ ಕಾಮಗಾರಿಗಳಿಗೂ ಲೆಕ್ಕ ಪತ್ರಗಳಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಆದ್ಯಾಗ್ಯೂ ಲೆಕ್ಕ ಘಟಕಗಳಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ದೇಶನ ನೀಡಲಾಗುವುದು. ಇ. ದರ ವ್ಯತ್ಯಾಸದ ಬಿಲ್ಲುಗಳು ಮತ್ತು ಪರಿಮಾಣ ವ್ಯತ್ಯಾಸದ ಬಿಲ್ಲುಗಳನ್ನು ವಿವಿಧ ಹಂತಗಳಲ್ಲಿ ಪ್ರಾಧಿಕಾರವು ಅನುಮೋದಿಸ ಬೇಕಾಗಿರುವುದರಿಂದ ಲೆಕ್ಕ ಘಟಕಗಳಲ್ಲಿ ಬಿಲ್ಲುಗಳನ್ನು ಅಂಗೀಕರಿಸಿ ಪಾವತಿಸುವ ಪ್ರಕ್ರಿಯೆಯಲ್ಲಿ ಹೆಚ್ಚಿನ ಸಮಯ ವ್ಯಯವಾಗುತ್ತಿದೆ. ಈ. ಆರ್.ಎ ಬಿಲ್ಲುಗಳನ್ನು ಪಾವತಿಸಿದ ನಂತರ ಆಂತರಿಕ ಪರಿಶೋಧನೆಗೆ ಒಳಪಡಿಸಲಾಗುತ್ತದೆ. ಆದರೆ ಅಂತಿಮ ಬಿಲ್ಲುಗಳನ್ನು ಪೂರ್ವ ತನಿಖೆಗೊಳಪಡಿಸಿ ಅಂಗೀಕರಿಸಿ ಪಾವತಿಸಲಾಗುತ್ತಿದೆ.

xix)	**<u>ಆಂತರಿಕ ಪರಿಶೋಧನೆ ವ್ಯವಸ್ಥೆ</u>** ಸೂಕ್ತವಾದ ಮತ್ತು ಗುಣಮಟ್ಟದ ಮಾನವಶಕ್ತಿಯ, ಲಭ್ಯತೆ ವ್ಯವಹಾರದ ವ್ಯಾಪ್ತಿಗೆ ಸಂಬಂಧಿಸಿದಂತೆ ಆಂತರಿಕ ಪರಿಶೋಧನೆ ಇಲಾಖೆಯನ್ನು ಬಲಪಡಿಸಬೇಕಾಗಿದೆ. ಆಂತರಿಕ ಲೆಕ್ಕ ಪರಿಶೋಧಕರು, ಆರ್.ಎ. ಬಿಲ್ಲುಗಳನ್ನು ಪರಿಶೀಲಿಸುವುದಿಲ್ಲ. ಆದರೆ ಅಂತಿಮ ಬಿಲ್ಲುಗಳನ್ನು ಮಾತ್ರ ಪರಿಶೀಲಿಸುತ್ತಾರೆ. ಮುಂದುವರೆದು, ಪ್ರಸ್ತುತ ಅತ್ಯಂತ ಪ್ರಮುಖ ಕ್ಷೇತ್ರಗಳಾದ ಆಸ್ತಿಯ ಬಂಡವಾಳೀಕರಣ, ಆದಾಯ ಮತ್ತು ಖರ್ಚಿನ ಗುರುತಿಸುವಿಕೆಗೆ ಸಂಬಂಧಿಸಿದಂತೆ ಇದರ ಕಾರ್ಯ ವ್ಯಾಪ್ತಿಯು, ಆಂತರಿಕ ಪರಿಶೋಧನೆಗೆ ಒಳಪಟ್ಟಿರುವುದಿಲ್ಲ. ಆಂತರಿಕ ಪರಿಶೋಧನೆ ಸಿಬ್ಬಂದಿಗಳಿಗೆ ನಿರಂತರವಾಗಿ ಸೂಕ್ತವಾದ ಕೌಶಲ್ಯಗಳು ಹಾಗೂ ಇತ್ತಿಚಿನ ತಂತ್ರಜ್ಞಾನಗಳೊಂದಿಗೆ ತರಬೇತಿಗೊಳಿಸುವಂತೆ ಯೋಜನೆಯನ್ನು ಸಿದ್ದಪಡಿಸಿಕೊಳ್ಳಬೇಕಾಗಿರುತ್ತದೆ.	ಆರ್ಥಿಕ ಸಲಹೆಗಾರರು ಆಂತರಿಕ ಪರಿಶೋಧನೆ ರವರ ಮೇಲ್ವಿಚಾರಣೆಯ ಹಾಗೂ ಕಾಲಕಾಲಕ್ಕೆ ನಿಗಮದಿಂದ ಹೊಡಿಸಲಾದ ಸುತ್ತೋಲೆಗಳು ಆಡಿಟ್ ಮಾನ್ಯೂಲ್‌ಗಳ ಅನ್ವಯ ಆಂತರಿಕ ಪರಿಶೋಧನೆ ನಡೆಸಲಾಗುವುದು. ನಗದು ವಹಿವಾಟುಗಳು ಲೆಕ್ಕಪತ್ರಗಳು ಮತ್ತು ಉಗ್ರಾಣ ವಹಿವಾಟುಗಳು ಖರೀದಿಯ ಪ್ರಸ್ತಾವನೆಗಳು, ಎಸ್.ಎಲ್.ಡಿ.ಸಿ ವಹಿವಾಟುಗಳು ಹಾಗೂ ಪ್ರಸರಣ ಬಿಲ್ಲಿಂಗ್ ಚಟುವಟಿಕೆಗಳು ಇತ್ಯಾದಿಗಳನ್ನು ಪರಿಶೀಲಿಸುವುದರ ಜೊತೆಗೆ ಆಡಿಟ್‌ನ್ನು ಎರಡು ಹಂತಗಳಲ್ಲಿ ನಿರ್ವಹಿಸಿಲಾಗುವುದು. ಅಂದರೆ ಪರಿಶೋಧನೆ ನಂತರ (Per Audit) ಮತ್ತು ಪರಿಶೋಧನಗಿಂತ ಮುಂಚೆ (Per Audit) ನಡೆಸಲಾಗುವುದು. ಪ್ರಸ್ತುತ ವಲಯ ಮಟ್ಟದಲ್ಲಿ ಆಂತರಿಕ ಪರಿಶೋಧನೆಯನ್ನು ಲಭ್ಯವಿರುವ ಕೆಲವೇ ಸಿಬ್ಬಂದಿಯಿಂದ ನಿರ್ವಹಿಸಲಾಗುತ್ತದೆ. **ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಟಿಪ್ಪಣಿ ಸಂಖ್ಯೆ**: ಕೆಸಿಓ-46/43982/12-13/240 ದಿನಾಂಕ: 19.10.2012 ರಲ್ಲಿ ಆಂತರಿಕ ಪರಿಶೋಧನಾ ಘಟಕವನ್ನು ಸದೃಡಗೊಳಿಸುವ ದೃಷ್ಟಿಕೋನದ ಅನ್ವಯ, ಲೆಕ್ಕ ಘಟಕಗಳ ಮತ್ತು ಅದರ ವ್ಯಾಪ್ತಿಗೆ ಒಳಪಡುವಂತ ವ್ಯವಹಾರಗಳನ್ನು ಪರಿಗಣಿಸಿ ವಿವರವಾದ ಪ್ರಸ್ತಾವನೆಯನ್ನು ಆಡಳಿತ ಅಧಿಕಾರಿಗೆ ಕಳುಹಿಸಲಾಗಿದೆ. ಮುಂದುವರೆದಂತೆ, ಆರ್ಥಿಕ ಸಲಹೆಗಾರರು (ಲೆ & ಸಂ) ರವರಿಗೆ ಮತ್ತೊಂದು ಪ್ರಸ್ತಾವನೆಯ ಟಿಪ್ಪಣಿ ಸಂಖ್ಯೆ: ಕೆಸಿಓ-46/31582/2015-16/141 ದಿನಾಂಕ: 04.02.2016 ರಲ್ಲಿ ಆಂತರಿಕ ಪರಿಶೋಧನಾ ಘಟಕವನ್ನು ಸದೃಡಗೊಳಿಸುವ ಅವಶ್ಯಕತೆಯ ಪ್ರಸ್ತಾವನೆಯನ್ನು ಸೂಕ್ತ ರೀತಿಯಲ್ಲಿ ಬಿಂಬಿಸಿ, ಸದರಿ ಪ್ರಸ್ತಾವನೆಯನ್ನು ಆಂತರಿಕ ಮಾನವ ಸಂಪ್ಮೂಲ ಸಮಿತಿಯ ಅಧ್ಯಕ್ಷರು ತಮ್ಮ ವರದಿಯಲ್ಲಿ ಸೇರಿಸಲು ಸಲ್ಲಿಸಲಾಯಿತ್ತು. ಕವಿಪ್ರನಿನಿಯ ಕೆಲಸದ ಹೊರೆ ಮತ್ತು ಮಾನವ ಶಕ್ತಿ ಆಧ್ಯನಕ್ಕೆ ಸಂಬಂಧಿಸಿದ (ASCI) ವರದಿಯ ಅನ್ವಯ ಆಂತರಿಕ ಸಮಿತಿಯೂ ಮಹಾಲೇಖ ಪರಿಶೋಧಕರು ಹಾಗೂ ಶಾಸನ ಬದ್ಧ ಪರಿಶೋಧಕರ ಅವಲೋಕನಗಳ ಉದ್ದೇಶ, ವಿಸ್ತರಣೆ ಹಾಗೂ ವ್ಯಾಪ್ತಿಯನ್ನು ಸೂಕ್ತವಾಗಿ ಪರಿಗಣಿಸಿ ಮೊದಲ ಆಧ್ಯತೆಯ ಮೇರೆಗೆ ಆಂತರಿಕ ಪರಿಶೋಧನೆಯನ್ನು ಸದೃಢಗೊಳೊಸಲು ಶಿಫಾರಸು ಮಾಡಲಾಗಿದೆ. **ನಿಗಮ ಕಛೇರಿಯ ಸುತ್ತೋಲೆಯ ಸಂಖ್ಯೆ**: ಕೆ.ವಿ.ಪ್ರ.ನಿ.ನಿ/ಬಿ-8/2344/09-10(6) ದಿನಾಂಕ: 24.03.2010 ರ ಪ್ರಕಾರ ಚಾಲನೆಯಲ್ಲಿರುವ ಬಿಲ್ಲುಗಳ ಸಂಬಂಧಿತ ಪರಿಶೋಧನೆಯನ್ನು ಹಣ ಸಂದಾಯದ ರಸೀದಿ (ಪರಿಶೋಧನೆಗಿಂತ ನಂತರ ಆಧಾರದ ಪರಿಶೋಧನೆ ಸಮಯದಲ್ಲಿ ನಡೆಸಲಾಗುತ್ತದೆ. ಅಂತಿಮ ಬಿಲ್ಲುಗಳನ್ನು ಪರಿಶೋಧನೆಯನ್ನು ಪರಿಶೋದನೆಯ ನಂತರದ ಆಧಾರದಲ್ಲಿ ನಡೆಸಲಾಗುತ್ತದೆ. ಆಸ್ತಿಯ ಬಂಡವಾಳೀಕರಣ, ಆದಾಯ, ಮತ್ತು ವೆಚ್ಚಗಳ ಗುರುತಿಸುವಿಕೆಗೆ ಸಂಬಂಧಿಸಿದಂತೆ ವಲಯದ ಉಪ ನಿಯಂತ್ರಣಾಧಿಕಾರಿಗಳು, ಹಾಗೂ ಸಹಾಯಕ ಲೆಕ್ಕಾಧಿಕಾರಿಗಳು, ನಿಯಮಿತವಾಗಿ ತಮ್ಮ ತಪಾಸಣೆ ಮತ್ತು ಪರಿಶೋಧನಾ ಸಮಯದಲ್ಲಿ ಆಸ್ತಿಯ ಬಂಡವಾಳೀಕರಣ, ಆದಾಯ, ಮತ್ತು ವೆಚ್ಚಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ. ಆದಾಗ್ಯೂ, ಆಸ್ತಿಯ ಬಂಡವಾಳೀಕರಣ, ಆದಾಯ, ಮತ್ತು ವೆಚ್ಚಗಳ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರೀಕರಿಸಲು ಸೂಚಿಸಲಾಗಿದೆ.

xx)	ವಿದ್ಯುತ್ ಸರಬರಾಜು ಕಂಪನಿ ಮತ್ತು ಕೆಇಆರ್‌ಸಿ (ಪ್ರಸರಣ ದರಗಳ ನಡುವೆ ನಿರ್ಧರಿಸುವ ನಿಬಂಧನೆಗಳು ಮತ್ತು ಷರತ್ತುಗಳು) ನಿಬಂಧನೆ 2006ರನ್ವಯ ಇರುವ ಪ್ರಸರಣ ಒಪ್ಪಂದದ ಅನ್ವಯ ವಿಳಂಬವಾಗಿ ಪಾವತಿಸಲ್ಪಟ್ಟ (surcharge)/ ರಿಯಾಯಿತಿಗಳನ್ನು ಸಂಗ್ರಹಿಸಲು ಅಥವಾ ಪಾವತಿಸಲು ಕಂಪನಿಯಲ್ಲಿ ಸೂಕ್ತವಾದ ಕಾರ್ಯ ನೀತಿಗಳು, ಕಾರ್ಯ ವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (xx) ಮತ್ತು (xxxiv) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.
xxi)	ಕಂಪನಿಯಲ್ಲಿ ಶಾಸನಬದ್ಧ ಬಾಕಿಯನ್ನು ಸಕಾಲಿಕ ಸಮಯದಲ್ಲಿ ಲೆಕ್ಕೀಕರಿಸಿ ಪಾವತಿಯ ವಿಷಯದಲ್ಲಿ ಪರಿಣಾಮಕಾರಿಯಾದ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಈ ಸಂಭಾವ್ಯವಾಗಿ ಅನ್ವಯವಾಗುವ ಬಡ್ಡಿ ಇತರೆ ಶುಲ್ಕದೊಂದಿಗೆ ಶಾಸನ ಬದ್ಧ ಬಾಕಿಗಳ ವಿಳಂಬಿತ ಪಾವತಿಗೆ ಕಾರಣವಾಗುತ್ತದೆ.	ಶಾಸನ ಬದ್ಧ ಬಾಕಿಗಳನ್ನು ಸರಿಯಾಗಿ ಲೆಕ್ಕಿಕರಿಸಿ, ನಿಗದಿತ ದಿನಾಂಕದೊಳಗೆ ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸಲಾಗುತ್ತಿದೆ ಕೆಲವು ಪ್ರಕರಣಗಳಲ್ಲಿ ವಿಳಂಬವಾಗಿರುವುದು ಗಮನಕ್ಕೆ ಬಂದಿದ್ದು ಅದನ್ನು ನಿಯಂತ್ರಿಸಲಾಗುವುದು.
xxii)	ಕಂಪನಿಯು (ಓ & ಎಂ) ಶುಲ್ಕಗಳು, ಪ್ರಸರಣ ಶುಲ್ಕಗಳು, ಮೇಲ್ವಿಚಾರಣೆ ಶುಲ್ಕಗಳು, ಪ್ರೋತ್ಸಾಹಕ ಧನಗಳು, ದಂಡ ವಸೂಲಾತಿ ಮುಂತಾದ ಇತರೆ ಆದಾಯಗಳನ್ನು ಗುರುತಿಸಿ ಲೆಕ್ಕಗಳಲ್ಲಿ ಅಕರಣೆ ಮಾಡಿ ಸಂಚಿತ ಆಧಾರದ ಮೇಲೆ ಲೆಕ್ಕೀಕರಿಸುವ ವಿಷಯದಲ್ಲಿ ಸೂಕ್ತ ಆಂತರಿಕ ನಿಯಂತ್ರಣವನ್ನು ಹೊಂದಿಲ್ಲ.	ಓ & ಎಂ ಶುಲ್ಕಗಳನ್ನು ಹಾಗೂ ಪ್ರಸರಣ ಶುಲ್ಕಗಳನ್ನು ಸಂಚಿತ ಆಧಾರದಲ್ಲಿ ಲೆಕ್ಕೀಕರಿಸಲಾಗುತ್ತಿದೆ, ಆದರೆ, ಕವಿಪ್ರನಿನಿಯ ಲೆಕ್ಕ ಪದ್ಧತಿ ನೀತಿಯ ಪ್ರಕಾರ ಪ್ರಸರಣ ಶುಲ್ಕಗಳನ್ನು, ಪ್ರೋತ್ಸಾಹಧನವನ್ನು, ದಂಡ ಶುಲ್ಕಗಳ ವಸೂಲಾತಿಯನ್ನು ನಗದು ಆಧಾರದಲ್ಲಿ ಲೆಕ್ಕೀಕರಿಸಕಾಗುತ್ತಿದೆ.
xxiii)	ಕಂಪನಿಯಲ್ಲಿ IND AS ಅನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿರುವ ಬಗ್ಗೆ ಕಂಡುಕೊಳ್ಳಲು ಪರಿಣಾಮಕಾರಿಯಾದ ಆಂತರಿಕ ನಿಯಂತ್ರಣ ವಿಧಾನವನ್ನು ಹೊಂದಿಲ್ಲ.	IND AS ನ ನಿಬಂಧನೆಗಳನ್ನು ಅನುಸರಿಸಲು ಸಾಕಷ್ಟು ನೀತಿಗಳನ್ನು ಮತ್ತು ಕಾರ್ಯ ವಿಧಾನಗಳನ್ನು ರೂಪಿಸಲಾಗಿದೆ. ಇದನ್ನು ಭವಿಷ್ಯದಲ್ಲಿ ಕಾರ್ಯಗತಗೊಳಿಸಲಾಗುವುದು.
xxiv)	<u>ಇತರೆ:</u> ಕಂಪನಿಯು ಇ ಎಮ್ ಡಿ ಮತ್ತು ಇತರೆ ಠೇವಣಿಗಳ ಕುರಿತು ದೃಢೀಕರಣ ಮತ್ತು ಸಮನ್ವಯದ ಬಗ್ಗೆ ಸೂಕ್ತವಾದ ಆಂತರಿಕ ನಿಯಂತ್ರಣ ಹೊಂದಿಲ್ಲ. ಇದರಿಂದ ನಿಖರವಾಗಿ ಆರ್ಥಿಕ ಪಟ್ಟಿಯಲ್ಲಿ ಪ್ರಸ್ತುತ ಹೊಣೆಗಾರಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.	ಮೂಲ ಸೌಕರ್ಯಗಳನ್ನು ನಿರ್ವಹಿಸುವುದು ಮತ್ತು ನಿರ್ಮಾಣ ಮಾಡುವುದು ಕವಿಪ್ರನಿನಿಯ ನಿರಂತರ ಪ್ರಕ್ರಿಯೆ ಆಗಿರುವುದರಿಂದ ವರ್ಷದಿಂದ ವರ್ಷಕ್ಕೆ ಬಹಳಷ್ಟು ಸಂಖ್ಯೆಯಲ್ಲಿ ಕೆಲಸಗಳನ್ನು ಗುತ್ತಿಗೆದಾರರು/ಫರ್ಮ ಮೂಲಕ ನಡೆಸುತ್ತಿದ್ದು, ಅವರಿಂದ ಇ ಎಮ್ ಡಿ ಮತ್ತು ಇತರೆ ಠೇವಣಿಗಳನ್ನು ಸಂಗ್ರಹಿಸಲಾಗುತ್ತದೆ. ಠೇವಣಿಯ ಸಂಗ್ರಹಣೆ ಮತ್ತು ಮರುಪಾವತಿಸಲು ಕೆಲಸವಾರು ಗುತ್ತಿಗೆದಾರರು/ಫರ್ಮವಾರು ಶೆಡ್ಯೂಲ್‌ಗಳನ್ನು ನಿರ್ವಹಿಸಲಾಗುತ್ತಿದೆ. ಆದರೆ ಶೆಡ್ಯೂಲ್‌ಗಳಲ್ಲಿ ಬಹಳಷ್ಟು ಅಂಶಗಳಿರುವುದರಿಂದ ವಾಸ್ತವವಾಗಿ ಪ್ರತಿಯೊಬ್ಬ ಗುತ್ತಿಗೆದಾರರು/ಫರ್ಮಗಳಿಂದ ದೃಢೀಕರಣ ಪಡೆಯುವುದು ಕಾರ್ಯಸಾಧ್ಯವಾಗಿರುವುದಿಲ್ಲ.
xxv)	ಕಂಪನಿಯು, ಮೈಕ್ರೋ, ಸಣ್ಣ ಮತ್ತು ಮಧ್ಯಮ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಆಕ್ಟ್ 2006ರ ಅಡಿ ಗುತ್ತಿಗೆದಾರರನ್ನು ಗುರುತಿಸಿ ಆರ್ಥಿಕ ಪಟ್ಟಿಯಲ್ಲಿ ಮಾಹಿತಿಯನ್ನು ಬಹಿರಂಗಪಡಿಸಲು ಸೂಕ್ತವಾದ ಯಾವುದೇ ಕಾರ್ಯ ನೀತಿ ಮತ್ತು ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಗುತ್ತಿಗೆದಾರರ ಮಾಹಿತಿಯು ಬಹಿರಂಗಗೊಳ್ಳದೆ ತಪ್ಪು ಉಂಟಾಗುವ ಸಾಧ್ಯತೆ ಇದೆ.	ಎಲ್ಲಾ ಲೆಕ್ಕ ವಿಭಾಗಗಳಿಂದ ಮೈಕ್ರೋ, ಸಣ್ಣ ಮತ್ತು ಮಧ್ಯಮ ಎಂಟರ್‌ಪ್ರೈಸಸ್ ಫರ್ಮಗಳಿಂದ ಮಾಹಿತಿಯನ್ನು ಪಡೆಯಲು ಮಾರ್ಚ್ ಅಂತಿಮ ಲೆಕ್ಕಗಳಲ್ಲಿ ನಿಗಧಿತ ಅನುಬಂಧದಲ್ಲಿ ತೋರಿಸಲಾಗಿದೆ. ಎಲ್ಲಾ ಲೆಕ್ಕ ವಿಭಾಗಗಳಿಂದ ದೊರೆತ ವಿವರದ ಪ್ರಕಾರ 2016–17ನಲ್ಲಿ ಮೈಕ್ರೋ, ಸಣ್ಣ ಮತ್ತು ಮಧ್ಯಮ ಎಂಟರ್‌ಪ್ರೈಸಸ್ ಫರ್ಮಗಳಿಂದ ಯಾವುದೇ ವ್ಯವಹಾರ ನಡೆದಿಲ್ಲ.
xxvi)	ಕಂಪನಿಯು ಪ್ರಚಲಿತ/ ಅಪ್ರಚಲಿತ ಆಸ್ತಿ/ಹೊಣೆಗಾರಿಕೆಗಳನ್ನು ಗುರುತಿಸಲು ಯಾವುದೇ ಕಾರ್ಯನೀತಿ, ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ಹೊಣೆಗಾರಿಕೆಗಳ ಪ್ರಸ್ತುತ ತಪ್ಪಾಗಿರುವ ಸಾಧ್ಯತೆ ಇರುತ್ತದೆ.	ಕವಿಪ್ರನಿನಿಯ ಎಲ್ಲಾ ಲೆಕ್ಕ ವಿಭಾಗಗಳಿಂದ ಪ್ರಸ್ತುತ/ಪ್ರಸ್ತುತಿಯಲ್ಲಿ ಇಲ್ಲದೆ ಇರುವ ಆಸ್ತಿ ಮತ್ತು ಹೊಣೆಗಾರಿಕೆಗಳ ಮಾಹಿತಿಯನ್ನು ಪಡೆದು ವಾರ್ಷಿಕ ಲೆಕ್ಕ 2016–17 ರಲ್ಲಿ ಸೇರಿಸಲಾಗಿದೆ. ಆದ್ಯಾಗ್ಯೂ ಈಗಿರುವ ಪದ್ಧತಿಯ ಪ್ರಕಾರ ಪ್ರಸ್ತುತ/ಪ್ರಸ್ತುತದಲ್ಲಿ ಇಲ್ಲದೇ ಇರುವ ಹೊಣೆಗಾರಿಕೆಗಳನ್ನು ಗುರುತಿಸುವಲ್ಲಿ ಏನಾದರೂ ಸುಧಾರಣೆ ಆಗಬೇಕಾಗಿದ್ದಲ್ಲಿ ಅದನ್ನು ಪರಿಶೀಲಿಸಲಾಗುವುದು ಆಗಬೇಕೆಂದಿದ್ದರೆ ಕ್ರಮವನ್ನು ತಿಳಿದುಕೊಳ್ಳಲಾಗುವುದು.

xxvii)	ಕಂಪನಿಯು ಹಿಂದಿನ ಅವಧಿಯ ವೆಚ್ಚಗಳು/ ಜಮೆಗಳು ಗುರುತಿಸುವಿಕೆ ಮತ್ತು ವರದಿ ಮಾಡುವ ಬಗ್ಗೆ ಸೂಕ್ತವಾದ ಕಾರ್ಯನೀತಿ ಮತ್ತು ಕಾರ್ಯವಿಧಾನಗಳನ್ನು ಹೊಂದಿರು ವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂಪನಿಯ ಪ್ರಸ್ತುತ ವರ್ಷದ ಲಾಭ ಮತ್ತು ನಷ್ಟಗಳ ವರದಿ ತಪ್ಪಾಗಿರುವ ಸಾಧ್ಯತೆ ಇರುತ್ತದೆ.	ಈ ವರ್ಷದಲ್ಲಿ ಹಿಂದಿನ ಅವಧಿಗಳ ಸಂಗ್ರಹಣೆಗಳ ಮಾಹಿತಿಯನ್ನು ನಿಗಧಿತ ಅನುಬಂಧದಲ್ಲಿ ಪಡೆಯಲಾಗಿದೆ. ಹಿಂದಿನ ಅವಧಿಯ ಬಿಲ್ಲುಗಳ ಮೌಲ್ಯ ಗಣನೀಯವಲ್ಲದ ಕಾರಣ ಪರಾಮರ್ಶಿಸಿಲ್ಲ.
xxviii)	ಕಂಪನಿಯು,ಸಿಇಆರ್‌ಸಿ/ಕೆಇಆರ್‌ಸಿಯಿಂದನಿಯಮಿತವಾಗಿ ಹೊರಡಿಸುವ ಹೊಸ ನಿಯಮಾವಳಿಗಳು / ಅಧಿಸೂಚನೆ / ಆದೇಶ/ ತಿದ್ದುಪಡಿಗಳನ್ನು ಅಳವಡಿಸಿ ಕೊಳ್ಳಲು ಸೂಕ್ತವಾದ ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂದಾಯ ಮತ್ತು ಪ್ರಸ್ತುತ ಆಸ್ತಿಗಳ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.	ಸಿಇಆರ್‌ಸಿ/ಕೆಇಆರ್‌ಸಿ ಯವರು ಹೊರಡಿಸುವ ಹೊಸ ನಿಯಾಮಾವಳಿ /ಅಧಿಸೂಚನೆ/ಆದೇಶ /ತಿದ್ದುಪಡಿಗಳನ್ನು ಕವಿಪ್ರನಿನಿಯು ಅಳವಡಿಸಿ ಕೊಂಡಿದೆ.
xxix)	ಕಂಪನಿಯು, ಗುತ್ತಿಗೆದಾರರಿಂದ ಬಂದಿರುವ ವಿಳಂಬ ಮನ್ನಾ ಅರ್ಜಿಗಳನ್ನುಸೂಕ್ತವಾದದಾಖಲಾತಿಗಳೊಂದಿಗೆನಿರ್ವಹಿಸಲು ಯಾವುದೇ ಸೂಕ್ತವಾದ ಕಾರ್ಯವಿಧಾನಗಳಾಗಲಿ, ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ದಂಡ ಮುರಿದುಕೊಳ್ಳುವಿಕೆ ಮತ್ತು ಕಂದಾಯ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (xxv) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.
xxx)	ಕಂಪನಿಯು IND AS ನಿಯಮಗಳು 2015 ರ ಅಡಿಯಲ್ಲಿ ನೀಡಿರುವ ಖಓಆ ೦ಖ19 ನೌಕರರ ಲಾಭಗಳ ಅನುಸಾರವಾಗಿ ನೌಕರರ ಸವಲತ್ತುಗಳಿಗೆ ಸಂಬಂಧಿಸಿದಂತೆ ಸಂಭವನೀಯ ಹೊಣೆಗಾರಿಕೆ ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ.	ಪ್ರತಿ ಲೆಕ್ಕ ವಿಭಾಗಗಳಿಂದ ಮಾರ್ಚ್ ಅಂತಿಮ ಲೆಕ್ಕಗಳಲ್ಲಿ ಅನುಬಂಧದ ರೂಪದಲ್ಲಿ ನೌಕರರ ವಿವರಗಳನ್ನು ಪಡೆಯಲಾಗುತ್ತಿದೆ ಮತ್ತು ಅದನ್ನು ನೌಕರರ ಪ್ರಯೋಜನೆಗಳ ಕಡೆಗೆ ಸಂಭವನೀಯ, ಸಾಮರ್ಥ್ಯವನ್ನು ನಿರ್ಧರಿಸಲು ಅಕ್ಚೂರಿಗೆ ಸಲ್ಲಿಸಲಾಗುತ್ತಿದೆ.
xxxi)	ಕಂಪನಿಯು IND AS ನಿಯಮಗಳು 2015ರ ಅಡಿಯಲ್ಲಿ ನೀಡಿರುವ IND AS 19 ನೌಕರರ ಲಾಭಗಳ ಅನುಸಾರವಾಗಿ ನೌಕರರ ಸವಲತ್ತುಗಳಿಗೆ ಸಂಬಂಧಿಸಿದಂತೆ ಸಂಭವನೀಯ ಹೊಣೆಗಾರಿಕೆ ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ.	ಲೆಕ್ಕ ಪರಿಶೋಧಕರ ವರದಿಯ ಕ್ರಮ ಸಂಖ್ಯೆ (xxx) ರಲ್ಲಿ ಉಲ್ಲೇಖಿಸಿರುವಂತೆ ಉತ್ತರವನ್ನು ಪರಿಗಣಿಸುವುದು.
xxxii)	ದಾಸ್ತಾನು ಮೌಲ್ಯದ ಸ್ಥಿರತೆಯ ಮೇಲೆ ಪರಿಣಾಮಕಾರಿಯಾದ ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳ ಕೊರತೆಯಿಂದ ದಾಸ್ತಾನು ಮೌಲ್ಯಮಾಪನದಲ್ಲಿ ವರದಿ ದಿನಾಂಕದ ತನಕ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.	ದಾಸ್ತಾನುಗಳನ್ನು ಅದರ ಖರೀದಿ ಬೆಲೆಗೆ ಮೌಲ್ಯಮಾಪನ ಮಾಡಲಾಗುತ್ತಿದೆ. ದಾಸ್ತಾನುಗಳನ್ನು ಸರಾಸರಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ ಸಾಮಾಗ್ರಿಗಳ ರಸೀತಿ ಮತ್ತು (Issue) ಗಳ ಮೇಲ್ವಿಚಾರಣೆಯನ್ನು ನಿರ್ವಹಿಸಲು ಉಗ್ರಾಣಗಳಲ್ಲಿ ನೂಮರಿಕಲ್ ಲೆಡ್ಜರ್ ಮತ್ತು ಲೆಕ್ಕ ವಿಭಾಗಗಳಲ್ಲಿ ಪ್ರೈಸಿಂಗ್ ಲೆಡ್ಜರನ್ನು ನಿರ್ವಹಣೆ ಮಾಡಲಾಗುತ್ತಿದೆ. ಟರ್ನ್‌ಕೀ ಕಾಮಗಾರಿಗಳ ಪ್ರಕರಣಗಳಲ್ಲಿ ರಸೀದಿ ಮತ್ತು ವಿತರಣೆಗಳ ಮೇಲ್ವೀಚಾರಣೆಯನ್ನು ನಡೆಸಲು ಪ್ರತ್ಯೇಕ ಸಂಖ್ಯಾತ್ಮಕ, ಖಾತ ಪುಸ್ತಕ, ಹಾಗೂ ಬೆಲೆ ಖಾತಾ ಪುಸ್ತಕಗಳನ್ನು ನಿರ್ವಹಿಸಲು ಈಗಾಗಲೇ ಸೂಚನೆಗಳನ್ನು ನೀಡಲಾಗಿದ್ದು, ಅದನ್ನು ಪ್ರಸಕ್ತ ವರ್ಷ 2018–19 ರಲ್ಲಿ ಖಾತರಿಪಡಿಸಲಾಗುವುದು.
xxxiii)	ಕಂಪನಿಯು ಸಾಮಾಗ್ರಿಗಳ ಬಿಡಿಭಾಗಗಳನ್ನು ಖರೀದಿಸುವ ಸಮಯದಲ್ಲಿ ಬಂಡವಾಳೀಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸೂಕ್ತವಾದ ಕಾರ್ಯವಿಧಾನಗಳಾಗಲಿ, ಆಂತರಿಕ ನಿಯಂತ್ರಣಗಳನ್ನಾಗಲಿ ಹೊಂದಿಲ್ಲ. ಸದರಿ ಮಾಹಿತಿಯ ಅನುಪಸ್ಥಿತಿಯಲ್ಲಿ ಲೆಕ್ಕಗಳ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ. ಇದರಿಂದ ಸಾಮಾಗ್ರಿ ವಿವರಣಾ ಪಟ್ಟಿಯಲ್ಲಿ ಹೆಚ್ಚು ವಿವರಣೆ ಮತ್ತು ಕ್ಯಾಪಿಟಲ್ ವರ್ಕ್ಸ್ ಇನ್ ಪ್ರೋಗ್ರೆಸ್‌ಗಳ ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ.	ಕವಿಪ್ರನಿನಿಯು ಸ್ಟೇಷನ್, ಟ್ರಾನ್ಸ್‌ಮಿಷನ್ ಲೈನ್ ಮತ್ತು ಮೈನರ್ ಕ್ಯಾಪಿಟಲ್ ವರ್ಕ್ಸ್‌ಗಳ ನಿರ್ವಹಣೆಗಾಗಿ ಸಾಮಾಗ್ರಿಗಳನ್ನು ಖರೀದಿಸುತ್ತದೆ. ಸಾಮಾಗ್ರಿಗಳನ್ನು ಖರೀದಿಸುವ ಸಮಯದಲ್ಲಿ ಸಾಮಾಗ್ರಿಗಳನ್ನು ಆರ್ & ಎಮ್ ವರ್ಕ್ಸ್ /ಕ್ಯಾಪಿಟಲ್ ವರ್ಕ್ಸ್ ಗಳಿಗೆ ಉಪಯೋಗಿಸಿರುವುದನ್ನು ಪ್ರತ್ಯೇಕಿಸಲು ಸಾಧ್ಯವಾಗುತ್ತಿಲ್ಲ. ಒಂದೇ ರೀತಿಯ ಸಾಮಾಗ್ರಿಗಳನ್ನು ಆರ್ ಮತ್ತು ಎಂ ವರ್ಕ್ಸ್‌ಗೂ ಮಾತ್ರ ಕ್ಯಾಪಿಟಲ್ ವರ್ಕ್ಸ್‌ಗೂ ಉಪಯೋಗಿಸಿಕೊಳ್ಳಬಹುದು. ಕವಿಪ್ರನಿನಿಯು ಪ್ರತಿ ವರ್ಷ ಭರಿಸುವ ಹೆಚ್ಚು ಮೊತ್ತದ ಬಂಡವಾಳ ವೆಚ್ಚವನ್ನು ಖರೀದಿ ಸಮಯದಲ್ಲಿ ಬಂಡವಾಳೀಕರಿಸದ ಬಿಡಿ ಭಾಗಗಳನ್ನು ಮೊತ್ತಕ್ಕೆ ಹೋಲಿಸಿದಾಗ, ಅದು ಲೆಕ್ಕಗಳ ಮೇಲೆ ಹೆಚ್ಚು ಪರಿಣಾಮ ಉಂಟು ಮಾಡುವಂತಹದಲ್ಲ.

xxxiv)	ಸಂಬಂಧಿಸಿದ ಗ್ರಾಹಕರು/ಗುತ್ತಿಗೆದಾರರು/ಸರಬರಾಜು ದಾರರ ವರದಿಯ ದಿನಾಂಕದಿಂದ ಬಾಕಿ ಮೊತ್ತವನ್ನು ಸಮನ್ವಯಗೊಳಿಸುವುದಕ್ಕೆ ಕಂಪನಿಯು ಸೂಕ್ತವಾದ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣಾ ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ ಹೊಣೆಗಾರಿಕೆಯಲ್ಲಿ ಹೆಚ್ಚು/ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ.	ಎಲ್ಲಾ ಬರಬಹುದಾದ ಮತ್ತು ಪಾವತಿಸಬೇಕಾದ ಲೆಕ್ಕಗಳ ಮೇಲ್ವಿಚಾರಣೆಯನ್ನು ಪ್ರತಿಯೊಂದು ಲೆಕ್ಕ ವಿಭಾಗಗಳಲ್ಲೂ ಫರ್ಮವಾರು ಮತ್ತು ಕೆಲಸವಾರು/ ಫರ್ಮವಾರು ಶೆಡ್ಯೂಲಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಬರಬೇಕಾಗಿರುವ/ಬಂದಿರುವ ಮತ್ತು ಪಾವತಿಸಬೇಕಾಗಿರುವ/ಪಾವತಿಸಲ್ಪಟ್ಟ ಮೊತ್ತಗಳನ್ನು ಈ ಮೇಲಿನ ಶೆಡ್ಯೂಲ್‌ಗಳಲ್ಲಿ ದಾಖಲಿಸಲಾಗುತ್ತದೆ. ಆ ಶೆಡ್ಯೂಲ್‌ಗಳಲ್ಲಿ ಅಪರಿಮಿತ ಸಂಖ್ಯೆಯ ಅಂಶಗಳಿರುವುದರಿಂದ, ಗುತ್ತಿಗೆದಾರರು/ಫರ್ಮ/ಸರಬರಾಜುದಾರರಿಂದ ಬಾಕಿ ಮೊತ್ತವನ್ನು ಸಮನ್ವಯಗೊಳಿಸುವುದು ವಾಸ್ತವವಾಗಿ ಕಾರ್ಯ ಸಾಧುವಲ್ಲ.
xxxv)	ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಕವಿಪ್ರನಿನಿಯ ವಸತಿ ಗೃಹದ ನವೀಕರಣ ಹಾಗೂ ನಿರ್ವಹಣೆ ವೆಚ್ಚವನ್ನು ಹಂಚಿಕೊಳ್ಳದೆ ಹಾಗೂ ಕಂಪನಿಯ ಲೆಕ್ಕ ಪತ್ರಗಳಲ್ಲಿ ಬೇಡಿಕೆ ಮತ್ತು ವಸೂಲಾತಿಗಳನ್ನು ಮಾಡದೇ ಇರುವುದು ಕಂಪನಿಯ ಮೇಲೆ ಪರಿಣಾಮಕಾರಿಯಾದ ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳ ಕೊರತೆಯಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿನಿರ್ವಹಣೆ ವೆಚ್ಚದಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.	ವಿಸಾಕಂಗಳಂದ ಆಕ್ರಮಿಸಿಕೊಂಡಿರುವ ಸಿಬ್ಬಂದಿ ವಸತಿ ಗೃಹಗಳನ್ನು ನವೀಕರಿಸಲು ಹಾಗೂ ನಿರ್ವಹಿಸಲು ಕವಿಪ್ರನಿನಿಯು ಭರಿಸಿದ ವೆಚ್ಚವನ್ನು ದಿನಾಂಕ: 29.05.2003 ರ ಆದೇಶದನ್ವಯ ಅನುಮೋದಿಸಲ್ಪಟ್ಟ Arm's length arrangement ನ ಅನ್ವಯ ಹಂಚ ಬೇಕಾಗಿರುತ್ತದೆ. ಪ್ರಸಕ್ತ ವರ್ಷ 2018–19ರಲ್ಲಿ ಸದರಿ ಆದೇಶವನ್ನು ಅನುಷ್ಠಾನಗೊಳಿಸಲು ಅಸಮಂಜಸತೆ ಕಂಡು ಬಂದಲ್ಲಿ ಅದನ್ನು ಸರಿಪಡಿಸಲು ಪ್ರಯತ್ನಿಸಲಾಗುವುದು.
xxxvi)	ಕಂಪನಿಯು ವರದಿಯ ದಿನಾಂಕದಂದು ಅನಿಶ್ಚಿತ ಹೊಣೆಗಾರಿಕೆಗಳನ್ನು ಕಲ್ಪಿಸಿ ಬಹಿರಂಗಪಡಿಸುವಿಕೆಯ ಕುರಿತು ಸೂಕ್ತವಾದ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣಾ ಹೊಂದಿರುವುದಿಲ್ಲ.	ಅನಿಶ್ಚಿತ ಹೊಣೆಗಾರಿಕೆಯನ್ನು ಲೆಕ್ಕ ಪತ್ರಗಳ ಮೇಲಿನ ಟಿಪ್ಪಣಿಗಳಲ್ಲಿ ಬಹಿರಂಗ ಪಡಿಸಲು ಲೆಕ್ಕ ಘಟಕಗಳಿಂದ ಅನುಬಂಧದ ಮಾದರಿಯಲ್ಲಿ ಲೆಕ್ಕಗಳನ್ನು ಒಳ್ಳಗೊಂಡ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಮುಂದುವರೆದಂತೆ, ಕಾನೂನು ಶಾಖೆಯಿಂದ ನ್ಯಾಯಾಲಯದ ಪ್ರಕರಣಗಳ ವಿವರಗಳನ್ನು ಪಡೆಯಲಾಗಿದೆ. ಎರಡೂ ಮಾಹಿತಿಗಳ ಕ್ರೋಢಿಕರಣದಿಂದ ಅನಿಶ್ಚಿತ ಹೊಣೆಗಾರಿಕೆ ಲಭ್ಯವಾಗುವುದು ಹಾಗೂ ಅದನ್ನು ಲೆಕ್ಕ ಪತ್ರಗಳಲ್ಲಿ ಬಹಿರಂಗ ಪಡಿಸಲಾಗಿದೆ. ಲೆಕ್ಕ ಘಟಕಗಳಲ್ಲಿ ಅನಿಶ್ಚಿತ ಆಸ್ತಿಯ ಅಸ್ತಿತ್ವವು ದುರಸ್ಥವಾಗಿರುತ್ತದೆ. ಆದಾಗ್ಯೂ, 2018–19 ಹಾಗೂ ನಂತರದ ಅವಧಿಯಲ್ಲಿ ಘಟಕಗಳಿಂದ ಆನಿಶ್ಚಿತ ಆಸ್ತಿಗಳ ವಿವರಗಳನ್ನು ಪಡೆಯಲು ಕ್ರಮ ತೆಗೆದು ಕೊಳ್ಳಲಾಗುವುದು.
xxxvii)	<u>ಗಣಕೀಕರಣ:</u> ಗಣಕೀಕರಣದ ಅನುಪಸ್ಥಿತಿಯು ಕಂಪನಿಯ ಆರ್ಥಿಕ ಚಟುವಟಿಕೆಗಳನ್ನು ಸಮರ್ಥವಾಗಿ ನಿಯಂತ್ರಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲ ಹಾಗೂ ಸಕಾಲದಲ್ಲಿ ಆರ್ಥಿಕ ವರದಿಗಳನ್ನು ನಿಖರವಾಗಿ ಹಾಗೂ ನಂಬಿಕೆಗೆ ಅರ್ಹವಾದ ರೀತಿಯಲ್ಲಿ ಸಿದ್ದಪಡಿಸುವಲ್ಲ ಪರಿಣಾಮ ಬೀರಬಹುದಾಗಿದೆ.	ಲೆಕ್ಕಗಳನ್ನು ಸಮಗ್ರ ವ್ಯವಸ್ಥೆಯಲ್ಲಿ ಗಣಕೀಕರಣಗೊಳಿಸಲು ಆಡಳಿತ ವರ್ಗವು ಯೋಜಿಸುತ್ತಿದೆ. ಈ ವಿಷಯದಲ್ಲಿ ಅನೇಕ ಸಾಫ್ಟ್‌ವೇರ್ ಕಂಪನಿಗಳು ಕವಿಪ್ರನಿನಿಯೊಂದಿಗೆ ಪ್ರಸ್ತಾಪ ನಡೆಸಿದೆ. ಆದಾಗ್ಯೂ, ಲೆಕ್ಕ ವ್ಯವಸ್ಥೆಯ ಗಣಕೀಕರಣಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಪ್ರಸ್ತುತ ಕ.ವಿ.ಪ್ರ.ನಿ.ನಿ.ಯಲ್ಲಿ ಕೆಳಕಂಡ ಪ್ರಮುಖ ಸ್ವ–ನಿರ್ವಹಿತ ಕಾರ್ಯ ಪ್ರಕ್ರಿಯೆಗಳನ್ನು ಬಳಸಲಾಗುತ್ತಿದೆ. 1. ಇ–ಪ್ರೊಕ್ಯೂರ್‌ಮೆಂಟ್ 2. ಲೆಕ್ಕಗಳನ್ನು ಅಂತಿಮವಾಗಿ ಸಮನ್ವಯಗೊಳಿಸುವುದು–ಎಸ್. ಎಸ್.ತಂತ್ರಾಂಶ 3. ಅಂ.ಫ. ಲೆಕ್ಕ ವ್ಯವಹರಣೆ ಮತ್ತು ತೀರುವಳಿ 4. ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ 5. ಬ್ಯಾಂಕ್ ಲೆಕ್ಕ ಸಮನ್ವಯಗೊಳಿಸುವುದು 6. ತಪಶೀಲು ನಿರ್ವಹಣೆ ವ್ಯವಸ್ಥೆ 7. ಪಿಂಚಿಣಿ ಪಾವತಿ ನಿರ್ವಹಣೆ ವ್ಯವಸ್ಥೆ 8. ಕಂದಾಯ ವೆಚ್ಚಗಳ ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ 9. ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯಸಾಧನೆ ಮೇಲುಸ್ತುವಾರಿ ವ್ಯವಸ್ಥೆ 10. ಪಿಂಚಿಣಿ ಮತ್ತು ಉಪದಾನ ನ್ಯಾಸದಿಂದ ಲೆಕ್ಕಘಟಕಗಳಿಗೆ ನಿಧಿ ವರ್ಗಾವಣೆ 11. ಸಿಬ್ಬಂದಿ ಶಾಖೆಗಳಲ್ಲಿ ವೇತನ ಹಾಗೂ ಇತರ ಭತ್ಯೆ ಸಂಬಂಧಿತ ತಂತ್ರಾಂಶ 12. ವಿದ್ಯುತ್ ಕೇಂದ್ರ ಲಾಗ್–ಪುಸ್ತಕ, ಇ–ಲಾಗ್ 13. ಯೋಜನೆ ಮೇಲುಸ್ತುವಾರಿ ಪದ್ಧತಿ 14. ಕ.ವಿ.ಪ್ರ.ನಿ.ನಿ. ಯೋಜನೆಗಳ ಛಾಯಾ ಚಿತ್ರಗಳನ್ನು ಜಾಲತಾಣದಲ್ಲಿ ತುಂಬುತ್ತಿರುವುದು ಎನ್.ಡಿ.ಸಿ.ಪಿ.ಎಸ್ ಹಾಗೂ ಇತರೆಗಳ ಮೇಲುಸ್ತುವಾರಿ

ಮಂಡಳಯ ವರದಿಯಲ್ಲಿ ಒಳಪಡಿಸಬೇಕಾದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳ ವಾರ್ಷಿಕ ವರದಿ.

1. ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿ.ಎಸ್.ಆರ್.) ನೀತಿಯ ಸಂಕ್ಷಿಪ್ತ ನೋಟ, ಕೈಗೊಳ್ಳಬೇಕೆಂದು ಉದ್ದೇಶಿಸಲಾಗಿರುವ ಯೋಜನೆಗಳ ಅಥವಾ ಕಾರ್ಯಕ್ರಮಗಳ ಅವಲೋಕನ, ಇವುಗಳನ್ನು ಅನುಬಂಧ–4 ಎಂದು ಲಗತ್ತಿಸಲಾಗಿದೆ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿ ಹಾಗೂ ಯೋಜನೆ/ಕಾರ್ಯಕ್ರಮಗಳ ಜಾಲತಾಣ ಸಂಪರ್ಕ:www.kptcl.com

2. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ರಚನೆ ಹೀಗಿದೆ:

ಕ್ರ.ಸಂ.	ಹೆಸರು / ಶ್ರೀಯುತ	ಪದನಾಮ
1.	ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇಂಧನ ಇಲಾಖೆ	ಅಧ್ಯಕ್ಷರು
2.	ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಆರ್ಥಿಕ ಇಲಾಖೆ,	ಸದಸ್ಯರು
3.	ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ	ಸದಸ್ಯರು
	ಅಧಿಕೃತ ಸಹಿಗಾರರು, ಕ.ವಿ.ಪ್ರ.ನಿ.ನಿ.	ಸಂಚಾಲಕರು

3. ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ (ಆ.ವ 2014–15 ರಿಂದ 2016–17) ಕಂಪನಿಯ ಸರಾಸರಿ ನಿವ್ವಳ ಲಾಭ:

ಆರ್ಥಿಕ ವರ್ಷ	**ತೆರಿಗೆಗೆ ಮುಂಚಿನ ನಿವ್ವಳ ಲಾಭ (ರೂ.ಗಳಲ್ಲಿ)**
2014–15	1,01,02,93,474
2015–16	2,29,53,23,390
2016–17	19,15,08,07,018
ಒಟ್ಟು	**22,45,64,23,882**
ಸರಾಸರಿ ನಿವ್ವಳ ಲಾಭ	**7,48,54,74,627**
ಶೇ.2ರಂತೆ ಸರಾಸರಿ ನಿವ್ವಳ ಲಾಭ	**14,97,09,493**
ಹಿಂದಿನ ಹಣಕಾಸು ವರ್ಷದಲ್ಲಿ ವ್ಯಯಿಸಲಾಗದ ಮೊತ್ತ	**48,781**
ಮಾರ್ಚ್–2018 ರ ಅಂತ್ಯದ ಮೊದಲು ಪ್ರಸಕ್ತ ಆರ್ಥಿಕ ವರ್ಷದಲ್ಲಿ ವ್ಯಯಿಸಿದ ಸಿ.ಎಸ್.ಆರ್. ನಿಮಿತ್ತದ ವೆಚ್ಚ	**14,97,58,274**
(ಹದಿನಾಲ್ಕು ಕೋಟಿ ತೊಂಭತ್ತೇಳು ಲಕ್ಷದ ಐವತ್ತೆಂಟು ಸಾವಿರದ ಇನ್ನೂರ ಎಪ್ಪತ್ತ ನಾಲ್ಕು ರೂ. ಮಾತ್ರ)	

ತೆರಿಗೆಗೆ ಮುಂಚಿನ ನಿವ್ವಳ ಲಾಭವನ್ನು ಪರಿಗಣಿಸಿದ ನಂತರ, ಕಳೆದ ಮೂರು ವರ್ಷಗಳಲ್ಲಿ (ಆ.ವ.2014–15 ರಿಂದ 2016–17) ಕಂಪನಿಯ ಸರಾಸರಿ ನಿವ್ವಳ ಲಾಭ ರೂ. **7,48,54,74,627**/–.

4. ನಿಗದಿಪಡಿಸಿರುವ ಸಿ.ಎಸ್.ಆರ್.ವೆಚ್ಚ (ಮೇಲಿನ ಅಂಶ 3ರಲ್ಲಿನ ಮೊಬಲಗಿನ ಶೇ.2ರಂತೆ):ರೂ. 14,97,58,274/–.

5. ಪ್ರಸಕ್ತ ಆರ್ಥಿಕ ವರ್ಷ2017–18 ರಲ್ಲಿ ವ್ಯಯಿಸಿದ ಸಿ.ಎಸ್.ಆರ್. ನಿಮಿತ್ತದ ವೆಚ್ಚ.

ಎ) ಸದರಿ ಆರ್ಥಿಕ ವರ್ಷದಲ್ಲಿ ಖರ್ಚು ಮಾಡಬೇಕಾದ ಒಟ್ಟು ಮೊತ್ತ ರೂ.1,540/– ಲಕ್ಷ. ದಿನಾಂಕ 20.06.2018 ರಂದು ನಡೆಸಿದ 110 ನೇ ಸಭೆಯಲ್ಲಿ ನಿರ್ದೇಶಕರ ಮಂಡಳಯು ವ್ಯಯಿಸದಿರುವ ಹಣವನ್ನು ಮರಳ ಪಡೆಯಲು

ನಿರ್ಧರಿಸಿದೆ. (1)ಟೆಂಡರ್‌ಗಳನ್ನು ಕರೆಯಲಾಗಿಲ್ಲ. (2)ಟೆಂಡರ್‌ಗಳನ್ನು ಮಾಡಲಾಗಿದೆ ಆದರೆ ವರ್ಕ್ ಅವಾರ್ಡ್ ಅನ್ನು ನೀಡಲಾಗಿಲ್ಲ. (3)ಎಲ್.ಓ.ಐ. ನೀಡಲಾಗಿದೆ ಆದರೆ ಕಾರ್ಯಾದೇಶವನ್ನು ನೀಡಲಾಗಿಲ್ಲ. ಆದಾಗ್ಯೂ ಈ ಮೊತ್ತವನ್ನು ಆಯಾ ಉಪ ಆಯುಕ್ತರವರಿಂದ ಹಿಂದಿರುಗಬೇಕಾಗಿದೆ. (ಮಂಡ್ಯ ಜಿಲ್ಲಾಧಿಕಾರಿಯವರು ಹಿಂದಿರುಗಿಸಿರುತ್ತಾರೆ)

ಬಿ) ಖರ್ಚು ಮಾಡದೆ ಉಳಿದಿರುವ ಮೊತ್ತ ಇದ್ದಲ್ಲಿ: ಇಲ್ಲ

ಸಿ) ಸದರಿ ಆರ್ಥಿಕ ವರ್ಷದಲ್ಲಿ ಖರ್ಚು ಮಾಡಿದ ಮೊತ್ತದ ವಿಧಾನ ಈ ಕೆಳಗಿನಂತಿದೆ:

ಡಿ) ಅನುಷ್ಠಾನಗೊಂಡ ಸಂಸ್ಥೆಯ ವಿವರಗಳು.

(1)	(2)	(3)	(4)	(5)	(6)	(7)	(8)
ಕ್ರ ಸಂ.	**ಸಿ.ಎಸ್.ಆರ್. ಯೋಜನೆ ಅಥವಾ ಗುರುತಿಸಿರುವ ಚಟುವಟಿಕೆ.**	**ಯೋಜನೆಯು ಯಾವ ಕ್ಷೇತ್ರದಲ್ಲಿ ಒಳಗೊಂಡಿದೆ.**	**ಯೋಜನೆ ಅಥವಾ ಕಾರ್ಯಕ್ರಮಗಳು (1) ಸ್ಥಳೀಯ ಪ್ರದೇಶ ಅಥವಾ ಇತರೆ (2) ಯೋಜನೆ ಅಥವಾ ಕಾರ್ಯಕ್ರಮ ವನ್ನು ಕೈಗೊಂಡ ರಾಜ್ಯ ಹಾಗೂ ಜಿಲ್ಲೆಯ ಹೆಸರನ್ನು ತಿಳಿಸಿ**	**ಯೋಜನೆ/ ಕಾರ್ಯಕ್ರಮವಾರು ಹೂಡಿದ ಮೊತ್ತ (ಬಜೆಟ್)**	**ಭರಿಸಿದ ಮೊಬಲಗಿನ ವೆಚ್ಚ ಯೋಜನೆ/ ಕಾಮಗಾರಿಗಳಿಗೆ ಭರಿಸಿದ ವೆಚ್ಚ ಉಪ–ಕಂಡಿಕೆ**	**ವರದಿ ಸಲ್ಲಕೆಯವರೆಗಿನ ಸಂಚಿತ ವೆಚ್ಚ**	**ನೇರವಾಗಿ ಅಥವಾ ಅನುಷ್ಠಾನದ ಏಜೆನ್ಸಿ ಮೂಲಕ ಭರಿಸಿದ ವೆಚ್ಚ**
1.	ಡಾ॥ ಬಿ.ಆರ್. ಅಂಬೇಡ್ಕರ್ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ರಾಮನಗರ ಜಿಲ್ಲೆಯ ಕನಕಪುರ ಪಟ್ಟಣ	ರೂ.200 ಲಕ್ಷ	ಡಾ॥ ಬಿ.ಆರ್. ಅಂಬೇಡ್ಕರ್ ಭವನದ ನಿರ್ಮಾಣ	ರೂ.200 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
2.	ಆಟದ ಮೈದಾನದ ಅಭಿವೃದ್ಧಿ ಕಾರ್ಯಗಳು	ಗ್ರಾಮೀಣ ಅಭಿವೃದ್ಧಿ ಯೋಜನೆ	ಕೋಡಿಹಳ್ಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ	ರೂ.200 ಲಕ್ಷ	ಆಟದ ಮೈದಾನದ ಅಭಿವೃದ್ಧಿ ಕಾರ್ಯಗಳು	ರೂ.400 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
3.	ಸಮುದಾಯ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಕೋಲಗೋಂಡನ ಹಳ್ಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ	ರೂ.200 ಲಕ್ಷ	ಸಮುದಾಯ ಭವನದ ನಿರ್ಮಾಣ	ರೂ.600 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
4.	ಸಾಮಾನ್ಯ ಹೆರಿಗೆ ಆಸ್ಪತ್ರೆಯ ನಿರ್ಮಾಣ	ಆರೋಗ್ಯ ರಕ್ಷಣೆ	ಕನಕಪುರ ಪಟ್ಟಣ, ರಾಮನಗರ ಜಿಲ್ಲೆ.	ರೂ.300 ಲಕ್ಷ	ಸಾಮಾನ್ಯ ಹೆರಿಗೆ ಆಸ್ಪತ್ರೆಯ ನಿರ್ಮಾಣ	ರೂ.900 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
5.	ಪೈಪ್‌ಲೈನ್ ಉದ್ಯಾನವನದ ನಿರ್ಮಾಣ	ಇತರೆ	ಕನಕಪುರ ಪಟ್ಟಣ, ರಾಮನಗರ ಜಿಲ್ಲೆ.	ರೂ.100 ಲಕ್ಷ	ಪೈಪ್‌ಲೈನ್ ಉದ್ಯಾನವನದ ನಿರ್ಮಾಣ	ರೂ.1000 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
6.	ಆಟದ ಮೈದಾನದ ಅಭಿವೃದ್ಧಿ ಕಾರ್ಯಗಳು	ಇತರೆ	ಪೇಟೆ ಮೈದಾನ, ಚನ್ನಪಟ್ಟಣ ಪಟ್ಟಣ.	ರೂ.100 ಲಕ್ಷ	ಆಟದ ಮೈದಾನದ ಅಭಿವೃದ್ಧಿ ಕಾರ್ಯಗಳು	ರೂ.1100 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
7.	ಸಂಸದ್ ಆದರ್ಶ ಗ್ರಾಮದ ಅಡಿಯಲ್ಲಿ ಶಾಲಾ ಕೊಠಡಿ, ಅಂಗನವಾಡಿ ಮತ್ತು ಸಮುದಾಯ ಭವನದ ನಿರ್ಮಾಣ	ಶಿಕ್ಷಣ	ಯಲಚವಾಡಿ ವ್ಯಾಪ್ತಿಯ ರಾಮನಗರ ವಿಧಾನ ಸಭಾ	ರೂ.100 ಲಕ್ಷ	ಸಂಸದ್ ಆದರ್ಶ ಗ್ರಾಮದ ಅಡಿಯಲ್ಲಿ ಶಾಲಾ ಕೊಠಡಿ, ಅಂಗನವಾಡಿ ಮತ್ತು ಸಮುದಾಯ ಭವನದ ನಿರ್ಮಾಣ	ರೂ.1200 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
8.	ಸಾರ್ವಜನಿಕ ಶೌಚಲಯದ ನಿರ್ಮಾಣ	ನೈರ್ಮಲ್ಯ	ಹಾರೋಹಳ್ಳಿ ಗ್ರಾಮ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.	ರೂ.20 ಲಕ್ಷ	ಸಾರ್ವಜನಿಕ ಶೌಚಲಯದ ನಿರ್ಮಾಣ	ರೂ.1220 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ

9.	ಶ್ರೀ ಕೃಷ್ಣ ದೇವರಾಜ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಕೋಡಂಬಳ್ಳಿ ಗ್ರಾಮ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.	ರೂ.50 ಲಕ್ಷ	ಶ್ರೀ ಕೃಷ್ಣ ದೇವರಾಜ ನಿರ್ಮಾಣ	ರೂ.1270 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
10.	ಸಾರ್ವಜನಿಕ ಶೌಚಲಯದ ನಿರ್ಮಾಣ	ನೈರ್ಮಲ್ಯ	ಮಾಗಡಿ ನಗರ, ರಾಮನಗರ ಜಿಲ್ಲೆ.	ರೂ.20 ಲಕ್ಷ	ಸಾರ್ವಜನಿಕ ಶೌಚಲಯದ ನಿರ್ಮಾಣ	ರೂ.1290 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
11.	ಸಮುದಾಯ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಮಾದಿಗೋಂಡನ ಹಳ್ಳಿ ಗ್ರಾಮ, ಮಾದಿಗೋಂಡನಹಳ್ಳಿ ಗ್ರಾಮ ಪಂಚಾಯಿತಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.	ರೂ.20 ಲಕ್ಷ	ಸಮುದಾಯ ಭವನದ ನಿರ್ಮಾಣ	ರೂ.1310 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
12.	ಒಕ್ಕಲಿಗರ ಸಂಘದಿಂದ ಸಮುದಾಯ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.	ರೂ.25 ಲಕ್ಷ	ಒಕ್ಕಲಿಗರ ಸಂಘದಿಂದ ಸಮುದಾಯ ಭವನದ ನಿರ್ಮಾಣ	ರೂ.1335 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
13.	ಮಾರುತಿ ಸಮುದಾಯ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಕೊಡಗಿಹಳ್ಳಿ ಗ್ರಾಮ ಪಂಚಾಯಿತಿ, ಸೊಂಡೆಕೊಪ್ಪ ಗ್ರಾಮ, ಅಮೃತೂರ್ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ	ರೂ.20 ಲಕ್ಷ	ಮಾರುತಿ ಸಮುದಾಯ ಭವನದ ನಿರ್ಮಾಣ	ರೂ.1355 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
14.	ಸಮುದಾಯ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಹೊಸಳ್ಳಿ ಗ್ರಾಮ, ಹುತ್ತರಿದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.	ರೂ.20 ಲಕ್ಷ	ಸಮುದಾಯ ಭವನದ ನಿರ್ಮಾಣ	ರೂ.1375 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
15.	ಸಮುದಾಯ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಆಲ್‌ಕೆರೆ ಹೊಸಳ್ಳಿ ಗ್ರಾಮ, ಹುತ್ತರಿದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.	ರೂ.20 ಲಕ್ಷ	ಸಮುದಾಯ ಭವನದ ನಿರ್ಮಾಣ	ರೂ.1395 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
16.	ಲಕ್ಷ್ಮೀದೇವಿ ಸಮುದಾಯ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಕೊಡಗಿಹಳ್ಳಿ ಗ್ರಾಮ ಅಮೃತೂರ್ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ	ರೂ.20 ಲಕ್ಷ	ಲಕ್ಷ್ಮೀ ದೇವಿ ಸಮುದಾಯ ಭವನದ ನಿರ್ಮಾಣ	ರೂ.1415 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
17.	ಸಮುದಾಯ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಸೊಬಗನಹಳ್ಳಿ ಗ್ರಾಮ, ಸೊಬಗಾನ ಹಳ್ಳಿ, ಕೊತ್ತತ್‌ಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.	ರೂ.20 ಲಕ್ಷ	ಸಮುದಾಯ ಭವನದ ನಿರ್ಮಾಣ	ರೂ.1435 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
18.	ಸಮುದಾಯ ಭವನದ ನಿರ್ಮಾಣ	ಗ್ರಾಮೀಣ ಅಭಿವೃದ್ಧಿ ಯೋಜನೆ	ಹನುಮಾಪುರ ಗ್ರಾಮ, ಮಕ್ಕೋನಹಳ್ಳಿ ಗ್ರಾಮ ಪಂಚಾಯಿತಿ, ಅಮ್ಮುತುರ್ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ	ರೂ.20 ಲಕ್ಷ	ಸಮುದಾಯ ಭವನದ ನಿರ್ಮಾಣ	ರೂ.1455 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
19.	ಸಾರ್ವಜನಿಕ ಶೌಚಲಯದ ನಿರ್ಮಾಣ	ನೈರ್ಮಲ್ಯ	ಕುಣಿಗಲ್ ನಗರ, ತುಮಕೂರು ಜಿಲ್ಲೆ	ರೂ.20 ಲಕ್ಷ	ಸಾರ್ವಜನಿಕ ಶೌಚಲಯದ ನಿರ್ಮಾಣ	ರೂ.1475 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ

20.	ಸ್ವಾಮಿ ವಿವೇಕಾನಂದ ಯುವ ಚಾಲನೆ	ಶಿಕ್ಷಣ	ಹೆಚ್.ಡಿ.ಕೋಟೆ, ಮೈಸೂರು	ರೂ.15 ಲಕ್ಷ	ಸಾಂಪ್ರದಾಯಿಕವಲ್ಲದ ಶಕ್ತಿ ಮೂಲಗಳನ್ನು ಅಳವಡಿಸಲು	ರೂ.1490 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
21.	ಬೋರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ	ಆರೋಗ್ಯ ರಕ್ಷಣೆ	ಬೆಂಗಳೂರು	ರೂ.50 ಲಕ್ಷ	ಶಪಾಳ' ಶೀತಲ ಶೇಖರಣಾ ಪೆಟ್ಟಿಗೆ ಫೋರೆನ್‌ಸಿಕ್ ಮೆಡಿಸಿನ್ ಇಲಾಖೆಗೆ	ರೂ.1540 ಲಕ್ಷ	ಕರ್ನಾಟಕ ಸರ್ಕಾರದ ಮೂಲಕ
			ಒಟ್ಟು	**ರೂ.1540 ಲಕ್ಷ**			

6. ಕಂಪನಿಯು ಕಳೆದ ಮೂರು ವರ್ಷಗಳ ಸರಾಸರಿ ನಿವ್ವಳ ಲಾಭದ ಮೊಬಲಗನ್ನು ಅಥವಾ ಅದರ ಭಾಗಾಂಶವನ್ನು ಈ ನಿಮಿತ್ತವಾಗಿ ಖರ್ಚು ವ್ಯಯಿಸಲು ವಿಫಲಗೊಂಡರೆ, ಕಂಪನಿಯು ತನ್ನ ಮಂಡಳಿ ವರದಿಯಲ್ಲಿ ಖರ್ಚನ್ನು ವ್ಯಯಿಸದಿರುವುದರ ಕಾರಣವನ್ನು ತಿಳಿಸತಕ್ಕದ್ದು: ಇದು ಅನ್ವಯಿಸುವುದಿಲ್ಲ., ಕಂಪನಿಯು ಸಿ.ಎಸ್.ಆರ್. ಚಟುವಟಿಕೆಯ ನಿಮಿತ್ತ ನಿಗದಿತ ಮೊಬಲಗನ್ನು ಖರ್ಚು ಮಾಡಿದೆ.

7. ಸಿ.ಎಸ್.ಆರ್. ಸಮಿತಿಯ ಜವಾಬ್ದಾರಿಯುತ ಹೇಳಿಕೆ: ಸಿ.ಎಸ್.ಆರ್. ನೀತಿಯ ಅನುಷ್ಠಾನ ಹಾಗೂ ಪಾಲನೆಯು, ಸಿ.ಎಸ್.ಆರ್. ಉದ್ದೇಶಗಳು ಹಾಗೂ ಕಂಪನಿಯ ನೀತಿಯ ಪ್ರಕಾರ ಅನುಸರಣೆಯಾಗಿವೆ ಎಂದು ಸದಸ್ಯರು ಹೇಳಿಕೆ ನೀಡಿದ್ದಾರೆ.

ಸಹಿ/–
ಡಾ॥ ಎಸ್. ಸೆಲ್ವಕುಮಾರ್(ಭಾ.ಆ.ಸೇ.)
ಡಿನ್ ನಂ:00962240
ವ್ಯವಸ್ಥಾಪಕ ನಿರ್ದೇಶಕರು ಕ.ವಿ.ಪ್ರ.ನಿ.ನಿ

ಸಹಿ/–
ಪಿ. ರವಿಕುಮಾರ್ (ಭಾ.ಆ.ಸೇ.)
ಡಿನ್.ನಂ:02285126
ಅಧ್ಯಕ್ಷರು, ಸಿ.ಎಸ್.ಆರ್. ಸಮಿತಿ ಕ.ವಿ.ಪ್ರ.ನಿ.ನಿ.

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿ

ಒಳಾಂಶ ಕೋಷ್ಟಕ:

1. ಹಿನ್ನೆಲೆ
2. ಉದ್ದೇಶ
3. ಸಾ.ಸಾ.ಹೊ.ಸಮಿತಿಯ ಆಧಾರಿತ ವಿಷಯಗಳು
4. ಸಾ.ಸಾ.ಹೊ.ಚಟುವಟಿಕೆ/ಯೋಜನೆ
5. ಸಾ.ಸಾ.ಹೊ. ಮೊಬಲಗು
6. ಸಾ.ಸಾ.ಹೊ.ಮೊಬಲಗಿನ ಖರ್ಚುವೆಚ್ಚಗಳು
7. ಆಡಳಿತ
8. ಮಾಹಿತಿಯ ಪ್ರಚಾರ

1. ಹಿನ್ನೆಲೆ:

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯು, ಕಂಪನಿಯು ತನ್ನ ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯಲ್ಲಿನ ಸಮುದಾಯ ಹಾಗೂ ವಾತಾವರಣದ ಜವಾಬ್ದಾರಿಯುತ ಸಾಮಾನ್ಯ ಪ್ರಜ್ಞೆಯಾಗಿದೆ. ಇದು, ನೀತಿವಂತಿಗೆ ವ್ಯವಹರಣೆಯ ಮೂಲಕ ಸಮಾಜದ ಆರ್ಥಿಕ ಬೆಳವಳಿಗೆಗೆ ಬೃಹತ್ ಪ್ರಮಾಣದಲ್ಲಿ ಕೊಡುಗೆ ನೀಡಿ, ಜೀವಾನಾಧಾರಕ್ಕೆ ಆಧಾರವಾಗಬಹುದಾದ ಸಾಮರ್ಥ್ಯವನ್ನು ನೆಲೆಗೊಳಿಸಿ ನಿರಂತರ ಬದ್ಧತೆಯಾಗಿರುತ್ತದೆ. ನಿಗಮವು ತನ್ನ ವ್ಯವಹರಣೆಯನ್ನು ಜವಾಬ್ದಾರಿ, ನ್ಯಾಯಯುತ ಹಾಗೂ ಅತ್ಯಂತ ಪಾರದರ್ಶಕತೆಯ ವಿಧಾನದ ಮೂಲಕ ನಡೆಸಲು ನಂಬಿಕೆಯುಳ್ಳದ್ದಾಗಿದೆ. ಕಂಪನಿಯು ತನ್ನ ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯ ಸಮಾಜ ಹಾಗೂ ವಾತಾವರಣದ ಮೇಲೆ, ಸಾಮಾಜಿಕ ಉದ್ದೇಶಗಳ ಅಂಗವಾಗಿ, ಒಟ್ಟಾರೆ ಸಕಾರಾತ್ಮಕ ಪರಿಣಾಮವನ್ನು ಬೀರಲು ಕಂಪನಿಯು ನಿರಂತರವಾಗಿ ವಿಹಿತ ವಿಧಾನಗಳತ್ತ ಅನ್ವೇಷಿಸಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ರಾಜ್ಯದ ಒಂದು ವಿದ್ಯುತ್ ಪ್ರಸರಣ ಸಂಸ್ಥೆಯಾಗಿದ್ದು, ತನ್ನ ವಿದ್ಯುತ್ ಕೇಂದ್ರಗಳು ಹಾಗೂ ಪ್ರಸರಣ ಮಾರ್ಗಗಳ ಮೂಲಕ ಇಡೀ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪ್ರಸರಣೆಯನ್ನು ಮಾಡುವ ಜವಾಬ್ದಾರಿಯನ್ನು ಹೊಂದಿದೆ. ಕ.ವಿ.ಪ್ರ.ನಿ.ನಿಯು, ಸಾರ್ವಜನಿಕ ನಾಗರೀಕರಿಗೆ ಸೇವೆಯನ್ನು ನೀಡುವಲ್ಲಿ, ಸ್ಪರ್ಧಾತ್ಮಕ ದರದ, ಉತ್ತಮ ಗುಣಮಟ್ಟದ ವಿದ್ಯುತ್ತನ್ನು ನೀಡಲು ಕೆಳಕಂಡ ಧ್ಯೇಯೋದ್ದೇಶವನ್ನು ಹೊಂದಿದೆ:

1. ವಿದ್ಯುತ್ ಪ್ರಸರಣೆಯಲ್ಲಿ ಉತ್ತಮ ಕಾರ್ಯಾಚರಣೆಗೆ ಪ್ರೋತ್ಸಾಹ;
2. ತನ್ನ ಎಲ್ಲಾ ತಾಂತ್ರಿಕ ಸೌಲಭ್ಯಗಳು ಉನ್ನತಮಟ್ಟದ ನಿರ್ವಹಣೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು; ಮತ್ತು
3. ಗ್ರಾಹಕ ಸೇವೆಯಲ್ಲಿ ಅತ್ಯುತ್ತಮ ಗುಣಮಟ್ಟವನ್ನು ಕಾಯ್ದುರಿಸಿಕೊಳ್ಳುವುದು.

2. ಉದ್ದೇಶ:

ಈ ನೀತಿಯು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು ಒಂದು ಪ್ರಮುಖ ವ್ಯವಹರಣ ಪ್ರಕ್ರಿಯೆಯನ್ನಾಗಿಸಲು ಮಾರ್ಗದರ್ಶಕಗಳನ್ನು ಅಣಿಗೊಳಿಸುತ್ತದೆ. ಭಾರತದಲ್ಲಿ ನಿಗಮದ ಕಾರ್ಯಚಟುವಟಿಕೆಗಳ ಸಾಮಾಜಿಕ ಹಾಗೂ ವಾತಾವರಣದ ಮೇಲಿನ ಪರಿಣಾಮವನ್ನು ಆಧರಿಸಿ, ಸಮಾಜದ ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನು ಹೆಚ್ಚಿಸುವ ಗುರಿ ಹೊಂದಿದೆ. ಕಂಪನಿ ಕಾಯ್ದೆ, 2013ರ ಅನುಸೂಚಿ ಗಿಖಖರ ಪ್ರಕಾರ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ದಿಷ್ಟಪಡಿಸುತ್ತದೆ. ಅನುಷ್ಠಾನಗೊಳಿಸುವಿಕೆಯ ವರ್ಷಗಳಲ್ಲಿ, ಕೈಗೊಳ್ಳಬೇಕಾದ ಯೋಜನೆ ಹಾಗೂ ಉದ್ದೇಶಗಳನ್ನು ಹೊರಸೂಸುವುದರೊಂದಿಗೆ, ಆಯ್ಕೆ ಮಾಡಿರುವ ಕ್ಷೇತ್ರ/ಪ್ರದೇಶಗಳಲ್ಲಿ ಅನುಷ್ಠಾನಗೊಳಿಸುವಿಕೆಯ

ಕಾರ್ಯಕ್ರಮ ಹಾಗೂ ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸುತ್ತದೆ. ಕಂಪನಿ ಕಾಯ್ದೆ, 2013ರ ಅನುಸೂಚಿ–7 ರಲ್ಲಿ ವಿಷದೀಕರಿಸಿರುವ ಚಟುವಟಿಕೆಗಳಿಗೆ ಒಳಪಟ್ಟು, ಕಂಪನಿಯು ವಿವಿಧ ಸನ್ನಿವೇಶ ಹಾಗೂ ಸವಾಲುತನಗಳಿಗೆ ಸೂಕ್ತ ಹಾಗೂ ಸುಲಭ ರೀತಿಯಲ್ಲಿ ಸ್ಪಂದಿಸಲು ನೀತಿಯ ಉದ್ದೇಶವನ್ನು ಸಾಧ್ಯವಾದಷ್ಟೂ ವಿಸ್ತೃತವಾಗಿಸಲಾಗಿದೆ. ಆದರೆ, ಭಾರತದಾಚೆ ಕೈಗೊಳ್ಳುವ ಯಾವುದೇ ಚಟುವಟಿಕೆಗಳಿಗೆ ಯಾವುದೇ ರೀತಿಯ ಕೊಡುಗೆ, ವಂತಿಗೆಗಳನ್ನು ನೀಡುವುದಿಲ್ಲ.

3. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ಆಧಾರಿತ ವಿಷಯಗಳು:

ಕ.ವಿ.ಪ್ರ.ನಿ.ನಿ.ಯ ನಿರ್ದೇಶಕ ಮಂಡಳಿಯು, ಕೆಳಕಂಡ ಆಧಾರಿತ ವಿಷಯಗಳೊಂದಿಗೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯನ್ನು ರಚಿಸಿದೆ:

ಎ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಿ ಮಂಡಳಿಗೆ ಶಿಫಾರಸ್ಸು ಮಾಡುವುದು;

ಬಿ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಭರಿಸುವ ವೆಚ್ಚಗಳಿಗೆ ಶಿಫಾರಸ್ಸು ಮಾಡುವುದು;

ಸಿ. ಕಾಲಕಾಲಕ್ಕೆ ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳನ್ನು ಮೇಲ್ವಿಚಾರಣೆಗೆ ಒಳಪಡಿಸುವುದು.

ಡಿ. ಕಂಪನಿಯು ಕೈಗೊಳ್ಳುವ ಚಟುವಟಿಕೆಗಳು ಅಥವಾ ಸಾ.ಸಾ.ಹೊ. ಯೋಜನೆಗಳು/ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪಾರದರ್ಶಕ ಮೇಲ್ವಿಚಾರಣೆಯನ್ನು ಕಾರ್ಯಗತಗೊಳಿಸುವುದು.

ನಿಗಮದ ಸಾ.ಸಾ.ಹೊ. ಸಮಿತಿಯು, ಯೋಜಿತ ಉದ್ದೇಶಗಳನ್ನು ಕಾಯಕಲ್ಪಗೊಳಿಸಲು ಕೆಳಕಂಡಂತೆ ಪ್ರಕ್ರಿಯೆಗೊಳಿಸುತ್ತದೆ:

- ಸಾ.ಸಾ.ಹೊಣೆಗಾರಿಕೆ ಉಪಕ್ರಮಗಳ ಸಂಬಂಧವಾಗಿ, ನಿಗಮವು ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಸೂಚಿಸುವ ಕಾರ್ಯನೀತಿಯನ್ನು ರೂಪಿಸಿ ಪರಿಶೀಲಿಸುವುದು;
- ಸಾ.ಸಾ.ಹೊಣೆಗಾರಿಕೆ ಚಟುವಟಿಕೆಗಳಿಗಾಗಿ ಭರಿಸಬೇಕಾದ ವೆಚ್ಚಕ್ಕೆ ಶಿಫಾರಸ್ಸು ಮಾಡುವುದು;
- ನಿಗಮವು ಕೈಗೊಳ್ಳಬೇಕಾದ ಯೋಜನೆ/ಕಾರ್ಯಕ್ರಮ/ಚಟುವಟಿಕೆಗಳ ಅನುಷ್ಠಾನ ಅಥವಾ ನಿ.ಸಾ. ಹೊ. ನಿಮಿತ್ತವಾಗಿ ಭರಿಸಿದ ಕಟ್ಟಕಡೆಯ ವೆಚ್ಚವನ್ನು ಖಚಿತಪಡಿಸಿಕೊಳ್ಳಲು ಪಾರದರ್ಶಕ ಮೇಲ್ವಿಚಾರಣಾ ಕಾರ್ಯನೀತಿಯನ್ನು ರೂಪಿಸುವುದು;
- ಕಾಲಕಾಲಕ್ಕೆ ಈ ನೀತಿಯನ್ನು ಮೇಲ್ವಿಚಾರಣೆಗೆ ಒಳಪಡಿಸಿ ಅನುಷ್ಠಾನಗೊಳಿಸುವುದು;
- ಸಾ.ಸಾ.ಹೊ.ಚಟುವಟಿಕೆಗಳ ಬಗ್ಗೆ ಹಾಗೂ ಆ ನಿಮಿತ್ತವಾಗಿ ನಿಗಮದ ಕೊಡುಗೆಯ ಬಗ್ಗೆ ವಾರ್ಷಿಕವಾಗಿ ಮಂಡಳಿಗೆ ವರದಿಯನ್ನು ಸಲ್ಲಿಸುವುದು;
- ಕಾಯ್ದೆಯ ಅಡಿಯಲ್ಲಿ ಕಡ್ಡಾಯಗೊಳಿಸಿರುವ ಇತರ ಯಾವುದೇ ಅಗತ್ಯತೆ ಹಾಗೂ ತತ್ಸಂಬಂಧ ಹೊರಡಿಸಿರುವ ನಿಯಮಗಳ ಪಾಲನೆ

4. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆ/ಯೋಜನೆ:

ಕಂಪನಿ ಕಾಯ್ದೆ, 2013ರ ಅನುಸೂಚಿ VII, ಕಂಪನಿಗಳು ತಮ್ಮ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿಯಲ್ಲಿ ಕೆಳಗೆ ಸೂಚಿಸಿರುವ ಚಟುವಟಿಕೆಗಳನ್ನು ಒಳಪಡಿಸಿಕೊಳ್ಳಬೇಕೆಂದು ಅಗತ್ಯಪಡಿಸುತ್ತದೆ:

i. ತೀವ್ರಮಟ್ಟದ ಹಸಿವು, ಬಡತನ ಮತ್ತು ಅಪೌಷ್ಠಿಕತೆ ನಿರ್ಮೂಲನೆ ಮಾಡುವುದು, ನೈರ್ಮಲ್ಯದ ಪ್ರಚಾರಕ್ಕಾಗಿ ಮತ್ತು ಸುರಕ್ಷಿತವಾಗಿ ಕಡಿಯುವ ನೀರನ್ನು ಒದಗಿಸಲು ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಕೋಶಕ್ಕೆ ದೇಣಿಗೆ ನೀಡಿದ ಕೋಡುಗೆ ಸೇರಿದಂತೆ ಮುಂಜಾಗ್ರತಾ ಕ್ರಮಗಳು ಮತ್ತು ನೈರ್ಮಲ್ಯ ಸೇರಿದಂತೆ ಆರೋಗ್ಯ ಸುರಕ್ಷೆಯನ್ನು ಉತ್ತೇಜಿಸುವುದು.

ii . ವಿಶೇಷವಾಗಿ ಮಕ್ಕಳು, ಮಹಿಳೆಯರು, ಹಿರಿಯರು ಮತ್ತು ವಿಭಿನ್ನ ಶಕ್ತರ ಜೀವನ ಉನ್ನತೀಕರಣ ಯೋಜನೆಯಲ್ಲಿ ವೃತ್ತಿ ಕೌಶಲ್ಯಗಳನ್ನು ಒಳಗೊಂಡಂತೆ ಶಿಕ್ಷಣವನ್ನು ಉತ್ತೇಜಿಸುವುದು.

iii. ಲಿಂಗ ಸಮಾನತೆ, ಮಹಿಳಾ ಸಬಲೀಕರಣವನ್ನು ಉತ್ತೇಜಿಸುವುದು, ಮಹಿಳೆಯರು ಮತ್ತು ಅನಾಥರಿಗೆ ಆಶ್ರಮ

ಮತ್ತು ವಸತಿ ನಿಲಯಗಳನ್ನು ಸ್ಥಾಪಿಸುವುದು; ಹಿರಿಯ ನಾಗರಿಕರು ಮತ್ತು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಗುಂಪುಗಳು ಎದುರಿಸುತ್ತಿರುವ ಅಸಮಾನತೆಗಳನ್ನು ಕಡಿಮೆ ಮಾಡುವ ಕ್ರಮಗಳಿಗಾಗಿ ವೃದ್ಧಾಶ್ರಮಗಳು, ಆರೈಕೆ ಕೇಂದ್ರಗಳು ಮತ್ತು ಇಂತಹ ಇತರೆ ಸೌಲಭ್ಯಗಳನ್ನು ಸ್ಥಾಪಿಸುವುದು.

iv. ಪರಿಸರ ಸಂರಕ್ಷಣೆ, ಪರಿಸರ ಸಮತೋಲನ, ಸಸ್ಯ ಸಂಪತ್ತು ಮತ್ತು ಪ್ರಾಣಿಗಳ ರಕ್ಷಣೆ, ಕೃಷಿ ಅರಣ್ಯ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಗಂಗಾ ನದಿಯ ಪುನರುಜ್ಜೀವನಕ್ಕಾಗಿ ಕೇಂದ್ರ ಸರ್ಕಾರವು ಸ್ಥಾಪಿಸಿದ ನಿರ್ಮಲ ಗಂಗಾ ನಿಧಿಗೆ ಕೊಡುಗೆ ಸೇರಿದಂತೆ ಮಣ್ಣು, ವಾಯು ಮತ್ತು ನೀರಿನ ಗುಣಮಟ್ಟವನ್ನು ಕಾಯ್ದುಕೊಳ್ಳುವುದು.

v. ಐತಿಹಾಸಿಕ ಪ್ರಾಮುಖ್ಯತೆ ಹೊಂದಿರುವ ಕಟ್ಟಡಗಳು ಮತ್ತು ತಾಣಗಳು ಸೇರಿದಂತೆ ರಾಷ್ಟ್ರೀಯ ಪರಂಪರೆಯ ಕಲೆ, ಸಂಸ್ಕೃತಿಯ ರಕ್ಷಣೆ; ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ, ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ವಸ್ತುಗಳಿಗೆ ಉತ್ತೇಜನ ಮತ್ತು ಅಭಿವೃದ್ಧಿ.

vi. ಸಶಸ್ತ್ರ ಪಡೆಗಳ ಶೂರರು, ಯುದ್ಧದಲ್ಲಿ ಮಡಿದ ಸೈನಿಕರ ವಿಧವೆಯರು ಮತ್ತು ಅವರ ಅವಲಂಬಿತರ ಪ್ರ'ಯೋಜನಕ್ಕಾಗಿ ಕ್ರಮಗಳು.

vii. ಗ್ರಾಮೀಣ ಕ್ರೀಡೆಗಳು, ರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಕ್ರೀಡೆಗಳು, ಪ್ಯಾರಾಲಂಪಿಕ್ ಕ್ರೀಡೆಗಳು ಮತ್ತು ಒಲಂಪಿಕ್ ಕ್ರೀಡೆಗಳ ಉತ್ತೇಜನಕ್ಕಾಗಿ ತರಬೇತಿ.

viii. ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ, ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ರೂಪಿಸುವ ಪರಿಹಾರ ನಿಧಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ, ಇತರೆ ಹಿಂದುಳಿದ ವರ್ಗಗಳು, ಅಲ್ಪ ಸಂಖ್ಯಾತರು ಹಾಗೂ ಮಹಿಳಾ ಕಲ್ಯಾಣಕ್ಕಾಗಿ ಕೊಡುಗೆ;ಮತ್ತು

ix. ಕೇಂದ್ರ ಸರ್ಕಾರದ ಅನುಮೋದನೆ, ಹೊಂದಿರುವ ಶೈಕ್ಷಣಿಕ ಸಂಸ್ಥೆಗಳೊಳಗೆ ಇರುವ ತಾಂತ್ರಿಕ ಇನಕ್ಯೂಬೇಟರ್‌ಗಳಿಗೆ ಕೊಡುಗೆಗಳು ಅಥವಾ ನಿಧಿಗಳು.

x. ಗ್ರಾಮೀಣ ಅಭಿವೃದ್ಧಿ ಯೋಜನೆಗಳು.

xi. ಕೊಳಗೇರಿ ಪ್ರದೇಶ ಅಭಿವೃದ್ಧಿ ಯೋಜನೆಗಳು.

ವಿವರಣೆ: ಈ ಅಂಶದ ಉದ್ದೇಶಕ್ಕಾಗಿ "ಕೊಳಗೇರಿ ಪ್ರದೇಶ"ಎಂಬ ಶಬ್ದವು ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಆ ಸಮಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿರುವ ಯಾವುದೇ ಇತರ ಪ್ರಾಧಿಕಾರದಿಂದ ಘೋಷಿಸಲ್ಪಟ್ಟ ಪ್ರದೇಶ. ಕಂಪನಿಗಳ ಕಾಯ್ದೆ, 2013 ರ ಅನುಸೂಚಿ–7 ಯು ಒಂದು, ಸಿ.ಎಸ್. ಆರ್. ಚಟುವಟಿಕೆಗಳು ಮತ್ತು ಅದರ ಸಲುವಾಗಿ ಖರ್ಚು ಮಾಡಬಹುದಾದ ಮೊಬಲಗನ್ನು ನಿರ್ದಿಷ್ಟಪಡಿಸುವ ಕೈಪಿಡಿ ದಾಖಲೆಯಾಗಿರುತ್ತದೆ. ಸದರಿ ಅನುಸೂಚಿಯು ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಅನುಸೂಚಿ–7 ನ್ನು ಕ.ವಿ.ಪ್ರ.ನಿ.ನಿಯ ಸಿ.ಎಸ್.ಆರ್. ಕಾರ್ಯನೀತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

೫. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗು

ಕಂಪನಿ ಕಾಯ್ದೆ 2013ರ ಪ್ರಕರಣ 135 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ, ಪ್ರತಿ ಆರ್ಥಿಕ ವರ್ಷದಲ್ಲಿ, ತತ್‌ಕ್ಷಣದ ಹಿಂದಿನ ಮೂರು ವರ್ಷಗಳಲ್ಲಿ ಗಳಿಸಿದ ನಿವ್ವಳ ಲಾಭದ ಕನಿಷ್ಠ ಶೇಕಡಾ 2ರಷ್ಟನ್ನು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಅನುಸರಣೆಯಾಗಿ ಖರ್ಚು ಮಾಡುವುದನ್ನು ನಿಗಮವು ಖಚಿತಪಡಿಸಿಕೊಳ್ಳತಕ್ಕದ್ದು.

ಈ ನೀತಿಯ ಪ್ರಕಾರ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಖರ್ಚಿನ ಮೊದಲ ಆರ್ಥಿಕ ವರ್ಷವು 2014–15 ಆಗಿದ್ದು, ನಿವ್ವಳ ಲಾಭವು ಆ.ವ2011–12,2012–13 ಮತ್ತು 2013–14ರ ನಿವ್ವಳ ಲಾಭದ ಸರಾಸರಿ ಎಂದು ಅರ್ಥೈಸುತ್ತದೆ.

ಮೇಲೆ ತಿಳಿಸಿರುವ ನಿವ್ವಳ ಲಾಭ ಎಂದರೆ, ನಿಗಮದ ಲೆಕ್ಕಪುಸ್ತಕಗಳ ಪ್ರಕಾರ ತೆರಿಗೆಗೆ ಮುಂಚಿನ ನಿವ್ವಳ ಲಾಭ ಎಂದಾಗುತ್ತದೆ. ಇದರಲ್ಲಿ ಭಾರತದಾಚೆ ನಡೆಸಿದ ವ್ಯವಹರಣೆಯಿಂದ ಗಳಿಸಿದ ಲಾಭವನ್ನು ಒಳಗೊಳ್ಳುವುದಿಲ್ಲ.

6. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚುವೆಚ್ಚಗಳು

ಸಾ.ಸಾ.ಹೊ. ಸಮಿತಿಯು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚುವೆಚ್ಚಗಳನ್ನು ಕೆಳಕಂಡವುಗಳಿಗೆ ಸಂಬಂಧಿಸಿದಂತೆ, ನಿರ್ಧರಿಸುತ್ತದೆ :

- ಅಭಿವೃದ್ಧಿತ ವಿವಿಧ ಸಂಸ್ಥೆಗಳು ಹಾಗೂ ಪ್ರಾರಂಭಿಕ ಹಂತದ ಆಕರ ಸಂಸ್ಥೆಗಳಿಗೆ ನಿಧಿ ಸೌಲಭ್ಯ ಒದಗಿಸಬೇಕಾದ ಶೇಕಡಾವಾರು ಒಟ್ಟು ಮೊಬಲಗು; ಮತ್ತು
- ವಿತರಣೆಯನ್ನು ಎಷ್ಟು ಭಾಗಗಳಲ್ಲಿ ಬಿಡುಗಡೆ ಮಾಡಬೇಕು;
- ಸಾ.ಸಾ.ಹೊ.ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಯಾವುದೇ ಹೆಚ್ಚುವರಿ ಕಂಡುಬಂದರೆ, ಅವು ನಿಗಮದ ವ್ಯವಹರಿತ ಲಾಭದ ಭಾಗವಾಗಿರುವುದಿಲ್ಲ.
- ಸ್ವೀಕರಿಸಿದ ಯಾವುದೇ ವಂತಿಗೆಯಿಂದ ಗಳಿಸಿದ ಆದಾಯವು ಹಾಗೂ ಸಾ.ಸಾ.ಹೊ.ಚಟುವಟಿಕೆಗಳಿಂದ ಒದಗಿದ ಯಾವುದೇ ಹೆಚ್ಚುವರಿಯನ್ನು ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಮಾತ್ರ ಬಳಸತಕ್ಕದ್ದು.
- ನಿಗಮದ ಉದ್ಯೋಗಿಗಳ ಸಾ.ಸಾ.ಹೊ. ಸಾಮರ್ಥ್ಯವನ್ನು ರೂಪಿಸಲು ನಿಧಿಯನ್ನು ಸಜ್ಜುಗೊಳಿಸಲು ಸಮಿತಿಯು ಶಿಫಾರಸ್ಸು ಮಾಡಿ, ತನ್ಮೂಲಕ ಸಾ.ಸಾ.ಹೊ.ಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

7. ಆಡಳಿತ

1 ಪ್ರತಿ ವರ್ಷ, ಆಯಾ ಆರ್ಥಿಕ ವರ್ಷದಲ್ಲಿ ಹಮ್ಮಿಕೊಂಡಿರುವ ಸಾ.ಸಾ.ಹೊ.ಚಟುವಟಿಕೆಗಳ ಕಾರ್ಯಕ್ರಮ ವಿವರಗಳ ಯೋಜನೆ ಹಾಗೂ ತತ್ಸಂಬಂಧ ಖರ್ಚುವೆಚ್ಚ ವಿವರಗಳ ಪ್ರಸ್ತಾಪವನ್ನು ಸಾ.ಸಾ.ಹೊ. ಸಮಿತಿಯು ಅನುಮೋದನೆಗಾಗಿ ಮಂಡಳಿಗೆ ಮಂಡಿಸತಕ್ಕದ್ದು. ಅವಶ್ಯವೆಂದು ಕಂಡುಬಂದರೆ, ಅಗತ್ಯ ಮಾರ್ಪಾಡುಗಳೊಂದಿಗೆ ಮಂಡಳಿಯು ಸಾ.ಸಾ.ಹೊಣೆಗಾರಿಕೆ ಚಟುವಟಿಕೆಯ ಯೋಜನೆಯನ್ನು ಪರಿಗಣಿಸಿ ಅನುಮೋದಿಸುತ್ತದೆ.

2 ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು, ಸಾ.ಸಾ.ಹೊ.ಚಟುವಟಿಕೆಗಳ ಅನುಷ್ಠಾನವನ್ನು ಪರಿಶೀಲಿಸಿ, ಈ ನೀತಿಯ ಪ್ರಕಾರ ಕಾರ್ಯಕ್ರಮಗಳು ಸಮರ್ಥನೀಯ ಹಾಗೂ ದಕ್ಷ ರೀತಿಯಲ್ಲಿ ನಿರ್ವಹಿತಗೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಕಾಲಕಾಲಕ್ಕೆ ಅಗತ್ಯ ನಿರ್ದೇಶನ ನೀಡತಕ್ಕದ್ದು.

3 ಪ್ರತಿ ಆರು ತಿಂಗಳುಗಳಿಗೊಮ್ಮೆ, ಆ ಆರು ತಿಂಗಳುಗಳಲ್ಲಿ ಅನುಮೋದಿತ ಸಾ.ಸಾ.ಹೊ.ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಪ್ರಗತಿಯ ಬಗ್ಗೆ ತಹಲ್ ವರದಿಯನ್ನು ಒದಗಿಸತಕ್ಕದ್ದು. ಅಂತಹ ಸಮಿತಿಯು ಪರಿಶೀಲಿಸಿ, ಅನುಷ್ಠಾನಿತ ಕಾರ್ಯದ ಬಗ್ಗೆ ಮಂಡಳಿಯ ಗಮನಕ್ಕೆ ತರತಕ್ಕದ್ದು.

4 ಪ್ರತಿ ಆರ್ಥಿಕ ವರ್ಷಾಂತ್ಯಕ್ಕೆ, ಮಂಡಳಿಗೆ ಸಾ.ಸಾ.ಹೊ.ಸಮಿತಿಯು ವರದಿಯನ್ನು ಮಂಡಿಸತಕ್ಕದ್ದು.

8. ಮಾಹಿತಿಯ ಪ್ರಚಾರ

ಸಾ.ಸಾ.ಹೊ.ಸಮಿತಿಯು, ನಿಗಮದ ಮಂಡಳಿಗೆ ಕನಿಷ್ಠ ವಾರ್ಷಿಕವಾಗಿ, ನಿಗಮವು ಕೈಗೊಂಡ ನಿ.ಸಾ.ಹೊ. ಯೋಜನೆಗಳು/ಚಟುವಟಿಕೆಗಳು ಹಾಗೂ ಅದರ ಯೋಜನೆಗಳು/ಚಟುವಟಿಕೆಗಳಿಂದ ಕಂಡುಬಂದ ಫಲಿತಗಳ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.

ನಿಗಮವು ಈ ನೀತಿಯ ಮಾಹಿತಿಯನ್ನು ನಿಗಮದ ಜಾಲತಾಣ www.kptcl.com/ePrasarana ದಲ್ಲಿ ತುಂಬಿಸತಕ್ಕದ್ದು. ಮುಂದುವರೆಸಿ, ಸಾ.ಸಾ.ಹೊ. ಕಾರ್ಯಚಟುವಟಿಕೆಯ ವಿವರವಾದ ವರದಿಯನ್ನು ನಿಗಮದ ವಾರ್ಷಿಕ ಲೆಕ್ಕಪತ್ರಗಳ ನಿರ್ದೇಶಕರ ವರದಿಯಲ್ಲಿ ಹಾಗೂ ಜಾಲತಾಣದಲ್ಲಿ ಪ್ರಚಾರಪಡಿಸುವುದು.

ಸಾ.ಸಾ.ಹೊ. ನೀತಿಯನ್ವಯ, ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ, ಮೇಲ್ವಿಚಾರಣೆಗೆ ಒಳಪಡಿಸಿ, ಅನುಸರಣೆ ಮಾಡಿರುವ ಬಗ್ಗೆ ಸಾ.ಸಾ.ಹೊ. ಸಮಿತಿಯು ನಿಗಮದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಜವಾಬ್ದಾರಿಯುತವಾದ ಹೇಳಿಕೆಯನ್ನು ನೀಡತಕ್ಕದ್ದು.

ಬಿ.ಪಿ.ರಾವ್ ಮತ್ತು ಕಂ
ಚಾರ್ಟರ್ಡ್ ಅಕೌಂಟೆಂಟ್

ನಂ.೫, ಪೂರ್ಣ ಪ್ರಸಾದ ರಸ್ತೆ,
ಹೈ ಗ್ರೌಂಡ್ಸ್, ಬೆಂಗಳೂರು ೫೬೦ ೦೦೧.
ಫೋ:೦೮೦-೨೨೨೦೦೨೦೦, ೨೨೨೦೦೨೦೧.
ಫ್ಯಾಕ್ಸ್ ಸಂಖ್ಯೆ:೨೨೨೦೫೦೩೦.
ಮಿಂಚಂಚೆ:Bpraoco@gmail.com
ಜಾಲತಾಣ:Bpraoco.com

ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸದಸ್ಯರಿಗೆ

IND-AS ರನ್ವಯ ಆರ್ಥಿಕ ಲೆಕ್ಕಪತ್ರಗಳ ಮೇಲಿನ ವರದಿ

ನಾವು ಈ ವರದಿಯ ಜತೆ ಲಗತ್ತಿಸಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕಂಪನಿ) ೩೧ನೇ ಮಾರ್ಚ್ ೨೦೧೮ ರಂದು ಇದ್ದಂತೆ, ಆಯವ್ಯಯ ಪಟ್ಟಿ, ಲಾಭ ನಷ್ಟ ತಖ್ತೆ (ಇತರೆ ಸಮಗ್ರ ಆದಾಯವನ್ನೊಳಗೊಂಡಂತೆ) ಆ ದಿನಾಂಕದಂದು ಅಂತ್ಯಗೊಂಡ ವರ್ಷದ ನಗದು ಹರಿವಿನ ವಿವರಣಾಪಟ್ಟಿ ಮತ್ತು ಗಮನಾರ್ಹ ಲೆಕ್ಕಪದ್ಧತಿ ತತ್ವಗಳು, ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿಗಳನ್ನೊಳಗೊಂಡ **IND-AS** ಆರ್ಥಿಕ ವಿವರಣೆಗಳ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. (ಇಲ್ಲಿಂದ ಮುಂದೆ **IND-AS** ನ ಆರ್ಥಿಕ ನಿರೂಪಣಾ ಪಟ್ಟಿಗಳು ಎಂದು ಉಲ್ಲೇಖಿಸಲಾಗುತ್ತದೆ).

IND-AS ನ ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿ:

ಕಂಪನಿ ಅಧಿನಿಯಮ (ಅಧಿನಿಯಮ), ೨೦೧೩ರ ಪರಿಚ್ಛೇಧ 134(5)ರಲ್ಲಿ ಸೂಚಿಸಿರುವಂತೆ, ಹಾಗೂ ಕಂಪನಿ (ಲೆಕ್ಕಗಳು) ನಿಯಮಾವಳಿಗಳು,೨೦೧೪ರ ನಿಯಮ 7ರೊಂದಿಗೆ ಅನ್ವಯಿಸಲ್ಪಟ್ಟ ಅಧಿನಿಯಮದ ಪರಿಚ್ಛೇಧ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಲೆಕ್ಕವಿಧಾನದಂತೆ, ಭಾರತದಲ್ಲಿ ಸರ್ವಸಾಮಾನ್ಯವಾಗಿ ಒಪ್ಪಿತವಾಗಿರುವ ಲೆಕ್ಕಪದ್ಧತಿಗಳ ಪ್ರಕಾರ ಮತ್ತು **IND-AS** ರನ್ವಯ ಕಂಪನಿಯ ಆರ್ಥಿಕ ಸ್ಥಿತಿ, ಸಮಗ್ರ ಆದಾಯವನ್ನೊಳಗೊಂಡ ಆರ್ಥಿಕ ಸಾಧನೆ, ನಗದಿನ ಹರಿವು ಹಾಗೂ ಕಂಪನಿಯ ಬಂಡವಾಳದಲ್ಲಿನ ಬದಲಾವಣೆ ಬಗ್ಗೆ ನೈಜ ಹಾಗೂ ತೃಪ್ತಿಕರ ಮಾಹಿತಿಯುಳ್ಳ ಈ **IND-AS** ಆರ್ಥಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ಜವಾಬ್ದಾರಿಯು ಕಂಪನಿಯ ಆಡಳಿತ ವರ್ಗಕ್ಕೆ ಸಂಬಂಧಿಸಿದೆ. ಈ ಜವಾಬ್ದಾರಿಯು, ಕಂಪನಿಯ ಆಸ್ತಿಗಳನ್ನು ಸುರಕ್ಷಿತಗೊಳಿಸಲು ಅಧಿನಿಯಮದ ಅವಕಾಶಗಳ ಪ್ರಕಾರ ಅಗತ್ಯ ಪ್ರಮಾಣದಲ್ಲಿ ಲೆಕ್ಕಪತ್ರಗಳ ದಾಖಲಾತೀತ ನಿರ್ವಹಣೆ, ಮೋಸ, ವಂಚನಾತೀತ ಹಾಗೂ ಇತರ ನಿಯಮವಿರುದ್ಧವಾದವುಗಳನ್ನು ಪತ್ತೆ ಹಚ್ಚಿ ತಡೆಗಟ್ಟುವುದು, ಸೂಕ್ತ ಲೆಕ್ಕಪದ್ಧತಿ ತತ್ವಗಳನ್ನು ಆಯ್ಕೆ ಮಾಡಿ ಅನ್ವಯಿಸುವುದು, ವಿವೇಚನಾತೀತ ಹಾಗೂ ದೂರದೃಷ್ಟಿಯುಳ್ಳ ಅಂದಾಜು ಹಾಗೂ ತೀರ್ಮಾನ ತೆಗೆದುಕೊಳ್ಳುವುದು, ನಿಖರತೆ ಹಾಗೂ ಪರಿಪೂರ್ಣತೆಯ ಲೆಕ್ಕಪತ್ರ ದಾಖಲೆಗಳನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುತ್ತಿದ್ದ ವಿನ್ಯಾಸ, ಅನುಷ್ಠಾನ ಹಾಗೂ ನೈಜ ಮತ್ತು ತೃಪ್ತಿಕರ ಮಾಹಿತಿಗಳನ್ನು ಬಿಂಬಿಸುವ ಆಂತರಿಕ ಆರ್ಥಿಕ ನಿಯಂತ್ರಣ, ನೈಜ ಹಾಗೂ ನ್ಯಾಯಸಮ್ಮತ ದೃಷ್ಟಿಯನ್ನು ಬೀರುವ **IND-AS** ಆರ್ಥಿಕ ನಿರೂಪಣಾ ಪಟ್ಟಿಯನ್ನು ಸಿದ್ಧಪಡಿಸಿ, ಅವು ಮೋಸ, ವಂಚನೆಗಳಿಂದ ಮುಕ್ತವಾಗಿರುವುದನ್ನು ಖಚಿತಪಡಿಸಿಕೊಂಡು, ಮಂಡಿಸುವುದು ಇಂತಹವುಗಳನ್ನು ಒಳಗೊಂಡಿದೆ.

ಲೆಕ್ಕ ಪರಿಶೋಧಕರ ಜವಾಬ್ದಾರಿ

ನಮ್ಮ ಪರಿಶೋಧನಾ ಕಾರ್ಯದ ಪ್ರಕಾರ **IND-AS** ಆರ್ಥಿಕ ಲೆಕ್ಕಪತ್ರಗಳ ಮೇಲೆ ಅಭಿಪ್ರಾಯವನ್ನು ಸೂಚಿಸುವುದಷ್ಟೇ ನಮ್ಮ ಜವಾಬ್ದಾರಿಯಾಗಿರುತ್ತದೆ.

ಲೆಕ್ಕ ಪರಿಶೋಧನ ಕಾರ್ಯದಲ್ಲಿ ಅಧಿನಿಯಮ 143 (11) ರಲ್ಲಿ ಸೂಚಿಸಿರುವ ನಿಯಮಗಳಂತೆ ಲೆಕ್ಕಪರಿಶೋಧನೆ ನಡೆಸುವಾಗ, ಅಧಿನಿಯಮದ ನಿಯಮಗಳು, ಲೆಕ್ಕಪದ್ಧತಿ ಹಾಗೂ ಲೆಕ್ಕಪರಿಶೋಧನೆ ಮಾನಕ, ಅಧಿನಿಯಮದ ನಿಬಂಧನೆಗಳ ಅಡಿಯಲ್ಲಿ ಹಾಗೂ ಸೂಚಿತ ನಿಯಮಗಳ ಅಡಿಯಲ್ಲಿ ಪರಿಶೋಧಿತ ವರದಿಯಲ್ಲಿ ಒಳಪಡಿಸಬೇಕಾದ ಅಗತ್ಯ ವಿಷಯಾಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದೇವೆ.

ಅಧಿನಿಯಮದ ಪರಿಚ್ಛೇಧ 143(10)ರಲ್ಲಿ ನಿರ್ದಿಷ್ಟಪಡಿಸಿರುವ ಪರಿಶೋಧನಾ ಗುಣಮಾನಕಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಿದ್ದೇವೆ. ಈ ಗುಣಮಾನಕಗಳು, ನಾವು ನೈತಿಕ ಯೋಜನಾತೀತ ಅಗತ್ಯತೆಯನ್ನು ಪಾಲಿಸಿ **IND-AS** ನ ಆರ್ಥಿಕ ನಿರೂಪಣಾಪಟ್ಟಿಗಳು ನೈತಿಕ ಪರಿಣಾಮಗಳಿಂದ ಹೊರತಾಗಿರುವ ಬಗ್ಗೆ ವಿವೇಚನಾತೀತ ದೃಢನಂಬಿಕೆಯನ್ನು ಪಡೆದುಕೊಳ್ಳಲು ಯೋಜನಾತೀತವಾಗಿ ಲೆಕ್ಕಪರಿಶೋಧನೆ ನಡೆಸಬೇಕೆನ್ನುವುದನ್ನು ಅಗತ್ಯಪಡಿಸುತ್ತವೆ.

ಲೆಕ್ಕಪರಿಶೋಧನೆಯು, ಆರ್ಥಿಕ ನಿರೂಪಣಾಪಟ್ಟಿಯಲ್ಲಿನ ಫಲಿತಾಂಶ ಪರಿಮಾಣ ಹಾಗೂ ಅವುಗಳ ಬಹಿರಂಗಪಡಿಸುವಿಕೆಯ ಬಗ್ಗೆ ಪರಿಶೋಧನಾ ಸಾಕ್ಷ್ಯಾಧಾರವನ್ನು ಪಡೆದುಕೊಳ್ಳಲು ಕಾರ್ಯಸಾಧನೆಯ ವಿಧಿವಿಧಾನಗಳನ್ನು ಒಳಗೊಳ್ಳುತ್ತದೆ. ಕಾರ್ಯವಿಧಾನದ ಆಯ್ಕೆಯು, **IND-AS** ನ ಆರ್ಥಿಕ ನಿರೂಪಣಾಪಟ್ಟಿಯಲ್ಲಿನ ಮೋಸ, ವಂಚನೆ ಅಥವಾ ದೋಷಗಳಂತಹ ಭೌತಿಕ ಪರಿಣಾಮಗಳ ಅಪಾಯಗಳನ್ನು ಗೊತ್ತುಪಡಿಸುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ನಿರ್ಣಯವನ್ನು ಅವಲಂಬಿಸಿರುತ್ತದೆ. ಅಂತಹ ಅಪಾಯಕರ ಮಾಹಿತಿಗಳನ್ನು ಗೊತ್ತುಪಡಿಸಿಕೊಳ್ಳಲು, ಸಂದರ್ಭಕ್ಕನುಗುಣವಾಗಿ ಸೂಕ್ತವಾದ ಲೆಕ್ಕ ಪರಿಶೋಧನೆಯ ಕಾರ್ಯಪ್ರಕ್ರಿಯೆಯನ್ನು ರೂಪಿಸಲು ಲೆಕ್ಕಪರಿಶೋಧಕರು, ಕಂಪನಿಯ **IND-AS** ಆರ್ಥಿಕ ನಿರೂಪಣಾಪಟ್ಟಿಯನ್ನು ಸಿದ್ಧಪಡಿಸಿರುವಂತೆ ಹಾಗೂ ನ್ಯಾಯಬದ್ಧವಾಗಿ ಮಂಡಿಸುವುದಕ್ಕೆ ಸಂಬಂಧವಾದ ಆಂತರಿಕ ನಿಯಂತ್ರಣಗಳನ್ನು ಪರಿಗಣಿಸುತ್ತಾರೆ, ಲೆಕ್ಕಪರಿಶೋಧನೆಯು, ಅನುಸರಿಸಿರುವ ಲೆಕ್ಕಪದ್ಧತಿ ತತ್ವಗಳ ಯುಕ್ತತೆಯ ಮೌಲ್ಯೀಕರಣ ಹಾಗೂ ಆಡಳಿತ ಮಂಡಳಿಯು ಕೈಗೊಂಡಿರುವ ಲೆಕ್ಕೀಕರಣ ಅಂದಾಜುಗಳ ಸಮಂಜಸತೆಯನ್ನು ಹಾಗೂ ಆರ್ಥಿಕ ನಿರೂಪಣಾಪಟ್ಟಿಗಳ' ಸಮಗ್ರ ಮಂಡಿಸಿರುವಿಕೆಯನ್ನೂ ಒಳಗೊಂಡಿರುತ್ತದೆ.

ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನೆಯ ಸಾಕ್ಷ್ಯಾಧಾರಗಳು ನಮ್ಮ ಔಚಿತ್ಯ ಲೆಕ್ಕಪರಿಶೋಧನೆಯ ಅಭಿಪ್ರಾಯವನ್ನು ಸಲ್ಲಿಸಲು ಅವಶ್ಯಕ ಪ್ರಮಾಣದಲ್ಲಿ ಹಾಗೂ ಯುಕ್ತವಾಗಿವೆ ಎಂದು ನಂಬಿದ್ದೇವೆ.

ಯುಕ್ತಾತೀತ ಅಭಿಪ್ರಾಯದ ಆಧಾರಗಳು:

(i) **ಟಿಪ್ಪಣಿ ಸಂಖ್ಯೆ :**1.2 (ಬಿ) ರಲ್ಲಿ ಸೂಚಿಸಿರುವಂತೆ ಹಿಂದಿನ ವರ್ಷದ ಅಂಕಿ ಅಂಶಗಳನ್ನು ಪ್ರಾರಂಭಿಕ ಇತರೆ ಸ್ವಾಮ್ಯ ಹಾಗೂ ಸಮಗ್ರ ಆದಾಯದಲ್ಲಿ **IND-AS** ಗೆ ಅನುಗುಣವಾಗಿ ಅಂಕಿ ಅಂಶಗಳನ್ನು ಪುನಃಸ್ಥಾಪನೆ ಮಾಡಲಾಗಿಲ್ಲ.

(ii) **ಟಿಪ್ಪಣಿ ಸಂಖ್ಯೆ:** 1.6 ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳಿಗೆ ಸಂಬಂಧಿಸಿದಂತೆ ಹಾಗೂ ಟಿಪ್ಪಣಿ ಸಂಖ್ಯೆ:2.5 (ಬಿ) ಮತ್ತು ಟಿಪ್ಪಣಿ ಸಂಖ್ಯೆ:33 ರಲ್ಲಿ ಸೂಚಿಸಿದಂತೆ ಕಂಪನಿಯು ಹಿಂದಿನ ಅವಧಿಗೆ ಸಂಬಂಧಿಸಿದ ತಪ್ಪುಗಳನ್ನು ಪೂರ್ವಾನ್ವಯವಾಗಿ ಪುನಃಸ್ಥಾಪನೆ ಮಾಡದೆ ಮತ್ತು ಸದರಿ ಮೊತ್ತಗಳಿಗೆ ತುಲನಾತ್ಮಕ ಮೊತ್ತವನ್ನು ನೀಡಲಾಗದ ಕಾರಣ ಆರಂಭಿಕ ಶಿಲ್ಕು ಆಸ್ತಿ ಮತ್ತು ಹೊಣೆಗಾರಿಕೆ ಹಾಗೂ ಇತರೆ ಸ್ವಾಮ್ಯಗಳ ಆರಂಭಿಕ ಶಿಲ್ಕುಗಳನ್ನು ಪುನಸ್ಥಾಪನೆಗೊಳಿಸದಿರುವುದು IND-AS 8 'ಲೆಕ್ಕ ಪತ್ರ ನೀತಿಗಳು, ಲೆಕ್ಕ ಪತ್ರ ಅಂದಾಜುಗಳಲ್ಲಿ ಬದಲಾವಣೆಗಳು ಮತ್ತು ದೋಷಗಳು" ಕಂಪನಿಯ (ಭಾರತೀಯ ಲೆಕ್ಕ ಪತ್ರ ಮಾನದಂಡ) ನಿಯಮಗಳು, 2015ರನ್ವಯ ನಿಗಧಿ ಪಡಿಸಲಾಗಿರುವುದನ್ನು ಪಾಲಿಸಿರುವುದಿಲ್ಲ. ಸದರಿ ಮಾಹಿತಿಯ ಅನುಪಸ್ಥಿತಿಯಲ್ಲಿ ಆರ್ಥಿಕ ನಿರೂಪಣ ಪಟ್ಟಿಗಳ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

(iii) **ಟಿಪ್ಪಣಿ ಸಂಖ್ಯೆ:**1.9; ಗಮನಾರ್ಹ ಲೆಕ್ಕ ಪದ್ಧತಿ ತತ್ವ ಮತ್ತು ಟಿಪ್ಪಣಿ ಸಂಖ್ಯೆ: 31.1; ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ (ಸಿ ಇ ಆರ್ ಸಿ) ಅಧಿಸೂಚನೆ ಸಂಖ್ಯೆ:ಐ–1/144/2013/CERC dated: 05.11.2015 ರನ್ವಯ ಫೈಬರ್ ಆಪ್ಟಿಕ್‌ಗಳನ್ನು ಪ್ರತ್ಯೇಕವಾಗಿ ಬಂಡವಾಳಕರಣಗೊಳಿಸಿ ಸವಕಳಿಯನ್ನು ನಿಗಧಿತ ಶೇಕಡ 6.33ರಷ್ಟು ಪರಿಗಣಿಸದೆ ಕೇವಲ ಶೇಕಡ 5.28 ರಷ್ಟು ಪರಿಗಣಿಸಿ ಸವಕಳಿಯನ್ನು ಲೆಕ್ಕಿಕರಿಸಲಾಗಿದೆ. ಇದರಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲೆ ಆಗುವ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(iv) **ಟಿಪ್ಪಣಿ ಸಂಖ್ಯೆ:**1.9 (ಜಿ) ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳನ್ವಯ ಮತ್ತು ಟಿಪ್ಪಣಿ ಸಂಖ್ಯೆ:2(ಎ).1(ಬಿ) ಗಳನ್ವಯ ಬಿಡುಗಡೆಗೊಳಿಸಿದ ಆಸ್ತಿಗಳನ್ನು ಪುನರ್ ಉಪಯೋಗಿಸಿದಲ್ಲಿ ಸವಕಳಿಯನ್ನು ಪರಿಗಣಿಸುವಾಗ ನೂತನವಾಗಿ ಬಂಡವಾಳಕರಿಸಿದ ಆಸ್ತಿಗಳಿಗಿರುವಂತೆ ಮೂಲ ಬಾಳಿಕೆ ಅವಧಿಯನ್ನೇ ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಸದರಿ ನಿಯಮವು IND-AS 16ರ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ಸವಕಳಿಗಳ ಬಗ್ಗೆ

ನಿಗಧಿಪಡಿಸಿದಂತೆ ಪಾಲಿಸಲಾಗಿರುವುದಿಲ್ಲ. IND-AS 16 ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ರನ್ವಯ ಬಿಡಿಗಡೆಗೊಳಿಸಿದ ಆಸ್ತಿಯನ್ನು ಮತ್ತೊಮ್ಮೆ ಬಂಡವಾಳಕರಿಸಿದಲ್ಲಿ ಉಳಿದ ಬಾಕಿ ವರ್ಷಗಳನ್ನು ಪರಿಗಣಿಸಿ ಬಿಡುಗಡೆಗೊಳಿಸಿದ ಆಸ್ತಿಗಳ ಮೇಲೆ ಸವಕಳಿಯನ್ನು ಪರಿಗಣಿಸಬೇಕಾಗಿರುತ್ತದೆ. ಸದರಿ ಬದಲಾವಣೆಯಿಂದ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಗಳ ಮೇಲೆ ಉಂಟಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(v) **ಟಿಪ್ಪಣಿ ಸಂಖ್ಯೆ:**1.10(ಡಿ); ಗಮನಾರ್ಹ ಲೆಕ್ಕ ಪದ್ದತಿ ತತ್ವಗಳಲ್ಲಿ ಸೂಚಿಸಿದಂತೆ ಮೇಲ್ವೀಚಾರಣ ಶುಲ್ಕ, ಪರೀಕ್ಷಾ ಶುಲ್ಕ, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು (Earth mat design charges) ಮಂಡಪ್ ಕೀಪರ್ ಶುಲ್ಕ (Mandap Keeper Charges) ಆದಾಯಗಳ ಗುರುತಿಸುವಿಕೆ ನಗದು ಆಧಾರದ ಮೇಲೆ ಲೆಕ್ಕೀಕರಿಸಲಾಗಿದ್ದು ಸದರಿ ಲೆಕ್ಕೀಕರಣವು ಕಂಪನಿಯ ಕಾಯ್ದೆ (ಭಾರತೀಯ ಲೆಕ್ಕ ವಿಧಾನ) ನಿಯಮ 2015ರ ಅಡಿಯಲ್ಲಿ ಬಿಡುಗಡೆ ಮಾಡಲಾದ IND AS 18 'ರೆವಿನ್ಯೂ' ರಲ್ಲಿ ನಿಗಧಿ ಪಡಿಸಿರುವುದನ್ನು ಪಾಲಿಸದ ಕಾರಣ ಲೆಕ್ಕ ಪತ್ರಗಳ ಮೇಲೆ ಬೀರಿರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(vi) **ಟಿಪ್ಪಣಿ ಸಂಖ್ಯೆ:** 1.15; ಗಮನಾರ್ಹ ಲೆಕ್ಕ ಪದ್ದತಿ ತತ್ವಗಳು ಸಾಲಗಳ ವೆಚ್ಚ (Borrowing Cost) ಬಂಡವಾಳೀಕರಿಸುವ ನಿಯಮವನ್ನು ಸರಾಸರಿ ತೂಕದ ವಿಧಾನ (Weighted Average) ಆಧಾರದ ಮೇಲೆ ಕಂಪನಿಯು ಪರಿಗಣಿಸಿರುತ್ತದೆ. ಹಾಗೂ ಪರಿಣಾಮಕಾರಿ ಬಡ್ಡಿ ದರದ ವಿಧಾನ (Effective Interest Rate Method) ವನ್ನು ಅಳವಡಿಸಿಕೊಳ್ಳದಿರುವುದು IND AS 23, (ಭಾರತೀಯ ಲೆಕ್ಕ ವಿಧಾನ) 2015 ರನ್ವಯ ಸಮಂಜಸವಾಗಿರುವುದಿಲ್ಲ. ಆದ ಕಾರಣ ಅದರಿಂದಾಗುವ ಪರಿಣಾಮವನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಮತ್ತು ಅವುಗಳ ಮೇಲಿನ ಸವಕಳಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(vii) ಕಂಪನಿಯು IND AS ಅನ್ವಯ ಲೆಕ್ಕೀಕರಣ/ಲೆಕ್ಕ ಪತ್ರಗಳ ಪ್ರಸ್ತುತಿ/ ಪುನರ್ ಸ್ಥಾಪನೆ/ಪೂರ್ಣ ಪ್ರಕಟಣೆಯಲ್ಲಿ ಈ ಕೆಳಕಂಡ IND AS ನಿಯಮಗಳನ್ನು ಅನುಸರಿಸಿರುವುದಿಲ್ಲ.

ಅ. ಇತರೆ ಸಮಗ್ರ ಆದಾಯ ಗುರುತಿಸುವಿಕೆ ಮತ್ತು ಪುನರ್ ಸ್ಥಾಪನೆ.

ಆ. ರಿಯಾಯಿತಿ ದರದಲ್ಲಿ ಹಾಗೂ ಉಚಿತ ದರದಲ್ಲಿ ಖರೀದಿಸಿದ ಜಮೀನಿನ ನ್ಯಾಯಯುತ ಮೌಲ್ಯವನ್ನು ಲೆಕ್ಕಿಕರಿಸುವ ಬಗ್ಗೆ – IND AS –20.

ಇ. ಗ್ರಾಹಕರ ಕೊಡುಗೆ ಕಾಮಗಾರಿಗಳ, ಆದಾಯದ ಮತ್ತು ಪಿಪಿಇ ಯನ್ನು ಗುರುತಿಸುವ ಬಗ್ಗೆ. ಅನುಬಂಧ– ಸಿ IND AS –18 .

ಈ. IND AS ಪ್ರಕಾರ ಆರ್ಥಿಕ ವರ್ಷ 2015–16 ರ ಲೆಕ್ಕ ಪತ್ರಗಳಲ್ಲಿ ಮುಂದೂಡಿದ ತೆರಿಗೆ ಹೊಣೆ ಪರಿಗಣಿಸದ ಕಾರಣ ಆರ್ಥಿಕ ವರ್ಷ 2016–17 ರ ಲೆಕ್ಕ ಪತ್ರಗಳ ಮೇಲೆ ಬೀರುವ ಪ್ರಭಾವ.

ಉ. ಪರಿಣಾಮಕಾರಿ ಬಡ್ಡಿ ದರದ ವಿಧಾನ (Effective Interest Rate Method) ವನ್ನು ಬಡ್ಡಿ ವೆಚ್ಚ/ ಆದಾಯವನ್ನು ಅಳವಡಿಸಿಕೊಂಡಿರುವುದಿಲ್ಲ.

ಊ. ಹಣಕಾಸಿನ ಸ್ವತ್ತುಗಳು/ಹೊಣೆಗರಿಕೆಗಳನ್ನು ಪ್ರಸ್ತುತ ಮೌಲ್ಯಾದಲ್ಲಿ ಬಿಂಬಿಸುವುದು.

ಋ. ನಗದು ಹರಿವಿನ ಪಟ್ಟಿಯನ್ನು ಬಿಂಬಿಸುವುದು.

(viii) **ಟಿಪ್ಪಣಿ ಸಂಖ್ಯೆ:** 1.17 ಗಮನಾರ್ಹ ಲೆಕ್ಕ ಪದ್ದತಿ ತತ್ವ ಹಾಗೂ ಟಿಪ್ಪಣಿ ಸಂಖ್ಯೆ: 37.7ರಂತೆ ಆಸ್ತಿಗಳ ದುರ್ಬಲತೆ ನಷ್ಟ (Impairment of Assets) ಕುರಿತು, ಕಂಪನಿಯಲ್ಲಿ ಯಾವುದೇ ದಾಖಲಾತಿಗಳನ್ನು ಅಳವಡಿಸಿಕೊಳ್ಳದೇ ಇರುವುದರಿಂದ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015 ಲೆಕ್ಕ ಪರಿಶೋಧಕ ನೀತಿಗಳನ್ವಯ ಹೊರಡಿಸುವ ಖಓಆ ಂಖ36 ರಲ್ಲಿರುವಂತೆ ಆಸ್ತಿಗಳ ದುರ್ಬಲ ನಷ್ಟ ಕುರಿತು ನಿಗಧಿ ಪಡಿಸಿದಂತೆ ಕಂಪನಿಯಲ್ಲಿ ಆಸ್ತಿಗಳ ದುರ್ಬಲತೆ ನಷ್ಟ ಪರೀಕ್ಷೆಗೆ ತಾಂತ್ರಿಕ ಮೌಲ್ಯಮಾಪನಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಒದಗಿಸದೇ ಇರುವ ಕಾರಣ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ.

(ix) **ಟಿಪ್ಪಣಿ ಸಂಖ್ಯೆ:**2.1; ಗುತ್ತಿಗೆ ಆಧಾರದ ಮೇಲಿರುವ ಭೂಮಿ ಮತ್ತು ಮಾಲಿಕತ್ವ ಆಧಾರಿತ ಭೂಮಿ ಎಂದು ವರ್ಗಿಕರಿಸಿ ಸಮನ್ವಯಗೊಳಿಸುವುದು ಬಾಕಿ ಇರುವ ಕಾರಣ ಆರ್ಥಿಕ ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(x) **ಟಿಪ್ಪಣಿ ಸಂಖ್ಯೆ:**2.2 (ಎಚ್) ಮತ್ತು 37.18 ರಲ್ಲಿ ಸೂಚಿಸಿದಂತೆ ಸರ್ಕಾರದಿಂದ ಕಡಿತ ದರದಲ್ಲಿ ಪಡೆದ ಭೂಮಿ ಹಾಗೂ ಇತರೆ ಗ್ರಾಹಕರಿಂದ ಉಚಿತ/ಕಡಿತ ದರದಲ್ಲಿ ಪಡೆದ ಭೂಮಿಯನ್ನು ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕೀಕರಿಸಿ ಬಹಿರಂಗಪಡಿಸುವಿಕೆಯು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, 20 ರಡಿಯಲ್ಲಿ ಸೂಚಿಸಲಾದ (IND AS-20 Accounting for Government Grants and Disclosure of Government Assistance) ವಿಧಾನದಲ್ಲಿ ಲೆಕ್ಕೀಕರಿಸಿರುವುದಿಲ್ಲ ಈ ಕಾರಣದಿಂದಾಗಿ ಅನುಬಂಧ–ಸಿ ಖಓಆ ಂಖ-18 ರಂತೆ ಕಂದಾಯದ ಪಿ.ಪಿ.ಇ, ಅನುದಾನ, ಋಣಮುಕ್ತತೆ, ಗ್ರಾಹಕ ಕೊಡುಗೆ ಹಾಗೂ ಇತರೆ ಆದಾಯದ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xi) **ಟಿಪ್ಪಣಿ ಸಂಖ್ಯೆ:**2.4 (ಸಿ) ಮತ್ತು 3.6 ರಲ್ಲಿ ಸೂಚಿಸಿದಂತೆ ಕಂಪನಿಯು ಅಂದಾಜಿಸಿದಂತೆ ರೂ.2652.86 ಲಕ್ಷಗಳಷ್ಟು ನಿರಂತರ ಜ್ಯೋತಿ ಯೋಜನೆ (NJY) ಅಡಿಯಲ್ಲಿ ಖರ್ಚು ಮಾಡಲಾಗಿದ್ದು ಸದರಿ ಖರ್ಚನ್ನು ಕಂಪನಿಯು ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಹಾಗೂ ಬಂಡವಾಳ ಕಾಮಗಾರಿ ವೆಚ್ಚಗಳಲ್ಲಿ ಲೆಕ್ಕೀಕರಿಸಿದೆ ಆದರೆ ಸದರಿ ಖರ್ಚನ್ನು ಎಸ್ಕಾಂಗಳಿಂದ ಪಡೆಯುವುದು ಬಾಕಿ ಇರುತ್ತದೆ. ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದೆ ಇರುವುದರಿಂದ ನಾವು ಹಣಕಾಸಿನ ಹೇಳಿಕೆಗಳ ಮೇಲೆ ಅದರಿಂದಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ.

(xii) **ಟಿಪ್ಪಣಿ ಸಂಖ್ಯೆ :**2.4 (ಇ), 3.1, 26.4, 26.1 (i) ಮತ್ತು 37.18 ರಲ್ಲಿ ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡ ಸ್ವ ಕಾಮಗಾರಿಗಳ (SEW) ಕುರಿತು ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದ ಕಾರಣ ಇದರ ಕುರಿತು ಸಂಪೂರ್ಣತೆಯನ್ನು ಮತ್ತು ಸರಿಯಾಗಿರುವಿಕೆಯನ್ನು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಪೂರ್ಣಗೊಂಡ ಸ್ವ ಕಾಮಗಾರಿಗಳನ್ನು ನ್ಯಾಯಸಮ್ಮತ ಮೌಲ್ಯದಲ್ಲಿ ಬಂಡವಾಳಕರಿಸಿರುವುದಿಲ್ಲ, ಪೂರ್ಣಗೊಂಡ ಸ್ವ ಕಾಮಗಾರಿಗಳನ್ನು ಋಣಮುಕ್ತತೆ (Amortization) ಮಾಡುವಲ್ಲಿ ಒಪ್ಪಂದದ ಅವಧಿಯ ಬದಲಾಗಿ ಉಪಯುಕ್ತ ಜೀವನಾಧಾರದಲ್ಲಿ ಋಣಮುಕ್ತತೆಯನ್ನು ಮಾಡಲಾಗಿರುತ್ತದೆ. ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ (IPP) ಮೂಲ ಸೌಕರ್ಯ ವೆಚ್ಚವನ್ನು (Infrastructure Charges), ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಭೂಮಿಯನ್ನು ನೀಡಲು ಪಡೆಯಲಾಗುತ್ತಿರುವ ಒಂದು ಬಾರಿ ಹಿಂದಿರುಗಿಸದ ಠೇವಣಿ (One Time Non-Refundable Deposit) ಕುರಿತು ನಿಖರವಾದ ವಿಧಾನದ ಅನುಪಸ್ಥಿತಿಯಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣ (ಪಿಪಿಇ), ಹೊಣೆಗಾರಿಕೆ, ಸ್ವೀಕೃತಿ, ಕಂದಾಯಗಳ ಮೇಲೆ ಅದರಿಂದಾಗುವ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ. ಮುಂದುವರೆದು, ಕಂಪನಿಯು ರೂ.35415.67 ಲಕ್ಷಗಳಷ್ಟು ಸ್ವ ಕಾಮಗಾರಿಗಳನ್ನು ಬಂಡವಾಳಕರಿಸಿರುವುದಿಲ್ಲವೆಂದು ನಮ್ಮ ಲೆಕ್ಕ ಪರಿಶೋಧನೆಯ ಮೂಲಕ ಗುರುತಿಸಲಾಗಿದ್ದು ಸದರಿ ಪರಿಣಾಮದಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣ (ಪಿಪಿಇ) ಹೊಣೆಗಾರಿಕೆ, ಸ್ವೀಕೃತಿ, ಕಂದಾಯಗಳ ಮೇಲೆ ಬೀರುವ ಪರಿಣಾಮವನ್ನು ಖಚಿತಪಡಿಸಿಕೊಳ್ಳಲಾಗಿರುವುದಿಲ್ಲ.

(xiii) **ಟಿಪ್ಪಣಿ ಸಂಖ್ಯೆ:** 2.5 (ಎ) ಸ್ಥಿರಾಸ್ತಿ ಪುಸ್ತಕದ ಸಮನ್ವಯ ಬಾಕಿ ಇರುವುದರಿಂದ ಬಿಡುಗಡೆ ಮಾಡಲ್ಪಟ್ಟ ಸ್ವತ್ತುಗಳನ್ನು ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆ ಮಾಡುವಾಗ ಸಾಗಿಸುವ ಮೌಲ್ಯವನ್ನು ಪರಿಗಣಿಸುವಾಗ ಕಳಚಿದ ಆಸ್ತಿಗಳ, ಆಸ್ತಿಗಳ ಮಾರಾಟ ಇವುಗಳಿಗೆ ಇಳಿಸಿದ ಆಸ್ತಿ ಮೌಲ್ಯ (ಮೂಲ ಬೆಲೆ– ಸಂಚಿತ ಸವಕಳಿ) ಗುರುತಿಸಲಾಗುವುದಿಲ್ಲ. ಪದ್ಧತಿಯು ಹಂಗಾಮಿ (Adhoc) ಪದ್ಧತಿಯಾಗಿರುತ್ತದೆ. ಮಾಹಿತಿಯ ಅನುಪಸ್ಥಿತಿಯಲ್ಲಿ ಪಿಪಿಇ, ಮಾರಟಕ್ಕಿರುವ ಆಸ್ತಿ, ಸವಕಳಿ ಇವುಗಳ ಮೇಲೆ ಬೀರಿರುವ ಲಾಭ/ನಷ್ಟಗಳ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

(xiv) **ಟಿಪ್ಪಣಿ ಸಂಖ್ಯೆ:** 2.5 (ಸಿ), 3.1, 3.2 ಮತ್ತು 3.3; ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಮಾಲಿಕತ್ವ, ದಾಖಲಾತಿಕರಣ, ಭೌತಿಕ ನಿಯಂತ್ರಣಗಳು, ಗುತ್ತಿಗೆದಾರರಿಗೆ ಪ್ರೋತ್ಸಾಹ ಧನಕ್ಕೆ ಹವಣಿಕೆ ಮಾಡದಿರುವುದು, ನಿರ್ಮಾಣ ವೆಚ್ಚ, ಕಾಮಗಾರಿ ವೆಚ್ಚ, ಅನುಪಾತವಾರು ಬಂಡವಾಳೀಕರಣ, ಸಿಬ್ಬಂದಿ ವೆಚ್ಚಗಳು, ಆಡಳಿತಾತ್ಮಕ ವೆಚ್ಚಗಳು, ಮತ್ತು ಇತರೆ ಸಾಮಾನ್ಯ ಮೇಲು ವೆಚ್ಚಗಳು, ಎರವಲು ವೆಚ್ಚಗಳು, ಹಾಗೂ ಮೇಲ್ವಿಚಾರಣ ಶುಲ್ಕ, ಸ್ವ–ಕಾಮಗಾರಿಗಳ ಮೇಲೆ ವಸೂಲಿ ಮಾಡಲಾದ ಮೇಲ್ವಿಚಾರಣ ಶುಲ್ಕಗಳ ಸೂಕ್ತ ಅನುಪಾತದಲ್ಲಿ ಬಂಡವಾಳೀಕರಣ ಕಾರ್ಯ ವಿಮುಕ್ತಿ ವೆಚ್ಚವನ್ನು ಪ್ರಸ್ತುತ ಮೌಲ್ಯದ ಆಧಾರದ ಅನ್ವಯ ಅಂದಾಜು ಮಾಡಿ 'ಪ್ರಾರಂಭಿಕ ಹಂತದಲ್ಲಿ ಬಂಡವಾಳೀಕರಣಗೊಳಿಸುವುದು ಹಾಗೂ ಸರಿಯಾದ ದಿನಾಂಕದ ಆಧಾರದ ಮೇಲೆ ಬಂಡವಾಳೀಕರಣ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015 ನಿಯಮಗಳಡಿಯಲ್ಲಿ ಹೊರಡಿಸಿರುವ IND AS 16 ಆಸ್ತಿ ಸ್ಥಾವರ ಮತ್ತು ಉಪಕರಣಗಳು(ಪಿಪಿಇ)ರನ್ವಯ ನಿಗದಿಪಡಿಸಿರುವುದನ್ನು ಪಾಲಿಸಲಾಗಿರುವುದಿಲ್ಲ.

ಹಾಗಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ಹಾಗೂ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ)ಗಳನ್ನು ಲೆಕ್ಕೀಕರಿಸುವ ವಿಧಾನ ಇದರಿಂದಾಗಿ ಪ್ರಗತಿಯಲ್ಲಿರುವ ಬಂಡವಾಳಕಾಮಾಗಾರಿಗಳು, ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ)ಗಳು ಮತ್ತು ಸವಕಳಿಗಳ ಮೇಲೆ ಉಂಟಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xv) **ಟಿಪ್ಪಣಿ ಸಂಖ್ಯೆ:**2.5 (ಡಿ)ರಲ್ಲಿ ಹೇಳಿರುವಂತೆ ಹೂಡಿಕೆ ಮಾಡಲಾಗಿರುವ ಆಸ್ತಿಗಳ ಮೌಲ್ಯ ಗಮನಾರ್ಹವಾಗಿ ರುವುದಿಲ್ಲ. ಈ ಬಗ್ಗೆ ಕಂಪನಿಯು ಸೂಕ್ತವಾದ ದಾಖಲಾತಿಗಳನ್ನು ಒದಗಿಸದ ಕಾರಣ ಸದರಿ ಆಸ್ತಿಗಳ ಮುಂದುವರೆಸಿಕೊಂಡು ಹೋಗುವ ಮೌಲ್ಯವು (Carrying cost) ಕಂಪನಿಯ (ಭಾರತೀಯ ಲೆಕ್ಕ ವಿಧಾನ) IND AS 40 "ಹೂಡಿಕೆ ಮಾಡಲಾಗಿರುವ ಆಸ್ತಿಗಳು" ನಿಯಮ 2015 ಹೊರಡಿಸಿರುವ ಅನ್ವಯ ಸದರಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xvi) **ಟಿಪ್ಪಣಿ ಸಂಖ್ಯೆ:**3.1, 18, 22 ಮತ್ತು 37.18 ರಲ್ಲಿ ಸೂಚಿಸಿರುವಂತೆ ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡ ಠೇವಣಿ ವಂತಿಗೆ ಕಾಮಗಾರಿಗಳ (ಆಅಫ) ಕುರಿತು ಕಾಮಗಾರಿವಾರು ಪ್ರಸ್ತುತ ಸ್ಥಿತಿ ಹಾಗೂ ಪರಿಪೂರ್ಣ ಮಾಹಿತಿಯನ್ನು ಒದಗಿಸದ ಕಾರಣ ನಾವು ಠೇವಣಿವಂತಿಗೆ ಕಾಮಗಾರಿಗಳನ್ನು ನ್ಯಾಯ ಸಮ್ಮತ ಮೌಲ್ಯದಲ್ಲಿ ಬಂಡವಾಳಕರಿಸುವ ಬಗ್ಗೆ ಹಾಗೂ ಪೂರ್ಣಗೊಂಡ ಠೇವಣಿವಂತಿಗೆ ಕಾಮಗಾರಿಗಳನ್ನು ಋಣಮುಕ್ತತೆ (Amortization) ಮಾಡುವಲ್ಲಿ ಒಪ್ಪಂದದ ಅವಧಿಯ ಬದಲಾಗಿ ಉಪಯುಕ್ತ ಜೀವನಾಧಾರದಲ್ಲಿ ಋಣಮುಕ್ತತೆಯನ್ನು ಮಾಡಲಾಗಿರುತ್ತದೆ. ಇದರಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣ (ಪಿಪಿಇ), ಪ್ರಸ್ತುತ/ಪ್ರಸ್ತುತವಲ್ಲದ ಹೊಣೆಗಾರಿಕೆ, ,ಸ್ವೀಕೃತಿ, ಕಂದಾಯಗಳ ಮೇಲೆ ಅದರಿಂದಾಗುವ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ. ಮುಂದುವರೆದು, ಕಂಪನಿಯಲ್ಲಿ ಠೇವಣಿವಂತಿಗೆ ಕಾಮಗಾರಿಗಳನ್ನು ಖಓಆ ಂಖ18 ಕಂದಾಯ ಅನುಬಂಧ–ಸಿ ರಲ್ಲಿ ಸೂಚಿಸಿರುವಂತೆ ಲೆಕ್ಕೀಕರಿಸುವ ವಿಧಾನದ ಅನುಪಸ್ಥಿತಿಯಲ್ಲಿ ಆದಾಯ ಮತ್ತು ತೆರಿಗೆ ಮುಂಚಿನ ಲಾಭದ ಮೇಲೆ ಆಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

(xvii) **ಟಿಪ್ಪಣಿ ಸಂಖ್ಯೆ:**3.5 ರಲ್ಲಿ ಸೂಚಿಸಿದಂತೆ ಪಿಎಸ್‌ಡಿಎಫ್ ಅನುದಾನದಿಂದ ರೂ.5948.06 ಲಕ್ಷಗಳಷ್ಟು 220ಕೆವಿ ಮತ್ತು 400ಕೆವಿ ಉಪಕೇಂದ್ರಗಳ ನವೀಕರಣ ಹಾಗೂ ಉನ್ನತೀಕರಣ ಕಾಮಗಾರಿಗಳನ್ನು ಬಂಡವಾಳ ಕಾಮಗಾರಿಗಳಾಗಿ ಅಥವಾ ರೆವೆನ್ಯೂ ಕಾಮಗಾರಿಗಳಾಗಿ ಗುರುತಿಸಲಾಗದ ಕಾರಣ ನಾವು ಇದರಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ (CWIP), ದುರಸ್ತಿ ಮತ್ತು ನಿರ್ವಹಣೆ ಮತ್ತು ಈ ವರ್ಷದ ಲಾಭದ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

(xviii) **ಟಿಪ್ಪಣಿ ಸಂಖ್ಯೆ:**3.7 ರಲ್ಲಿ ಸೂಚಿಸಿದಂತೆ ಟವರ್ ನಿರ್ಮಾಣಕ್ಕೆ ನೀಡಿದ ಪರಿಹಾರ, ಕಾರಿಡಾರ್ ನಿರ್ಮಾಣಕ್ಕೆ ನೀಡಿದ ಪರಿಹಾರ, ನೆಡುತೋಪಿಗೆ (Plantation) ನೀಡಿದ ಪರಿಹಾರ, ಮರ ಕಡಿತಕ್ಕೆ ನೀಡಿದ ಪರಿಹಾರ ಮತ್ತು ಬೆಳೆ ನಾಶಕ್ಕೆ ನೀಡಿದ ಪರಿಹಾರವನ್ನು ನಗದು ಆಧಾರದ ವಿಧಾನದಲ್ಲಿ ಲೆಕ್ಕೀಕರಿಸಲಾಗುತ್ತಿದ್ದು ಸದರಿ ನಿಯಮವು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, IND AS 1 ರನ್ವಯ ಸಮಂಜಸವಾಗಿರುವುದಿಲ್ಲ. ಆದುದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಇದರಿಂದಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ.

(xix) **ಟಿಪ್ಪಣಿ ಸಂಖ್ಯೆ:**6.5 ರಲ್ಲಿ ಸೂಚಿಸಿರುವಂತೆ ಬಳಕೆಯಲ್ಲಿಲ್ಲದ ದಾಸ್ತಾನುಗಳ ಗುರುತಿಸುವಿಕೆಯು ಬಾಕಿ ಇರುವುದರಿಂದ ಲೆಕ್ಕಗಳಲ್ಲಿ ಕಂಪನಿಯ ನಿಯಮಗಳಂತೆ ಅವಕಾಶ ಕಲ್ಪಿಸಲಾಗಿರುವುದಿಲ್ಲ ಇದರಿಂದಾಗಿ ದಾಸ್ತಾನುಗಳ ಮೇಲೆ ಮತ್ತು ತೆರಿಗೆ ಮುಂಚಿನ ಲಾಭದ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

(xx) **ಟಿಪ್ಪಣಿ ಸಂಖ್ಯೆ:** 7.2 ವಿಸಕಂಗಳೊಂದಿಗೆ ಮಾಡಿಕೊಳ್ಳಲಾಗಿರುವ ಪ್ರಸರಣ ಒಪ್ಪಂದ ಹಾಗೂ ಕ.ವಿ.ನಿ.ಆಯೋಗ 2006ರ ನಿಯಮಾವಳಿಗಳಲ್ಲಿನ ಕಲಮುನಲ್ಲಿರುವಂತೆ (Clause) ರಿಯಾಯಿತಿಯ ಕುರಿತು ವಿವಾದವಿರುವುದರಿಂದ ವಿಸಕಂಗಳಿಂದ ಸಕಾಲಕ್ಕೆ ಸರಿಯಾಗಿ ಪಾವತಿಸಿರುವ ಪ್ರಸರಣ ಶುಲ್ಕಕ್ಕೆ ಕ್ಲೇಮ್ ಮಾಡಿರುವ ರಿಯಾಯಿತಿ ಮೊತ್ತ ರೂ. 6913.23 ಲಕ್ಷಗಳು, ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xxi) **ಟಿಪ್ಪಣಿ ಸಂಖ್ಯೆ:** 16, 18.1 ಮತ್ತು 23, ದೀರ್ಘಾವಧಿಯ ಉದ್ಯೋಗಿ ಪ್ರಯೋಜನೆಗಳು ಮತ್ತು ನಿರ್ದಿಷ್ಟವಾದ ಲಾಭದಾಯಕ ಯೋಜನೆಗಳ ವಾಸ್ತವಿಕ ಮೌಲ್ಯಮಾಪನ ವರದಿಗೆ ಸಂಬಂಧಪಟ್ಟಂತೆ,

ಸದರಿ ಮೌಲ್ಯಮಾಪನವನ್ನು ಪರಿಗಣಿಸುವಾಗ ಅಳವಡಿಸಿಕೊಂಡಿರುವ ಮಾಹಿತಿಗಳು, ಊಹೆಗಳು ಮತ್ತು ಬಹಿರಂಗಪಡಿಸುವಿಕೆಗಳು ಸೂಕ್ತವಾಗಿರುವುದಿಲ್ಲ, ಪ್ರತಿ ವರ್ಗದ ನೌಕರರಿಗೆ ಸಂಬಂಧಪಟ್ಟಂತೆ ರಜೆ ನಗಧಿಕರಣ ದರ, ಪ್ಲಾನ್ ಅಸ್ಸೆಟ್‌ಗಳನ್ನು ಪರಿಗಣಿಸದಿರುವುದು, ಸಂಬಳದಲ್ಲಿನ ಹೆಚ್ಚಳ, ವಾರ್ಷಿಕ ವೇತನ ಬಡ್ತಿ ಮತ್ತು ವಾರ್ಷಿಕ ಗಳಿಕೆ ನಗಧೀಕರಣ ದಿನಗಳನ್ನು. ಪರಿಗಣಿಸದೇ ಇರುವುದರಿಂದ. ಹಣಕಾಸಿನ ನಿರೂಪಣ ಪಟ್ಟಿಗಳಲ್ಲಿ ಅದರಿಂದಾಗುವ ಪರಿಣಾಮವನ್ನು ಖಚಿತವಾಗಿರುವುದಿಲ್ಲ. ಮುಂದುವರೆದು, ಕಂಪನಿಯು ನಿರ್ಧಿಷ್ಟವಾದ ಲಾಭದಾಯಕ ಯೋಜನೆಗಳ ಲಾಭವನ್ನು ಸಿಬ್ಬಂದಿ ವೆಚ್ಚಗಳಲ್ಲಿ ಲೆಕ್ಕೀಕರಿಸಲಾಗಿದ್ದು ಸದರಿ ಲಾಭವನ್ನು ಪ್ರತ್ಯೇಕವಾಗಿ ಇತರೆ ಸಮಗ್ರ ಆದಾಯದಲ್ಲಿ ಪರಿಗಣಿಸಲಾಗಿರುವುದಿಲ್ಲ ಇದರ ಕುರಿತು ಸೂಕ್ತ ಬಹಿರಂಗಪಡಿಸುವಿಕೆಯನ್ನು ಹಣಕಾಸಿನ ನಿರೂಪಣ ಪಟ್ಟಿಯಲ್ಲಿ ನೀಡಲಾಗಿರುವುದಿಲ್ಲ ಇದರಿಂದಾಗಿ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, IND AS 19 'EMPLOYEE BENEFITS' ರಲ್ಲಿ ನೀಡಲಾಗಿರುವ ವಿಧಾನವನ್ನು ಪರಿಗಣಿಸಿರುವುದಿಲ್ಲ. ಈ ಕಾರಣದಿಂದಾಗಿ ದೀರ್ಘಾವಧಿಯ ಉದ್ಯೋಗಿ ಪ್ರಯೋಜನೆಗಳು ಮತ್ತು ನಿರ್ಧಿಷ್ಟವಾದ ಲಾಭದಾಯಕ ಯೋಜನೆಗಳಿಂದ ಹಣಕಾಸಿನ ನಿರೂಪಣೆಗಳ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

(xxii) ಕರ್ನಾಟಕ ಸರ್ಕಾರದಿಂದ ಹೊಂದಾಣಿಕೆಯ ಅಧಿಸೂಚನೆಯು ಬಾಕಿ ಇದ್ದು, ಟಿಪ್ಪಣಿ ಸಂಖ್ಯೆ:18.5ರಲ್ಲಿ ಇತರ ದೀರ್ಘಾವಧಿ ಹೊಣೆಗಾರಿಕೆಗಳ ಅಡಿಯಲ್ಲಿ ರೂ.4238.43ಲಕ್ಷ ಶಿಲ್ಕನ್ನು ತೋರಿಸಿದ್ದು, ಇದು, ದಿನಾಂಕ 01.06.2002 ರಿಂದ ಅಂತಿಮ ಅರಂಭ ಶಿಲ್ಕನ್ನು ಅಧಿಸೂಚಿಸಿದ ನಂತರ ಮಾಡಿದ ಹೊಂದಾಣಿಕೆಯನ್ನು ಬಿಂಬಿಸುತ್ತದೆ. ದಿನಾಂಕ 14.06.2012ರ ಕರ್ನಾಟಕ ಸರ್ಕಾರದ ಪತ್ರದ ಪ್ರಕಾರ, ಮೇಲಿನ ಶಿಲ್ಕುಗಳನ್ನು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಲೆಕ್ಕ ಸಮನ್ವಯಗೊಳಿಸಿಕೊಂಡು, ಅನುಮೋದನೆಗಾಗಿ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಸರ್ಕಾರವು ಕ.ವಿ.ಪ್ರ.ನಿ.ನಿ.ಗೆ ನಿರ್ದೇಶನ ನೀಡಿದೆ. ದಿನಾಂಕ: 31.03.2018ರಂದು ಇದ್ದಂತೆ, ಮೇಲಿನ ಲೆಕ್ಕಗಳ ಲೆಕ್ಕಸಮನ್ವಯ ಗೊಳಿಸುವಿಕೆಯು ಪ್ರಗತಿಯಲ್ಲಿದ್ದು, ನಿವ್ವಳ ಮೌಲ್ಯದ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xxiii) **ಟಿಪ್ಪಣಿ ಸಂಖ್ಯೆ:**20 ರಲ್ಲಿ ವಿದ್ಯುತ್ ಖರೀದಿಗಾಗಿ ವಿವಿಧ ದೇಣಿದಾರರು ಶೀರ್ಷಿಕೆಯಲ್ಲಿ ರೂ.4207.38/– ಲಕ್ಷಗಳನ್ನು (ಕೆಪಿಸಿಗೆ ಪಾವತಿಸಬೇಕಾದ ಬಡ್ಡಿ 66853.20 ಲಕ್ಷಗಳನ್ನು ಹೊರತುಪಡಿಸಿ) 9.06.2005ರ ವರೆಗಿನ ವಿದ್ಯುತ್ ಖರೀದಿಗೆ ಸಂಬಂಧಿಸಿದ ಪಾವತಿಯಾಗಬೇಕಾಗಿರುವ ಬಾಕಿಯೆಂದು ತೋರಿಸಲ್ಪಟ್ಟಿದ್ದು ಸದರಿ ಹೊಣೆಗಾರಿಕೆ ಅಥವಾ ಹೆಚ್ಚುವರಿ ಹೊಣೆಗಾರಿಕೆಗಳಿದ್ದಲ್ಲಿ ಅದರ ನಿಖರತೆಯನ್ನು ನಾವು ಗೊತ್ತುಪಡಿಸಿಕೊಳ್ಳಲಾಗಿಲ್ಲ.

(xxiv) **ಟಿಪ್ಪಣಿ ಸಂಖ್ಯೆ:**20.1 ಕೆಪಿಸಿಗೆ ವಿದ್ಯುತ್ ಖರೀದಿ ಬಾಕಿಯ ಮೇಲೆ ಬಡ್ಡಿ ಹೊಣೆಗಾರಿಕೆ ಮೊತ್ತ ರೂ.668.53 ಕೋಟಿಗಳನ್ನು ಕಂಪನಿಯು ವಿದ್ಯುತ್ ಖರೀದಿ ಬಾಕಿ ಎಂದು ಬಿಂಬಿಸುತ್ತಿರುವುದು ಸಮಜಂಸವಲ್ಲ, ಕರ್ನಾಟಕ ಸರ್ಕಾರದ ಶಾಸನ ಬದ್ಧ ಆದೇಶ ಸಂಖ್ಯೆ:EN 131 PSR 2003 Dated:10.05.2005 ಮತ್ತು ಕ.ವಿ.ನಿ.ಆಯೋಗ ತನ್ನ ದರ ಪರಿಷ್ಕರಣ ಆದೇಶ ದಿನಾಂಕ:25.11.2009 ರಲ್ಲಿ ವಿದ್ಯುತ್ ಖರೀದಿ ವ್ಯವಹಾರವನ್ನು ವಿ.ಸ.ಕಂ ಗಳಿಗೆ ವರ್ಗಾಯಿಸುವುದರಿಂದ ಎಲ್ಲಾ ವಿದ್ಯುತ್ ಖರೀದಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ವಿ.ಸ.ಕಂ ಗಳಿಗೆ ವರ್ಗಾಯಿಸುವುದು ಎಂದು ಸೂಚಿಸಿರುವ ಕಾರಣ ರೂ.668.53 ಕೋಟಿಗಳನ್ನು ಕಂಪನಿಯು ವಿದ್ಯುತ್ ಖರೀದಿ ಬಾಕಿ ಎಂದು ಬಿಂಬಿಸುತ್ತಿರುವುದು ಸಮಂಜಸವಲ್ಲ. ಇದರಿಂದಾಗಿ ಮೀಸಲು (Reserve) ಕಡಿಮೆಯಾಗಿ ಹಾಗೂ ವ್ಯವಹಾರ ಪಾವತಿಗಳನ್ನು ಹೆಚ್ಚಾಗಿ ಬಿಂಬಿಸಿದಂತಾಗುತ್ತದೆ.

(xxv) **ಟಿಪ್ಪಣಿ ಸಂಖ್ಯೆ:**22, 26.1(ii) ಮತ್ತು 26.3 ರಲ್ಲಿ ಸೂಚಿಸಿರುವಂತೆ ಕಂಪನಿಯು ಅರ್ಧದಲ್ಲಿಯೇ ಮುಕ್ತಾಯಗೊಳಿಸಿದ ಕಾಮಗಾರಿಗಳ ಮೇಲೆ ವಿಧಿಸಿದ ದಂಡದ ಕುರಿತು ಹಾಗೂ ಗುತ್ತಿಗೆದಾರರಿಂದ ದಂಡ ಮನ್ನಣೆ ಮಾಡುವ ಕುರಿತು ಸ್ವೀಕರಿಸಿರುವ ಅರ್ಜಿಗಳ ಮಾಹಿತಿಯನ್ನು ಪರಿಪೂರ್ಣವಾಗಿ ನೀಡಿರುವುದಿಲ್ಲ. ಕಂಪನಿಯು ಇತರೆ ಪಾವತಿಗಳಲ್ಲಿ ಬಿಂಬಿಸಿರುವ ಮೊತ್ತ ರೂ.8149.17 ಲಕ್ಷಕ್ಕೆ ಹಾಗೂ ರೂ.5172 ಲಕ್ಷ ಇತರೆ ಆದಾಯದ ಮೊತ್ತಕ್ಕೆ ಪರಿಪೂರ್ಣ ಮಾಹಿತಿಯನ್ನು ನೀಡಿರುವುದಿಲ್ಲ ಇದರಿಂದಾಗಿ ಹಣಕಾಸಿನ ನಿರೂಪಣೆಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

(xxvi) **ಟಿಪ್ಪಣಿ ಸಂಖ್ಯೆ:**22.3 ಕಂಪನಿಯು ಗ್ರಾಹಕರಿಂದ ನೆಟ್‌ವರ್ಕ್ ಆಗ್‌ಮೆಂಟೇಷನ್ ಶುಲ್ಕವನ್ನು ಸಂಗ್ರಹಿಸಲು ಕ.ವಿ.ನಿ ಆಯೋಗದ ಆದೇಶ ಸಂಖ್ಯೆ: ಎನ್/64/11 ದಿನಾಂಕ:30.11.2012 ರ ಅನ್ವಯ ಅಧಿಕಾರವಿಲ್ಲದಿದ್ದರೂ ನಿರಂತರವಾಗಿ ಸಂಗ್ರಹಿಸುತ್ತಿದೆ. ಹೀಗೆ ಅನಧಿಕೃತವಾಗಿ ರೂ.1330 ಲಕ್ಷಗಳನ್ನು ಈ

ವರದಿಯ ದಿನಾಂಕದವರೆಗೂ ಸಂಗ್ರಹಿಸಲಾಗಿದೆ. ಇದರಿಂದಾಗಿ ಹಣಕಾಸಿನ ನಿರೂಪಣೆಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

(xxvii) **ಟಿಪ್ಪಣಿ ಸಂಖ್ಯೆ:**22.5 'ಇತರೆ ಪ್ರಸಕ್ತ ಹೊಣೆಗಾರಿಕೆಗಳಲ್ಲಿ' ಅಂತರ ಘಟಕ ಲೆಕ್ಕ ಶೀರ್ಷಿಕೆ ಜಮ/ಖರ್ಚುಗಳ ನಿವ್ವಳ ಶುಲ್ಕು ರೂ.1572.26 ಲಕ್ಷಗಳು ಅಂತರ ಘಟಕ ಲೆಕ್ಕ ಶೀರ್ಷಿಕೆ ಸಾಮಾಗ್ರಿಗಳು ಮತ್ತು ರೂ.2357.20 ಲಕ್ಷಗಳು ಅಂತರ ಘಟಕ ಲೆಕ್ಕ ಶೀರ್ಷಿಕೆ ಬಿಡುಗಡೆಗೊಳಿಸಲಾದ ಆಸ್ತಿಗಳು ಮತ್ತು ಟಿಪ್ಪಣಿ ಸಂಖ್ಯೆ:12.1 'ಇತರೆ ಪ್ರಸಕ್ತ ಆಸ್ತಿ' ಮೊತ್ತ ರೂ.101.78 ಲಕ್ಷಗಳು (ಡೆಬಿಟ್) ಅಂತರ ಘಟಕ ಲೆಕ್ಕ ಶೀರ್ಷಿಕೆ–ಸಿಬ್ಬಂದಿ ಮತ್ತು ರೂ.19.42 ಲಕ್ಷ ಅಂತರ ಘಟಕ ಲೆಕ್ಕ ಶೀರ್ಷಿಕೆ ತೀರುವಳಿ ಲೆಕ್ಕ ಸಮನ್ವಯಗೊಳಿಸಿರುವುದಿಲ್ಲ ಹಾಗೂ ಹಿಂದಿನ ವರ್ಷದ ವಹಿವಾಟುಗಳನ್ನು ಒಳಗೊಂಡಿರುತ್ತದೆ. ಈ ಕಾರಣದಿಂದಾಗಿ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xxviii)**ಟಿಪ್ಪಣಿ ಸಂಖ್ಯೆ:** 22.6; ರಾಜ್ಯ ವಿದ್ಯುತ್ ರವಾನೆ ಕೇಂದ್ರವು (ಎಸ್ಎಲ್ಡಿಸಿ) "ಯುಐ"ಶುಲ್ಕಕ್ಕೆ ಸಂಬಂಧಿಸಿದಂತೆ ಯುಐ ವೆಚ್ಚ ಶೀರ್ಷಕೆಯಲ್ಲಿ ಜಮೆ ಮೊತ್ತ ರೂ. 424.29 ಲಕ್ಷಗಳಷ್ಟು ಶಿಲ್ಕು ಇದ್ದು ಸದರಿ ಶಿಲ್ಕಿಗೆ ಸಂಭಂದಿಸಿದಂತೆ ಬ್ಯಾಂಕ್ ಖಾತೆಯಲ್ಲಿ ರೂ. 230.92/– ಲಕ್ಷಗಳು ಮಾತ್ರ ಇರುವುದಾಗಿ ಬಿಂಬಿಸಲಾಗುತ್ತಿದೆ. ಇವುಗಳ ಸಮನ್ವಯ ಕಾರ್ಯವು ಬಾಕಿ ಇರುವುದರಿಂದ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xxix) **ಟಿಪ್ಪಣಿ ಸಂಖ್ಯೆ:** 26 ಇತರೆ ಆದಾಯ (16) ಮತ್ತು ಟಿಪ್ಪಣಿ ಸಂಖ್ಯೆ:26.2 ಇತರೆ ವಸೂಲಾತಿ ಇದರಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರನ್ನು ಗುರುತಿಸಿ ಪಡೆಯಲಾದ ಕಾರ್ಯ ಮತ್ತು ನಿರ್ವಹಣೆ ವೆಚ್ಚಗಳ ಮೊತ್ತ ರೂ.1950.62 ಲಕ್ಷಗಳು ಸೇರಿವೆ. ಇನ್ನೂ ಎಷ್ಟು ಸಂಖ್ಯೆಯ ಸ್ವತಂತ್ರ ಉತ್ಪಾದಕರಿಂದ ಕಾರ್ಯ ಮತ್ತು ನಿರ್ವಹಣೆ ವೆಚ್ಚವನ್ನು ವಸೂಲು ಮಾಡಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದ ಕಾರಣ ಕಾರ್ಯ ಮತ್ತು ನಿರ್ವಹಣೆ ವೆಚ್ಚಗಳ ಕುರಿತು ಸಂಪೂರ್ಣತೆಯನ್ನು ಮತ್ತು ಸರಿಯಾಗಿರುವಿಕೆಯನ್ನು ಕಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ, ಈ ಕಾರಣದಿಂದಾಗಿ ಲೆಕ್ಕ ಪತ್ರಗಳ ಮೇಲೆ ಬೀರಿರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xxx) **ಟಿಪ್ಪಣಿ ಸಂಖ್ಯೆ:**26.1 (iv) ಆದಾಯ ತೆರಿಗೆ ಕಾಯ್ದೆಯ ನಮೂನೆ 26 ಂಖರಲ್ಲಿ ಮೂಲ ಆದಾಯದ ಮೇಲೆ ತೆರಿಗೆ ಕಡಿತ ಮಾಡಿದ ಮೊತ್ತ (TDS) ರೂ.196/– ಲಕ್ಷಗಳನ್ನು ಕವಿಪ್ರನಿನಿಯು ಸಮನ್ವಯಗೊಳಿಸದೆ ಇರುವುದರಿಂದ ಸದರಿ ಮೊತ್ತವನ್ನು ಆದಾಯವೆಂದು ಪರಿಗಣಿಸಲಾಗಿದ್ದು ಇದರಿಂದಾಗಿ ಆದಾಯ, ಗ್ರಾಹಕರಿಂದ ಬಂದ ಮುಂಗಡ ಮತ್ತು ವ್ಯವಹಾರದ ಸ್ವೀಕೃತಿಗಳ ಮೇಲಾಗುವ ಪರಿಣಾಮವನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.

(xxxi) **ಟಿಪ್ಪಣಿ ಸಂಖ್ಯೆ:**29 ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ವೆಚ್ಚಗಳು ರೂ.560.30 ಲಕ್ಷಗಳನ್ನು ನೇಮಕಾತಿ ಪರೀಕ್ಷೆ ನಡೆಸುವ ಸಲುವಾಗಿ ಖರ್ಚು ಮಾಡಲಾಗಿದ್ದು ಸದರಿ ಖರ್ಚನ್ನು ವಿಸಕಾಂಗಳಿಗೆ ಹಂಚಿ ವಿಸಕಾಂಗಳಿಂದ ಪಡೆಯಬೇಕಾಗಿರುತ್ತದೆ ಇದರಿಂದಾಗಿ ಕಂಪನಿಯ ಖರ್ಚಿನ ಮೇಲೆ, ತೆರಿಗೆಯ ಮುಂಚಿನ ಆದಾಯದ ಮೇಲೆ ಸ್ವೀಕೃತಿಗಳ ಮೇಲೆ ಹಾಗೂ ಇತರೆ ಸ್ವಾಮ್ಯದ ಮೇಲಾಗುವ ಪರಿಣಾಮವನ್ನು ಖಚಿತಪಡಿಸಿಕೊಳ್ಳಲಾಗಿರುವುದಿಲ್ಲ.

(xxxii) **ಟಿಪ್ಪಣಿ ಸಂಖ್ಯೆ** 37.10 (ii) ಪ್ರಸರಣ ವ್ಯವಸ್ಥೆಯ ದಕ್ಷತೆ ಹಾಗೂ ಲಭ್ಯತೆ ಮತ್ತು ಪ್ರಸರಣ ನಷ್ಟದ ಇಳಿಕೆಗಾಗಿ ಆರ್ಥಿಕ ವರ್ಷ 2017–18ನೇ ಸಾಲಿನಲ್ಲಿ ರೂ.2331/– ಲಕ್ಷಗಳನ್ನು ವಿಸಕಂಗಳಿಂದ ಕವಿಪ್ರನಿನಿಗೆ ಪಾವತಿಸಬೇಕಾಗಿರುವ ಪ್ರೋತ್ಸಾಹ ಧನವನ್ನು ಲೆಕ್ಕೀಕರಣೆ ಮಾಡದೇ ಇರುವ ಕ್ರಮವು ಲೆಕ್ಕ ವಿಧಾನ 2015ರನ್ವಯ ಹೊರಡಿಸಲಾದ IND AS 18 "ಕಂದಾಯ" (Revenue) ರನ್ವಯ ಸಮಂಜಸವಲ್ಲ. ಇದರಿಂದಾಗಿ ಹಣಕಾಸಿನ ಹೇಳಿಕೆಗಳ ಮೇಲಾಗುವ ಪರಿಣಾಮಗಳನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.

(xxxiii)**ಟಿಪ್ಪಣಿ ಸಂಖ್ಯೆ:**37.12 (ಐ) ವಿದ್ಯುತ್ ಸರಬರಾಜು ಕಂಪನಿಗಳಿಂದ ಪಡೆಯಬೇಕಾದ ಒಟ್ಟು ಮೊತ್ತ ರೂ.17040.04 ಲಕ್ಷ ಹಾಗೂ (ಟಿಪ್ಪಣಿ ಸಂಖ್ಯೆ:10) ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾದ ಒಟ್ಟು ಮೊತ್ತ ರೂ.18307.58 ಲಕ್ಷಗಳಿಗೆ (ಟಿಪ್ಪಣಿ ಸಂಖ್ಯೆ:22) ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸಮನ್ವಯಗೊಳಿಸುವಿಕೆಯು ಹಾಗೂ ದೃಡಪಡಿಸಿಕೊಳ್ಳುವ ಕಾರ್ಯವು ಬಾಕಿಯಿದೆ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳ ಮೇಲಾಗುವ ಪರಿಣಾಮಗಳನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.

(xxxiv)ಕವಿಪ್ರನಿನಿಯು ವಿಸಕಂಗಳಿಂದ ವಿಳಂಬವಾಗಿ ಪಾವತಿಸಿದ ಮೊತ್ತಗಳ ಮೇಲೆ ಅಧಿಕಕರ/ಮೇಲುಕರ (Surcharge) ಶೇಕಡ 1.25 ರಷ್ಟು ವಿಧಿಸಲಾಗಿರುವುದಿಲ್ಲ. ಸದರಿ ಮೇಲುಕರ/ಅಧಿಕಕರವನ್ನು ವಿಧಿಸುವುದು ವಿಸಕಂಗಳಿಗೆ ಮಾಡಿಕೊಂಡ ಪ್ರಸರಣ ಒಪ್ಪಂದದನ್ವಯ ಹಾಗೂ ಕ.ವಿ.ನಿ.ಆಯೋಗದ ದರ ಪಟ್ಟಿ ನಿಯಮಾವಳಿ 2006ರಲ್ಲಿ ಸೂಚಿಸಿರುವಂತೆ ಪಾಲಿಸಲಾಗಿರುವುದಿಲ್ಲ. ಹಾಗೂ ವಿಳಂಬವಾಗಿ ಪಾವತಿಸಿರುವ ಪ್ರಸರಣ ಶುಲ್ಕಗಳಿಗೆ ಸಂಬಂಧಪಟ್ಟಂತೆ ಅವಶ್ಯವಿರುವ ಮಾಹಿತಿಯನ್ನು ಒದಗಿಸಲಾಗದ ಕಾರಣ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

ಅಂಗೀಕಾರ್ಹ ಅಭಿಪ್ರಾಯ

ನಮ್ಮ ಅಭಿಪ್ರಾಯದಂತೆ, ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ, ಯುಕ್ತಾತೀತ ಅಭಿಪ್ರಾಯದ ಆಧಾರಗಳ ಅಡಿಯಲ್ಲಿ ವಿವರಿಸಿರುವ ಅಂಶಗಳ ಪರಿಣಾಮಗಳ ವಿನಃ, ಮೇಲೆ ತಿಳಿಸಿರುವ ಆರ್ಥಿಕ ನಿರೂಪಣಾಪಟ್ಟಿಗಳು ಕಂಪನಿ ಕಾಯ್ದೆಯು ಅಗತ್ಯಪಡಿಸುವ ಪ್ರಕಾರ ಮಾಹಿತಿಯನ್ನು ಒದಗಿಸಿವೆ ಮತ್ತು ಭಾರತ ದೇಶದಲ್ಲಿ ಸಾಮಾನ್ಯವಾಗಿ ಅಳವಡಿಸಿಕೊಂಡಿರುವ ಲೆಕ್ಕ ತತ್ವಗಳಿಗೆ ಅನುಗುಣವಾಗಿ ಮಾರ್ಚ್ 31, 2018ಕ್ಕೆ ಇದ್ದಂತೆ ಅಗತ್ಯವಿರುವ ನೈಜ ಹಾಗೂ ನ್ಯಾಯಸಮ್ಮತ ಮಾಹಿತಿಯನ್ನು ನೀಡುತ್ತವೆ. ವ್ಯವಹರಣೆಗಳ ಆಸ್ತಿ–ಹೊಣೆ ಪಟ್ಟಿಯ ವಿಷಯದಲ್ಲಿ, ಲಾಭ ಮತ್ತು ನಷ್ಟದ ವಿಷಯದಲ್ಲಿ, ಆ ದಿನಾಂಕದಂದು ಮುಕ್ತಾಯಗೊಂಡ ಕಂಪನಿಯ ಲಾಭದ ಬಗ್ಗೆ, ಇತರೆ ಸಮಗ್ರ ಆದಾಯ, ಇತರೆ ಸ್ವಾಮ್ಯದಲ್ಲಿನ ವ್ಯತ್ಯಾಸ, ಹಣ ಚಲಾವಣೆ ವಿಷಯದಲ್ಲಿ ಅಗತ್ಯವಿರುವ ನೈಜ ಹಾಗೂ ನ್ಯಾಯಸಮ್ಮತ ಮಾಹಿತಿಯನ್ನು ನೀಡುತ್ತವೆ.

ನಿರೂಪಣಾ ವಿಷಯದ ಸ್ಪಷ್ಟೀಕರಣ

ನಮ್ಮ ಅಂಗೀಕಾರ್ಹ ಅಭಿಪ್ರಾಯವನ್ನು ನೀಡದೆ ಆರ್ಥಿಕ ನಿರೂಪಣಾಪಟ್ಟಿಯ ಕೆಳಕಂಡ ಟಿಪ್ಪಣಿಗಳತ್ತ ಗಮನ ಸೆಳೆಯಲಾಗಿದೆ.

ಅ. **ಟಿಪ್ಪಣಿ ಸಂಖ್ಯೆ:**1.10, 25.3 ಮತ್ತು 37.18 ಪ್ರಸರಣ ಶುಲ್ಕವನ್ನು ಪರಿಷ್ಕೃತ ದರದ ಆದೇಶದ ಆಧಾರದ ಮೇಲೆ ಸರಿದೂಗಿಸಿ ಹೊಂದಿಸಿ ಲೆಕ್ಕೀಕರಿಸುವ ಬಗ್ಗೆ ಸೂಕ್ತವಾದ ವೇದಿಕೆಯಿಂದ ಅಭಿಪ್ರಾಯ ಪಡೆಯುವುದು ಬಾಕಿಯಿರುತ್ತದೆ.

ಆ. **ಟಿಪ್ಪಣಿ ಸಂಖ್ಯೆ:**1,2 ಮತ್ತು 3– ಪ್ಯಾರ 1(ಎ)/ 1(ಸಿ)/ 1(ಇ)/ 1(ಎಫ್) ಮತ್ತು 5 ಜೆಎಸ್‌ಡಬ್ಲ್ಯೂ ಎನರ್ಜಿ ಲಿಮಿಟೆಡ್ ಮತ್ತು ಕಂಪನಿಯ ನಡುವೆ ಬಳ್ಳಾರಿ ಪೂಲಿಂಗ್ ಸ್ಟೇಷನ್ ಸ್ಥಾಪನೆಗೆ ಸಂಬಂಧಿಸಿದಂತೆ ಸ್ವ ಕಾಮಗಾರಿಯ ಒಪ್ಪಂದದ ನಿವೇದನಾ ಪತ್ರ/ ಕರಾರು ಪತ್ರ ಲಭ್ಯವಿರುವುದಿಲ್ಲ. ಮುಂದುವರೆದು, ಬಳ್ಳಾರಿ ಪೂಲಿಂಗ್ ಸ್ಟೇಷನ್‌ಅನ್ನು ಸ್ವ ಕಾಮಗಾರಿ ಅಡಿಯಲ್ಲಿ ನಿರ್ಮಿಸಿದ್ದರೂ ಕೂಡ ಕಂಪನಿಯು ಭೂಮಿಯನ್ನು ಕೆಐಎಡಿಬಿ ಯಿಂದ ರೂ.5379.70 ಲಕ್ಷಗಳನ್ನು ಪಾವತಿಸಿ ಭೂಮಿಯನ್ನು ಪಡೆದಿರುತ್ತದೆ.

ಇ. **ಟಿಪ್ಪಣಿ** 2.4 (ಎ): ಭೋಗ್ಯದ ಮೇಲೆ ಹಿಂದೆ ಪಡೆದಿದ್ದ, ಆದರೆ ಲೆಕ್ಕಪತ್ರಗಳಲ್ಲಿ ಅವಕಾಶ ಕಲ್ಪಿಸಿಲ್ಲದ ಆಸ್ತಿಗಳ ಹಕ್ಕುಪತ್ರಗಳ ವರ್ಗಾವಣೆ, ಭೋಗ್ಯದ ಒಪ್ಪಂದಾ ಅವಧಿಯನ್ನು ರದ್ದುಪಡಿಸಿ, ಆಸ್ತಿಗಳನ್ನು ಪುನರ್ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ವಿದ್ಯುತ್ ಸರಬರಾಜು ಕಂಪನಿಗಳು ಹೊಂದಿರುವ ರೂ.59.60ಲಕ್ಷ ಮೌಲ್ಯದ ಆಸ್ತಿಗಳನ್ನೂ ಒಳಗೊಂಡಂತೆ, ಲೆಸ್ಸರ್ ಸಲ್ಲಿಸಿರುವ ಬೇಡಿಕೆ ಮೊಬಲಗು ರೂ.112.50ಲಕ್ಷದ ಬಗ್ಗೆ ವ್ಯವಹರಣೆಯು ಪ್ರಗತಿಯಲ್ಲಿರುವ ಬಗ್ಗೆ.

ಈ. **ಟಿಪ್ಪಣಿ** 2.4 (ಬಿ) ಸ್ಥಾವರ ಮತ್ತು ಉಪಕರಣಗಳ ಅವಧಿಯ ಮುಕ್ತಾಯದ ನಂತರ ಕಂಪನಿಯು ಉಳಿಸಿಕೊಂಡಿರುವ ಆಸ್ತಿಗಳ ವೆಚ್ಚ ಮತ್ತು ಐಎನ್‌ಜಿ ವೈಶ್ಯ ಬ್ಯಾಂಕ್ (ಈಗ ಕೊಟಾಕ್ ಮಹೀಂದ್ರಾ ಬ್ಯಾಂಕ್) ಯಿಂದ ಹಿಡುವಳಿ ಆಸ್ತಿಯ ವೆಚ್ಚವನ್ನು ಒಳಗೊಂಡಿರುವುದಿಲ್ಲ ಮತ್ತು ಆಸ್ತಿಗಳು ಅವುಗಳ ಉಳಿಕೆ ಮೌಲ್ಯವನ್ನು ತಲುಪಿವೆ ಮತ್ತು ಹಿಂದಿನ ಕೆಇಬಿ ಅವಧಿಗೆ ಸಂಬಂಧಿಸಿವೆ ಮತ್ತು ಅಂತಹ ಆಸ್ತಿಗಳ ನಿಖರವಾದ ಸ್ಥಳವನ್ನು ಗುರುತಿಸಲಾಗುವುದಿಲ್ಲ.

ಉ. **ಟಿಪ್ಪಣಿ** 4 ಮತ್ತು 18.4: ಕಂಪನಿಯು ಟಿ.ಬಿ.ಪಿ.ಸಿ.ಎಲ್.ಗೆ ಪಾವತಿಸಿರುವ ರೂ.543.84 ಲಕ್ಷ ಹೆಚ್ಚುವರಿ ನಿಗಧಿತ ಶುಲ್ಕವನ್ನು ನಿಯಂತ್ರಿತ ಆಸ್ತಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಿಂದ ವಸೂಲು

ಮಾಡಬೇಕಾದ್ದು ಎಂದು ಲೆಕ್ಕೀಕರಿಸಿರುವ ಬಗ್ಗೆ. ಸದರಿ ಹೆಚ್ಚುವರಿ ನಿಗದಿತ ಶುಲ್ಕದ ಬಗ್ಗೆ ಕ.ವಿ.ನಿ.ಆಯೋಗದಿಂದ ನಿರ್ದೇಶನವು ಬಾಕಿ ಉಳಿದಿದೆ.

ಊ.**ಟಿಪ್ಪಣಿ ಸಂಖ್ಯೆ:**4.8: ದಿನಾಂಕ:27.04.2012 ರಿಂದ ಸಾಮಾಗ್ರಿಯನ್ನು ಒಳಗೊಂಡು ಒಟ್ಟಾರೆ ಒಪ್ಪಂದದ ಮೌಲ್ಯದ ಮೇಲೆ ವರ್ಕ್‌ಸ್ ವೆಲ್‌ಫೇರ್ ಸೆಸ್ (ಫಡಿಇಜಡಿ ಫಜಿಜಿಚಿಡಿಜ ಅಭ) ಅನ್ವಯಿಸುವಿಕೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಮಂಡಳಿಯಿಂದ ಸ್ಪಷ್ಟೀಕರಣ ಪಡೆದು ಆಡಳಿತ ಮಂಡಳಿಯು ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿರುತ್ತದೆ.

ಋ.**ಟಿಪ್ಪಣಿ ಸಂಖ್ಯೆ:**18 ಮತ್ತು 22 ಹಕ್ಕು ಒತ್ತಾಯಿಸದೆ ಉಳಿಸಿಕೊಂಡ ಹಣದ ಜಮ ಮೊತ್ತ ರೂ.82169.02 ಲಕ್ಷಗಳಿಗೆ ಸಂಬಂಧಿಸಿದಂತೆ ಕಂಪನಿಯಲ್ಲಿ ಸೂಕ್ತವಾದ ನಿಯಮವಿರುವುದಿಲ್ಲ.

ಎ. **ಟಿಪ್ಪಣಿ** 18.3: ಹಿಂದಿನ ವರ್ಷದಲ್ಲಿ ರೂ. 26243.84 ಲಕ್ಷ ಮೊಬಲಗಿಗೆ ಬಿಲ್ ಮಾಡಿ ಲೆಕ್ಕೀಕರಿಸಿರುವ ಪ್ರಸರಣ ಶುಲ್ಕದಲ್ಲಿನ ವ್ಯತ್ಯಾಸವನ್ನು ಇತರ ದೀರ್ಘಾವಧಿ ಹೊಣೆಗಾರಿಕೆಗಳ ಅಡಿಯಲ್ಲಿ ತೋರಿಸಿದ್ದು, ಈ ಬಗ್ಗೆ ಕ.ವಿ.ನಿ.ಆಯೋಗದಿಂದ ನಿರ್ದೇಶನವು ಬಾಕಿಯಿದೆ.

ಏ. **ಟಿಪ್ಪಣಿ ಸಂಖ್ಯೆ:**21.1 ಔಪಚಾರಿಕ ಮತ್ತು ವಿಧಾನಗಳು ಪೂರ್ಣಗೊಳ್ಳದ ಕಾರಣ ರೂ.113.99 ಲಕ್ಷಗಳಷ್ಟು ಪ್ರಸ್ತಾವಿತ ನೌಕರರ ಕಲ್ಯಾಣ ಟ್ರಸ್ಟ್‌ಗೆ ವರ್ಗಾವಣೆ ಮಾಡುವುದು ಬಾಕಿಯಿದೆ.

ಐ. **ಟಿಪ್ಪಣಿ ಸಂಖ್ಯೆ:**22.1 ಮೈಕ್ರೋ, ಸ್ಮಾಲ್ ಮತ್ತು ಮೀಡಿಯಮ್ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಆಕ್ಟ್, 2006 ರ ಅಡಿಯಲ್ಲಿ ಮಾರಾಟಗಾರರಿಗೆ ಸಂಬಂಧಿಸಿದ ಮಾಹಿತಿಯನ್ನು ಬಹಿರಂಗಪಡಿಸುವ ಬಗ್ಗೆ.

ಒ. **ಟಿಪ್ಪಣಿ:**22.2: ಆರ್ಥಿಕ ವರ್ಷ 2014-15 ನೇ ಸಾಲಿನಿಂದ ನೌಕರರಿಗೆ ಅನುಗ್ರಹವನ್ನು ಪಾವತಿಸಿ ಕರ್ನಾಟಕ ಸರ್ಕಾರದಿಂದ ಘಟನೋತ್ತರ ಅನುಮೋದನೆಯ ಅನುಸಮರ್ಥನೆ/ಸ್ಥಿರೀಕರಣ ಪಡೆಯುವುದನ್ನು ಗಮನ ಸೆಳೆದಿದೆ.

ಓ. **ಟಿಪ್ಪಣಿ ಸಂಖ್ಯೆ:**25.2 ನ್ನು ಗಮನಿಸುವುದು ಆರ್ಥಿಕ ವರ್ಷ 2017-18 ರ ವಾರ್ಷಿಕ ಕಂದಾಯ ಅಗತ್ಯತೆಗಾಗಿ (ARR) ಐಎಸ್‌ಟಿಎಸ್ ಲೈನ್‌ಗಳಿಂದ ಪಡೆದ ವಾರ್ಷಿಕ ಪ್ರಸರಣ ಶುಲ್ಕವನ್ನು ಹೊಂದಾಣಿಕೆ ಮಾಡದಿರುವ ಬಗ್ಗೆ.

ಔ. **ಟಿಪ್ಪಣಿ ಸಂಖ್ಯೆ:**25.4 ಕೊಣಜಿ-ಮಂಜೇಶ್ವರ್ 110ಕೆವಿ ಎಸ್.ಸಿ ಲೈನ್‌ಗೆ ವಾರ್ಷಿಕ ಪ್ರಸರಣ ಶುಲ್ಕವನ್ನು ನಿಗಧಿ ಪಡಿಸುವ ಮೊದಲು ಕೇಂದ್ರಿಯ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದು ಕೇ.ವಿ.ನಿ.ಆಯೋಗದಿಂದ ಆದೇಶ ಬಾಕಿಯಿರುವ ಕಾರಣ ವಾರ್ಷಿಕ ಪ್ರಸರಣ ಶುಲ್ಕವನ್ನು ಲೆಕ್ಕೀಕರಿಸಿರುವುದಿಲ್ಲ.

ಕ. **ಟಿಪ್ಪಣಿ ಸಂಖ್ಯೆ:**27.5 ಕಂಪನಿಯ ಆದೇಶ ದಿನಾಂಕ:09.03.2018 ರಲ್ಲಿ ನೌಕರರಿಗೆ/ಅಧಿಕಾರಿಗಳಿಗೆ ಪರಿಷ್ಕೃತ ವೇತನವನ್ನು ದಿನಾಂಕ:01.04.2017 ರಿಂದ ಅನ್ವಯವಾಗುವಂತೆ ನೀಡಲು ಆದೇಶಿಸಿರುವುದರಿಂದ ರೂ.14091.41 ಲಕ್ಷಗಳಷ್ಟು ಕಂಪನಿಯು ತನ್ನ ಲೆಕ್ಕ ಪತ್ರಗಳಲ್ಲಿ ತಾತ್ಕಾಲಿಕ ಆಧಾರದ ಮೇಲೆ ಅಂತಿಮಗೂಳಿಸುವಿಕೆಗೆ ಒಳಪಟ್ಟು ಅವಕಾಶ ಕಲ್ಪಿಸಿದೆ.

ಕಿ. **ಟಿಪ್ಪಣಿ** 37.12 (ಎ): ಆರ್ಥಿಕ ಸಂಸ್ಥೆಗಳು ಹಾಗೂ ಬ್ಯಾಂಕುಗಳಿಂದ ಪಡೆದ ಸಾಲ, ಬ್ಯಾಂಕಿನಲ್ಲಿರುವ ಶಿಲ್ಕಿನ ಬಗ್ಗೆ ಮಾತ್ರ ಶಿಲ್ಕು ದೃಢೀಕರಣವನ್ನು ಪಡೆಯಲಾಗಿದೆ. ತತ್ಪರಿಣಾಮವಾಗಿ, ಲೆಕ್ಕಗಳಲ್ಲಿ ತೋರಿಸಿರುವ ಸ್ವೀಕೃತಿಗಳು/ವ್ಯವಹರಣೆ ಪಾವತಿಗಳು/ಸಾಲ ಹಾಗೂ ಮುಂಗಡಗಳು/ಇತರ ಹೊಣೆಗಾರಿಕೆ/ರಿಪೇರಿಗೆ ನೀಡಿದ ಸಾಮಾಗ್ರಿಗಳು ಇತ್ಯಾದಿಗಳ ಶಿಲ್ಕುಗಳು ದೃಢೀಕರಣಕೊಳ್ಳಪಡಬೇಕಾಗಿದೆ.

ಖ. **ಟಿಪ್ಪಣಿ ಸಂಖ್ಯೆ:**37.13 (ಎ): ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ (CSR) ಸಂಬಂಧಿಸಿದಂತೆ ರೂ.1540.00 ಲಕ್ಷಗಳಿಗೆ ಬಳಕೆ ಪ್ರಮಾಣ ಪತ್ರವನ್ನು ಪಡೆದುಕೊಳ್ಳದಿರುವ ಬಗ್ಗೆ ಹಾಗೂ ತದನಂತರದ, ದಿನಾಂಕ:20.06.2018 ರ ಮಂಡಳಿಯ ನಿರ್ಣಯದಂತೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಖರ್ಚು ಮಾಡದೆ ಉಳಿದ ಹಣವನ್ನು ಸಂಸ್ಥೆಗಳಿಂದ ಹಿಂಪಡೆಯುವ ಬಗ್ಗೆ.

ಖು.**ಟಿಪ್ಪಣಿ ಸಂಖ್ಯೆ:**37.19 (ಎ) ಕಂಪನಿ ಕಾಯ್ದೆ, 2013 ಅನುಸೂಚಿ iii ರನ್ವಯ ಹಾಗೂ ಭಾರತೀಯ ಲೆಕ್ಕ ವಿಧಾನಗಳನ್ವಯ ಹಣಕಾಸಿನ ನಿರೂಪಣೆಗಳಲ್ಲಿ ಕಂಡುಬರುವ ಅಂಕಿಗಳನ್ನು ಹತ್ತಿರದ ಲಕ್ಷ, ದಶಲಕ್ಷ, ಕೋಟಿ ಅಥವಾ ದಶಾಂಶಗಳಲ್ಲಿ ಬಿಂಬಿಸಿರುವುದಿಲ್ಲ.

ಇತರೆ ಕಾನೂನು ಮತ್ತು ನಿಯಂತ್ರಕ ಅವಶ್ಯಕತೆಗಳ ಮೇಲೆ ವರದಿ:

1. ಕಾಯ್ದೆಯ ಪ್ರಕರಣ 143(11)ರನ್ವಯ ಕೇಂದ್ರ ಸರ್ಕಾರದಿಂದ ಹೊರಡಿಸಲ್ಪಟ್ಟ ಕಂಪನಿ (ಲೆಕ್ಕ ಪರಿಶೋಧಕ ವರದಿ) ಆದೇಶ, 2016 ರ ಪ್ರಕಾರ, ಆದೇಶ ಕಂಡಿಕೆ 3 ಮತ್ತು 4 ರಲ್ಲಿ ನಿಗದಿ ಪಡಿಸಿರುವ ವಿಷಯಗಳ ಮೇಲೆ ನಾವು ಅನುಬಂಧ – "ಎ" ರಲ್ಲಿ ವಿವರಣೆಯನ್ನು ನೀಡಿರುತ್ತೇವೆ.

2. ಕಾಯ್ದೆಯ ಪ್ರಕರಣ 143(3) ರಲ್ಲಿ ಅಗತ್ಯ ಪಡಿಸುವಂತೆ ಹೀಗೆ ವರದಿ ಸಲ್ಲಿಸುತ್ತೇವೆ:

(ಅ) ವಿಷಯಗಳು/ ಪರಿಣಾಮಗಳು/ ಪರಿಮಿತಿ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಿರುವ ವಿಷಯಗಳ ಪರಿಣಾಮಗಳನ್ನು ಹೊರತುಪಡಿಸಿ ನಮ್ಮ ಅರಿವು ಮತ್ತು ನಂಬಿಕೆಗೆ ಅವಶ್ಯವಿರುವಂತೆ ಲೆಕ್ಕ ಪರಿಶೋಧನೆ ವರದಿ ಉದ್ದೇಶಕ್ಕೆ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಯನ್ನು ನಾವು ಕೋರಿರುತ್ತೇವೆ.

(ಆ) ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಂತೆ, ನಾವು ಪುಸ್ತಕಗಳನ್ನು ತನಿಖೆ ಮಾಡಿರುವ ಪ್ರಕಾರ, ಕಂಪನಿಯು ಕಾನೂನಿಗೆ ಅವಶ್ಯವಾದ ಸೂಕ್ತ ಪ್ರಕಾರದ ಲೆಕ್ಕಪುಸ್ತಕಗಳನ್ನು ಹೊಂದಿದೆ.

(ಇ) ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಾಂಶಗಳಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಂತೆ, ಪರಿಶೀಲಿಸಿದಂತೆ ಆರ್ಥಿಕ ವಿವರಪಟ್ಟಿಯು ಲೆಕ್ಕದ ವಹಿ ಜೊತೆ ಹೊಂದಾಣಿಕೆ ಯಾಗುತ್ತದೆ.

(ಈ) ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮಗಳು, ನಮ್ಮ ಅಭಿಪ್ರಾಯದಂತೆ, ಮೇಲೆ ತಿಳಿಸಿರುವ ಇಂಡ್–ಎಎಸ್ ಆರ್ಥಿಕ ವಿವರಣಾಪಟ್ಟಿ ಹೇಳಿಕೆಗಳು, ಅಧಿನಿಯಮದ ಪ್ರಕರಣ 133 ಮತ್ತು ಅದರಡಿ ಹೊರಡಿಸಲಾದ ನಿಯಮಾವಳಿಗಳೊಂದಿಗೆ ಓದಿಕೊಂಡಂತೆ ನಿರ್ದಿಷ್ಟಪಡಿಸಿರುವ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿರುವುದಿಲ್ಲ.

(ಉ)ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯವು ದಿನಾಂಕ 5ನೇ ಜೂನ್, 2016 ರಂದು ಹೊರಡಿಸಿದ ಜಿಎಸ್ಆರ್–463(ಇ) ರ ಪ್ರಕಾರ, ಕಂಪನಿಯು ಸರ್ಕಾರಿ ಸಂಸ್ಥೆಯಾಗಿರುವುದರಿಂದ ನಿರ್ದೇಶಕರ ಅನರ್ಹತೆಯು ಕಂಪನಿಗಳ ಕಾಯಿದೆ, 2013ರ ಪ್ರಕರಣ 164(2) ರಂತೆ ನಿರ್ದೇಶಕರ ಅನರ್ಹತೆಯು ಅನ್ವಯಿಸುವುದಿಲ್ಲ.

(ಊ)ಲೆಕ್ಕಪತ್ರ ಹಾಗು ತತ್ಸಂಬಂಧ ದಾಖಲೆ ದಸ್ತಾವೇಜುಗಳ ನಿರ್ವಹಣೆಗೆ ಸಂಬಂಧಿಸಿದ ಅರ್ಹತಾದಾಯಕಗಳು, ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಕಂಡಿಕೆಗಳಲ್ಲಿ ತಿಳಿಯಪಡಿಸಿರುವ ಪ್ರಕಾರ ಇವೆ.

(ಋ)ಕಂಪನಿಯ ಆರ್ಥಿಕ ನಿರೂಪಣಾ ವರದಿಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದ ಪ್ರಮಾಣಬದ್ಧತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಗಳಿಗೆ ಸಂಬಂಧಿಸಿದಂತೆ, "ಅನುಬಂಧ–ಬಿ"ನಲ್ಲಿನ ನಮ್ಮ ಪ್ರತ್ಯೇಕ ವರದಿಯನ್ನು ಪರಾಮರ್ಶಿಸುವುದು.

(ಎ) ಕಂಪನಿಯ (ಲೆಕ್ಕಪರಿಶೋಧನೆ ಹಾಗೂ ಲೆಕ್ಕ ಪರಿಶೋಧಕರು)ನಿಯಮಗಳು, 2014ರ ನಿಯಮ 11ರ ಪ್ರಕಾರ, ಲೆಕ್ಕಪರಿಶೋಧಕರ ವರದಿಯಲ್ಲಿ ಒಳಪಡಿಸಬೇಕಾದ ಇತರ ವಿಷಯಾಂಶಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಂತೆ, ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ:

i). ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಗಳ ವಿನಃ, ಕಂಪನಿಯು ಆರ್ಥಿಕ ನಿರೂಪಣಾಪಟ್ಟಿಯ ಟಿಪ್ಪಣಿ 37.9 ಮತ್ತು 37.10 ರಲ್ಲಿ ವಿವರಿಸಿರುವಂತೆ, ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಅದರ ಆರ್ಥಿಕ ಪರಿಸ್ಥಿತಿಯ ಮೇಲೆ ಅಂದಾಜು ಮಾಡಿರುವಂತೆ ಅದರ ಪರಿಣಾಮವನ್ನು ಪ್ರಕಟಿಸಿದೆ.

ii) ಕಂಪನಿಯು ಭವಿಷ್ಯದಲ್ಲಿ ಸಂಭವಿಸಬಹುದಾದ ಯಾವುದೇ ನಿಷ್ಪತ್ತಿ (foreseeable) ನಷ್ಟವನ್ನು ಉಂಟುಮಾಡಬಹುದಾದ ಯಾವುದೇ ದೀರ್ಘಾವಧಿ ಗುತ್ತಿಗೆಯನ್ನು ಹೊಂದಿರುವುದಿಲ್ಲ.

iii) ಕಂಪನಿಯು ಹೂಡಿಕೆದಾರರ ತಿಳುವಳಿಕೆ ಹಾಗೂ ಸುರಕ್ಷತೆ ನಿಧಿಗೆ ಯಾವುದೇ ಮೊತ್ತವನ್ನು ವರ್ಗಾಯಿಸುವ ಅಗತ್ಯತೆ ಇರುವುದಿಲ್ಲ.

iv) ಕಂಪನಿಯ ಕಾಯ್ದೆಯ ಪ್ರಕರಣ 143(5) ರ ಪ್ರಕಾರ, ನಾವು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಅವರು ಹೊರಡಿಸಿರುವ ನಿರ್ದೇಶನದ ಮೇಲೆ ತೆಗೆದುಕೊಂಡಿರುವ ಕ್ರಮವನ್ನು ಪರಿಶೀಲಿಸಿರುತ್ತೇವೆ ಮತ್ತು ಕಂಪನಿಯ ಲೆಕ್ಕ ಮತ್ತು ಆರ್ಥಿಕ ನಿರೂಪಣಾಪಟ್ಟಿಯ ಮೇಲೆ ಅದರ ಪರಿಣಾಮವನ್ನು ಅನುಬಂಧ–"ಸಿ" ಯಲ್ಲಿ ನೀಡಲಾಗಿದೆ

ಬಿ.ಪಿ.ರಾವ್ ಮತ್ತು ಕಂ
ಚಾರ್ಟ್ಡ್ ಅಕೌಂಟೆಂಟ್
ಸಂಸ್ಥೆ ನೋ.ಸಂ:003116S

ಸಹಿ/–
ಬಿ.ಪ್ರಸನ್ನ ಆಚಾರ್
ಪಾಲುದಾರ
ಸದಸ್ಯತ್ವ ಸಂಖ್ಯೆ:202100

ಸ್ಥಳ : ಬೆಂಗಳೂರು
ದಿನಾಂಕ : 16.08.2018

ನಮ್ಮ ವರದಿಯ ಸಮ ಸಂಖ್ಯೆ ದಿನಾಂಕದ ಕಂಡಿಕೆ 1 ರಲ್ಲಿ "ಇತರೆ ಕಾನೂನು ಮತ್ತು ನಿಯಂತ್ರಿತ ಅಗತ್ಯತೆಗಳು" ರಲ್ಲಿ ಉಲ್ಲೇಖಿಸಲ್ಪಟ್ಟ ಅನುಬಂಧ –A

(i) ನಿಶ್ಚಿತ ಆಸ್ತಿಗಳು (ಪ್ರಸ್ತುತ ಆಸ್ತಿ, ಸ್ಥಾವರ ಮತ್ತು ಉಪಕರಣಗಳೆಂದು ಉಲ್ಲೇಖಿಸಲಾಗಿದೆ)

(ಅ) ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯು ಆಸ್ತಿಯ ಪರಿಮಾಣ, ಸ್ಥಳ ಹಾಗೂ ಇತರೆ ವಿವರಗಳನ್ನು ತೋರಿಸುವ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ. ಮುಂದುವರೆದು, ಕಂಪನಿಯು ಈ ಕೆಳಕಂಡ ಸ್ವತ್ತುಗಳ ವಿಷಯದಲ್ಲಿ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

(1) ಕಂಪನಿಯ ಲೆಕ್ಕ ಪುಸ್ತಕಗಳಲ್ಲಿ ಭೂಮಿಯನ್ನು ಸ್ವತಂತ್ರ ಹಿಡುವಳಿ ಅಥವಾ ಗುತ್ತಿಗೆ ಹಿಡುವಳಿಗೆ ಸಂಬಂಧಿಸಿದಂತೆ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

(2) ಕಂಪನಿಯ ಲೆಕ್ಕ ಪುಸ್ತಕಗಳಲ್ಲಿ ಆಸ್ತಿ (ಭೂಮಿಯನ್ನೊಳಗೊಂಡಂತೆ) ಭೂಮಿಯನ್ನು ಕಡಿತ ದರದಲ್ಲಿ/ ಉಚಿತವಾಗಿ ಸರ್ಕಾರದಿಂದ/ ಗ್ರಾಹಕರಿಂದ ಸ್ವಾಧೀನಪಡಿಸಿಕೊಂಡಿರುವ ಬಗ್ಗೆ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

(ಆ) ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ, ವಿದ್ಯುತ್ ಮಾರ್ಗಗಳಂತಹ ಆಸ್ತಿಗಳು ಅರಣ್ಯ ಪ್ರದೇಶ ಹಾಗೂ ರಾಜ್ಯಾದ್ಯಂತ ವಿಸ್ತೃತಗೊಂಡು, ನಿರಂತರವಾಗಿ ಕಾರ್ಯನಿರ್ವಹಣೆಗೆ ಒಳಗೊಳ್ಳುವುದರಿಂದ, ಭೌತಿಕವಾಗಿ ನಿಯತ ತಪಾಸಣೆಗೆ ಒಳಪಡಲಾಗದಿರುವುದರಿಂದ, ವಿದ್ಯುತ್ ಸರಬರಾಜು ಹಾಗೂ ಪ್ರಸರಣೆ ಸಂಬಂಧವಾಗಿ ಬಳಕೆಗೊಳಪಡಿಸಿರುವ ಅಂತಹ ಆಸ್ತಿ/ ಸ್ಥಾಪನಗಳು ಭೌತಿಕವಾಗಿ ಲಭ್ಯವಿವೆ.

(ಆ) ಕಂಪನಿಯು, ಪ್ರತಿ ವರ್ಷ ಸನ್ನಾಹ ಹಾಗೂ ಪೀಠೋಪಕರಣಗಳ ಭೌತಿಕ ಪರಿಶೀಲನಾ ಕಾರ್ಯವ್ಯವಸ್ಥೆಯನ್ನು ಹೊಂದಿದೆ. ಆದರೆ, ಸ್ಥಿರಾಸ್ತಿ ನೋಂದಣಿ ಪುಸ್ತಕವನ್ನು ಸಮರ್ಪಕ ಪರಿಮಾಣಾತ್ಮಕ ಮಾಹಿತಿಯೊಂದಿಗೆ ನಿರ್ವಹಿಸಲಾಗಿಲ್ಲ ಇದರಿಂದಾಗುವ ವ್ಯತ್ಯಾಸಗಳ ಕುರಿತು ನಾವು ಅಭಿಪ್ರಾಯ ನೀಡಲು ಸಾಧ್ಯವಿಲ್ಲ.

(ಇ) ವಿಭಾಗಗಳಲ್ಲಿನ ಭೂ ಆಸ್ತಿ ದಾಖಲೆಗಳನ್ನು ನಿಗಮ ಕಾರ್ಯಾಲಯದಲ್ಲಿ ಹೊಂದಿರುವ ಭೂ ಆಸ್ತಿ ದಾಖಲೆಗಳೊಂದಿಗೆ ಸಮನ್ವಯಗೊಳಿಸಬೇಕಾಗಿದೆ.

(ಈ)ನಮ್ಮ ಅಭಿಪ್ರಾಯದ ಪ್ರಕಾರ, ಎಲ್ಲಾ ಸ್ಥಿರಾಸ್ತಿಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು (ಟರ್ನ್ ಕೀ ಆಧಾರದ ಮೇಲೆ ಖರೀದಿಸಿರುವ ಸಾಮಗ್ರಿಗಳನ್ನು ಒಳಗೊಂಡು), ಬಳಕೆಯಲ್ಲಿರದ ಆಸ್ತಿಗಳ ಬಗ್ಗೆ ಕಂಪನಿಯು ನಿಯತ ಭೌತಿಕ ತಪಾಸಣೆಯ ವ್ಯವಸ್ಥೆಯನ್ನು ಹೊಂದತಕ್ಕದ್ದು.

(ಉ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯ 468 ಆಸ್ತಿಗಳಿಗೆ ಸಂಬಂಧಿಸಿದಂತೆ ಮಾಲೀಕತ್ವದ ಪತ್ರಗಳನ್ನು ಹೊಂದಿರುವುದಿಲ್ಲ. ಮಂದುವರೆದು, ಕಂಪನಿಯು ಕೆ.ಐ.ಎ.ಡಿ.ಬಿ. ಮಾರಾಟ ಹಾಗೂ ಗುತ್ತಿಗೆ ಕರಾರಿನ ಮೂಲಕ ಸ್ವಾಧೀನ ಪಡೆದುಕೊಂಡ ರೂ. 5158.30 ಲಕ್ಷಗಳ ಮೌಲ್ಯ 263.62 ಎಕರೆ ಭೂಮಿಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಆದೇಶ ಸಂ. ಸಿಐ 15 ಎಸ್‌ಪಿಕ್ಯೂ 2017 ದಿನಾಂಕ 09.03.2017ರವ್ವಯ ತಿದ್ದುಪಡಿಗೆ ಸಂಬಂಧಿಸಿದಂತೆ ಪ್ರಸ್ತುತ ಗುತ್ತಿಗೆ ಹಾಗೂ ಮಾರಾಟದ 99 ವರ್ಷದ ಅವಧಿಯನ್ನು ಕನಿಷ್ಠ ಎರಡು ವರ್ಷಗಳಿಗೆ ನಿಗದಿ ಮಾಡಿ ಬದಲಾವಣೆ ಮಾಡುವ ಪ್ರಕ್ರಿಯೆಯಲ್ಲಿದೆ. ಕವಿಪ್ರನಿನಿಯು 263.62 ಎಕರೆ ಭೂಮಿಯಲ್ಲಿ ಇನ್ನೂ 9.62 ಎಕರೆಗಳಷ್ಟು ಭೂಮಿಯನ್ನು ಕೆಐಎಡಿಬಿ ಯಿಂದ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ.

(ii) ದಾಸ್ತಾನು (Inventories)

(ಅ) ನಮಗೆ ಒದಗಿಸಿರುವ ಮಾಹಿತಿಯ ಪ್ರಕಾರ, ಕಂಪನಿಯು ಪ್ರತಿ ವರ್ಷ ಉಗ್ರಾಣ, ಬಿಡಿಭಾಗಗಳು, ಸನ್ನಾಹ ಹಾಗೂ ಸ್ಥಾವರಗಳ ಭೌತಿಕ ತಪಾಶೀಲನಾ ಕಾರ್ಯದ ವ್ಯವಸ್ಥೆಯನ್ನು ಸಮಂಜಸವಾದ ಮಧ್ಯಂತರಗಳಲ್ಲಿ ನಡೆಸುತ್ತದೆ.

(ಆ) ನಮಗೆ ವಿವರಿಸಿರುವ ಪ್ರಕಾರ, ಉಗ್ರಾಣದ ಭೌತಿಕ ವ್ಯತ್ಯಾಸವನ್ನು ಲೆಕ್ಕಪುಸ್ತಕಗಳಿಗೆ ಹೋಲಿಸಿದರೆ, ಕೊರತೆ ಅನುಪಯುಕ್ತ ಸಾಮಾಗ್ರಿಗೆ ಸಂಬಂಧಿಸಿದಂತೆ ಪರಿಶೀಲನೆಯಲ್ಲಿನ ವ್ಯತ್ಯಾಸಗಳಿಗೆ ಲೆಕ್ಕಪುಸ್ತಕಗಳಲ್ಲಿ ಸೂಕ್ತವಾಗಿ ವ್ಯವಹರಿಸಲ್ಪಟ್ಟಿಲ್ಲ.

(iii) ಸಾಲಗಳು ಮತ್ತು ಮುಂಗಡಗಳು:

ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ, ಕಂಪನಿ ಕಾಯ್ದೆ 2013ರ ಪರಿಚ್ಛೇಧ 189ರ ಅಡಿಯಲ್ಲಿ ಒಳಗೊಂಡಿರುವ ಕಂಪನಿಗಳು, ಸಂಸ್ಥೆಗಳು, ನಿಯಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಇನ್ನಿತರ ವ್ಯಕ್ತಿಗಳಿಗೆ ಕಂಪನಿಯು ಯಾವುದೇ ಸಾಲ, ಸುರಕ್ಷಿತ ಅಥವಾ ಸುರಕ್ಷಿತವಲ್ಲದ ಸಾಲವನ್ನು ನೀಡಿರುವುದಿಲ್ಲ. ತದನುಸಾರವಾಗಿ, ಆದೇಶದ ಕಲಮು 3(iii)ರನ್ವಯ, ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ನಾವು ವರದಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(iv) ಸಾಲಗಳು, ಹೂಡಿಕೆ ಮತ್ತು ಖಾತರಿಗಳು:

ನಮಗೆ ತಿಳಿಸಿರುವಂತೆ, ಕಂಪನಿ ಕಾಯ್ದೆ, 2013ರ ಪರಿಚ್ಛೇಧ 185 ಮತ್ತು 186ರಲ್ಲಿ ಒಳಪಟ್ಟಿರುವ ಪಕ್ಷಕಾರರಿಗೆ ಕಂಪನಿಯು ಯಾವುದೇ ಸಾಲ ನೀಡಿಲ್ಲ ಹಾಗೂ ಅಂತಹವರೊಂದಿಗೆ ಯಾವುದೇ ಹೂಡಿಕೆ ಮಾಡಿಲ್ಲ, ಖಾತರಿ ಅಥವಾ ಭದ್ರತೆಗಳನ್ನು ಒದಗಿಸಿಲ್ಲ. ಆದ್ದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(iv) ರ ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(v) ಠೇವಣಿಗಳು:

ಕಂಪನಿಯು ಕ.ವಿ.ನಿ.ಆಯೋಗದ ನಿರ್ದೇಶನಗಳಿಗೆ ವಿರುದ್ಧವಾಗಿ ದಿನಾಂಕ:30.11.2012 ರ ನಂತರ ನೆಟ್‌ವರ್ಕ್ ಆಗ್ಯುಮೆಂಟೇಷನ್ ಶುಲ್ಕ ರೂ.1330 ಲಕ್ಷ ವಸೂಲಾತಿ ಮಾಡಿದ್ದು ಕಾಯ್ದೆ ಮತ್ತು ನಿಯಮಗಳನ್ವಯ ನಿಗಧಿತ ಅವಧಿಯೊಳಗೆ ಮರು ಪಾವತಿಸಿರುವುದಿಲ್ಲ ಇದನ್ನು ಹೊರತುಪಡಿಸಿ ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು 2013ರ ಕಂಪನಿಗಳ ಕಾಯ್ದೆ ಕಲಂ 73 ರಿಂದ 76 ಅಡಿಯಲ್ಲಿ ಒಳಪಡುವ ಸಾರ್ವಜನಿಕರಿಂದ ಯಾವುದೇ ಠೇವಣಿಯನ್ನು ಅಂಗೀಕರಿಸಿರುವುದಿಲ್ಲ.

(vi) ವೆಚ್ಚ ದಾಖಲೆಗಳು:

ವಿದ್ಯುಚ್ಛಕ್ತಿ/ವಿದ್ಯುತ್ ಪ್ರಸರಣದ ದರ ದಾಖಲೆಗಳ ಲೆಕ್ಕ ನಿರ್ವಹಣೆಯನ್ನು ಸರ್ಕಾರವು ಕಂಪನಿ(ದರ ದಾಖಲೆ ಮತ್ತು ಪರಿಶೋಧನೆ)ನಿಯಮಗಳು,2014ರೊಂದಿಗೆ ಅನ್ವಯಿಸಲ್ಪಟ್ಟ ಕಂಪನಿ ಅಧಿನಿಯಮ, 2013ರ ಪರಿಚ್ಛೇಧ 148ರ ಉಪಪರಿಚ್ಛೇಧ (1) ರ ಅಡಿಯಲ್ಲಿ ನಿಗದಿಪಡಿಸಿದೆ. ಕಂಪನಿಯು ಪ್ರತ್ಯೇಕ ವೆಚ್ಚ ರಿಜಿಸ್ಟರುಗಳು ಹಾಗೂ ವೆಚ್ಚ ದರದಾಖಲೆಗಳ ರಿಜಿಸ್ಟರುಗಳನ್ನು ಹೊಂದಿಲ್ಲ, ಆರ್ಥಿಕ ಲೆಕ್ಕೀಕರಣ ಪುಸ್ತಕ ನಿರ್ವಹಣೆ ಹಾಗೂ ದಾಖಲೆಗಳನ್ನು ಆಧರಿಸಿ ವೆಚ್ಚ ದರ ದಾಖಲೆ ನಿರೂಪಣಾ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ ಎಂದು ನಮಗೆ ತಿಳಿಸಲಾಯಿತು.

(vii) ಶಾಸನಬದ್ಧ ಬಾಕಿಗಳು:

(ಅ) ನಾವು ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಿರುವ ಪ್ರಕಾರ ಹಾಗೂ ನಮಗೆ ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ಭವಿಷ್ಯ ನಿಧಿ, ಉದ್ಯೋಗಿಗಳ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಮೌಲ್ಯ ವರ್ಧಿತ ತೆರಿಗೆ, ಸೇವಾ ಸುಂಕಗಳನ್ನೂ ಒಳಗೊಂಡಂತೆ, ಅವಿವಾದಿತ ಶಾಸನಬದ್ಧ ಬಾಕಿ ಹಾಗೂ ಇನ್ನಿತರ ಯಾವುದೇ ಅನ್ವಯಿತ ಶಾಸನಬದ್ಧ ಬಾಕಿಗಳನ್ನು ಸಂಬಂಧಿತ ಪ್ರಾಧಿಕಾರಕ್ಕೆ ನಿಯತವಾಗಿ ಪಾವತಿಸಲಾಗುತ್ತಿದೆ. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಆಯವ್ಯಯ ಪಟ್ಟಿ ದಿನಾಂಕದಿಂದ ಪಾವತಿಸಬೇಕಾಗಿ ಬಂದ ದಿನಾಂಕದಿಂದ 6 ತಿಂಗಳುಗಳಿಗೂ ಹೆಚ್ಚಿನ ಅವಧಿಗೆ ಯಾವುದೇ ಅವಿವಾದಿತ ಶಾಸನಬದ್ಧ ಬಾಕಿ ಇರುವುದಿಲ್ಲ ಈ ಕೆಳಕಂಡವುಗಳನ್ನು ಹೊರತುಪಡಿಸಿ.

ಕ್ರ.ಸಂ.	ಶಾಸನದ ಹೆಸರು	ಶಾಸನಬದ್ಧ ಬಾಕಿಯ ಸ್ವರೂಪ	ಮೊತ್ತ ರೂ.ಗಳಲ್ಲಿ
1	ಸೇವಾ ತೆರಿಗೆ	ಸೇವಾ ತೆರಿಗೆ	44,52,833/-
2	ಕೇಂದ್ರಿಯ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017	ಕೇಂದ್ರಿಯ ಸರಕು ಮತ್ತು ಸೇವಾ ತೆರಿಗೆ	37,32,359/-
3	ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017	ರಾಜ್ಯ ಸರಕು ಮತ್ತು ಸೇವಾ ತೆರಿಗೆ	37,32,359/-
ಒಟ್ಟು			1,19,17,551/-

(ಆ) ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕೆಳಗೆ ತಿಳಿಸಿರುವ ವಿವಾದಿತ ತೆರಿಗೆಗಳನ್ನು ಹೊರತುಪಡಿಸಿದಂತೆ, ಆದಾಯ ತೆರಿಗೆ, ಸರಕು ಮತ್ತು ಸೇವಾ ತೆರಿಗೆ ಮೌಲ್ಯ ವರ್ಧಿತ ತೆರಿಗೆ, ಸೀಮಾ ಸುಂಕು, ಅಬಕಾರಿ ಸುಂಕು ಹಾಗೂ ಇತರ ಶಾಸನಬದ್ಧ ಬಾಕಿಗಳು ವಿವಾದಿತಗೊಂಡ ಬಾಕಿಗಳೆಂದು ಪಾವತಿಯಾಗದೇ ಉಳಿದಿರುವುದಿಲ್ಲ ಈ ಕೆಳಗಿನವುಗಳನ್ನು ಹೊರತುಪಡಿಸಿ.

ಶಾಸನದ ಹೆಸರು	ಬಾಕಿಯ ಸ್ವರೂಪ	ಮೊತ್ತ ರೂ.ಗಳಲ್ಲಿ	ಅವಧಿ	ವಿವಾದ ಬಾಕಿ ಇರುವ ವೇದಿಕೆ
ಸೇವಾ ತೆರಿಗೆ	ಸೇವಾ ತೆರಿಗೆ (VSAT ಶುಲ್ಕಗಳು)	1,68,568/–	2011–12	CESTAT
ಸೇವಾ ತೆರಿಗೆ	ಸೇವಾ ತೆರಿಗೆ (ಸ್ಥಿರಾಸ್ತಿಯ ಬಾಡಿಗೆ)	1,02,03,581/–	2007–08 ರಿಂದ 2009–10	CESTAT
		16,28,588/–	ಏಪ್ರಿಲ್ 2010 ರಿಂದ ಮಾರ್ಚ್ 2011	
		37,70,652/–	ಏಪ್ರಿಲ್ 2011 ರಿಂದ ಮಾರ್ಚ್ 2012	
		12,30,928/–	01.04.2012 ರಿಂದ 30.06.2012	ಆಯುಕ್ತರು (ಮೇಲ್ಮನವಿ)
		17,86,173/–	ಜುಲೈ 2012 ರಿಂದ ಸೆಪ್ಟೆಂಬರ್ 2013	ಆಯುಕ್ತರು (ಮೇಲ್ಮನವಿ)
ಸೇವಾ ತೆರಿಗೆ	ಸೇವಾ ತೆರಿಗೆ (ತಾಂತ್ರಿಕ ಪರಿವೀಕ್ಷಣೆಯ ಮತ್ತು ಪ್ರಮಾಣೀಕರಣ ಸಂಬಂಧ ಹೋಗಿ ಬರುವ (to and fro)ಶುಲ್ಕಗಳು)	14,63,998/–	17.05.2007 ರಿಂದ 2009–10	CESTAT
		3,62,972/–	ಏಪ್ರಿಲ್ 2010 ರಿಂದ ಸೆಪ್ಟೆಂಬರ್ 2010	
		1,94,104/–	ಏಪ್ರಿಲ್ 2011 ರಿಂದ ಸೆಪ್ಟೆಂಬರ್ 2011	
		3,75,086/–	ಅಕ್ಟೋಬರ್ 2011 ರಿಂದ ಮಾರ್ಚ್ 2012	
ಸೇವಾ ತೆರಿಗೆ	ಸೇವಾ ತೆರಿಗೆ, (ಠೇವಣಿಗಳು, ಧಾರಣ ಹಣ ಮತ್ತು ದಂಡ ಮರುಪಾವತಿಗೆ ಬಾಕಿ ಉಳಿದಿರುವ ನಿರ್ಧಾರವನ್ನು ಮೂರು ವರ್ಷಗಳ ನಂತರ ಆದಾಯಕ್ಕೆ ವರ್ಗಾಯಿಸಿರುವುದು)	14,86,38,823/–	01.07.2012 ರಿಂದ 30.03.2015	ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ
		22,42,464/–	ಏಪ್ರಿಲ್ 2015 ರಿಂದ ಮಾರ್ಚ್ 2016	ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ
ಆದಾಯ ತೆರಿಗೆ ಕಾಯ್ದೆ 1961	ಆದಾಯ ತೆರಿಗೆ (ಮರುಪಾವತಿಯಿಂದ ಬಾಕಿ ಹೊಂದಾಣಿಕೆ)	86,26,972/–	ಕಂದಾಯ ನಿರ್ಧರಣ ವರ್ಷ 2009–10	ಸಹಾಯಕ ಆಯುಕ್ತರು, ಆದಾಯ ತೆರಿಗೆ (ACIT)
		73,03,387/–	ಕಂದಾಯ ನಿರ್ಧರಣ ವರ್ಷ 2009–10 (ಎಫ್‌ಬಿಟಿ)	
		33,013/–	ಕಂದಾಯ ನಿರ್ಧರಣ ವರ್ಷ 2012–13	
		80,73,980/–	ಕಂದಾಯ ನಿರ್ಧರಣ ವರ್ಷ 2015–16	
ಸೇವಾ ತೆರಿಗೆ	ಸೇವಾ ತೆರಿಗೆ (ಮೇಲ್ವಿಚಾರಣ ಶುಲ್ಕಗಳು)	1,96,62,528/–	ಜುಲೈ 2012 ರಿಂದ ಆಗಸ್ಟ್ 2014	CESTAT
ಸೇವಾ ತೆರಿಗೆ	ಸೇವಾ ತೆರಿಗೆ (GoKಗಾಗಿ ಖಾತರಿ ಕಮಿಷನ್ ಪಾವತಿಸಿದ್ದು)	72,344/–	ಏಪ್ರಿಲ್ 2012 ರಿಂದ ಮಾರ್ಚ್ 2013 ಮತ್ತು ಜುಲೈ 2012 ರಿಂದ ಮಾರ್ಚ್ 2013	ಆಯುಕ್ತರು (ಮೇಲ್ಮನವಿ)

(viii) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಬ್ಯಾಂಕುಗಳು ಹಣಕಾಸು ಸಂಸ್ಥೆಗಳು ಮತ್ತು ಸರ್ಕಾರದ ಸಾಲಗಳು ಅಥವಾ ಎರವಲುಗಳನ್ನು ಮರುಪಾವತಿಸಲು ಕಂಪನಿ ವಿಫಲವಾಗಿಲ್ಲ. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯ ಪ್ರಕಾರ ಕಂಪನಿಯು ಸಾಲಪತ್ರಗಳ ವಿತರಣೆಯ ಮೂಲಕ ಯಾವುದೇ ಸಾಲಗಳನ್ನು ಸಂಗ್ರಹಿಸಿರುವುದಿಲ್ಲ.

(ix) ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಗಳ ಪ್ರಕಾರ, ಕಂಪನಿಯು, ಪ್ರಾರಂಭಿಕವಾಗಿ ಸಾರ್ವಜನಿಕ ವಿತರಣೆ ಅಥವಾ ಮುಂದುವರಿದ ಸಾರ್ವಜನಿಕ ವಿತರಣೆ ಮೂಲಕ (ಸಾಲ ಆಖಿತ ಪತ್ರವನ್ನೂ ಒಳಗೊಂಡು) ಹಣವನ್ನು ಸಂಗ್ರಹಿಸಿಲ್ಲ.

ಬ್ಯಾಂಕುಗಳಿಂದ ಪಡೆದ ನಿರ್ದಿಷ್ಟ ಅವಧಿ ಸಾಲಗಳಿಗೆ ಸಂಬಂಧಿಸಿದಂತೆ, ಸಾಲವನ್ನು ಪಡೆದುಕೊಂಡ ನಿರ್ದಿಷ್ಟ ಬಂಡವಾಳ ಕಾಮಗಾರಿಗಳಿಗೆ ಹೊರತುಪಡಿಸಿ ಬೇರೆ ಬಂಡವಾಳ ಕಾಮಗಾರಿಗಳಿಗೂ ಇದನ್ನು ಅದೇ ರೀತಿ ಬಳಸಿಕೊಳ್ಳಲಾಗಿದೆ ಮತ್ತು ಲಭ್ಯವಿರುವ ಮಾಹಿತಿಯೊಂದಿಗೆ, ಅದನ್ನು ಖಚಿತಪಡಿಸಲಾಗುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.

(x) ನಮ್ಮ ಅತ್ಯುತ್ತಮ ಜ್ಞಾನ ಮತ್ತು ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಪನಿಯ ಮೇಲೆ ಅಥವಾ ಕಂಪನಿಯಿಂದ ಯಾವುದೇ ವಂಚನೆಗಳು ಆಗಿರುವುದು ಕಂಡು ಬಂದಿರುವುದಿಲ್ಲ ಹಾಗೂ ಅಂತಹ ಯಾವುದೇ ಪ್ರಕರಣಗಳ ಕುರಿತು ಆಡಳಿತ ಮಂಡಳಿಯು ನಮಗೆ ವರದಿ ಮಾಡಿರುವುದಿಲ್ಲ.

ಕೆಲವು ಉದ್ಯೋಗಿಗಳ ವಿರುದ್ಧ ವಿಚಾರಣೆ ಪ್ರಾರಂಭವಾಗಿರುವ ಗಂಭೀರ ಪ್ರಕರಣಗಳ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ, ವಿಚಾರಣೆ ಪೂರ್ಣಗೊಂಡ ನಂತರವಷ್ಟೇ ಪ್ರಕರಣದ ಸ್ವರೂಪವನ್ನು ಗೊತ್ತುಪಡಿಸಿಕೊಳ್ಳಬಹುದಾಗಿದೆ ಎಂದು ನಮಗೆ ತಿಳಿಸಲ್ಪಟ್ಟಿದೆ.

(xi) ಕಂಪನಿಯು ಸರ್ಕಾರದ ಕಂಪನಿಯಾಗಿರುವುದರಿಂದ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯದ ಅಧಿಸೂಚನೆ ಸಂ. ಜಿಎಸ್ಆರ್ 463 (ಇ) ದಿನಾಂಕ 5ನೇ ಜೂನ್, 2015ರನ್ವಯ ಆಡಳಿತಾತ್ಮಕ ಸಂಭಾವನೆಗೆ ಸಂಬಂಧಿಸಿದಂತೆ ಕಂಪನಿಗಳ ಕಾಯ್ದೆ, 2013 ಕಲಂ 197ರನ್ವಯ ವಿನಾಯಿತಿ ಹೊಂದಿರುತ್ತದೆ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(11)ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(xii) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(12)ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(xiii) ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯದ ಅಧಿಸೂಚನೆ ಸಂ. ಜಿಎಸ್ಆರ್ 463(ಇ) ದಿನಾಂಕ 5.6.2015ರನ್ವಯ ಸಂಬಂಧಿತ ಪಕ್ಷಕಾರರೊಂದಿಗಿನ ವ್ಯವಹಾರದಲ್ಲಿ ಕಂಪನಿಗಳ ಕಾಯ್ದೆ2013 ಕಲಂ 177 ಮತ್ತು 188ರನ್ವಯ ವಿನಾಯಿತಿ ಹೊಂದಿರುತ್ತದೆ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(13) ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(xiv) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ದಾಖಲೆಗಳ ಪರಿಶೀಲನೆಯನ್ವಯ, ಕಂಪನಿಯು ಆರ್ಥಿಕ ವರ್ಷ 2014–15 ಮತ್ತು 2015–16 ರಲ್ಲಿ ರೂ.10700 ಲಕ್ಷಗಳಷ್ಟು ಸರ್ಕಾರದಿಂದ ಷೇರು ಅರ್ಜಿ ಹಣವನ್ನು ಪಡೆದಿದ್ದು ಸದರಿ ಷೇರು ಅರ್ಜಿ ಹಣವನ್ನು ಈ ವರ್ಷದಲ್ಲಿ ಆದ್ಯತೆ ಹಂಚಿಕೆ ಷೇರುಗಳಾಗಿ ಪರಿವರ್ತಿಸಿದೆ. ಸದರಿ ಪರಿವರ್ತನೆಯು ಕಂಪನಿ ಕಾಯ್ದೆ, 2013 ರ, ಅಧಿನಿಯಮ 42 ರಲ್ಲಿ ಸೂಚಿಸಿದಂತೆ ಷೇರು ಅರ್ಜಿ ಹಣವನ್ನು ಪಡೆದ 60 ದಿನದೊಳಗಾಗಿ ಷೇರುಗಳಾಗಿ ಪರಿವರ್ತಿಸಬೇಕಾಗಿತ್ತು. ಆದ್ಯಾಗ್ಯೂ ಕಂಪನಿ ಕಾಯ್ದೆ, 2013 ನಿಗಧಿತ ಠೇವಣಿ ನಿಯಮಗಳು ಸರ್ಕಾರದಿಂದ ಪಡೆದ ಮೊತ್ತಕ್ಕೆ ಮತ್ತು ಸರ್ಕಾರಿ ಕಂಪನಿಗೆ ಅನ್ವಯಿಸುವುದಿಲ್ಲ.

(xv) ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಯ ಪ್ರಕಾರ, ಕಂಪನಿಯು ಪ್ರಸಕ್ತ ವರ್ಷದಲ್ಲಿ, ಸಂಬಂಧಿತ ನಿರ್ದೇಶಕರುಗಳು ಅಥವಾ ವ್ಯಕ್ತಿಗಳೊಂದಿಗೆ ಯಾವುದೇ ನಗದು ರೂಪದಲ್ಲಿಲ್ಲದ ವ್ಯವಹರಣೆಗಳನ್ನು

ಕೈಗೊಂಡಿಲ್ಲ ಆದ್ದರಿಂದ, ಕಂಪನಿಗಳ ಅಧಿನಿಯಮ, 2013ರ ಪ್ರಕರಣ 192ರ ನಿಬಂಧನೆಗಳನುಸಾರ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ 2016 ಷರತ್ತು 3(xv) ರಲ್ಲಿ ಉಲ್ಲೇಖಿಸಲಾದ ವಿಷಯದ ಮೇಲೆ ನಮ್ಮ ವರದಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(xvi) ಕಂಪನಿಯು ಬ್ಯಾಂಕೇತರ ಹಣಕಾಸು ಕಂಪನಿಯಾಗಿರುತ್ತದೆ ಆದುದರಿಂದ ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934ರ ಕಲಂ 45–IA ರಡಿಯಲ್ಲಿ ನೊಂದಾಯಿಸಬೇಕಾದ ಅವಶ್ಯಕತೆ ಇರುವುದಿಲ್ಲ.

ಬಿ.ಹಿ.ರಾವ್ ಮತ್ತು ಕಂ
ಚಾರ್ಟ್ಡ್ ಅಕೌಂಟೆಂಟ್
ಸಂಸ್ಥೆ ನೋ.ಸಂ:003116S

ಸ್ಥಳ : ಬೆಂಗಳೂರು
ದಿನಾಂಕ : 16.08.2018

ಸಹಿ/–
ಬಿ.ಪ್ರಸನ್ನ ಆಚಾರ್
ಪಾಲುದಾರ
ಸದಸ್ಯತ್ವ ಸಂಖ್ಯೆ:202100

ನಮ್ಮ ಸಮ ಸಂಖ್ಯೆ ದಿನಾಂಕದ ವರದಿ "ಇತರೆ ಕಾನೂನು ಮತ್ತು ನಿಯಂತ್ರಣ ಅವಶ್ಯಕತೆಗಳು" ರ ಕಂಡಿಕೆ 2(ಜಿ)ಗೆ ಉಲ್ಲೇಖಿಸಿದ ಅನುಬಂಧ –"ಜಿ"

ಕಂಪನಿಗಳ ಕಾಯ್ದೆ 2013 ("ಕಾಯ್ದೆ") ಕಲಂ 143ರ ಉಪ ಕಲಂ (3) ರ ಕಂಡಿಕೆ 4 ರಡಿಯಲ್ಲಿ ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ವರದಿ.

31ನೇ ಮಾರ್ಚ್, 2018 ರಂತೆ ನಾವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕಂಪನಿ) ಆರ್ಥಿಕ ವರದಿ ಮೇಲೆ ಆಂತರಿಕೆ ನಿಯಂತ್ರಣಗಳನ್ನು, ಆ ದಿನಾಂಕದಂದು ಅಂತ್ಯಗೊಂಡ ವರ್ಷಕ್ಕೆ ಖಓಆ–ಂಖ ನ ಆರ್ಥಿಕ ನಿರೂಪಣಾಪಟ್ಟಗಳ ಜೊತೆ ಲೆಕ್ಕ ಪರಿಶೋಧನೆ ನಡೆಸಿರುತ್ತೇವೆ.

ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ಆಡಳಿತವರ್ಗದ ಜವಾಬ್ದಾರಿ:

ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ "ಆರ್ಥಿಕ ನಿರೂಪಣಾ ಪಟ್ಟಿ"ಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆ ಮೇಲಿನ ಮಾರ್ಗದರ್ಶಕ ಟಿಪ್ಪಣಿಯಲ್ಲಿ ಸೂಚಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ, ಕಂಪನಿಯು ಅನುಷ್ಠಾನಗೊಳಿಸಿರುವ ಆರ್ಥಿಕ ನಿರೂಪಣಾ ವರದಿಯ ಅಂಶಗಳ ಮೇಲಿನ ಆಂತರಿಕ ನಿಯಂತ್ರಣವನ್ನು ಆಧರಿಸಿದ ಆಂತರಿಕ ಆರ್ಥಿಕ ನಿಯಂತ್ರಣವನ್ನು ಅನುಷ್ಠಾನಗೊಳಿಸುವುದು ಕಂಪನಿಯ ವ್ಯವಸ್ಥಾಪಕ ಮಂಡಳಿಯ ಜವಾಬ್ದಾರಿಯಾಗಿದೆ. ಕಂಪನಿ ಕಾಯ್ದೆ 2013ರಲ್ಲಿ ಅಗತ್ಯಪಡಿಸಿರುವಂತೆ, ಈ ಜವಾಬ್ದಾರಿಗಳು ವಿನ್ಯಾಸ, ಕಂಪನಿಯ ಕಾರ್ಯನೀತಿಯನ್ನು ಪಾಲಿಸುವುದನ್ನೂ ಒಳಗೊಂಡಂತೆ ವ್ಯವಹರಣೆಯನ್ನು ಅನುಕ್ರಮವಾಗಿ ಮತ್ತು ದಕ್ಷರೀತಿಯಿಂದ ನಡೆಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಕಾರ್ಯಾಚರಣೆಗೊಳಿಸುತ್ತಿದ್ದ ಆಂತರಿಕ ಆರ್ಥಿಕ ನಿಯಂತ್ರಣವನ್ನು ಸಾಕಷ್ಟು ಪ್ರಮಾಣದಲ್ಲಿ ಅನುಷ್ಠಾನ ಹಾಗೂ ನಿರ್ವಹಣೆ, ಆಸ್ತಿಗಳನ್ನು ಸುರಕ್ಷಿತಗೊಳಿಸುವುದು, ಮೋಸ, ವಂಚನೆ ಹಾಗೂ ಲೋಪಗಳನ್ನು ಪತ್ತೆ ಮಾಡಿ ತಡೆಗಟ್ಟುವುದು, ಲೆಕ್ಕೀಕರಣ ದಾಖಲೆಗಳ ನಿಖರತೆ ಹಾಗೂ ಪರಿಪೂರ್ಣತೆ, ನಂಬಿಕೆಯುಕ್ತ ಆರ್ಥಿಕ ಮಾಹಿತಿಗಳನ್ನು ಸಕಾಲದಲ್ಲಿ ಸಿದ್ಧಪಡಿಸುವುದು ಇವುಗಳನ್ನು ಒಳಗೊಂಡಿದೆ.

ಲೆಕ್ಕಪರಿಶೋಧಕರ ಜವಾಬ್ದಾರಿ:

ನಮ್ಮ ಪರಿಶೋಧನೆಯನ್ನು ಆಧರಿಸಿದಂತೆ, ಆರ್ಥಿಕ ನಿರೂಪಣ ಪಟ್ಟಿಯ ಮೇಲೆ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣದ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ(ಐ.ಸಿ.ಐ.ಎ) ಹೊರಡಿಸಿರುವ ಮಾರ್ಗದರ್ಶಕ ಟಿಪ್ಪಣಿ ಹಾಗೂ ಗುಣಮಾನಕಗಳ ಪ್ರಕಾರ ನಾವು ನಮ್ಮ ಪರಿಶೋಧನೆಯನ್ನು ನಡೆಸಿದ್ದು, ಪರಿಶೋಧನೆಯು ಕಂಪನಿ ಕಾಯ್ದೆ, 2013ರ ಪ್ರಕರಣ 143(10)ರ ಅಡಿಯಲ್ಲಿ ನಿಗದಿಪಡಿಸಿರುವಂತೆ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆಗೆ ಅನ್ವಯಿಸುವ ಹಾಗೂ ಐ.ಸಿ.ಐ.ಎ.ಹೊರಡಿಸಿರುವ ಮಟ್ಟಿಗೆ ಇದೆ ಎಂದು ಭಾವಿಸಲಾಗಿದೆ. ಈ ಗುಣಮಾನಕಗಳು ಹಾಗೂ ಮಾರ್ಗದರ್ಶಕ ಟಿಪ್ಪಣಿಗಳು ನಾವು ನೈತಿಕ ಯೋಜನಾತೀತ ಅಗತ್ಯತೆ ಹಾಗೂ ಯೋಜನೆಗಳನ್ನು ಪಾಲಿಸಿ, ಆರ್ಥಿಕ ವರದಿಗಳ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣ ಸಾಕಷ್ಟು ಪ್ರಮಾಣದಲ್ಲಿ ಇತ್ತೇ ಹಾಗೂ ನಿರ್ವಹಿತಗೊಂಡಿತ್ತೇ ಹಾಗೂ ಅಂತಹ ನಿಯಂತ್ರಣಗಳು ಎಲ್ಲ ಭೌತಿಕ ಅಂಶಗಳ ವಿಷಯದಲ್ಲಿ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಂಡಿತ್ತೇ ಎಂಬುದರ ಬಗ್ಗೆ ಯುಕ್ತಾತೀತ ಖಚಿತತೆಯನ್ನು ಪಡೆದುಕೊಳ್ಳಲು ಪರಿಶೋಧನೆಯನ್ನು ನಡೆಸಬೇಕು.

ನಮ್ಮ ಪರಿಶೋಧನೆಯು, ಆರ್ಥಿಕ ನಿರೂಪಣ ಪಟ್ಟಿಯ ಸಲ್ಲಿಕೆ ಹಾಗೂ ಅವುಗಳ ಕಾರ್ಯಾಚರಣೆ ಪರಿಣಾಮದ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದ ಪ್ರಮಾಣಬದ್ಧತೆಯ ಬಗ್ಗೆ ಪರಿಶೋಧಿತ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳುವ ಕಾರ್ಯಪ್ರಕ್ರಿಯೆಯನ್ನು ಒಳಗೊಂಡಿದೆ. ಆರ್ಥಿಕ ಪಟ್ಟಿಯ ಸಲ್ಲಿಕೆ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಸಂಬಂಧದ ನಮ್ಮ ಪರಿಶೋಧನೆಯು, ಖಓಆ–ಂಖ ಆರ್ಥಿಕ ಪಟ್ಟಿಯ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವನ್ನು ಅರ್ಥ ಮಾಡಿಕೊಳ್ಳುವುದು, ಇರಬಹುದಾದ ಭೌತಿಕ ಕೊರತೆಯ ಅಪಾಯವನ್ನು ಗೊತ್ತುಪಡಿಸಿಕೊಳ್ಳುವುದು, ಹೀಗೆ ಗೊತ್ತುಪಡಿಸಿಕೊಂಡ ಅಪಾಯವನ್ನು ಆಧರಿಸಿದ ಆಂತರಿಕ ಆರ್ಥಿಕ ನಿಯಂತ್ರಣದ ಕಾರ್ಯಾಚರಣೆ ಪರಿಣಾಮ, ವಿನ್ಯಾಸವನ್ನು ಪರೀಕ್ಷಿಸಿ ಮೌಲ್ಯೀಕರಿಸುವುದು, ಇವುಗಳನ್ನು ಒಳಗೊಂಡಿದೆ. ಆಯ್ಕೆ ಮಾಡಿಕೊಂಡಿರುವ ಕಾರ್ಯಪ್ರಕ್ರಿಯೆಯು, ಮೋಸ ಅಥವಾ ಲೋಪದಿಂದಲೇ ಆಗಿದ್ದರೂ, ಖಓಆ–ಂಖ ಆರ್ಥಿಕ

ನಿರೂಪಣಾಪಟ್ಟಿಗಳ ಭೌತಿಕ ಲೋಪಯುಕ್ತ ನಿರೂಪಣೆಗಳ ಸಂಬಂಧವಾದ ಅಪಾಯವನ್ನು ಗೊತ್ತುಪಡಿಸಿಕೊಳ್ಳುವುದನ್ನೂ ಒಳಗೊಂಡಂತೆ, ಪರಿಶೋಧಕರ ನಿರ್ಣಯವನ್ನು ಅವಲಂಬಿಸಿದೆ. ಆರ್ಥಿಕ ನಿರೂಪಣೆ ಪಟ್ಟಿಯ ಮೇಲೆ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣ ವ್ಯವಸ್ಥೆ ಸಂಬಂಧವಾಗಿ ನಮ್ಮ ಯುಕ್ತ ಪರಿಶೋಧಿತ ಅಭಿಪ್ರಾಯವನ್ನು ಒದಗಿಸಲು ನಾವು ಪಡೆದುಕೊಂಡಿರುವ ಪರಿಶೋಧಿತ ಸಾಕ್ಷಾ ್ಯಧಾರಗಳು ಅಗತ್ಯ ಪ್ರಮಾಣದಲ್ಲಿವೆ ಹಾಗೂ ಸೂಕ್ತವಾಗಿವೆ ಎಂದು ನಂಬಿದ್ದೇವೆ.

ಆರ್ಥಿಕ ನಿರೂಪಣ ಪಟ್ಟಿಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅರ್ಥ:

ಒಂದು ಕಂಪನಿಯು ತನ್ನ ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಹೊಂದಿರುವ ಆಂತರಿಕ ಆರ್ಥಿಕ ನಿಯಂತ್ರಣವು ಒಂದು ಕಾರ್ಯಪ್ರಕ್ರಿಯೆಯಾಗಿದ್ದು, ಇದನ್ನು ಸರ್ವಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕೀಕರಣ ತತ್ವಗಳ ಪ್ರಕಾರ, ಆರ್ಥಿಕ ನಿರೂಪಣಾ ಪಟ್ಟಿಯ ಸಲ್ಲಿಕೆಯ ಭರವಸೆ ಹಾಗೂ ನಂಬಿಕೆ, ಬಾಹ್ಯ ಉದ್ದೇಶಗಳಿಗಾಗಿ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಲು ಯುಕ್ತ ಖಚಿತತೆಯನ್ನು ಲಭ್ಯವಾಗಿಸುವ ವಿನ್ಯಾಸವಾಗಿದೆ. ಒಂದು ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವು (1) ಕಂಪನಿಯ ಆಸ್ತಿಗಳ ವ್ಯವಹರಣೆ ಹಾಗೂ ವಿಲೇವಾರಿ ಸಂಬಂಧವಾಗಿ ವಿವರವಾದ, ನಿಖರವಾದ ಹಾಗೂ ನ್ಯಾಯಸಮ್ಮತ ದಾಖಲೆಗಳನ್ನು ಬಿಂಬಿಸುವುದಕ್ಕೆ ಸಂಬಂಧಿಸಿದ, (2) ಸರ್ವಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕತತ್ವಗಳ ಪ್ರಕಾರ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಲು ಅಗತ್ಯವಾದ ವ್ಯವಹರಣೆಗಳನ್ನು ದಾಖಲಿಸಲು ಹಾಗೂ ಕಂಪನಿಯ ವ್ಯವಸ್ಥಾಪಕ ಮಂಡಳಿ ಮತ್ತು ನಿರ್ದೇಶಕರುಗಳ ಅಧಿಕೃತ ಒಪ್ಪಿಗೆಯೊಂದಿಗೆ ಕಂಪನಿಯ ಸ್ವೀಕೃತಿ ಮತ್ತು ವೆಚ್ಚಗಳನ್ನು ಕೈಗೊಳ್ಳುತ್ತಿರುವ ಬಗ್ಗೆ ಯುಕ್ತಾತೀತ ಖಚಿತತೆಯನ್ನು ಒದಗಿಸಲು, (3) ಕಂಪನಿಯ ಖಓಆ–ಂಖ ಆರ್ಥಿಕ ನಿರೂಪಣಾಪಟ್ಟಿಗಳ ಮೇಲೆ ಪರಿಣಾಮ ಬೀರಬಹುದಾದ ಆಸ್ತಿಗಳ ಅನಧಿಕೃತ ವಶಪಡಿಸಿಕೊಳ್ಳುವಿಕೆ, ಬಳಕೆ ಅಥವಾ ವಿಲೇವಾರಿಗಳನ್ನು ಸಕಾಲದಲ್ಲಿ ಪತ್ತೆ ಮಾಡುವುದು ಅಥವಾ ತಪ್ಪಿಸಲು ಯುಕ್ತಾತೀತ ಖಚಿತತೆಯನ್ನು ಒದಗಿಸಲು ಅಗತ್ಯವಾದ ಕಾರ್ಯನೀತಿ ಹಾಗೂ ಕಾರ್ಯಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ.

ಆರ್ಥಿಕ ನಿರೂಪಣಾ ಪಟ್ಟಿಯ ಸಲ್ಲಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ಗತ ಸೀಮಿತಗಳು:

ನಿಯಂತ್ರಣಗಳ ಮೇಲೆ ಅಸೂಕ್ತವಾದ ನಿರ್ವಹಣಾ ಅಧಿಕಾರ, ಒಳಸಂಚನ್ನೂ ಒಳಗೊಂಡಂತೆ, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗಳ ಮೇಲೆ ಇರುವ ಆಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ಗತ ಸೀಮಿತಗಳ ಕಾರಣ ಲೋಪ ಅಥವಾ ಮೋಸದ ಭೌತಿಕ ತಪ್ಪು ನಿರೂಪಣೆಗಳು ಉಂಟಾಗುವ ಸಾಧ್ಯತೆಗಳಿದ್ದು, ಅವು ಕಂಡುಹಿಡಿಯಲು ಆಗದಂತಹದ್ದಾಗಿರಬಹುದಾಗಿದೆ. ಅಲ್ಲದೆ ಭವಿಷ್ಯದ ಅವಧಿಗಳಿಗೆ ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಮೌಲ್ಯೀಕರಣ ತೋರಿಕೆಗಳು ಅಪಾಯಕ್ಕೆ ಒಳಪಡಬಹುದಾಗಿದ್ದು, ಪರಿಸ್ಥಿತಿಯ ಬದಲಾವಣೆ, ಕಾರ್ಯನೀತಿ ಅಥವಾ ಕಾರ್ಯಪ್ರಕ್ರಿಯೆಗಳ ಅನುಸರಣೆಯ ಪ್ರಮಾಣವು ಕ್ಷೀಣಗೊಳ್ಳಬಹುದಾದ ಕಾರಣ, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವು ಕೊರತೆಯಿಂದ ತುಂಬಿದ್ದಿರಬಹುದಾಗಿದೆ.

ಅಂಗೀಕಾರ್ಹ ಅಭಿಪ್ರಾಯ

ನಮ್ಮ ಅಭಿಪ್ರಾಯದಂತೆ, ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ ಹಾಗೂ ನಮ್ಮ ಪರಿಶೋಧನೆಯನ್ನು ಆಧರಿಸಿ, 2018ರ ಮಾರ್ಚ್ 31ರಂದಿಗೆ ಇದ್ದಂತೆ, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಯ ಮೇಲಿನ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣದಲ್ಲಿ, ಪರಿಣಾಮಕಾರಿ ಕಾರ್ಯಾಚರಣೆ ಹಾಗೂ ಅಗತ್ಯ ಪ್ರಮಾಣದಲ್ಲಿರುವಿಕೆಗೆ ಸಂಬಂಧಿಸಿದಂತೆ ಕೆಳಕಂಡ ಭೌತಿಕ ಕೊರತೆಯನ್ನು ಗುರುತಿಸಲಾಗಿದೆ:

ಆಸ್ತಿ ಸ್ಥಾವರ ಮತ್ತು ಉಪಕರಣ: (ಪಿಪಿಇ)

(i) ಈ ಕೆಳಗೆ ಸೂಚಿಸಿರುವ ವಿಷಯಗಳಲ್ಲಿ ಕಂಪನಿಯು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ:

(ಅ) ಕಾಲ ಕಾಲಕ್ಕೆ ಆಸ್ತಿ ಪುಸ್ತಕಗಳನ್ನು ಪ್ರತಿಯೊಂದು ಆಸ್ತಿಗೆ ಸಂಬಂಧಿಸಿದ ಮಾಹಿತಿಯೊಂದಿಗೆ ನವೀಕರಿಸದಿರುವುದು.

(ಆ) ವರದಿಯ ದಿನಾಂಕದಂದು ದುರ್ಬಲಗೊಂಡ ಆಸ್ತಿಗಳ ಗುರುತಿಸುವಿಕೆ.

(ಇ) ಚರಾಸ್ತಿಗಳನ್ನು ಹೊರತು ಪಡಿಸಿ ಸ್ತಿರಾಸ್ಥಿಗಳ ಭೌತಿಕ ಪರೀಶೀಲನೆ ವರದಿ ಬಗ್ಗೆ ಯಾವುದೇ ನಿರ್ದಿಷ್ಟ ಕಾರ್ಯರೂಪ ಇಲ್ಲದೆ ಇರುವುದು.

(ಈ) ಚರಾಸ್ತಿ ಪರೀಶೀಲನಾ ಮಾಹಿತಿಯನ್ನು ಆಸ್ತಿ ಪುಸ್ತಕದೊಂದಿಗೆ ಸಮನ್ವಯಗೊಳಿಸದೇ ಇರುವುದು.

(ಉ) ಬಂಡವಾಳೀಕರಿಸುವ ಸಮಯದಲ್ಲಿ ಕಾರ್ಯಸ್ಥಗಿತ ವೆಚ್ಚವನ್ನು (Decommissioning Cost) ಅಂದಾಜಿಸಿ ಆಸ್ತಿ ಸ್ಥಾವರ ಮತ್ತು ಉಪಕರಣದ ಭಾಗವಾಗಿ ಪರಿಗಣಿಸದೇ ಇರುವುದು.

ಮೇಲಿನ ಕೊರತೆಗಳು ಹಣಕಾಸಿನ ನಿರೂಪಣಾಪಟ್ಟಿಯಲ್ಲಿನ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಹಾಗೂ ಅದಕ್ಕೆ ಸಂಬಂಧಿಸಿದ ಸವಕಳಿ ಮತ್ತು ನಿರ್ವಹಣ ವೆಚ್ಚಗಳ ಬಗ್ಗೆ ಗಮನಾರ್ಹ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಡಬಹುದಾಗಿದೆ.

(ii) ಭೂಮಿಯ ಮಾಲಿಕತ್ವ ಗುರುತಿಸುವಿಕೆಯಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲದ ಕಾರಣ ಭೂಮಿಯನ್ನು ಸೂಕ್ತವಾಗಿ ಗುತ್ತಿಗೆ ಆಧಾರಿತ ಭೂಮಿ ಮತ್ತು ಮಾಲೀಕತ್ವ ಭೂಮಿ ಎಂದು ವರ್ಗೀಕರಿಸದ ಕಾರಣ ಹಾಗೂ ಅದರ ಋಣಮುಕ್ತತೆಯ ಬಗ್ಗೆ ಹಣಕಾಸಿನ ನಿರೂಪಣಾಪಟ್ಟಿಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶವಾಗಬಹುದಾಗಿದೆ.

(iii) ಕಂಪನಿಯು ರಿಯಾಯಿತಿ ದರದಲ್ಲಿ/ ಉಚಿತವಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, ಐಓಆ–ಂಐ20 'ಸರ್ಕಾರದ ಧನ ಸಹಾಯಕ್ಕಾಗಿ ಲೆಕ್ಕ ಪತ್ರ ನಿರ್ವಹಣೆ ಮತ್ತು ಸರ್ಕಾರಿ ಕೊಡುಗೆ ಬಹಿರಂಗ ಪಡಿಸುವಿಕೆಯ' '(Accounting for Government Grants and Disclosure of Government Assistance)' ಬಗ್ಗೆ ಪರಿಣಾಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಹಣಕಾಸಿನ ನಿರೂಪಣಾ ಪಟ್ಟಿಗಳಲ್ಲಿ ಪಿಪಿಇ, ಋಣಮುಕ್ತತೆ (Amortization), ಕೊಡುಗೆ ಮತ್ತು ಇತರೆ ಆದಾಯಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(iv) ಈ ಕೆಳಗೆ ಸೂಚಿಸಿರುವ ವಿಷಯಗಳಲ್ಲಿ ಕಂಪನಿಯು ಪರಿಣಾಮಕಾರಿಯಾದ ಆಂತರಿಕ ಹಣಕಾಸು ನಿಯಂತ್ರಣ ವಿಧಾನ ಮತ್ತು ವ್ಯವಸ್ಥೆಗಳನ್ನು ಒಳಗೊಂಡಿರುವುದಿಲ್ಲ.

(ಅ) ಆಸ್ತಿಯ ವೆಚ್ಚವು ಸಂಪೂರ್ಣವಾಗಿ ಆಸ್ತಿ, ಸ್ಥಾವರ ಮತ್ತು ಉಪಕರಣ ಕಾರ್ಯಾಚರಣೆಯಾಗುವ ದಿನದವರೆಗೆ ಪರಿಗಣಿಸುವ ಬಗ್ಗೆ.

(ಆ) ಕಂಪನಿಯ ನಿಯಮದ ಪ್ರಕಾರ ವೆಚ್ಚ ನಮೂದು ಪುಸ್ತಕದ ಸಮರ್ಪಕ ನಿರ್ವಹಣೆ

ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ, ಅದರ ಮೇಲಿನ ಸವಕಳಿ, ಗುತ್ತಿಗೆದಾರರ ಹೊಣೆಗಾರಿಕೆಗಳು ಅತಿ ಕಡಿಮೆ/ ಹೆಚ್ಚು ಬಿಂಬಿಸಿದಂತಾಗಿ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(v) ಕಂಪನಿಯು ಸಾಲಗಳ ವೆಚ್ಚವನ್ನು ಬಂಡವಾಳೀಕರಿಸುವ ನಿಯಮವನ್ನು ಸರಾಸರಿ ವಿಧಾನದ (Weighted Average) ಆಧಾರದ ಮೇಲೆ 2015ರಡಿಯಲ್ಲಿ ಹೊರಡಿಸಿರುವ IND AS 23 Borrowing Cost ಅನ್ವಯ ಕಂಪನಿಯ ನಿಯಮ ಪಾಲಿಸುತ್ತಿರುವ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಮೇಲಿನ ಸವಕಳಿಗಳು, ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(vi) ಕಂಪನಿಯು ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಬಂಡವಾಳೀಕರಿಸುವಾಗ ಸಿಬ್ಬಂದಿ ವೆಚ್ಚಗಳು, ಸಾಲಗಳ ವೆಚ್ಚಗಳನ್ನು ಅನುಪಾತದಲ್ಲಿ ಹಂಚಿಕೆ ಮಾಡುವಾಗ ಅಸಂಗತವಾಗಿ ಒಂದೊಂದು ಘಟಕದಲ್ಲಿ

ಒಂದೊಂದು ರೀತಿಯಲ್ಲಿ ಪಾಲಿಸಲಾಗುತ್ತಿದ್ದು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(vii) ಕಂಪನಿಯು ನಿಗಧಿತ ಸಮಯದಲ್ಲಿ ಕಾರ್ಯಾರಂಭ ಪ್ರಮಾಣ ಪತ್ರವನ್ನು ನಿಗಧಿತ ಅವಧಿಯಲ್ಲಿ ನೀಡುವ ಬಗ್ಗೆ ಪರಿಣಾಮಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ನಿರ್ಮಾಣ ಹಂತದಲ್ಲಿರುವ ವೆಚ್ಚಗಳು (EDC), ಸಾಲಗಳ ವೆಚ್ಚಗಳನ್ನು ಒಳಗೊಂಡಂತೆ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ಕಾರ್ಯಾರಂಭ ಪ್ರಮಾಣ ಪತ್ರವು ಮುಂಚಿತವಾಗಿ/ ವಿಳಂಬವಾಗಿ ನೀಡುವುದರಿಂದ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(viii) ಕಂಪನಿಯು ಬಿಡುಗಡೆಗೊಳಿಸಿದ ಆಸ್ತಿಗಳ ಮೇಲೆ ಸವಕಳಿಯನ್ನು ತೆಗೆದು ಆಸ್ತಿಗಳನ್ನು ಇಳಿಸಿದ ಮೌಲ್ಯದಲ್ಲಿ ಬೇರೆ ಲೆಕ್ಕ ಘಟಕಕ್ಕೆ ವರ್ಗಾಯಿಸಿದಲ್ಲಿ ಅದರ ಮೇಲಿನ ಸವಕಳಿಯನ್ನು ಹಾಗೂ ಆಸ್ತಿಯ ಬೆಲೆಯನ್ನು ಸೂಕ್ತವಾಗಿ ಪರಿಗಣಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮುಂದುವರಿಸುವ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(ix) ಕಂಪನಿಯ ಸಿಬ್ಬಂದಿ ವೆಚ್ಚ ಬೃಹತ್ ಕಾಮಗಾರಿ ವಿಭಾಗಗಳಲ್ಲಿ ಮೇಲ್ವಿಚಾರಣ ಶುಲ್ಕದೊಂದಿಗೆ ನಿವ್ವಳಗೊಳಿಸುತ್ತಿರುವುದನ್ನು ತಾಂತ್ರಿಕವಾಗಿ ರೂಪಿಸುವ ವಿಷಯಗಳಲ್ಲಿ ಸಾಕಷ್ಟು ಪರಿಣಾಮಕಾರಿಯಾದ ನಿಯಮ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮೇಲೆ ಸಿಬ್ಬಂದಿ ವೆಚ್ಚವನ್ನು ಸರಿಯಾದ ಪ್ರಮಾಣದಲ್ಲಿ ಹಂಚಿಕೆ ಮಾಡದೆ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ಸಿಬ್ಬಂದಿ ವೆಚ್ಚವು ಉತ್ಪ್ರೇಕ್ಷಿತವಾಗಿ (Over Statement) ಹಣಕಾಸಿನ ಹೇಳಿಕೆಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(x) ಕಂಪನಿಯಲ್ಲಿ ಯೋಜನೆಗಳ ಸಮೀಕ್ಷೆ ವರದಿ/ಕಾರ್ಯಸಾಧ್ಯತೆಗಳನ್ನು ನಿಯತ ಕಾಲಿಕವಾಗಿ ಪರಾಮರ್ಶಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ: ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ನಿವ್ವಳ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(xi) ಕಂಪನಿಯು ಬಾಡಿಗೆ ನೀಡಿರುವ ಕಛೇರಿ ಕಟ್ಟಡಗಳು/ಸಿಬ್ಬಂದಿಯ ವಸತಿ ಗೃಹಗಳನ್ನು ಹೂಡಿಕೆ ಮಾಡಲಾಗಿರುವ ಆಸ್ತಿಗಳೆಂದು ಪರಿಗಣಿಸುವ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ಹೂಡಿಕೆ ಆಸ್ತಿಗಳ ವಿಷಯದಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಸ್ವಂತ ವೆಚ್ಚ ಕಾಮಗಾರಿಗಳು ಮತ್ತು ಠೇವಣಿ ವಂತಿಗೆ ಕಾಮಗಾರಿಗಳು:

(xii) ಕಂಪನಿಯು ಪ್ರತಿಯೊಂದು ಸ್ವಯಂ ಕಾಮಗಾರಿವಾರು ಮತ್ತು ಠೇವಣಿವಂತಿಗೆ ಕಾಮಗಾರಿವಾರು ಸಂಬಂಧಪಟ್ಟ ಮಾಹಿತಿಗಳನ್ನೊಳಗೊಂಡ ನಿಗಧಿತ ನಮೂನೆಯಲ್ಲಿ ನೋಂದಣಿ ಪುಸ್ತಕಗಳನ್ನು ನಿರ್ವಹಿಸುವ ಮತ್ತು ಖಚಿತ ಪಡಿಸಿಕೊಳ್ಳುವ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ನಿಗಧಿತ ಅವಧಿಯಲ್ಲಿ ಬಂಡವಾಳೀಕರಣಗೊಳಿಸುವ ಬಗ್ಗೆ, ಸವಕಳಿ, ಗ್ರಾಹಕರ ಕೊಡುಗೆ ಮತ್ತು ಆದಾಯ ಗುರುತಿಸುವಿಕೆಯಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(xiii) ಕಂಪನಿಯು ಕರ್ನಾಟಕ ವಿದ್ಯುತ್ ಗ್ರಿಡ್ ಕೋಡ್, 2015 ರನ್ವಯ ಗ್ರಿಡ್ ಸಂಪರ್ಕಿಸುವ ಅರ್ಜಿದಾರರಿಗೆ ಸೂಕ್ತ ಅಂತರ್ ಸಂಪರ್ಕ ಅನುಮೋದನೆಯ ಹಂಚಿಕೆಗೆ ಸಂಬಂಧಿಸಿದಂತೆ ಪರಸ್ಪರ ಸಂಪರ್ಕದ ಒಪ್ಪಂದ ಸಹಿ ಮಾಡುವಿಕೆಯ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು

ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ನಿಗಧಿತ ಅವಧಿಯಲ್ಲಿ ಸ್ವ ವೆಚ್ಚ ಕಾಮಗಾರಿಗಳು/ ಠೇವಣಿವಂತಿಗೆ ಕಾಮಗಾರಿಗಳ ಬಂಡವಾಳೀಕರಣಗೊಳಿಸುವ ಬಗ್ಗೆ, ಸವಕಳಿ, ಗ್ರಾಹಕರ ಕೊಡುಗೆ ಕಾರ್ಯ ಮತ್ತು ನಿರ್ವಹಣೆ ವೆಚ್ಚ ಮತ್ತು ಆದಾಯ ಗುರುತಿಸುವಿಕೆಯಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(xiv) ಕಂಪನಿಯು ಮೇಲ್ವಿಚಾರಣ ಶುಲ್ಕವನ್ನು ಲೆಕ್ಕೀಕರಿಸುವ ವಿಷಯದಲ್ಲಿ ಕಂಪನಿಯು 'ಶೇಕಡವಾರು ಕಾಮಗಾರಿ ಪೂರ್ಣಗೊಂಡ ವಿಧಾನದನ್ವಯ' ಕ್ರಮ ವಹಿಸುವ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಮುಂಚಿತವಾಗಿಯೇ ಆದಾಯವೆಂದು ಗುರುತಿಸಲಾಗುತ್ತಿದೆ ಇದರಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(xv) ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ (IPP) ಕಾರ್ಯ ಮತ್ತು ಪಾಲನ ವೆಚ್ಚಗಳನ್ನು ನಿಗಧಿತ ಅವಧಿಯಲ್ಲಿ ಬೇಡಿಕೆ ಅಕರಣೆ ಮಾಡಿ ವಸೂಲಾತಿ ಮಾಡಿ, ಕಾರ್ಯ ಮತ್ತು ಪಾಲನ ವೆಚ್ಚಗಳ ನಿಖರತೆ ಹಾಗೂ ಪರಿಪೂರ್ಣತೆಗಳ ಬಗ್ಗೆ ಪರೀಶೀಲನೆ ಮಾಡುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಕಂಪನಿಯ ಲಾಭಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(xvi) ಕಂಪನಿಯು ಸ್ವ ವೆಚ್ಚ ಕಾಮಗಾರಿಗಳಲ್ಲಿ ಗ್ರಾಹಕರಿಂದ ಪಡೆದ ಕೊಡುಗೆಯನ್ನು ಠೇವಣಿವಂತಿಗೆ ಕಾಮಗಾರಿಗಳಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ (IPP) ಭೂಮಿ ಒದಗಿಸುವಲ್ಲಿನ ಹಿಂದಿರುಗಿಸದ ಒಂದು ಬಾರಿ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ, ಪೂರ್ಣಗೊಂಡ ಸ್ವ ವೆಚ್ಚ/ ಠೇವಣಿವಂತಿಗೆ ಕಾಮಗಾರಿಗಳ ಮೌಲೀಕರಣದ ಬಗ್ಗೆ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, ಖಏಆ–ಂಖ 18 ರ ಕಂದಾಯ ಅಪೆಡಿಂಕ್ಸ್– ಸಿ ರಲ್ಲಿ ಸೂಚಿಸಿರುವ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಉಪಕರಣ, ಅದರ ಸವಕಳಿಗಳ, ಆದಾಯ ಗುರುತಿಸುವಿಕೆ, ಗ್ರಾಹಕರ ಸ್ವೀಕೃತಿಗಳು/ ಪಾವತಿಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

(xvii) ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರ (IPP) ಸ್ವ ವೆಚ್ಚ ಕಾಮಗಾರಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅದರ ಮೌಲ್ಯವನ್ನು ವಸೂಲಾತಿ ಮಾಡುವ ವಿಷಯದಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಉಪಕರಣ, ಅದರ ಸವಕಳಿಗಳ, ಕಾರ್ಯ ಮತ್ತು ನಿರ್ವಹಣಾ ವೆಚ್ಚ, ಮೇಲ್ವಿಚಾರಣಾ ಶುಲ್ಕಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಕಾಮಾಗಾರಿ ಬಿಲ್ಲುಗಳ ಪ್ರಕ್ರಿಯೆ ಕುರಿತು:

(xviii) ಕಂಪನಿಯು ಗುತ್ತಿಗೆದಾರರ ಬಿಲ್ಲುಗಳ ಪ್ರಕ್ರಿಯೆಯಲ್ಲಿ ಈ ಕೆಳಗೆ ಸೂಚಿಸಿರುವ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸಲಾಗಿರುವುದಿಲ್ಲ.

ಅ. ಕಾಮಾಗಾರಿಗಳ ಅಳತೆಗೆ ಸಂಬಂಧವಾಗಿ, ಕವಿಪ್ರನಿನಿಯ ಅಳತೆ ನಿಯಮ ಪುಸ್ತಕದ ಕಲಮು–5ರ ಪ್ರಕಾರ, ಎಲ್ಲಾ ಅಳತೆಗಳನ್ನು ಕೆಲಸ ಮಾಡುವ ಸ್ಥಳದಲ್ಲೇ, ಆ ಕೆಲಸವು ಪ್ರಗತಿಯಲ್ಲಿರುವಾಗಲೇ ದಾಖಲಿಸತಕ್ಕದ್ದು. ಆದರೆ, ಅಭ್ಯಾಸ ಕ್ರಮದ ಪ್ರಕಾರ, ಚಾಲ್ತಿ ಬಿಲ್ಲುಗಳನ್ನು ಸಿದ್ದಪಡಿಸಿ/ ಸ್ವೀಕರಿಸಿದ ನಂತರವಷ್ಟೇ ಅಳತೆ ಪುಸ್ತಕದಲ್ಲಿ ದಾಖಲಿಸಿ ಪರಿಪೂರ್ಣಗೊಳಿಸಲಾಗುತ್ತಿದೆ.

ಆ. ಲೆಕ್ಕ ಪತ್ರಗಳ ವರದಿಯ ದಿನಾಂಕದಂದು ಪೂರ್ಣಗೊಂಡ ಬಂಡವಾಳ ಕಾಮಗಾರಿಗಳು/ನವೀಕರಿಸಲಾದ ಮತ್ತು ಆಧುನಿಕರೀಸಲಾದ ಕಾಮಗಾರಿಗಳು/ ದುರಸ್ತಿ ಮತ್ತು ನಿರ್ವಹಣ ಕಾಮಗಾರಿಗಳು (ಪ್ರಮಾಣ ವ್ಯತ್ಯಾಸದ ಬಿಲ್ಲುಗಳನ್ನು ಒಳಗೊಂಡಂತೆ) ಪೂರ್ಣಗೊಂಡ ಬಗ್ಗೆ ಲೆಕ್ಕಗಳಲ್ಲಿ ಸೂಕ್ತವಾದ ಅವಕಾಶ ಕಲ್ಪಿಸಲಾಗಿರುವುದಿಲ್ಲ.

ಇ. ದರ ವ್ಯತ್ಯಾಸದ ಬಿಲ್ಲುಗಳು ಮತ್ತು ಪರಿಮಾಣ ವ್ಯತ್ಯಾಸದ ಬಿಲ್ಲುಗಳನ್ನು ನಿಗಧಿತ ಸಮಯದಲ್ಲಿ ಪ್ರಕ್ರಿಯೆಗೊಳಿಸದಿರುವ ಬಗ್ಗೆ.

ಈ. ಕಾಮಗಾರಿಗಳ ಆರ್.ಎ.ಬಿಲ್ಲುಗಳನ್ನು ಆಂತರಿಕ ಪರಿಶೋಧರು ಪರಿಶೀಲಿಸುತ್ತಿಲ್ಲ, ಕೇವಲ ಅಂತಿಮ ಬಿಲ್ಲುಗಳನ್ನು ಪರಿಶೀಲಿಸಲಾಗುತ್ತಿದೆ.

ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಹೊಣೆಗಾರಿಕೆಗಳು ಮತ್ತು ಅವಕಾಶಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು, ಸ್ಥಿರಾಸ್ತಿಗಳು, ನಿರ್ಮಾಣ ಸಮದಲ್ಲಿ ಖರ್ಚಿನ ಹಂಚಿಕೆ (EDC) ಸಾಲಗಳ ವೆಚ್ಚ, ಸವಕಳಿ ಮತ್ತು ಆಸ್ತಿ ನಿರ್ವಾಹಣೆ ವೆಚ್ಚಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಆಂತರಿಕ ಪರಿಶೋಧನೆ ವ್ಯವಸ್ಥೆ

(xix) ಸೂಕ್ತವಾದ ಮತ್ತು ಗುಣಮಟ್ಟದ ಮಾನವಶಕ್ತಿಯ, ಲಭ್ಯತೆ ವ್ಯವಹಾರದ ವ್ಯಾಪ್ತಿಗೆ ಸಂಬಂಧಿಸಿದಂತೆ ಆಂತರಿಕ ಪರಿಶೋಧನೆ ಇಲಾಖೆಯನ್ನು ಬಲಪಡಿಸಬೇಕಾಗಿದೆ. ಆಂತರಿಕ ಲೆಕ್ಕ ಪರಿಶೋಧಕರು, ಆರ್.ಎ. ಬಿಲ್ಲುಗಳನ್ನು ಪರಿಶೀಲಿಸುವುದಿಲ್ಲ. ಆದರೆ ಅಂತಿಮ ಬಿಲ್ಲುಗಳನ್ನು ಮಾತ್ರ ಪರಿಶೀಲಿಸುತ್ತಾರೆ. ಮುಂದುವರೆದು, ಪ್ರಸ್ತುತ ಅತ್ಯಂತ ಪ್ರಮುಖ ಕ್ಷೇತ್ರಗಳಾದ ಆಸ್ತಿಯ ಬಂಡವಾಳೀಕರಣ, ಆದಾಯ ಮತ್ತು ಖರ್ಚಿನ ಗುರುತಿಸುವಿಕೆಗೆ ಸಂಬಂಧಿಸಿದಂತೆ ಇದರ ಕಾರ್ಯ ವ್ಯಾಪ್ತಿಯು, ಆಂತರಿಕ ಪರಿಶೋಧನೆಗೆ ಒಳಪಟ್ಟಿರುವುದಿಲ್ಲ. ಆಂತರಿಕ ಪರಿಶೋಧನೆ ಸಿಬ್ಬಂದಿಗಳಿಗೆ ನಿರಂತರವಾಗಿ ಸೂಕ್ತವಾದ ಕೌಶಲ್ಯಗಳು ಹಾಗೂ ಇತ್ತಿಚಿನ ತಂತ್ರಜ್ಞಾನಗಳೊಂದಿಗೆ ತರಬೇತಿಗೊಳಿಸುವಂತೆ ಯೋಜನೆಯನ್ನು ಸಿದ್ದಪಡಿಸಿಕೊಳ್ಳಬೇಕಾಗಿರುತ್ತದೆ.

(xx) ವಿದ್ಯುತ್ ಸರಬರಾಜು ಕಂಪನಿ ಮತ್ತು ಕೆಇಆರ್‌ಸಿ (ಪ್ರಸರಣ ದರಗಳ ನಡುವೆ ನಿರ್ಧರಿಸುವ ನಿಬಂಧನೆಗಳು ಮತ್ತು ಷರತ್ತುಗಳು) ನಿಬಂಧನೆ 2006ರನ್ವಯ ಇರುವ ಪ್ರಸರಣ ಒಪ್ಪಂದದ ಅನ್ವಯ ವಿಳಂಬವಾಗಿ ಪಾವತಿಸಲ್ಪಟ್ಟ (surcharge)/ರಿಯಾಯಿತಿಗಳನ್ನು ಸಂಗ್ರಹಿಸಲು ಅಥವಾ ಪಾವತಿಸಲು ಕಂಪನಿಯಲ್ಲಿ ಸೂಕ್ತವಾದ ಕಾರ್ಯ ನೀತಿಗಳು, ಕಾರ್ಯ ವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ.

(xxi) ಕಂಪನಿಯಲ್ಲಿ ಶಾಸನಬದ್ಧ ಬಾಕಿಯನ್ನು ಸಕಾಲಿಕ ಸಮಯದಲ್ಲಿ ಲೆಕ್ಕೀಕರಿಸಿ ಪಾವತಿಯ ವಿಷಯದಲ್ಲಿ ಪರಿಣಾಮಕಾರಿಯಾದ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಈ ಸಂಭಾವ್ಯವಾಗಿ ಅನ್ವಯವಾಗುವ ಬಡ್ಡಿ ಇತರೆ ಶುಲ್ಕದೊಂದಿಗೆ ಶಾಸನ ಬದ್ಧ ಬಾಕಿಗಳ ವಿಳಂಬಿತ ಪಾವತಿಗೆ ಕಾರಣವಾಗುತ್ತದೆ.

(xxii) ಕಂಪನಿಯು (ಓ & ಎಂ) ಶುಲ್ಕಗಳು, ಪ್ರಸರಣ ಶುಲ್ಕಗಳು, ಮೇಲ್ವಿಚಾರಣೆ ಶುಲ್ಕಗಳು, ಪ್ರೋತ್ಸಾಹಕ ಧನಗಳು, ದಂಡ ವಸೂಲಾತಿ ಮುಂತಾದ ಇತರೆ ಆದಾಯಗಳನ್ನು ಗುರುತಿಸಿ ಲೆಕ್ಕಗಳಲ್ಲಿ ಅಕರಣೆ ಮಾಡಿ ಸಂಚಿತ ಆಧಾರದ ಮೇಲೆ ಲೆಕ್ಕೀಕರಿಸುವ ವಿಷಯದಲ್ಲಿ ಸೂಕ್ತ ಆಂತರಿಕ ನಿಯಂತ್ರಣವನ್ನು ಹೊಂದಿಲ್ಲ.

(xxiii) ಕಂಪನಿಯಲ್ಲಿ IND AS ಅನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿರುವ ಬಗ್ಗೆ ಕಂಡುಕೊಳ್ಳಲು ಪರಿಣಾಮಕಾರಿಯಾದ ಆಂತರಿಕ ನಿಯಂತ್ರಣ ವಿಧಾನವನ್ನು ಹೊಂದಿಲ್ಲ.

ಇತರೆ

(xxiv) ಕಂಪನಿಯು ಇ ಎಮ್ ಡಿ ಮತ್ತು ಇತರೆ ಠೇವಣಿಗಳ ಕುರಿತು ದೃಢೀಕರಣ ಮತ್ತು ಸಮನ್ವಯದ ಬಗ್ಗೆ ಸೂಕ್ತವಾದ ಆಂತರಿಕ ನಿಯಂತ್ರಣ ಹೊಂದಿಲ್ಲ. ಇದರಿಂದ ನಿಖರವಾಗಿ ಆರ್ಥಿಕ ಪಟ್ಟಿಯಲ್ಲಿ ಪ್ರಸ್ತುತ ಹೊಣೆಗಾರಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.

(xxv) ಕಂಪನಿಯು, ಮೈಕ್ರೋ, ಸಣ್ಣ ಮತ್ತು ಮಧ್ಯಮ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಆಕ್ಟ್ 2006ರ ಅಡಿ ಗುತ್ತಿಗೆದಾರರನ್ನು ಗುರುತಿಸಿ ಆರ್ಥಿಕ ಪಟ್ಟಿಯಲ್ಲಿ ಮಾಹಿತಿಯನ್ನು ಬಹಿರಂಗಪಡಿಸಲು ಸೂಕ್ತವಾದ ಯಾವುದೇ ಕಾರ್ಯ ನೀತಿ ಮತ್ತು ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಗುತ್ತಿಗೆದಾರರ ಮಾಹಿತಿಯು ಬಹಿರಂಗಗೊಳ್ಳದೆ ತಪ್ಪು ಉಂಟಾಗುವ ಸಾಧ್ಯತೆ ಇದೆ.

(xxvi) ಕಂಪನಿಯು ಪ್ರಚಲಿತ/ ಅಪ್ರಚಲಿತ ಆಸ್ತಿ/ಹೊಣೆಗಾರಿಕೆಗಳನ್ನು ಗುರುತಿಸಲು ಯಾವುದೇ ಕಾರ್ಯನೀತಿ, ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ಹೊಣೆಗಾರಿಕೆಗಳ ಪ್ರಸ್ತುತ ತಪ್ಪಾಗಿರುವ ಸಾಧ್ಯತೆ ಇರುತ್ತದೆ.

(xxvii) ಕಂಪನಿಯು ಹಿಂದಿನ ಅವಧಿಯ ವೆಚ್ಚಗಳು/ ಜಮೆಗಳು ಗುರುತಿಸುವಿಕೆ ಮತ್ತು ವರದಿ ಮಾಡುವ ಬಗ್ಗೆ ಸೂಕ್ತವಾದ ಕಾರ್ಯನೀತಿ ಮತ್ತು ಕಾರ್ಯವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂಪನಿಯ ಪ್ರಸ್ತುತ ವರ್ಷದ ಲಾಭ ಮತ್ತು ನಷ್ಟಗಳ ವರದಿ ತಪ್ಪಾಗಿರುವ ಸಾಧ್ಯತೆ ಇರುತ್ತದೆ.

(xxviii) ಕಂಪನಿಯು, ಸಿಇಆರ್‌ಸಿ/ಕೆಇಆರ್‌ಸಿಯಿಂದ ನಿಯಮಿತವಾಗಿ ಹೊರಡಿಸುವ ಹೊಸ ನಿಯಮಾವಳಿಗಳು/ ಅಧಿಸೂಚನೆ/ಆದೇಶ/ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಲು ಸೂಕ್ತವಾದ ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂದಾಯ ಮತ್ತು ಪ್ರಸ್ತುತ ಆಸ್ತಿಗಳ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.

(xxix) ಕಂಪನಿಯು, ಗುತ್ತಿಗೆದಾರರಿಂದ ಬಂದಿರುವ ವಿಳಂಬ ಮನ್ನಾ ಅರ್ಜಿಗಳನ್ನು ಸೂಕ್ತವಾದ ದಾಖಲಾತಿಗಳೊಂದಿಗೆ ನಿರ್ವಹಿಸಲು ಯಾವುದೇ ಸೂಕ್ತವಾದ ಕಾರ್ಯವಿಧಾನಗಳಾಗಲಿ, ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ದಂಡ ಮುರಿದುಕೊಳ್ಳುವಿಕೆ ಮತ್ತು ಕಂದಾಯ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.

(xxx) ಕಂಪನಿಯು IND AS ನಿಯಮಗಳು 2015ರ ಅಡಿಯಲ್ಲಿ ನೀಡಿರುವ IND AS 19 ನೌಕರರ ಲಾಭಗಳ ಅನುಸಾರವಾಗಿ ನೌಕರರ ಸವಲತ್ತುಗಳಿಗೆ ಸಂಬಂಧಿಸಿದಂತೆ ಸಂಭವನೀಯ ಹೊಣೆಗಾರಿಕೆ ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ.

(xxxi) ಕಂಪನಿಯು, ಇತರರಿಂದ (Form 26 AS) ಟಿಡಿಎಸ್ ಮುರಿತ ಮಾಡಿರುವ ಲೆಕ್ಕ ಮತ್ತು ಸಮನ್ವಯಗಳ ಬಗ್ಗೆ ಯಾವುದೇ ಕಾರ್ಯ ವಿಧಾನ ಮತ್ತು ಆಂತರಿಕ ನಿಯಂತ್ರಣ ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಮುಂಚಿತವಾಗಿ ತೆರಿಗೆ ಪಾವತಿಸಿರುವ ಬಗ್ಗೆ, ಆದಾಯ, ಗ್ರಾಹಕರಿಂದ ಪಡೆದ ಮುಂಗಡ, ಮತ್ತು ವ್ಯವಾಹಾರ ಸ್ವೀಕೃತಿಗಳು ತಪ್ಪಾಗುವ ಸಾಧ್ಯತೆ ಇದೆ.

(xxxii) ದಾಸ್ತಾನು ಮೌಲ್ಯದ ಸ್ಥಿರತೆಯ ಮೇಲೆ ಪರಿಣಾಮಕಾರಿಯಾದ ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳ ಕೊರತೆಯಿಂದ ದಾಸ್ತಾನು ಮೌಲ್ಯಮಾಪನದಲ್ಲಿ ವರದಿ ದಿನಾಂಕದ ತನಕ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.

(xxxiii) ಕಂಪನಿಯು ಸಾಮಾಗ್ರಿಗಳ ಬಿಡಿಭಾಗಗಳನ್ನು ಖರೀದಿಸುವ ಸಮಯದಲ್ಲಿ ಬಂಡವಾಳೀಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸೂಕ್ತವಾದ ಕಾರ್ಯವಿಧಾನಗಳಾಗಲಿ, ಆಂತರಿಕ ನಿಯಂತ್ರಣಗಳನ್ನಾಗಲಿ ಹೊಂದಿಲ್ಲ. ಸದರಿ ಮಾಹಿತಿಯ ಅನುಪಸ್ಥಿತಿಯಲ್ಲಿ ಲೆಕ್ಕಗಳ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ. ಇದರಿಂದ ಸಾಮಾಗ್ರಿ ವಿವರಣಾ ಪಟ್ಟಿಯಲ್ಲಿ ಹೆಚ್ಚು ವಿವರಣೆ ಮತ್ತು ಕ್ಯಾಪಿಟಲ್ ವರ್ಕ್ಸ್ ಇನ್ ಪ್ರೋಗ್ರೆಸ್‌ಗಳ ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ.

(xxxiv) ಸಂಬಂಧಿಸಿದ ಗ್ರಾಹಕರು/ಗುತ್ತಿಗೆದಾರರು/ ಸರಬರಾಜುದಾರರ ವರದಿಯ ದಿನಾಂಕದಿಂದ ಬಾಕಿ ಮೊತ್ತವನ್ನು ಸಮನ್ವಯಗೊಳಿಸುವುದಕ್ಕೆ ಕಂಪನಿಯು ಸೂಕ್ತವಾದ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣಾ ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ಹೊಣೆಗಾರಿಕೆಯಲ್ಲಿ ಹೆಚ್ಚು/ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ.

(xxxv) ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಕವಿಪ್ರನಿನಿಯ ವಸತಿ ಗೃಹದ ನವೀಕರಣ ಹಾಗೂ ನಿರ್ವಹಣೆ ವೆಚ್ಚವನ್ನು ಹಂಚಿಕೊಳ್ಳದೆ ಹಾಗೂ ಕಂಪನಿಯ ಲೆಕ್ಕ ಪತ್ರಗಳಲ್ಲಿ ಬೇಡಿಕೆ ಮತ್ತು ವಸೂಲಾತಿಗಳನ್ನು ಮಾಡದೇ ಇರುವುದು ಕಂಪನಿಯ ಮೇಲೆ ಪರಿಣಾಮಕಾರಿಯಾದ ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳ ಕೊರತೆಯಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿರ್ವಹಣೆ ವೆಚ್ಚದಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.

(xxxvi) ಕಂಪನಿಯು ವರದಿಯ ದಿನಾಂಕದಂದು ಅನಿಶ್ಚಿತ ಹೊಣೆಗಾರಿಕೆಗಳನ್ನು ಕಲ್ಪಿಸಿ ಬಹಿರಂಗಪಡಿಸುವಿಕೆಯ ಕುರಿತು ಸೂಕ್ತವಾದ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣಾ ಹೊಂದಿರುವುದಿಲ್ಲ.

(xxxvii)ಗಣಕೀಕರಣದ ಅನುಪಸ್ಥಿತಿಯು ಕಂಪನಿಯ ಆರ್ಥಿಕ ಚಟುವಟಿಕೆಗಳನ್ನು ಸಮರ್ಥವಾಗಿ ನಿಯಂತ್ರಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಹಾಗೂ ಸಕಾಲದಲ್ಲಿ ಆರ್ಥಿಕ ವರದಿಗಳನ್ನು ನಿಖರವಾಗಿ ಹಾಗೂ ನಂಬಿಕೆಗೆ ಅರ್ಹವಾದ ರೀತಿಯಲ್ಲಿ ಸಿದ್ದಪಡಿಸುವಲ್ಲಿ ಪರಿಣಾಮ ಬೀರಬಹುದಾಗಿದೆ.

ಆರ್ಥಿಕ ನಿರೂಪಣಾ ಪಟ್ಟಿಗಳ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದಲ್ಲಿ "ಭೌತಿಕ ಹೀನತೆಯು" ಒಂದು ಕೊರತೆ ಅಥವಾ ಕೊರತೆಗಳ ಸಂಯೋಗವಾಗಿದ್ದು, ಇದರಿಂದ, ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಆರ್ಥಿಕ ನಿರೂಪಣಾ ಪಟ್ಟಿಗಳ ಭೌತಿಕವಾಗಿ ನೈಜವಲ್ಲದ ನಿರೂಪಣೆಗೆ ಸಹಜ ಅವಕಾಶವಾಗಬಹುದಾಗಿದ್ದು, ಇದನ್ನು ಕಾಲಾನುಕ್ರಮವಾಗಿ ತಡೆಯಲಾಗುವುದಿಲ್ಲ ಅಥವಾ ಕಂಡುಹಿಡಿಯಲಾಗುವುದಿಲ್ಲ.

ನಮ್ಮ ಅಭಿಪ್ರಾಯದ ಪ್ರಕಾರ, ನಿಯಂತ್ರಣ ಅಂಶಗಳ ಉದ್ದೇಶಗಳ ಸಾಧನೆಯ ಮೇಲೆ ಬೀರಬಹುದಾದ ಮೇಲೆ ಸೂಚಿಸಿರುವ ಭೌತಿಕ ಕೊರತೆಯ ಪರಿಣಾಮಗಳನ್ನು ಹೊರತುಪಡಿಸಿದಂತೆ, ಕಂಪನಿಯು ಎಲ್ಲಾ ಭೌತಿಕ ವಿಷಯಗಳಲ್ಲಿ, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗೆ ಸಂಬಂಧವಾಗಿ ಅಗತ್ಯ ಪ್ರಮಾಣದ ಆಂತರಿಕ ಆರ್ಥಿಕ ನಿಯಂತ್ರಣವನ್ನು ನಿರ್ವಹಿಸುತ್ತಿದ್ದು, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗಳ ಮೇಲಿನ ಅಂತಹ ಆಂತರಿಕ ನಿಯಂತ್ರಣಗಳು 2018 ರ ಮಾರ್ಚ್ 31ರಂದಿಗೆ ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ "ಆರ್ಥಿಕ ನಿರೂಪಣಾ ಪಟ್ಟಿ"ಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆ ಮೇಲಿನ ಮಾರ್ಗದರ್ಶಕ ಟಿಪ್ಪಣಿಯಲ್ಲಿ ಸೂಚಿಸಿರುವ ಆಂತರಿಕ ನಿಯಂತ್ರಣಗಳ ಅಗತ್ಯ ಅಂಶಗಳನ್ನು ಪರಿಗಣಿಸಿ, ಕಂಪನಿಯು ಅಳವಡಿಸಿಕೊಂಡಿರುವ ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಅಂಶಗಳನ್ನು ಆಧರಿಸಿ ಪರಿಣಾಮಕಾರಿಯಾಗಿ ನಿರ್ವಹಿತಗೊಳ್ಳುತ್ತಿವೆ.

2018 ರ ಮಾರ್ಚ್ 31ರಂದಿಗೆ, ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿಗಳ ನಮ್ಮ ಪರಿಶೋಧನೆಯಲ್ಲಿ ಅನ್ವಯಿಸಿರುವ ಸ್ವರೂಪ, ಕಾಲಬದ್ಧತೆ ಹಾಗೂ ಪರಿಶೋಧನಾ ಪರೀಕ್ಷೆಯನ್ನು ಗೊತ್ತುಪಡಿಸಿಕೊಳ್ಳುವುದಕ್ಕೆ ಮೇಲೆ ವರದಿ ಮಾಡಿ ಗುರುತಿಸಲ್ಪಟ್ಟಿರುವ ಭೌತಿಕ ಕೊರತೆಗಳನ್ನು ನಾವು ಪರಿಗಣಿಸಿದ್ದು, ಇಂತಹ ಭೌತಿಕ ಕೊರತೆಗಳು ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲಿನ ನಮ್ಮ ಅಭಿಪ್ರಾಯಗಳಿಗೆ ಪರಿಣಾಮ ಬೀರಿರುವೆಡೆಯಲ್ಲೆಲ್ಲಾ, ನಾವು ನಮ್ಮ ಅಂಗೀಕಾರ್ಹ ಅಭಿಪ್ರಾಯವನ್ನು ನೀಡಿದ್ದೇವೆ.

ಬಿ.ಪಿ.ರಾವ್ ಮತ್ತು ಕಂ
ಚಾರ್ಟರ್ಡ್ ಅಕೌಂಟೆಂಟ್
ಸಂಸ್ಥೆ ನೋ.ಸಂ:003116S

ಸಹಿ/–
ಬಿ.ಪ್ರಸನ್ನ ಆಚಾರ್
ಪಾಲುದಾರ
ಸದಸ್ಯತ್ವ ಸಂಖ್ಯೆ:202100

ಸ್ಥಳ : ಬೆಂಗಳೂರು
ದಿನಾಂಕ : 16.08.2018

ಅನುಬಂಧ –"ಸಿ": ನಮ್ಮ ಸಮ ದಿನಾಂಕದ ವರದಿಯ ಪ್ರಕರಣದ ಕಂಡಿಕೆ 2(i) ರಲ್ಲಿ ಉಲ್ಲೇಖಿಸಿರುವಂತೆ ಇತರ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳು" ವಿಷಯಗಳ ಮೇಲಿನ ವರದಿಯ ಕಂಡಿಕೆ 2(i) ಕ್ಕೆ ಉಲ್ಲೇಖಿಸಿರುವಂತೆ

(ಸಿ&ಎಜಿ ಅವರ ವರದಿ ಮೇಲೆ/ನಿರ್ದೇಶನಗಳಿಗೆ ಉತ್ತರಗಳು/ಹೆಚ್ಚುವರಿ ನಿರ್ದೇಶನಗಳಿಗೆ ಇಟಾಲಿಕ್ಸ್ ಅಕ್ಷರಗಳಲ್ಲಿ ಉತ್ತರ ನೀಡಲಾಗಿದೆ)

ಎ. ನಿರ್ದೇಶನಗಳು:

(ನಮ್ಮ ಸಮ ದಿನಾಂಕದ ವರದಿ 31ನೇ ಮಾರ್ಚ್ 2018, ಕಂಪನಿಯ ಕಾಯ್ದೆ 2013 ಸೆಕ್ಷನ್ 143 (5) ರಡಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಸದಸ್ಯರಿಗೆ ನೀಡಿದ ನಿರ್ದೇಶನಗಳು)

ಕ್ರ.ಸಂ.	ನಿರ್ದೇಶನಗಳು	ಉತ್ತರಗಳು
1.	ಕಂಪನಿಯಲ್ಲಿ ಗುತ್ತಿಗೆ ಆಧಾರದ ಮೇಲಿರುವ ಭೂಮಿ ಮತ್ತು ಮಾಲಿಕತ್ವ ಆಧಾರಿತ ಭೂಮಿಗಳ ಬಗ್ಗೆ ಸ್ಪಷ್ಟ ಶೀರ್ಷಿಕೆ ಪತ್ರ/ ಗುತ್ತಿಗೆ ಪತ್ರ ಇದೆಯೇ? ಇಲ್ಲವಾದ್ದಲ್ಲಿ, ದಯವಿಟ್ಟು ಲಭ್ಯವಿಲ್ಲದ ಗುತ್ತಿಗೆ ಆಧಾರದ ಮೇಲಿರುವ ಭೂಮಿ ಮತ್ತು ಮಾಲಿಕತ್ವ ಆಧಾರಿತ ಭೂಮಿಗಳ ಭೂ ಪ್ರದೇಶವನ್ನು ಹಾಗೂ ಮಾಲಿಕತ್ವ ಆಧಾರಿತ/ ಗುತ್ತಿಗೆ ಆಧಾರದ ಶೀರ್ಷಿಕೆ ಪತ್ರವನ್ನು ಒದಗಿಸುವುದು.	ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯು ಗುತ್ತಿಗೆ ಆಧಾರ/ ಮಾಲಿಕತ್ವ ಆಧಾರಿತ ಭೂಮಿಯನ್ನು ಗುರುತಿಸಿ ವರ್ಗೀಕರಿಸಿ ಸಮನ್ವಯಗೊಳಿಸುವ ಕ್ರಮವನ್ನು ತೆಗೆದುಕೊಂಡಿದೆ: ಆಡಳಿತ ಮಂಡಳಿಯು ಒದಗಿಸಿರುವ ಮಾಹಿತಿಯ ಪ್ರಕಾರ, 1. ಕಂಪನಿಯು 468 ಆಸ್ತಿಗಳಿಗೆ ಸಂಬಂಧಿಸಿದಂತೆ ಮಾಲೀಕತ್ವ ಪತ್ರಗಳನ್ನು ಹೊಂದಿರುವುದಿಲ್ಲ. 2. ಕಂಪನಿಯು 78 ಪ್ರಕರಣಗಳಲ್ಲಿ 265.08 ಎಕರೆ ಮತ್ತು 832.09 ಗುಂಟೆಗಳಿಗೆ ಸಂಬಂಧಿಸಿದಂತೆ ವಿವಿಧ ಗುತ್ತಿಗೆದಾರರೊಂದಿಗೆ ಒಪ್ಪಂದ ಪ್ರಕ್ರಿಯನ್ನು ಮಾಡಿಕೊಳ್ಳುವುದು ಬಾಕಿ ಇದೆ. 3. ಕಂಪನಿಯು 11 ಪ್ರಕರಣಗಳಲ್ಲಿ 3 ಎಕರೆ ಮತ್ತು 155.04 ಗುಂಟೆಗಳಷ್ಟು ಭೂಮಿಯನ್ನು ಗುತ್ತಿಗೆ ಆಧಾರವಾಗಿ ನೀಡಿದ್ದು ಗೇಣಿದಾರರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಪ್ರಕ್ರಯೇ ಬಾಕಿ ಇದೆ. 4. ಕಂಪನಿಯು ಕೆ.ಐ.ಎ.ಡಿ.ಬಿ. ಮಾರಾಟ ಹಾಗೂ ಗುತ್ತಿಗೆ ಕರಾರಿನ ಮೂಲಕ ಸ್ವಾಧೀನ ಪಡೆದುಕೊಂಡ ರೂ. 5158.30 ಲಕ್ಷಗಳ ಮೌಲ್ಯ 263.62 ಎಕರೆ ಭೂಮಿಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಆದೇಶ ಸಂ. ಸಿಐ 15 ಎಸ್‌ಪಿಕ್ಯೂ 2017 ದಿನಾಂಕ 09.03.2017 ರನ್ವಯ ತಿದ್ದುಪಡಿಗೆ ಸಂಬಂಧಿಸಿದಂತೆ ಪ್ರಸ್ತುತ ಗುತ್ತಿಗೆ ಹಾಗೂ ಮಾರಾಟದ 99 ವರ್ಷದ ಅವಧಿಯನ್ನು ಕನಿಷ್ಠ ಎರಡು ವರ್ಷಗಳಿಗೆ ನಿಗಧಿ ಮಾಡಿ ಬದಲಾವಣೆ ಮಾಡುವ ಪ್ರಕ್ರಿಯೆಯಲ್ಲಿದೆ. ಕವಿಪ್ರನಿನಿಯು ಇನ್ನೂ 9.62 ಎಕರೆಗಳಷ್ಟು ಭೂಮಿಯನ್ನು ಕೆಐಎಡಿಬಿ ಯಿಂದ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ.
2	ಬಾಕಿ/ಸಾಲ/ಬಡ್ಡಿ ಇತ್ಯಾದಿಗಳ ತೊಡೆದುಹಾಕುವಿಕೆ ಅಥವಾ ಮನ್ನಾ ಮಾಡಿರುವ ಪ್ರಕರಣಗಳಿವೆಯೇ ಎಂಬುದರ ಬಗ್ಗೆ ವರದಿ ಸಲ್ಲಿಸಿ. ಹೌದಾದರೆ, ಒಳಪಟ್ಟಿರುವ ಮೊಬಲಗು ಹಾಗೂ ಕಾರಣವನ್ನು ತಿಳಿಸಿ.	ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ರೂ.231.92 ಲಕ್ಷಗಳಷ್ಟು ಹವಣಿಕೆಯನ್ನು ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಬರಬೇಕಾದದನ್ನು ಹೊರತುಪಡಿಸಿ ಯಾವುದೇ ಸಾಲ ಮನ್ನಾ/ ಸಾಲಗಳ ವಜಾ/ ಸಾಲಗಳು/ ಬಡ್ಡಿಗಳು ಇತರೆ, ಪ್ರಕರಣಗಳು ಇರುವುದಿಲ್ಲ

೩	ಮೂರನೆಯ ವ್ಯಕ್ತಿಗಳೊಂದಿಗೆ ಇರುವ ಉಗ್ರಾಣ ತಪಶೀಲು ಹಾಗೂ ಸರ್ಕಾರ ಮತ್ತು ಇತರ ಪ್ರಾಧಿಕಾರಿಗಳಂದ ಕೊಡುಗೆ/ ಅನುದಾನ ರೂಪದಲ್ಲಿ ಸ್ವೀಕರಿಸಿರಬಹುದಾದ ಆಸ್ತಿಗಳಿಗೆ ಸೂಕ್ತ ದಾಖಾಲೆಗಳನ್ನು ನಿರ್ವಹಿಸಲಾಗಿದೆಯೇ.	ಆಡಳಿತ ಮಂಡಳಿಯು ಒದಗಿಸಿರುವ ಮಾಹಿತಿ ಮತ್ತು ನಮ್ಮ ಪರಿಶೀಲನೆಯ ಆಧಾರದ ಪ್ರಕಾರ, ಮೂರನೇ ವ್ಯಕ್ತಿಗಳೊಂದಿಗೆ ಇರುವ ಉಗ್ರಾಣ ತಪಶೀಲು/ಆಸ್ತಿಗಳ ಪರಿಶೀಲನೆಗಾಗಿ ದಾಖಲೆ ಪುಸ್ತಕಗಳನ್ನು ನಿರ್ವಹಿಸಲಾಗುತ್ತಿದೆ. ಆರ್ಥಿಕ ವರ್ಷ 2017–18 ರಲ್ಲಿ ಕಂಪನಿಯು ಸರ್ಕಾರದಿಂದ ಹಾಗೂ ಇತರ ವ್ಯಕ್ತಿಗಳಿಂದ ಯಾವುದೇ ಕೊಡುಗೆ/ ಅನುದಾನ ರೂಪದಲ್ಲಿ ಸ್ವೀಕರಿಸಿರುವುದಿಲ್ಲ. ಕಂಪನಿಯ ಆಸ್ತಿಗಳ ಬಗ್ಗೆ ಲೆಕ್ಕ ಘಟಕಗಳಲ್ಲಿ ಆಸ್ತಿ ನಿರ್ವಹಣೆ ಪುಸ್ತಕದಲ್ಲಿ ವಿವರಗಳನ್ನು ನಮೂದಿಸಿ ನಿರ್ವಹಿಸಲಾಗುತ್ತಿದೆ. ಆದರೂ, ನಮ್ಮ ಪರಿಶೀಲನೆಯ ಪ್ರಕಾರ, ದುರಸ್ತಿಗಾಗಿ ಕಳುಹಿಸಿದ ಪರಿವರ್ತಕಗಳ ಮೊತ್ತ ರೂ.2805.04 ಗಳ ಬಗ್ಗೆ ನಿಯತ ಅನುಸರಣೆ ಅಥವಾ ತಪಾಸಣೆ ಇಲ್ಲ, ಅಥವಾ ಸಂಬಂಧಿತ ವ್ಯಕ್ತಿಗಳಿಂದ ಸ್ಥಿರೀಕರಣವೂ ಇಲ್ಲ.

ಕಂಪನಿಯ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು:

(ನಮ್ಮ ಸಮ ದಿನಾಂಕದ ವರದಿ 31ನೇ, ಮಾರ್ಚ್ 2018 ರ ವರದಿಯ ಅನುಬಂಧದಲ್ಲಿ ಸೂಚಿಸಿದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಸದಸ್ಯರಿಗೆ)

ನಿರ್ದೇಶನಗಳು	ಉತ್ತರಗಳು
(ಎ) ಕಂಪನಿಯ ಮಾಲೀಕತ್ವದಲ್ಲಿ ನಿರುಪಯುಕ್ತವಾದ ಜಮೀನಿನ ಅತಿಕ್ರಮಣವನ್ನು ನಿಲ್ಲಿಸಲು ಅಗತ್ಯ ಕ್ರಮವಹಿಸವುದನ್ನು ಪರಿಶೀಲಿಸಬಹುದಾಗಿದೆ. ಕಂಪನಿಯ ಜಮೀನು ಅತಿಕ್ರಮಣವಾಗಿದ್ದಲ್ಲಿ, ನ್ಯಾಯಾಲಯದಲ್ಲಿ ಪ್ರಕರಣ ಇದ್ದರೆ, ಉಪಯೋಗಿಸದೇ ಇದ್ದರೆ ಅಥವಾ ಹೆಚ್ಚುವರಿ ಎಂದು ಘೋಷಿಲ್ಪಟ್ಟರೆ, ವಿವರಗಳನ್ನು ಒದಗಿಸಬಹುದು:	ನಮಗೆ ತಿಳಿಸಿದಂತೆ ಒಟ್ಟು 156 ಎಕರೆ 42 ಗುಂಟೆಗಳನ್ನು ಅತಿಕ್ರಮಿಸಲಾಗಿದೆ ಮತ್ತು ಅತಿಕ್ರಮಣವನ್ನು ತೆರವುಗೊಳಿಸಲು ಅಗತ್ಯ ಪ್ರಯತ್ನ ಮತ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ.
(ಬಿ) ಪ್ರಸರಣೆಗಾಗಿ ಲಭ್ಯವಿರುವ ವಿದ್ಯುತ್ತಿಗೆ ಎದಿರಾಗಿ, ವಿದ್ಯುತ್ ಬಳಕೆಯ ಪದ್ಧತಿಯು ಉತ್ಪಾದನಾ ಕಂಪನಿಗಳೊಂದಿಗೆ ಅನುಗುಣವಾಗಿದೆಯೇ? ಇಲ್ಲದಿದ್ದರೆ, ಯಾವುದೇ ನಷ್ಟದ ಪ್ರಯುಕ್ತ, ವಿದ್ಯುತ್ ಉತ್ಪಾದನಾ ಕಂಪನಿಗಳು ಮಾಡಿರುವ ಕ್ಲೇಮಿನ ಬಗ್ಗೆ ಅಭಿಪ್ರಾಯ ಸಲ್ಲಿಸಬಹುದಾಗಿದೆ.	ನಮಗೆತಿಳಿಸಿದಂತೆಪ್ರಸರಣೆಗಾಗಿಲಭ್ಯವಿರುವವಿದ್ಯುತ್ತಿಗೆಎದಿರಾಗಿ, ವಿದ್ಯುತ್ ಬಳಕೆಯ ಪದ್ಧತಿಯು ಉತ್ಪಾದನಾ ಕಂಪನಿಗಳೊಂದಿಗೆ ಅನುಗುಣವಾಗಿದೆ. ವಿದ್ಯುತ್ ಉತ್ಪಾದನಾ ಕಂಪನಿಗಳು ನಷ್ಟದ ಪ್ರಯುಕ್ತ, ಯಾವುದೇ ಕ್ಲೇಮ್ ಸಲ್ಲಿಸಿರುವುದಿಲ್ಲ.
(ಸಿ) ಪ್ರಸಕ್ತ ವರ್ಷದಲ್ಲಿ, ನಿಗದಿತ ಪ್ರಮಾಣಕ್ಕೆದುರಾಗಿ, ಅಧಿಕ್ಯವಾಗಿರುವ ಪ್ರಸರಣ ನಷ್ಟ ಪ್ರಮಾಣವನ್ನು ಎಷ್ಟರ ಮಟ್ಟಿಗೆ ಭರಿಸಲಾಗಿದೆ, ಹಾಗೂ ಲೆಕ್ಕಪುಸ್ತಕಗಳಲ್ಲಿ ಸೂಕ್ತ ಕ್ರಮದಂತೆ ಲೆಕ್ಕೀಕರಿಸಲಾಗಿದೆಯೇ?	ನಮಗೆ ನೀಡಿದ ಮಾಹಿತಿ ಮತ್ತು ವಿವರಣೆ ಪ್ರಕಾರ 2017–18ನೇ ಸಾಲಿನ ಆರ್ಥಿಕ ವರ್ಷಕ್ಕೆ ಪ್ರಸರಣ ನಷ್ಟ ಶೇ.3.22% ಇದ್ದು ಕೆ.ಇ.ಆರ್.ಸಿ. ಇಂದ ಅನುಮೋದಿಸಲ್ಪಟ್ಟ ಶೇ.3.37% ರ ಮಿತಿಯೊಳಗಿದೆ.
(ಡಿ) ಸಾಲ/ಅನುದಾನ/ಸಹಾಯ ಧನದ ಪರಿಣಾಮಕಾರಿ ಬಳಕೆಯ ಬಗ್ಗೆ ಪರಿಶೀಲಿಸುವುದು. ನಿಧಿ ಬಳಕೆಯಲ್ಲಿ ಮಾರ್ಪಾಡಾಗಿರುವ ಪ್ರಕರಣಗಳ ಪಟ್ಟಿ ಮಾಡುವುದು.	ಕಂಪನಿಯು ನಮಗೆ ಒದಗಿಸಿದ ಮಾಹಿತಿ ಮತ್ತು ನಮ್ಮ ಪರಿಶೀಲನೆ ಪ್ರಕಾರ ಅನುದಾನ/ಸಾಲದ ಬಳಕೆ ಮಾಡಲು ಪರಿಣಾಮಕಾರಿ ವ್ಯವಸ್ಥೆ ಇದೆ. ಕಂಪನಿಯು ಪ್ರಸಕ್ತ ವರ್ಷದಲ್ಲಿ ಯಾವುದೇ ಸಬ್ಸಿಡಿ ಸ್ವೀಕರಿಸಿರುವುದಿಲ್ಲ. ಅವಧಿ ಸಾಲಗಳ ಮೂಲಕ ಮಾಡಲಾದ ಸಾಲಗಳನ್ನು ಸಾಮಾನ್ಯವಾಗಿ ಸಾಲ ಪಡೆದ ಉದ್ದೇಶಕ್ಕಾಗಿಯೇ ಬಳಸಿಕೊಳ್ಳಲಾಗಿದೆ. ಕೆಲವು ಪ್ರಕರಣಗಳಲ್ಲಿ, ಅವಧಿ ಸಾಲಗಳನ್ನು ಯಾವ ಯೋಜನೆಗೋಸ್ಕರ ಸಾಲ ಮಂಜೂರಾಗಿದೆಯೋ ಆ ಉದ್ದೇಶಕ್ಕೆ ಸಂಪೂರ್ಣವಾಗಿ ಬಳಕೆಯಾಗಿರುವುದಿಲ್ಲ.

	ಕಂಪನಿಯು, ಹಿಮಾಚಲ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಗೆ ಅಂತರ ರಾಜ್ಯ ಪ್ರಸರಣ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಸಕ್ತ ವರ್ಷದಲ್ಲಿ ರೂ.2652.30 ಲಕ್ಷ ಹಾಗೂ ಹಿಂದಿನ ವರ್ಷಕ್ಕೆ ರೂ.7681.00 ಲಕ್ಷಗಳನ್ನು ಪಡೆಯಲಾಗಿದೆ. ಮುಂದುವರೆದು, ಸದರಿ ಅನುದಾನದ ಠೇವಣಿಯಿಂದ ಬಂದ ಬಡ್ಡಿ ರೂ.1.63 ಲಕ್ಷಗಳನ್ನು ಸಹ ಅನುದಾನಕ್ಕೆ ಜಮೆ ಮಾಡಲಾಗಿದೆ. ಕಂಪನಿಯು, ಹಿಮಾಚಲ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಗೆ ದಿನಾಂಕ:31.03.2018 ರ ಅಂತ್ಯಕ್ಕೆ ರೂ.10334.04 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು ಸದರಿ ಅನುದಾನದಲ್ಲಿ ರೂ.0.52 ಲಕ್ಷಗಳು ಖರ್ಚಾಗದೆ ಪ್ರತ್ಯೇಕ ಬ್ಯಾಂಕ್‌ನಲ್ಲಿ ಉಳಿದಿದ್ದು ಸದರಿ ಮೊತ್ತವನ್ನು ಮುಂದಿನ ಆರ್ಥಿಕ ವರ್ಷಗಳಲ್ಲಿ ಪರಿಗಣಿಸಲಾಗುವುದು. ಕಂಪನಿಯು ಪ್ರಸಕ್ತ ವರ್ಷದಲ್ಲಿ ಪಿ.ಎಸ್.ಡಿ.ಎಫ್. ಯೋಜನೆ ಅಡಿಯಲ್ಲಿ 400 ಕೆವಿ ಮತ್ತು 220 ಕೆವಿ ಸಬ್ ಸ್ಟೇಷನ್‌ಗಳಲ್ಲಿ ನವೀಕರಣ ಮತ್ತು ರಕ್ಷಣಾ ವ್ಯವಸ್ಥೆಯ ಉನ್ನತೀಕರಣಕ್ಕಾಗಿ ರೂ. 1208.40 ಲಕ್ಷಗಳನ್ನು ಹಾಗೂ ಹಿಂದಿನ ವರ್ಷದಲ್ಲಿ ರೂ.604.20 ಲಕ್ಷಗಳನ್ನು ಸ್ವೀಕರಿಸಲಾಗಿರುತ್ತದೆ. ಸದರಿ ಅನುದಾನದಲ್ಲಿ ದಿನಾಂಕ:31.03.2018 ರ ಅಂತ್ಯಕ್ಕೆ ರೂ.1812.60 ಲಕ್ಷಗಳಷ್ಟು ಖರ್ಚು ಮಾಡಲಾಗಿರುತ್ತದೆ.
(ಇ) ಐ.ಆರ್.ಆರ್. ಹಾಗೂ ಹಿಂಪಾವತಿ ಅವಧಿಯನ್ನೂ ಒಳಗೊಂಡಂತೆ ಪ್ರಮುಖ ಬಂಡವಾಳ ವೆಚ್ಚಗಳು/ ವಿಸ್ತರಣೆಯ ವೆಚ್ಚ ಪ್ರಯೋಜನ ವಿಶ್ಲೇಷಣೆಯನ್ನು ತಪಾಸಣೆಗೊಳಿಸಿ	ವಿದ್ಯುತ್ ಸರಬರಾಜು ಕಂಪನಿಗಳ ಮನವಿಯ ಮೇರೆಗೆ ಸಬ್–ಸ್ಟೇಷನ್‌ನ ಪ್ರಸರಣ ಮೂಲಸೌಕರ್ಯ ಮತ್ತು ಸಂಬಂಧಿಸಿದ ಮಾರ್ಗ ಕಾಮಗಾರಿಗಳನ್ನು ಕಂಪನಿಯು ಸೃಜಿಸಿದೆ ಎಂದು ಆಡಳತಮಂಡಳಿಯು ನಮಗೆ ತಿಳಿಸಿರುತ್ತದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಎಆರ್‌ಆರ್‌ನ್ನು ಆಧರಿಸಿ ಎಲ್ಲ ದರಗಳನ್ನು ನಿಗದಿಪಡಿಸುತ್ತದೆ, ಅದು ಸಂಬಂಧಿಸಿದ ಎಲ್ಲ ಕಾರ್ಯಾಚರಣೆ ವೆಚ್ಚಗಳನ್ನು ಮತ್ತು ಬಂಡವಾಳ ವೆಚ್ಚದ ಕಡೆಗೆ ಸವಕಳಿಯನ್ನು ಒಳಗೊಂಡಿರುತ್ತದೆ. ಆದ್ದರಿಂದ, ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಕೆ.ಇ.ಆರ್.ಸಿ. ಯಿಂದ ನಿಗದಿಪಡಿಸಲಾದ ಸುಂಕದ ಭಾಗವಾಗಿ ಅದರ ಬಂಡವಾಳ ವೆಚ್ಚವನ್ನು ಮುಂಬರುವ ವರ್ಷಗಳಲ್ಲಿ ಪಡೆದುಕೊಳ್ಳುತ್ತದೆ.

ಬಿ.ಪಿ.ರಾವ್ ಮತ್ತು ಕಂ
ಚಾರ್ಟರ್ಡ್ ಅಕೌಂಟೆಂಟ್
ಸಂಸ್ಥೆ ನೋ.ಸಂ:003116S

ಸಹಿ/–
ಬಿ.ಪ್ರಸನ್ನ ಆಚಾರ್
ಪಾಲುದಾರ
ಸದಸ್ಯತ್ವ ಸಂಖ್ಯೆ:202100

ಸ್ಥಳ : ಬೆಂಗಳೂರು
ದಿನಾಂಕ : 16.08.2018

ಎಸ್. ವಿಶ್ವನಾಥನ್
ಕಂಪನಿ ಕಾರ್ಯದರ್ಶಿ

ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್ಸ್, ಫ್ಲಾಟ್ 'ಬಿ'
17 ನೇ ಯ 'ಎ' ಕ್ರಾಸ್, 10 ನೇ 'ಎ' ಮುಖ್ಯ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು–560055.
ಮಿಂಚಂಚೆ: cs_viswanathan@yahoo.com.
ದೂ.ಸಂ:41674875, ಸಂ.ದೂ.ಸಂ:9845220950.

ನಮೂನೆ ಎಂ ಆರ್–3
ಸೆಕ್ರೆಟೇರಿಯಲ್ ಪರಿಶೋಧನಾ ವರದಿ
2018 ರ ಮಾರ್ಚ್, 31ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷಕ್ಕೆ

[ಕಂಪನಿ ಕಾಯ್ದೆ 2013ರ ಪ್ರಕರಣ 204(1)ಹಾಗೂ ಕಂಪನಿ(ನೇಮಕಾತಿ ಮತ್ತು ಸಿಬ್ಬಂದಿಯ ಸಂಭಾವನೆ) ನಿಯಮಗಳು, 2014 ರ ನಿಯಮ 9ರ ಅನುಸಾರವಾಗಿ]

ಗೆ,

ಸದಸ್ಯರು,
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಅನ್ವಯಿತ ಶಾಸನಬದ್ಧ ಅವಕಾಶಗಳ ಪಾಲನೆಯಾಗಿ ಹಾಗೂ **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಸಿ ಐಎನ್:ಯು40109ಕೆಎ1999ಎಸ್‌ಜಿಸಿ025521) ಕಾವೇರಿ ಭವನ ಕೆ.ಜಿ ರೋಡ್ ಬೆಂಗಳೂರು ಕರ್ನಾಟಕ 560009** ರಲ್ಲಿ ನೊಂದಾಯಿತ ಕಛೇರಿಯನ್ನು ಹೊಂದಿದೆ. (ಇನ್ನು ಮುಂದೆ **ಕಂಪನಿ** ಎಂದು ಕರೆಯಲ್ಪಡುತ್ತದೆ) ಉತ್ತಮ ಆಚರಣೆಯ ಅನುಸಾರವಾಗಿ ನಾನು ಸೆಕ್ರೆಟೇರಿಯಲ್ ಪರಿಶೋಧನೆಯನ್ನು ನಡೆಸಿದ್ದೇನೆ. ನಿಗಮದ ವ್ಯವಹರಣೆ/ಶಾಸನಬದ್ಧ ಅನುಸರಣಾ ಪಾಲನೆಗಳ ಮೌಲ್ಯೀಕರಣವನ್ನು ಗೊತ್ತುಪಡಿಸಿಕೊಳ್ಳಲು ಯುಕ್ತ ಕಾರಣಗಳನ್ನು ಲಭ್ಯವಾಗಿಸುವ ರೀತಿಯಲ್ಲಿ ಸೆಕ್ರೆಟೇರಿಯಲ್ ಪರಿಶೋಧನೆಯನ್ನು ನಡೆಸಿ ತದಾನುಸಾರ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ.

ಕಂಪನಿಯು ಷೇರು ಪೇಟೆಯಲ್ಲಿ ನೊಂದಾಯಿಸಲ್ಪಡದ ಕರ್ನಾಟಕ ಸರ್ಕಾರದ ಒಡೆತನದ ಸಾರ್ವಜನಿಕ ಕಂಪನಿಯಾಗಿದೆ. ಕಂಪನಿಯು ವಿದ್ಯುತ್ ಪ್ರಸರಣ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದೆ. ಕಂಪನಿಗಳ ಕಾಯ್ದೆ ಮತ್ತು ಇತರೆ ಅನ್ವಯಿಸುವ ಕಾನೂನುಗಳನ್ನು ಒಳಗೊಂಡಂತೆ ಕಂಪನಿಯ ಹಿತದೃಷ್ಟಿಯಿಂದ ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನಗಳನ್ನು ಪಾಲಿಸುತ್ತಿದೆ. ಕಂಪನಿಯು ಯಾವುದೇ ವಿದೇಶಿ ಹೂಡಿಕೆಗಳನ್ನು ಹೊಂದಿರುವುದಿಲ್ಲ. ಅಧಿಸೂಚನೆ ಸಂಖ್ಯೆ GSR 463 (ಇ) dated: 05.06.2015 and dated: 13.06.2017 ರನ್ವಯ ಸರ್ಕಾರಿ ಕಂಪನಿಗಳಿಗೆ ನೀಡಿರುವ ಕೆಲವು ಅವಕಾಶಗಳನ್ನು ಕಂಪನಿ ಕಾಯ್ದೆ 2013 ಮತ್ತು ನಿಯಮಗಳ ಅನುಸಾರ ವಿನಾಯಿತಿಯನ್ನು ಪಡೆದಿದೆ.

ಕಂಪನಿಯ ಲೆಕ್ಕಪುಸ್ತಕ, ಕಾಗದಪತ್ರಗಳು, ನಡಾವಳಿ ಪುಸ್ತಕ, ನಮೂನೆ, ಮಂಡಿತ ಸಲ್ಲಿಕೆಗಳು ಹಾಗೂ ಕಂಪನಿಯು ನಿರ್ವಹಿಸಿರುವ ಇತರೆ ದಾಖಲೆಗಳು, ಸೆಕ್ರೆಟೇರಿಯಲ್ ಪರಿಶೋಧನೆಯ ಸಮಯದಲ್ಲಿ ಕಂಪನಿ, ಕಂಪನಿಯ ಅಧಿಕಾರಿಗಳು, ಕಾರ್ಯಭಾರಿಗಳು, ಅಧಿಕೃತ ಪ್ರತಿನಿಧಿಗಳು ಒದಗಿಸಿರುವ ಮಾಹಿತಿಗಳ ಬಗ್ಗೆ ನಡೆಸಿದ ನನ್ನ ವರದಿಯನ್ನು ಆಧರಿಸಿ, ನನ್ನ ಅಭಿಪ್ರಾಯದ ಪ್ರಕಾರ, 2018ರ ಮಾರ್ಚ್, 31ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷದ ಪರಿಶೋಧನೆಯ ಸಮಯದಲ್ಲಿ, ಕಂಪನಿಯು ಕೆಳಗೆ ತಿಳಿಸಿರುವ ಶಾಸನಬದ್ಧ ಅವಕಾಶಗಳನ್ನು ಪಾಲಿಸಿದೆ, ಹಾಗೂ ಈ ಮುಂದೆ ಸಲ್ಲಿಸಿರುವ ವರದಿಗೆ ಒಳಪಟ್ಟಂತೆ, ಆ ಮಟ್ಟಿಗೆ ಸೂಕ್ತ ನಿಗಮ ವ್ಯವಹರಣೆ ಹಾಗೂ ಅನುಸರಣಾ ಯಾಂತ್ರಿಕತೆಯ ಕಾರ್ಯಪ್ರಕ್ರಿಯೆಯನ್ನು ಹೊಂದಿದೆ.

ಕೆಳಕಂಡ ಅವಕಾಶಗಳ ಪ್ರಕಾರ, 2018ರ ಮಾರ್ಚ್, 31ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷಕ್ಕೆ ಕಂಪನಿಯು ನಿರ್ವಹಿಸಿರುವ ಲೆಕ್ಕಪುಸ್ತಕ, ಕಾಗದಪತ್ರಗಳು, ನಡಾವಳಿ ಪುಸ್ತಕ, ನಮೂನೆ, ಮಂಡಿತ ಸಲ್ಲಿಕೆಗಳು ಹಾಗೂ ನಿರ್ವಹಿತ ಇತರೆ ದಾಖಲೆಗಳನ್ನು ತಪಾಸಣೆಗೊಳಪಡಿಸಿದ್ದೇವೆ:

I. ಕಂಪನಿ ಕಾಯ್ದೆ, 2013 (ಕಾಯ್ದೆ) ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳು

II. ಒಪ್ಪಂದಗಳ ಕಾಯ್ದೆ

III. ಸೆಕ್ಯುರಿಟೀಸ್ ಒಪ್ಪಂದಗಳು (ನಿಬಂಧನೆಗಳು) ಕಾಯ್ದೆ, 1956 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳು–**ಅನ್ವಯಿಸುವುದಿಲ್ಲ**.

IV. ಠೇವಣಿದಾರ ಕಾಯ್ದೆ, 1966 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಬಂಧನೆಗಳು ಮತ್ತು ಉಪನಿಯಮಗಳು– **ಅನ್ವಯಿಸುವುದಿಲ್ಲ**.

V. ವಿದೇಶಿ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಹಾಗೂ ಬಾಹ್ಯ ವಾಣಿಜ್ಯ ಸಾಲ ಪಡೆಯುವಿಕೆಯ ಮಟ್ಟಿಗೆ ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ, 1999 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳು– **ಅನ್ವಯಿಸುವುದಿಲ್ಲ**.

VI. ವಿದ್ಯುಚ್ಛಕ್ತಿ ಕಾಯ್ದೆ, 2003 ಹಾಗೂ ಅದರಡಿಯಲ್ಲಿ ರೂಪಿಸಿದ ನಿಯಮಗಳು ಹಾಗೂ ನಿರ್ದಿಷ್ಟವಾಗಿ ವಾರ್ಷಿಕ ಪ್ರದರ್ಶನ ವಿಮರ್ಶೆ (APR) ಕವಿನಿ ಆಯೋಗದನ್ವಯ ನಿಯಂತ್ರಣ ವ್ಯವಸ್ಥೆ.

VII. ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸ್ಥಾವರಗಳ ನಿರ್ಮಾಣ ಮತ್ತು ವಿದ್ಯುತ್ ಮಾರ್ಗಗಳ ತಾಂತ್ರಿಕ ಗುಣಮಟ್ಟ) ನಿಯಮಗಳು, 2010.

VIII. ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸರಬರಾಜು ಹಾಗೂ ಸುರಕ್ಷತೆ ಸಂಬಂಧವಾದ ಕ್ರಮಗಳು) ನಿಬಂಧನೆಗಳು, 2010 (2015ರಲ್ಲಿ ತಿದ್ದುಪಡಿ ಮಾಡಿರುವಂತೆ).

IX. ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸ್ಥಾವರಗಳು ಹಾಗೂ ವಿದ್ಯುತ್ ಮಾರ್ಗಗಳ ನಿರ್ಮಾಣ, ಕಾರ್ಯಾಚರಣೆ ಮತ್ತು ನಿರ್ವಹಣೆಗಳ ಸುರಕ್ಷಾ ಅಗತ್ಯತೆಗಳು) ನಿಬಂಧನೆಗಳು, 2011.

X. ಭಾರತೀಯ ವಿದ್ಯುಚ್ಛಕ್ತಿ ಜಾಲ ಸಂಹಿತೆ ನಿಬಂಧನೆಗಳು, 2010.

XI. ವಿದ್ಯುತ್ ಸಂರಕ್ಷಣೆ ಕಾಯ್ದೆ, 2011.

XII. ಅರಣ್ಯ(ಸಂರಕ್ಷಣೆ) ಕಾಯ್ದೆ, 1980.

ಕಂಪನಿಗೆ ಅನ್ವಯವಾಗುವ ಇತರೆ ಅನ್ವಯಿಸುವ ಕಾಯ್ದೆಗಳು, ಕಾನೂನುಗಳು, ನಿಯಮಗಳು, ನಿಯಮಾವಳಿಗಳು, ಮಾರ್ಗದರ್ಶಿ ಸೂತ್ರಗಳು ಮತ್ತು ಕೆಳಗಿನ ಪ್ರಮುಖ ಗುಂಪುಗಳ ಅಡಿಯಲ್ಲಿ ವರ್ಗೀಕರಿಸಲಾದ ಅನುಸರಣೆಗಳನ್ನು ಖಾತರಿಪಡಿಸುವ ಸಲುವಾಗಿ ಕಂಪನಿಯಿಂದ ಸ್ಥಾಪಿಸಲಾದ ವ್ಯವಸ್ಥೆಗಳು ಮತ್ತು ಕಾರ್ಯವಿಧಾನಗಳನ್ನು ನಾನು ಪರಿಶೀಲಿಸಿದ್ದೇನೆ.

1. ಗಾಳಿ (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1961
2. ನೀರು (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1974
3. ನೀರು (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಸೆಸ್ ಕಾಯ್ದೆ, 1977
4. ಪರಿಸರ (ರಕ್ಷಣೆ) ಕಾಯ್ದೆ, 1986
5. ಗ್ರಾಹಕ ರಕ್ಷಣೆ ಕಾಯ್ದೆ, 1986
6. ಅಪ್ರೆಂಟಿಸ್ ಕಾಯ್ದೆ, 1961
7. ಕಾರ್ಖಾನೆಗಳ ಕಾಯ್ದೆ, 1948 ಮತ್ತು ನಿಯಮಗಳು
8. ಕೈಗಾರಿಕ ವಿವಾದಗಳ ಕಾಯ್ದೆ, 1947
9. ಮಾತೃತ್ವ ಸೌಲಭ್ಯ ಕಾಯ್ದೆ(ಇಎಸ್ಐ ಕಾಯ್ದೆಯ ವ್ಯಾಪ್ತಿಯ ಹೊರಗಿನ ಮಹಿಳಾ ನೌಕರರಿಗೆ ಅನ್ವಯಿಸುತ್ತದೆ)
10. ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013
11. ಒಪ್ಪಂದದ ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕಾಯ್ದೆ, 1970, ಒಪ್ಪಂದದ' ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕರ್ನಾಟಕ ನಿಯಮಗಳು 1974
12. ಬೋನಸ್ ಪಾವತಿ ಕಾಯ್ದೆ, 1965
13. ವೇತನ ಪಾವತಿ ಕಾಯ್ದೆ, 1936
14. ಕಾರ್ಮಿಕರ ಪರಿಹಾರ ಕಾಯ್ದೆ, 1923

15. ಕವಿನಿ ಆಯೋಗ (ಸಾಮಾನ್ಯ ಮತ್ತು ನೀತಿ ಪ್ರಕ್ರಿಯೆಗಳ) ನಿಂಬಂಧನೆಗಳು, 2000

16. ಕವಿನಿ ಆಯೋಗ (ಪರವಾನಗಿ) ನಿಂಬಂಧನೆಗಳು, 2000

17. ಕವಿನಿ ಆಯೋಗ (ಶುಲ್ಕ) ನಿಂಬಂಧನೆಗಳು, 2016

18. ಕವಿನಿ ಆಯೋಗ (ದರಪಟ್ಟಿ) ನಿಂಬಂಧನೆಗಳು, 2000

19. ಕವಿನಿ ಆಯೋಗ (ವಿದ್ಯುಚ್ಛಕ್ತಿ ಸರಬರಾಜಿನ ವೆಚ್ಚವನ್ನು ಮರುಪಡೆದುಕೊಳ್ಳುವುದು) ನಿಂಬಂಧನೆಗಳು, 2004

20. ಕವಿನಿ ಆಯೋಗ (ವಿದ್ಯುತ್ ಸರಬರಾಜು) ಕೋಡ್, 2004

21. ಕರ್ನಾಟಕ ವಿದ್ಯುಚ್ಛಕ್ತಿ ಗ್ರಿಡ್ ಕೋಡ್, 2005

22. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನೌಕರರ ಸೇವಾ ನಿಂಬಂಧನೆಗಳು.

23. ಕರ್ನಾಟಕ ರಾಜ್ಯದ ವಿತರಣಾ ಪರವಾನಗೆದಾರರ ವಿದ್ಯುತ್ ಸರಬರಾಜು ನಿಂಬಂಧನೆಗಳು, (ಗೆಜೆಟ್ ಅಧಿಸೂಚನೆ ದಿನಾಂಕ:17.06.2006)

24. ಕವಿನಿ ಆಯೋಗದ ಅಧಿಸೂಚನೆ ಸಂಖ್ಯೆ: KERC/COS/D/07/10 Dated:01.07.2016.

ನಾನು ಈ ಕೆಳಗಿನವುಗಳ ಅನುಪಾಲನೆಯನ್ನು ಸಹ ಪರಿಶೀಲಿಸಿದ್ದೇನೆ.

I. ಐ.ಸಿ.ಎಸ್.ಐ. ಹೊರಡಿಸಿರುವ ಸೆಕ್ರೆಟೇರಿಯಲ್ ನಿರ್ದಿಷ್ಟತೆಗಳು.

II. ಷೇರು ಪೇಟೆಯಲ್ಲಿ ನೊಂದಾಯಿಸಲು ಕಂಪನಿಯು ಮಾಡಿಕೊಂಡ ಒಪ್ಪಂದ ರಾಷ್ಟ್ರೀಯ ಸ್ಟಾಕ್ ಎಕ್ಸ್ಚೇಂಜ್ ಮತ್ತು ಮುಂಬೈ ಸ್ಟಾಕ್ ಎಕ್ಸ್ಚೇಂಜ್ ನಿಯಮಿತಗಳೊಂದಿಗೆ – ಅನ್ವಯಿಸುವುದಿಲ್ಲ.

III. ಸೆಕ್ಯುರಿಟೀಸ್ ಮತ್ತು ಇಂಡಿಯಾ ಎಕ್ಸ್ಚೇಂಜ್ ಬೋರ್ಡ್ (ಲಿಸ್ಟಿಂಗ್ ರೆಗ್ಯುಲೇಷನ್ಸ್ ಮತ್ತು ಡಿಸ್ಕ್ಲೋಸರ್ ಅವಶ್ಯಕತೆಗಳು) ನಿಯಮಗಳು, 2015– ಅನ್ವಯಿಸುವುದಿಲ್ಲ.

ನನ್ನ ಪರಿಶೀಲನೆಯ ಸಮಯದಲ್ಲಿ ಮೇಲೆ ಸೂಚಿಸಿರುವ ಕಾಯ್ದೆ, ನಿಯಮಗಳು, ನಿಬಂಧನೆಗಳು, ಮಾರ್ಗದರ್ಶಕಗಳು, ನಿರ್ದಿಷ್ಟತೆಗಳು, ಇತ್ಯಾದಿಗಳನ್ನು ಕೆಳಕಂಡ ಅವಲೋಕನಗಳಿಗೆ ಒಳಪಡಿಸಿ ಅವಕಾಶವನ್ನು ಕಲ್ಪಿಸಿದೆ ಎಂದು ತಿಳಿಸುತ್ತೇನೆ.

"ಇತರೆ ಕಾನೂನುಗಳ ಬಗ್ಗೆ", ಕಂಪನಿಯು ಸುಸ್ಥಾಪಿತ ಸರ್ಕಾರಿ ಕಂಪನಿಯಾಗಿದೆ ಮತ್ತು ಸಾಮಾನ್ಯವಾಗಿ, ನೇಮಕಾತಿ, ಪದೋನ್ನತಿ, ರಜೆ ಇತರೆ ಮತ್ತು ಖರೀದಿಗಳ ನಿಯಮಗಳನ್ನು ಒಳಗೊಂಡಂತೆ ಇತರೆ ಕಾನೂನುಗಳ ನಿಬಂಧನೆಗಳು ಸರಿಯಾಗಿ ಅನುಸರಣೆ ಮಾಡಲಾಗಿದೆ.

ನಾನು ಹಣಕಾಸು ಕಾನೂನುಗಳಾದ ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆ ಕಾನೂನುಗಳ ಅನುಸರಣೆ ಪರಿಶೀಲಿಸಿರುವುದಿಲ್ಲ ಏಕೆಂದರೆ ಅದು ಶಾಸನ ಬದ್ಧ ಲೆಕ್ಕ ಪರಿಶೋಧಕರ ಮತ್ತು ಇತರೆ ವೃತ್ತಿಪರರಿಂದ ಪರಿಶೀಲನೆಗೆ ಒಳಪಟ್ಟಿರುತ್ತದೆ.

ನಾನು ವರದಿಯನ್ನು ಮುಂದುವರಿಸಿ ತಿಳಿಸುವುದೇನೆಂದರೆ

ಕಂಪನಿಯ ನಿರ್ದೇಶಕ ಮಂಡಳಿಯನ್ನು ಯುಕ್ತ ರೀತಿಯಲ್ಲಿ ರಚಿಸಲಾಗಿದೆ. ಕಂಪನಿಯು ಈ ಕೆಳಕಂಡ ಸಮಿತಿಗಳನ್ನು ರಚಿಸಿದೆ.

1. ಸಂಯೋಜಿತ ಕೇಂದ್ರ ಖರೀದಿ ಸಮಿತಿ
2. ಲೆಕ್ಕ ಪರಿಶೋಧನಾ ಸಮಿತಿ
3. ನಿಗಮ ಸಾಮಾಜಿಕ ಹೊಣೆಗಾರಿಕೆ ಸಮಿತಿ
4. ಬಾರೋಯಿಂಗ್ ಸಮಿತಿ

ಮಂಡಳಿ ಸಭೆಗಳು ನಡೆಯುವ ದಿನಾಂಕ, ಕಾರ್ಯಸೂಚಿ, ಕಾರ್ಯಸೂಚಿ ಸಂಬಂಧವಾದ ವಿವರವಾದ ಟಿಪ್ಪಣಿಗಳು ಇವುಗಳ ಸಹಿತವಾದ ಸಭೆ ಸೂಚನೆಯ ವಿವರವನ್ನು ಎಲ್ಲ ನಿರ್ದೇಶಕರುಗಳಿಗೆ ಮುಂಚಿತವಾಗಿಯೇ ಕಳುಹಿಸಲಾಗಿದೆ. ನಿರ್ದೇಶಕರುಗಳು ಸಭೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ಅನುಕೂಲಕರವಾಗಿಸಲು, ಮತ್ತಷ್ಟು ಮಾಹಿತಿ ಪಡೆಯುವಿಕೆ, ಕಾರ್ಯಸೂಚಿಯಲ್ಲಿನ ಮಾಹಿತಿಗಳ ಸ್ಪಷ್ಟೀಕರಣ ಸಂಬಂಧವಾದ ವ್ಯವಸ್ಥಿತ ಏರ್ಪಾಡು ಇದೆ.

ನಿರ್ದೇಶಕರ ಮಂಡಳಿಯ ಮತ್ತು ಉಪ ಸಮಿತಿಯ ಸಭಾ ನಡಾವಳಿಗಳನ್ನು ಯುಕ್ತ ರೀತಿಯಲ್ಲಿ ದಾಖಲಿಸಿದೆ.

ನಾನು ವರದಿಯನ್ನು ಮುಂದುವರಿಸುತ್ತಾ ತಿಳಿಸುವುದೇನೆಂದರೆ ಕಂಪನಿಯ ಗಾತ್ರ ಹಾಗೂ ಕಾರ್ಯಾಚರಣೆಗೆ ಅನುಸಾರವಾಗಿ, ಅನ್ವಯಿತ ಕಾನೂನುಗಳು, ನಿಯಮಗಳು, ನಿಬಂಧನೆಗಳು ಹಾಗೂ ಮಾರ್ಗದರ್ಶನಗಳ ಪಾಲನೆ ಸಂಬಂಧವಾಗಿ, ಕಂಪನಿಯಲ್ಲಿ ಸಾಕಷ್ಟು ಪ್ರಮಾಣದ ವ್ಯವಸ್ಥೆ ಹಾಗೂ ಕಾರ್ಯಪ್ರಕ್ರಿಯೆಗಳಿವೆ ಎಂದು ವರದಿ ಮಾಡುತ್ತಾ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಿಂದ ಇತರೆ ಅನ್ವಯವಾಗುವ ಕಾನೂನುಗಳ ಅನುಸರಣೆಯ ಪ್ರಮಾಣಪತ್ರಗಳನ್ನು ಪಡೆಯಲಾಗಿದೆ.

ಸಹಿ/–
ಎಸ್. ವಿಶ್ವನಾಥನ್
ಕಂಪನಿ ಕಾರ್ಯದರ್ಶಿಗಳು
ಎಸಿಎಸ್ ಸಂಖ್ಯೆ: 5284
ಸಿಪಿ ಸಂಖ್ಯೆ: 5284

ಸ್ಥಳ : ಬೆಂಗಳೂರು
ದಿನಾಂಕ : 22–09–2018

ಲಗತ್ತು: ಅನುಬಂಧ – **ಎ**

ಅನುಬಂಧ– ಎ

ಗೆ,

ಸದಸ್ಯರು,

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಮ ದಿನಾಂಕದ ನಮ್ಮ ವರದಿಯನ್ನು ಈ ಪತ್ರದೊಂದಿಗೆ ಪರಾಮರ್ಶಿಸುವುದು.

1. ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳ ನಿರ್ವಹಣೆಯು ಕಂಪನಿಯ ವ್ಯವಸ್ಥಾಪಕ ಮಂಡಳಿಯದ್ದಾಗಿದೆ. ನಾನು ನಡೆಸಿದ ಪರಿಶೋಧನೆಯಲ್ಲಿ ಒಳಪಡಿಸಿದ ಈ ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳ ಬಗ್ಗೆ ಅಭಿಪ್ರಾಯವನ್ನು ಸೂಚಿಸುವುದಷ್ಟೇ ನನ್ನ ಜವಾಬ್ದಾರಿಯಾಗಿರುತ್ತದೆ.

2. ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳಲ್ಲಿನ ಅಂಶಗಳ ನಿಖರತೆಯ ಬಗ್ಗೆ ಯುಕ್ತ ಖಚಿತತೆಯನ್ನು ಪಡೆದುಕೊಳ್ಳಲು ಯುಕ್ತವಾದ ಪರಿಶೋಧನಾ ಆಚರಣೆ ಹಾಗೂ ಪ್ರಕ್ರಿಯೆಗಳನ್ನು ಅನುಸರಿಸಿದ್ದೇನೆ. ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳಲ್ಲಿ ನಿಖರ ಅಂಶಗಳನ್ನು ಬಿಂಬಿಸಿರುವುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷಾ ಆಧಾರದ ಮೇಲೆ ಪರಿಶೀಲನೆಯನ್ನು ನಡೆಸಲಾಯಿತು. ನಾನು ಅನುಸರಿಸಿದ ಯುಕ್ತ ಪರಿಶೋಧನಾ ಆಚರಣೆ ಹಾಗೂ ಪ್ರಕ್ರಿಯೆಗಳು ನನ್ನ ಅಭಿಪ್ರಾಯ ಸಲ್ಲಿಕೆಗೆ ಯುಕ್ತ ಆಧಾರಗಳಾಗಿವೆ ಎಂದು ನಂಬಿದ್ದೇನೆ.

3. ಕಂಪನಿಯ ಲೆಕ್ಕಪತ್ರಗಳು ಹಾಗೂ ಆರ್ಥಿಕ ನಿರೂಪಣಾ ಪಟ್ಟಿಗಳ ಯುಕ್ತತೆ ಹಾಗೂ ನಿಖರತೆಯನ್ನು ನಾನು ಪರಿಶೀಲಿಸಿರುವುದಿಲ್ಲ.

4. ಅನ್ವಯಿತ ಕಾನೂನು, ನಿಯಮಗಳು, ನಿಬಂಧನೆಗಳು ಹಾಗೂ ಮಹತ್ವ ಸಂಭವಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವೆಡೆಯಲ್ಲೆಲ್ಲಾ ವ್ಯವಸ್ಥಾಪಕ ಮಂಡಳಿಯ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

5. ನಿಗಮದ ಅವಕಾಶಗಳು ಹಾಗೂ ಇತರ ಅನ್ವಯಿತ ಕಾನೂನು, ನಿಯಮಗಳು, ನಿಬಂಧನೆಗಳು, ನಿರ್ದಿಷ್ಟತೆಗಳನ್ನು ವ್ಯವಸ್ಥಾಪಕ ಮಂಡಳಿಯು ಪಾಲಿಸತಕ್ಕದ್ದು. ನನ್ನ ಪರಿಶೀಲನೆಯು ಪರೀಕ್ಷಾ ಆಧಾರದಂತೆ ಕಾರ್ಯಪ್ರಕ್ರಿಯೆಯನ್ನು ಪರಿಶೀಲಿಸುವುದಕ್ಕೆ ಸೀಮಿತವಾಗಿತ್ತು.

6. ಸೆಕ್ರೆಟೇರಿಯಲ್ ಪರಿಶೋಧನಾ ವರದಿಯು, ಭವಿಷ್ಯದಲ್ಲಿ ಕಂಪನಿಯ ಕಾರ್ಯಸಾಧ್ಯತೆಯನ್ನು ಖಚಿತಪಡಿಸುವ ಅಥವಾ ವ್ಯವಸ್ಥಾಪಕ ಮಂಡಳಿಯು ಕಂಪನಿಯ ವ್ಯವಹರಣೆಗಳನ್ನು ಪರಿಣಾಮಕಾರಿಯಾಗಿ ಅಥವಾ ದಕ್ಷತಾಬದ್ಧವಾಗಿ ನಡೆಸಿರುವ ಸಂಬಂಧವಾಗಿಲ್ಲ.

ಸಹಿ/–
ಎಸ್. ವಿಶ್ವನಾಥನ್
ಕಂಪನಿ ಕಾರ್ಯದರ್ಶಿಗಳು
ಎಸಿಎಸ್ ಸಂಖ್ಯೆ: 5284
ಸಿಪಿ ಸಂಖ್ಯೆ: 5284

ಸ್ಥಳ : ಬೆಂಗಳೂರು
ದಿನಾಂಕ : 22–09–2018

ಅಯವ್ಯಯ ಪಟ್ಟಿ 31.03.2018 ರಂದು ಇದ್ದಂತೆ

(ಮೊಬಲಗು ರೂ.ಗಳಲ್ಲಿ)

ವಿವರಗಳು		ಟಿಪ್ಪಣಿ ಸಂಖ್ಯೆ	ಲೆಕ್ಕ ಸಂಕೇತ	31 ಮಾರ್ಚ್–2018 ರ ವರ್ಷಾಂತ್ಯಕ್ಕೆ ಇದ್ದಂತೆ		31 ಮಾರ್ಚ್–2017 ರ ವರ್ಷಾಂತ್ಯಕ್ಕೆ ಇದ್ದಂತೆ	
ಆಸ್ತಿಗಳು							
ಪ್ರಸಕ್ತವಲ್ಲದ ಆಸ್ತಿಗಳು							
(ಎ)	ಸ್ಥಾವರ ಸ್ವತ್ತು ಮತ್ತು ಸಲಕರಣೆ	2	10,12 ಮತ್ತು 16.2	10624 47 99 799		9038 69 90 448	
(ಬಿ)	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	3	14 ಮತ್ತು 15	3032 91 76 338		3162 16 60 078	
(ಸಿ)	ಆರ್ಥಿಕ ಆಸ್ತಿಗಳು						
	(1) ಇತರೆ	4	25 ರಿಂದ 27 ಮತ್ತು 28	632 82 42 183		681 53 01 084	
(ಡಿ)	ಇತರೆ ಪ್ರಸಕ್ತವಲ್ಲದ ಆಸ್ತಿಗಳು	5	17,25,26,27,28,28.4,ರಿಂದ 28.9 ಮತ್ತು 31 ರಿಂದ 37	111 93 44 574	14402 15 62 894	116 95 10 012	12999 34 61 622
ಪ್ರಸಕ್ತ ಆಸ್ತಿಗಳು							
(ಎ)	ದಾಸ್ತಾನು	6	22 ಮತ್ತು 16.1	60 81 41 198		61 70 49 858	
(ಬಿ)	ಆರ್ಥಿಕ ಸ್ವತ್ತುಗಳು						
	(i) ವ್ಯವಹಾರದ ಸ್ವೀಕೃತಿಗಳು	7	23 ಮತ್ತು 28.1	661 95 30 785		730 85 65 403	
	(ii) ನಗದು ಮತ್ತು ನಗದಿಗೆ ಸಮಾನವಾದದ್ದು	8	20 ಮತ್ತು 24	130 31 40 350		196 36 37 435	
	(iii) ಇತರೆ ಬ್ಯಾಂಕ್ ಉಳಕೆಗಳು	9	24.8 ಮತ್ತು 20.2	90 30 80 779		80 05 05 215	
	(iv) ಸಾಲಗಳು	10	25 ಮತ್ತು 27	3 31 84 657		3 37 61 053	
	(v) ಇತರೆ ಆರ್ಥಿಕ ಆಸ್ತಿಗಳು	11	28	236 75 91 848		204 50 67 181	
(ಸಿ)	ಇತರೆ ಪ್ರಸಕ್ತ ಆಸ್ತಿಗಳು	12	16, 28.1 ರಿಂದ 28.9	1 21 20 160	1184 67 89 777	1 09 12 814	1277 94 98 959
ಒಟ್ಟು ಆಸ್ತಿಗಳು					15586 83 52 671		14277 29 60 581
ಸ್ವಾಮ್ಯ & ಹೊಣೆಗಾರಿಕೆಗಳು							
ಸ್ವಾಮ್ಯ							
(ಎ)	ಸ್ವಾಮ್ಯ ಷೇರು ಬಂಡವಾಳ	13	52.301	2182 32 25 000		2075 32 25 000	
(ಬಿ)	ಇತರೆ ಸ್ವಾಮ್ಯ	14	55 ರಿಂದ 58	2093 70 23 942		1988 55 76 481	
ಒಟ್ಟು ಸ್ವಾಮ್ಯ					4276 02 48 942		4063 88 01 481
ಪ್ರಸಕ್ತವಲ್ಲದ ಹೊಣೆಗಾರಿಕೆಗಳು							
(ಎ)	ಆರ್ಥಿಕ ಹೊಣೆಗಾರಿಕೆಗಳು						
	(i) ಸಾಲಗಳು	15	51 ರಿಂದ 54	4619 88 66 775		4365 17 06 962	
(ಬಿ)	ಹವಣಿಕೆಗಳು	16	44	173 14 76 182		200 76 50 917	
(ಸಿ)	ಮುಂದೂಡಿದ ತೆರಿಗೆ ಹೊಣೆ (ನಿವ್ವಳ)	17	46.802	898 22 89 128		483 72 97 748	
(ಡಿ)	ಇತರೆ ಪ್ರಸಕ್ತವಲ್ಲದ ಹೊಣೆಗಾರಿಕೆಗಳು	18	42 ರಿಂದ 53	2131 70 87 585	7822 97 19 670	1687 16 48 261	6736 83 03 888
ಪ್ರಸಕ್ತ ಹೊಣೆಗಾರಿಕೆಗಳು							
(ಎ)	ಆರ್ಥಿಕ ಹೊಣೆಗಾರಿಕೆಗಳು						
	(i)ಸಾಲಗಳು	19	51 ರಿಂದ 54	158 33 33 123			
	(ii)ವ್ಯವಹಾರದ ಪಾವತಿಗಳು	20	41	710 60 58 214		710 78 17 343	
	(iii) ಇತರೆ ಆರ್ಥಿಕ ಹೊಣೆಗಾರಿಕೆಗಳು	21	46.9	611 66 72 005		674 15 64 893	
(ಬಿ)	ಇತರೆ ಪ್ರಸಕ್ತ ಹೊಣೆಗಾರಿಕೆಗಳು	22	42 ರಿಂದ 46	1028 34 74 723		1109 48 11 468	
(ಸಿ)	ಹವಣಿಕೆಗಳು	23	42,44,46	934 52 90 638		712 27 19 707	
(ಡಿ)	ಪ್ರಸ್ತುತ್ತ ಆದಾಯ ತೆರಿಗೆ ಹೊಣೆಗಾರಿಕೆಗಳು (ನಿವ್ವಳ)	24	46.8	44 35 55 356	3487 83 84 059	269 89 41 801	3476 58 55 212
ಒಟ್ಟು ಸ್ವಾಮ್ಯ ಮತ್ತು ಹೊಣೆಗಾರಿಕೆಗಳು					15586 83 52 671		14277 29 60 581

ಗಮನಾರ್ಹ ಲೆಕ್ಕ ಪತ್ರ ನೀತಿಗಳು ಲೆಕ್ಕ ಪತ್ರಗಳ ಮೇಲೆ ಟಿಪ್ಪಣಿಗಳು
1–37 ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ ಸಮ
ದಿನಾಂಕದ ನಮ್ಮ ವರದಿಯ ಪ್ರಕಾರ

ಮಂಡಳಿಯ ನಿರ್ದೇಶಕರ ಪರವಾಗಿ

ಬಿ.ಕೆ.ರಾವ್ ಮತ್ತು ಕಂಪನಿ ಪರವಾಗಿ
ಸನ್ನದಿತ ಲೆಕ್ಕಿಗರು
ಎಫ್ಆರ್ಎನ್ : 003116S

ಸಹಿ/–
(ಡಾ. ಎಸ್. ಸೆಲ್ವ ಕುಮಾರ್)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಡಾ. ಅದಿತಿ ರಾಜ)
ನಿರ್ದೇಶಕರು (ಹಣಕಾಸು)

ಸಹಿ/–
ಬಿ.ಪ್ರಸನ್ನ ಆಚಾರ್
ಪಾಲುದಾರರು
ಸದಸ್ಯತ್ವ ಸಂಖ್ಯೆ. : 202100

ಸಹಿ/–
(ರೂತ್.ಜಿ.ಮಿರಜ್ಕರ್)
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
(ಕೆ.ಟಿ.ಹರಿಯಣ್ಣ)
ಕಂಪನಿ ಕಾರ್ಯದರ್ಶಿಗೆ ಅಧಿಕೃತ ಸಹಿಗಾರರು

ಸ್ಥಳ: ಬೆಂಗಳೂರು
ದಿನಾಂಕ: 16.08.2018

31.03.2018 ರ ವರ್ಷಾಂತ್ಯದ ಲಾಭ ಮತ್ತು ನಷ್ಟ ಲೆಕ್ಕ

(ಮೊಬಲಗು ರೂ.ಗಳಲ್ಲಿ)

ವಿವರಗಳು	ಟಿಪ್ಪಣಿ ಸಂಖ್ಯೆ	ಲೆಕ್ಕ ಸಂಕೇತ	ಪ್ರಸಕ್ತ ವರ್ಷ 2017–18	ಕಳೆದ ವರ್ಷ 2016–17
I ಕಾರ್ಯಾಚರಣೆಯಿಂದ ಬಂದ ಕಂದಾಯ (ವಿದ್ಯುತ್ ಪ್ರಸರಣ ಕಾರ್ಯದಿಂದ)	25	61 & 62	2859 53 10 195	3204 96 95 209
II ಇತರೆ ಆದಾಯ	26	62	235 11 23 563	175 30 55 494
III ಒಟ್ಟು ಆದಾಯ (I+II III)			3094 64 33 758	3380 27 50 703
ವೆಚ್ಚ				
1. ಸಿಬ್ಬಂದಿ ವೆಚ್ಚಗಳು	27	75	873 66 92 643	686 55 53 416
2. ದುರಸ್ತಿ ಮತ್ತು ನಿರ್ವಹಣೆ	28	74	215 26 46 336	191 93 78 759
3. ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳು	29	76	104 98 05 266	91 18 86 456
4. ಹಣಕಾಸು ವೆಚ್ಚಗಳು	30	78	366 58 56 674	382 25 75 597
5. ಸವಕಳಿ ಮತ್ತು ಋಣಮುಕ್ತತೆ ವೆಚ್ಚಗಳು	31	77	716 23 68 415	663 76 78 346
6. ಇತರೆ ವೆಚ್ಚಗಳು	32	77, 79 & 80	5 55 35 350	15 57 91 306
IV ಒಟ್ಟು ವೆಚ್ಚಗಳು			2282 29 04 684	2031 28 63 880
V ಕೂಡುವುದು/ ಕಳೆಯುವುದು ಹಿಂದಿನ ಅವಧಿಯ ವೆಚ್ಚಗಳು ಅಥವಾ ಜಮೆಗಳು	33		–15 68 79 814	98 57 13 504
ವಿಶೇಷ ಮತ್ತು ಅಸಾಧಾರಣ ಅಂಶಗಳು ಮತ್ತು ತೆರಿಗೆ ಮುಂಚಿನ ಲಾಭ (III - IV + V)			796 66 49 260	1447 56 00 327
ಅಸಾಧಾರಣ ಅಂಶಗಳು	34	62		467 52 06 691
ಲಾಭ/ನಷ್ಟ ತೆರಿಗೆಯ ಮುಂಚೆ			796 66 49 260	1915 08 07 018
ಪ್ರಸಕ್ತ ತೆರಿಗೆ	35,36	81.1, 81.201	584 52 01 799	618 44 46 521
ಪ್ರಸಕ್ತ ಅವಧಿಯ ಲಾಭ/ನಷ್ಟ			212 14 47 461	1296 63 60 497
ಇತರ ಸಮಗ್ರ ಆದಾಯ				
ಎ.(1) ಲಾಭ ಮತ್ತು ನಷ್ಟದ ಲೆಕ್ಕಕ್ಕೆ ತರುವಾಯ ಮರುಹಂಚಿಕೊಳ್ಳದ ವಸ್ತುಗಳು			–	–
ಎ.(2) ಮೇಲೆ ತಿಳಿಸಿರುವುದರ ಮೇಲೆ ಆದಾಯ ತೆರಿಗೆ			–	–
ಬಿ.(1) ಲಾಭ ಮತ್ತು ನಷ್ಟದ ಲೆಕ್ಕಕ್ಕೆ ತರುವಾಯ ಮರು ಹಂಚಿಕೊಳ್ಳುವ ವಸ್ತುಗಳು			–	–
ಬಿ.(2) ಮೇಲೆ ತಿಳಿಸಿರುವುದರ ಮೇಲೆ ಆದಾಯ ತೆರಿಗೆ			–	–
ವರ್ಷದ ಒಟ್ಟು ಇತರೆ ಸಮಗ್ರ ಆದಾಯ/ನಷ್ಟ (ನಿವ್ವಳ ತೆರಿಗೆ)			–	–
ವರ್ಷದ ಒಟ್ಟು ಸಮಗ್ರ ಆದಾಯ / ನಷ್ಟ			212 14 47 461	1296 63 60 497

ಪ್ರತಿ ಸ್ವಾಮ್ಯ ಷೇರಿನ ಮೇಲಿನ ಗಳಿಕೆ (INR ನಲ್ಲಿ)		
ಷೇರಿನ ಮುಖ ಬೆಲೆ : INR 1,000 / –	98.45	624.79
ಮೂಲ	97.21	594.15
ಗುಣ ತಗ್ಗಿದ	2 15 47 663	2 07 53 225
ಪ್ರತಿ ಸ್ವಾಮ್ಯ ಷೇರಿನ ಮೇಲಿನ ಗಳಿಕೆಯನ್ನು ಲೆಕ್ಕಿಸಲು ಸರಾಸರಿ ತೂಕದ ಮೇಲಿನ ಸ್ವಾಮ್ಯ ಷೇರುಗಳು	2 18 23 225	2 18 23 225
ಮೂಲ		
ಗುಣ ತಗ್ಗಿದ		

ಗಮನಾರ್ಹ ಲೆಕ್ಕ ಪತ್ರ ನೀತಿಗಳು ಮತ್ತು ಲೆಕ್ಕ ಪತ್ರಗಳ ಮೇಲೆ ಟಿಪ್ಪಣಿಗಳು 1–37

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ

ಮಂಡಳಿಯ ನಿರ್ದೇಶಕರ ಪರವಾಗಿ

ಜಿ.ಕೆ.ರಾವ್ ಮತ್ತು ಕಂಪನಿ ಪರವಾಗಿ
ಸನ್ನದಿತ ಲೆಕ್ಕಿಗರು
ಎಫ್ಆರ್ಎನ್ : 003116S

ಸಹಿ/–
(ಡಾ. ಎಸ್. ಸೆಲ್ವ ಕುಮಾರ್)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಡಾ. ಅದಿತಿ ರಾಜ)
ನಿರ್ದೇಶಕರು (ಹಣಕಾಸು)

ಸಹಿ/–
ಜಿ.ಪ್ರಸನ್ನ ಆಚಾರ್
ಪಾಲುದಾರರು
ಸದಸ್ಯತ್ವ ಸಂಖ್ಯೆ. : 202100

ಸಹಿ/–
(ರೂತ್.ಜಿ.ಮಿರಜ್ಕರ್)
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
(ಕೆ.ಟಿ.ಹರಿಯಣ್ಣ)
ಕಂಪನಿ ಕಾರ್ಯದರ್ಶಿಗೆ ಅಧಿಕೃತ ಸಹಿಗಾರರು

ಸ್ಥಳ: ಬೆಂಗಳೂರು
ದಿನಾಂಕ: 16.08.2018

31 ನೇ ಮಾರ್ಚ್ 2017ರ ವರ್ಷದ ಇತರೆ ಸ್ವಾಮ್ಯದಲ್ಲಿನ ವ್ಯತ್ಯಾಸದ ತಖ್ತೆ

(ಮೊಬಲಗು ರೂ.ಗಳಲ್ಲಿ)

ವಿವರಗಳು	A. ಸ್ವಾಮ್ಯ ಷೇರು ಬಂಡವಾಳ	B.ಇತರೆ ಸ್ವಾಮ್ಯ			
		ಹಂಚಿಕೆಯಾಗದೆ ಇರುವ ಷೇರುಗಳ ಅರ್ಜಿಯ ಹಣ	ಮೀಸಲು ಮತ್ತು ಹೆಚ್ಚುವರಿ		ಒಟ್ಟು
			ಬಂಡವಾಳ ಮೀಸಲು	ಉಳಿಸಿದ ಗಳಿಕೆ	
ವರದಿ ಅವಧಿಯ ಆರಂಭಿಕ ಶಿಲ್ಕು (01/04/2016)	2075 32 25 000	107 00 00 000	7 45 46 563	577 46 69 423	691 92 15 986
ಉಳಿಸಿದ ಗಳಿಕೆಗೆ ವರ್ಗಾವಣೆ	–			1296 63 60 497	1296 63 60 497
2016–17ರ ಅವಧಿಯಲ್ಲಿ ಹಂಚಿಕೆ ಮಾಡಲಾದ ಷೇರುಗಳು	–	–	–	–	–
ವರದಿ ಅವಧಿಯ ಅಂತ್ಯಕ್ಕೆ ಶಿಲ್ಕು (31/03/2017)	2075 32 25 000	107 00 00 000	7 45 46 563	1874 10 29 920	1988 55 76 483

ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ
ಸಮ ದಿನಾಂಕದ ನಮ್ಮ ವರದಿಯ ಪ್ರಕಾರ

ಮಂಡಳಿಯ ನಿರ್ದೇಶಕರ ಪರವಾಗಿ

ಬಿ.ಕಿ.ರಾವ್ ಮತ್ತು ಕಂಪನಿ ಪರವಾಗಿ
ಸನ್ನದಿತ ಲೆಕ್ಕಿಗರು
ಎಫ್ಆರ್ಎನ್ : 003116S

ಸಹಿ/–
(ಡಾ. ಎಸ್. ಸೆಲ್ವ ಕುಮಾರ್)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಡಾ. ಅದಿತಿ ರಾಜ)
ನಿರ್ದೇಶಕರು (ಹಣಕಾಸು)

ಸಹಿ/–
ಬಿ.ಪ್ರಸನ್ನ ಆಚಾರ್
ಪಾಲುದಾರರು
ಸದಸ್ಯತ್ವ ಸಂಖ್ಯೆ. : 202100

ಸಹಿ/–
(ರೂತ್.ಜಿ.ಮಿರಜ್ಕರ್)
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
(ಕೆ.ಟಿ.ಹಿರಿಯಣ್ಣ)
ಕಂಪನಿ ಕಾರ್ಯದರ್ಶಿಗೆ ಅಧಿಕೃತ ಸಹಿಗಾರರು

ಸ್ಥಳ: ಬೆಂಗಳೂರು
ದಿನಾಂಕ: 16.08.2018

31 ನೇ ಮಾರ್ಚ್ 2018ರ ವರ್ಷದ ಇತರೆ ಸ್ವಾಮ್ಯದಲ್ಲಿನ ವ್ಯತ್ಯಾಸದ ತಖ್ತೆ

(ಮೊಬಲಗು ರೂ.ಗಳಲ್ಲಿ)

ವಿವರಗಳು	A. ಸ್ವಾಮ್ಯ ಷೇರು ಬಂಡವಾಳ	B.ಇತರೆ ಸ್ವಾಮ್ಯ			
		ಹಂಚಿಕೆಯಾಗದೆ ಇರುವ ಷೇರುಗಳ ಅರ್ಜಿಯ ಹಣ	ಮೀಸಲು ಮತ್ತು ಹೆಚ್ಚುವರಿ		ಒಟ್ಟು
			ಬಂಡವಾಳ ಮೀಸಲು	ಉಳಿಸಿದ ಗಳಿಕೆ	
ವರದಿ ಅವಧಿಯ ಆರಂಭಿಕ ಶಿಲ್ಕು(01/04/2017)	2075 32 25 000	107 00 00 000	7 45 46 563	1874 10 29 918	1988 55 76 481
ಉಳಿಸಿದ ಗಳಿಕೆಗೆ ವರ್ಗಾವಣೆ	–			212 14 47 461	212 14 47 461
2017–18ರ ಅವಧಿಯಲ್ಲಿ ಹಂಚಿಕೆ ಮಾಡಲಾದ ಷೇರುಗಳು	107 00 00 000	– 107 00 00 000	–	–	– 107 00 00 000
ವರದಿ ಅವಧಿಯ ಅಂತ್ಯಕ್ಕೆ ಶಿಲ್ಕು (13/03/2018)	2182 32 25 000	–	7 45 46 563	2086 24 77 379	2093 70 23 942

ಟಿಪ್ಪಣಿ: ದಿನಾಂಕ 04.07.2017 ರಂದು ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು ರೂ.1000 ಮುಖಬೆಲೆಯ 1070000 ಸ್ವಾಮ್ಯ ಷೇರುಗಳನ್ನು ನೀಡಿರುತ್ತಾರೆ.
(ಹಿಂದಿನ ವರ್ಷ: ಇರುವುದಿಲ್ಲ)

ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ
ಸಮ ದಿನಾಂಕದ ನಮ್ಮ ವರದಿಯ ಪ್ರಕಾರ

ಮಂಡಳಿಯ ನಿರ್ದೇಶಕರ ಪರವಾಗಿ

ಬಿ.ಕಿ.ರಾವ್ ಮತ್ತು ಕಂಪನಿ ಪರವಾಗಿ
ಸನ್ನದಿತ ಲೆಕ್ಕಿಗರು
ಎಫ್ಆರ್ಎನ್ : 003116S

ಸಹಿ/–
(ಡಾ. ಎಸ್. ಸೆಲ್ವ ಕುಮಾರ್)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಡಾ. ಅದಿತಿ ರಾಜ)
ನಿರ್ದೇಶಕರು (ಹಣಕಾಸು)

ಸಹಿ/–
ಬಿ.ಪ್ರಸನ್ನ ಆಚಾರ್
ಪಾಲುದಾರರು
ಸದಸ್ಯತ್ವ ಸಂಖ್ಯೆ. : 202100

ಸಹಿ/–
(ರೂತ್.ಜಿ.ಮಿರಜ್ಕರ್)
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
(ಕೆ.ಟಿ.ಹಿರಿಯಣ್ಣ)
ಕಂಪನಿ ಕಾರ್ಯದರ್ಶಿಗೆ ಅಧಿಕೃತ ಸಹಿಗಾರರು

ಸ್ಥಳ: ಬೆಂಗಳೂರು
ದಿನಾಂಕ: 16.08.2018

31 ಮಾರ್ಚ್ –2018 ರ ಅಂತ್ಯಕ್ಕೆ ನಗದು ಹರಿವಿನ ಪಟ್ಟಿ

(ಮೊಬಲಗು ರೂ.ಗಳಲ್ಲಿ)

ವಿವರಗಳು			31 ಮಾರ್ಚ್–2018 ರ ವರ್ಷಾಂತ್ಯಕ್ಕೆ ಇದ್ದಂತೆ	31 ಮಾರ್ಚ್–2017 ರ ವರ್ಷಾಂತ್ಯಕ್ಕೆ ಇದ್ದಂತೆ
I		**ಕಾರ್ಯಾಚರಣೆಯಿಂದ ಬಂದ ನಗದು ಹರಿವು**		
		ತೆರಿಗೆಯ ಪೂರ್ವ ಲಾಭ/ನಷ್ಟ	796 66 49 260	1915 08 07 018
		ಹೊಂದಾಣಿಕೆಗಳು:		
	i	ಸವಕಳಿ ಮತ್ತು ಋಣಮುಕ್ತತೆ ವೆಚ್ಚ	716 23 68 415	663 76 78 344
	ii	ಹಿಂದಿನ ವರ್ಷದ ಹೆಚ್ಚುವರಿ ಹವಣಿಕೆಗಳನ್ನು ಹಿಂಪಡೆಯುವುದು	–4 91 49 633	–2 11 26 925
	iii	ಗ್ರಾಹಕರ ಕೊಡುಗೆಯಿಂದ ನಿರ್ಮಿತಗೊಂಡ ಆಸ್ತಿಯ ಮೇಲಿನ ಸವಕಳಿ	–49 95 48 093	–33 32 53 084
	iv	ಉಗ್ರಾಣ ಕೊರತೆಗೆ ಹವಣಿಕೆ	49 55 669	– 60 50 249
	v	ದಾಸ್ತಾನುಗಳ ಮಾರಾಟದಿಂದ ಬಂದ ಲಾಭ	– 17 66 314	– 25 80 632
	vi	ನಿರುಪಯುಕ್ತ ಸಾಮಾಗ್ರಿಗಳ ಮಾರಾಟದಿಂದ	– 27 34 759	– 8 72 615
	vii	ಬಿಡುಗಡೆ ಹೊಂದಿದ ಆಸ್ತಿಗಳ ಮಾರಾಟದಿಂದ ಬಂದ ಆದಾಯ	–4 29 19 440	–7 31 26 289
	viii	ಇತರೆ ಸ್ವೀಕೃತಿಗಳು ತೊಡೆದು ಹಾಕಿರುವುದು ಮತ್ತು ವಿಶೇಷ ಅಂಶಗಳು	70 99 383	–457 45 77 574
	ix	ಬಡ್ಡಿಯಿಂದ ಬಂದ ಆದಾಯ	–6 00 16 200	–2 69 42 634
	x	ಆರ್ಥಿಕ ವೆಚ್ಚಗಳು	366 58 56 674	382 25 75 597
		ಕಾರ್ಯನಿರತ ಬಂಡವಾಳದ ಬದಲಾವಣೆಗೆ ಮುಂಚಿನ ಕ್ರಿಯಾತ್ಮಕ ಲಾಭ/ನಷ್ಟ	**1815 07 94 962**	**2457 25 30 957**
		ಕಾರ್ಯಾಚರಣೆಯಿಂದ ಬದಲಾವಣೆ ಹೊಂದಿರುವ ಆಸ್ತಿಗಳು ಮತ್ತು ಹೊಣೆಗಾರಿಕೆಗಳು		
	i	ಸ್ವೀಕೃತಿಗಳಲ್ಲಿನ ಹೆಚ್ಚಳ/ಕಡಿಮೆ	68 90 34 618	–379 85 21 281
	ii	ದಾಸ್ತಾನುಗಳಲ್ಲಿನ ಹೆಚ್ಚಳ/ಕಡಿಮೆ	39 52 991	6 22 58 095
	iii	ಪ್ರಸಕ್ತ ಆಸ್ತಿಗಳಲ್ಲಿನ ಹೆಚ್ಚಳ/ಕಡಿಮೆ	–28 34 10 884	439 35 82 296
	iv	ಪ್ರಸಕ್ತ ಹೊಣೆಗಾರಿಕೆಗಳ/ ಹವಣಿಕೆಗಳಲ್ಲಿನ ಹೆಚ್ಚಳ/ಕಡಿಮೆ	113 79 59 175	–996 15 79 971
	v	ಪ್ರಸಕ್ತವಲ್ಲದ ಆಸ್ತಿಗಳಲ್ಲಿನ ಹೆಚ್ಚಳ/ಕಡಿಮೆ	53 72 24 340	884 69 88 423
	vi	ಪ್ರಸಕ್ತವಲ್ಲದ ಬಾಧ್ಯತೆಗಳ/ ಹೊಣೆಗಾರಿಕೆಗಳಲ್ಲಿನ ಹೆಚ್ಚಳ/ಕಡಿಮೆ	378 30 32 087	–39 38 74 589
	vii	ಸಾಲಗಳಲ್ಲಿನ ಹೆಚ್ಚಳ/ಕಡಿಮೆ	5 76 396	1 16 95 669
		ಕಾರ್ಯಾಚರಣೆಯಿಂದ ಉದ್ಭವಿಸಿದ ನಗದು	**2401 91 63 685**	**2373 30 79 599**
		ಸೇರಿಸಿ/ಕಳೆಯಿರಿ:ಪಾವತಿಸಿದ ಆದಾಯ ತೆರಿಗೆ (ಮರುಪಾವತಿಯ ನಿವ್ವಳ)	–425 98 24 236	–139 12 24 086
		ಕಾರ್ಯಚರಣೆಯಿಂದ ಬಂದ ನಿವ್ವಳ ಹಣದ ಒಳ ಹರಿವು (ಎ)	**1975 93 39 449**	**2234 18 55 513**
II		**ಹೂಡಿಕೆ ಚಟುವಟಿಕೆಗಳಿಂದ ಹಣದ ಹರಿವು**		
	i	ಪಿಪಿಇ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿನ ಬದಲಾವಣೆ	–2113 13 79 526	–1933 99 85 062
	ii	ಬ್ಯಾಂಕ್ ಠೇವಣಿಗಳಿಂದ (3 ತಿಂಗಳ ಗಡುವಿನ ಮೇಲ್ಪಟ್ಟ ಠೇವಣಿಗಳ ನಿವ್ವಳ ಹೆಚ್ಚಳ/ಕಡಿಮೆ)	–10 25 75 564	–7 38 61 955
	iii	ಬಡ್ಡಿಯಿಂದ ಬಂದ ಆದಾಯ	6 00 16 200	2 69 42 634
		ಹೂಡಿಕೆಯ ಚಟುವಟಿಕೆಗಳಿಂದ ನಿವ್ವಳ ಹಣದ ಒಳ ಹರಿವು (ಜಿ)	**–2117 39 38 890**	**–1938 69 04 383**
III		**ಆರ್ಥಿಕ ಚಟುವಟಿಕೆಗಳಿಂದ ಹಣದ ಹರಿವು**		
	i	ಬಂಡವಾಳ ಕಾಮಗಾರಿಗಳಿಗಾಗಿ ಪಡೆದ ದೇಣಿಗೆ ಮತ್ತು ಅನುದಾನ	88 57 80 595	116 17 73 084
	ii	ಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು	255 31 00 534	159 55 72 412
	iii	ಅಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು	157 73 92 402	– 59 40 723
	iv	ಆರ್ಥಿಕ ಮತ್ತು ಇತರೆ ಖರ್ಚುಗಳು	–426 21 71 174	–450 87 05 665
		ಆರ್ಥಿಕ ಚಟುವಟಿಕೆಗಳಿಂದ ನಿವ್ವಳ ನಗದು ಒಳ ಹರಿವು (ಸಿ)	**75 41 02 357**	**–175 73 00 892**
		ನಿವ್ವಳ ಬದಲಾವಣೆ ನಗದು ಮತ್ತು ನಗದಿಗೆ ಸರಿಸಮಾನವಾದುದು (ಎ+ಜಿ+ಸಿ)	**–66 04 97 085**	**119 76 50 238**
		ಕೂಡಿರಿ: ಆರಂಭಿಕ ನಗದು ಮತ್ತು ನಗದಿಗೆ ಸರಿಸಮಾನವಾದುದು 01.04.2017 ರಂತೆ	196 36 37 435	76 59 87 197
		ಮುಕ್ತಾಯ ನಗದು ಮತ್ತು ನಗದಿಗೆ ಸರಿಸಮಾನವಾದುದು 31.03.2018 ರಂತೆ	**130 31 40 350**	**196 36 37 435**

"ಟಿಪ್ಪಣಿ:1 ಹಣ ಚಲಾವಣೆ ವಿವರಣೆ ಅನುಬಂಧವನ್ನು ""ಪರೋಕ್ಷ ವಿಧಾನದಲ್ಲಿ"" ಲೆಕ್ಕ ಪದ್ಧತಿ–7 ""ಹಣ ಚಲಾವಣೆ ವಿವರಣೆಗಳೂ"" ಪ್ರಕಾರ ಪರೋಕ್ಷ ವಿಧಾನದಲ್ಲಿ ಸಿದ್ಧಪಡಿಸಲಾಗಿದೆ.

ಟಿಪ್ಪಣಿ 2: ನಿಗಮದ ಉಪಯೋಗಕ್ಕೆ ಲಭ್ಯತೆವಿಲ್ಲದ ರೂ.5,23,940/– ಗಳನ್ನು ಪಿಂಚಣಿ ಭದ್ರತಾ ನಿಧಿಗೆ ಮೀಸಲಿಡಲಾಗಿದೆ ಹಾಗೂ ರೂ.13,623/–ಗಳನ್ನು ಕುಟುಂಬ ಹಿತ ನಿಧಿಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನವಾದ ರೂ.2,25,29,289/– ಗಳನ್ನು ಅಲ್ಪಾವಧಿ ಓಪನ್ ಆಕ್ಸೆಸ್ಸ್ ಗ್ರಾಹಕರಿಂದ ಯು.ಐ ಚಾರ್ಜ್‌ಗೆ ಪಡೆಯಲಾಗಿದ್ದು ಸದರಿ ಮೊತ್ತವನ್ನು ವಿಸಕಂಗಳೊಂದಿಗೆ ಪಾವತಿಸುವುದು/ಹೊಂದಾಣಿಕೆ ಮಾಡಿಕೊಳ್ಳಬೇಕಾಗಿದೆ. ನಗದು ಮತ್ತು ನಗದು ಸಮಾನತೆ ರೂ.81,976/– ಸರ್ಕಾರದ ಖಜಾನೆಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನ ಮೌಲ್ಯಗಳ ರೂ.25,000 ಮತ್ತು ರೂ.52,131/– ಅನುಕ್ರಮವಾಗಿ ಜಿಇಸಿ ಮತ್ತು ಪಿಎಸ್‌ಡಿಎಫ್ ಅನುದಾನಗಳನ್ನು ಮೀಸಲಿಡಲಾಗಿದೆ.

ಗಮನಾರ್ಹ ಲೆಕ್ಕ ಪತ್ರ ನೀತಿಗಳು ಮತ್ತು ಲೆಕ್ಕ ಪತ್ರಗಳ ಮೇಲೆ ಟಿಪ್ಪಣಿಗಳು1–37
ಸಮ ದಿನಾಂಕದ ಲಗತ್ತಿಸಲಾದ ನಮ್ಮ ವರದಿಯ ಪ್ರಕಾರ

ಮಂಡಳಿಯ ನಿರ್ದೇಶಕರ ಪರವಾಗಿ

ಬಿ.ಹಿ.ರಾವ್ ಮತ್ತು ಕಂಪನಿ ಪರವಾಗಿ
ಸನ್ನದಿತ ಲೆಕ್ಕಿಗರು
ಎಫ್‌ಆರ್‌ಎನ್ : 003116S

ಸಹಿ/–
ಬಿ.ಪ್ರಸನ್ನ ಆಚಾರ್
ಪಾಲುದಾರರು
ಸದಸ್ಯತ್ವ ಸಂಖ್ಯೆ. : 202100

ಸಹಿ/–
(ಡಾ. ಎಸ್. ಸೆಲ್ವ ಕುಮಾರ್)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ರೂತ್.ಜಿ.ಮಿರಜ್‌ಕರ್)
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
(ಡಾ. ಅದಿತಿ ರಾಜ)
ನಿರ್ದೇಶಕರು (ಹಣಕಾಸು)

ಸಹಿ/–
(ಕೆ.ಜಿ.ಹಿರಿಯಣ್ಣ)
ಕಂಪನಿ ಕಾರ್ಯದರ್ಶಿಗೆ ಅಧಿಕೃತ ಸಹಿಗಾರರು

ಸ್ಥಳ: ಬೆಂಗಳೂರು
ದಿನಾಂಕ: 16.08.2018

ಟಿಪ್ಪಣಿ:1 ಕಂಪನಿಯ ಅವಲೋಕನ ಮತ್ತು ಗಮನಾರ್ಹ ಲೆಕ್ಕ ಪದ್ಧತಿ ನೀತಿಗಳು

1.1 :ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಎಂಬುದು ಸಾರ್ವಜನಿಕ ನಿಯಮಿತ ಕಂಪನಿಯಾಗಿದ್ದು, ಭಾರತದಲ್ಲಿ ನೆಲೆಸಿದೆ ಮತ್ತು ಸಂಘಟಿತವಾಗಿದೆ. ಇದು ಕರ್ನಾಟಕದ ಬೆಂಗಳೂರಿನಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿದೆ.

ಕವಿಪ್ರನಿನಿಯು ಎಸ್ಕಾಂಗಳಿಗೆ ಹಾಗೂ ಮುಕ್ತ ಪ್ರವೇಶ ಗ್ರಾಹಕರಿಗೆ ಮತ್ತು ಇತರರಿಗೆ ವಿದ್ಯುತ್ ಪ್ರಸರಣ ವ್ಯವಹಾರದ ಚಟುವಟಿಕೆಗಳಲ್ಲಿ ತೊಡಗಿದೆ.

1.2 : ಆರ್ಥಿಕ ಪತ್ರ ಸಿದ್ಧಪಡಿಸುವಿಕೆಗೆ ಆಧಾರಗಳು

ಎ. ಆರ್ಥಿಕ ಪಟ್ಟಿಗಳನ್ನು ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS) ಅನುಗುಣವಾಗಿ, ಐತಿಹಾಸಿಕ ವೆಚ್ಚ (Ind-AS ನಿಂದ ಕಡ್ಡಾಯಗೊಳಿಸಿದಂತಹ ನ್ಯಾಯಾಯುತ ಮೌಲ್ಯ ಅನ್ವಯಿಸುವ ಕಡೆ) ದಡಿಯಲ್ಲಿ ಗೋಯಿಂಗ್ ಕನಸರ್ನ್ ತತ್ವವನ್ನು ಸಂಚಯದ ಆಧಾರದ ಮೇಲೆ ಮತ್ತು ಕಂಪನಿಗಳ ಅಧಿನಿಯಮ, 2013 ('ಅಧಿನಿಯಮ') ಮತ್ತು ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪ್ರಾವಧಾನಗಳ ಸ್ಥೂಲ ಒಪ್ಪಿಗೆಯ ಮೇರೆಗೆ ಸಿದ್ಧಪಡಿಸಲಾಗುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015ರ ನಿಯಮ 3ರೊಂದಿಗೆ ಓದಲಾದಂತೆ ಮತ್ತು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ತಿದ್ದುಪಡಿ ನಿಯಮಗಳು, 2016ರಂತೆ, ಅಧಿನಿಯಮದ ಪ್ರಕರಣ 133ರಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಬಿ. 31.03.2016ಕ್ಕೆ ಅಂತ್ಯಗೊಂಡಂತಹ ಅವಧಿಯ ಆರ್ಥಿಕ ಪಟ್ಟಿಗಳನ್ನು ಕಂಪನಿಗಳ (ಲೆಕ್ಕಪತ್ರ) ನಿಯಮಗಳು, 2014ರ (ಹಿಂದಿನ ಭಾರತೀಯ ಜಿಎಎಪಿ) ನಿಯಮ 7ರೊಂದಿಗೆ ಓದಲಾದಂತೆ, ಕಂಪನಿಗಳ ಅಧಿನಿಯಮ, 2013ರ ಪರಿಚಯದ 133ರಡಿಯಲ್ಲಿ ಅಧಿಸೂಚಿತವಾದ ಲೆಕ್ಕಪತ್ರ ಮಾನದಂಡಗಳಿಗನುಗುಣವಾಗಿ ಸಿದ್ಧಪಡಿಸಲಾಗಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆಯ ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯವು ಅಧಿಸೂಚಿಸಿದಂತೆ, ಕಡ್ಡಾಯ ಅವಶ್ಯಕತೆಗನುಸಾರವಾಗಿ, ಕಂಪನಿಯು ಕಾಲಕಾಲಕ್ಕೆ ತಿದ್ದುಪಡಿಯಾದಂತಹ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳ) ನಿಯಮಗಳು, 2015ರಡಿಯಲ್ಲಿ ಅಧಿಸೂಚಿತವಾದಂತೆ ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS 101– ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆ) ಅನುಗುಣವಾಗಿ 31.03.2017ಕ್ಕೆ ಅಂತ್ಯವಾಗುವ ವರ್ಷಕ್ಕೆ ತನ್ನ ಆರ್ಥಿಕ ಪಟ್ಟಿಗಳನ್ನು ಸಿದ್ಧಪಡಿಸಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳಲ್ಲಿ ಕಡ್ಡಾಯಗೊಳಿಸಿದಂತೆ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಆರ್ಥಿಕ ಪಟ್ಟಿಗಳಲ್ಲಿನ ತುಲನಾತ್ಮಕ ಅಂಕಿಗಳನ್ನು ಪುನಃಸ್ಥಾಪಿಸಿ ಮಂಡಿಸಲಾಗಿದೆ.

ಸಿ. ಹೊಸದಾಗಿ ಹೊರಡಿಸಿದ ಲೆಕ್ಕಪತ್ರ ಮಾನದಂಡವು ಎಲ್ಲಿ ಪ್ರಾರಂಭಿಕವಾಗಿ ಅಳವಡಿಸಿಕೊಳ್ಳಲಾಗಿದೆಯೋ ಅಥವಾ ಇಲ್ಲಿಯವರೆಗೆ ಬಳಕೆಯಲ್ಲಿದ್ದ ಲೆಕ್ಕಪತ್ರ ನೀತಿಯಲ್ಲಿ ಬದಲಾವಣೆ ಅದೃಶ್ಯವಿರುವ, ಚಾಲ್ತಿಯಲ್ಲಿರುವ ಲೆಕ್ಕಪತ್ರ ಮಾನದಂಡಗಳಿಗೆ ಪುನರಾವರ್ತನೆಯಾಗಿದೆಯೋ ಅಂತಹ ಸ್ಥಳಗಳನ್ನು ಬಿಟ್ಟು ಉಳಿದಿರುವೆಡೆಗಳಲ್ಲಿ ಭಾರತೀಯ ಲೆಕ್ಕಪತ್ರ ನೀತಿಗಳನ್ನು ಸ್ಥಿರವಾಗಿ ಅನ್ವಯಿಸಲಾಗಿದೆ.

ಡಿ. ನಿಗಮದ ಕಾರ್ಯಾಚರಣೆ ಕಾಲಿಕವನ್ನು 12 ತಿಂಗಳುಗಳ ಅವಧಿಯದ್ದೆಂದು ಗೊತ್ತುಪಡಿಸಿಕೊಂಡು,

ಆಸ್ತಿಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಆಸ್ತಿಗಳೆಂದೂ, ಹೊಣೆಗಾರಿಕೆಗಳನ್ನು ಪ್ರಸಕ್ತ ಹಾಗೂ

ಪ್ರಸಕ್ತೇತರ ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

1.3 ಅಂದಾಜು ಪಟ್ಟಿಗಳ ಉಪಯೋಗ:

ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿ ಆರ್ಥಿಕ ಪಟ್ಟಿಗಳ ಸಿದ್ಧಪಡಿಸುವಿಕೆಗಾಗಿ ಆಡಳಿತ ಮಂಡಳಿಯು ಅಂದಾಜುಪಟ್ಟಿಗಳನ್ನು, ತೀರ್ಪುಗಳನ್ನು ಮತ್ತು ಊಹೆಗಳನ್ನು ಮಾಡಬೇಕಾಗುತ್ತದೆ. ಈ ಅಂದಾಜುಪಟ್ಟಿಗಳು, ತೀರ್ಪುಗಳು ಮತ್ತು ಊಹೆಗಳು ಲೆಕ್ಕಪತ್ರ ನೀತಿಗಳ ಅನ್ವಯಿಸುವಿಕೆಯನ್ನು ಸ್ವತ್ತು ಮತ್ತು ಹೊಣೆಗಾರಿಕೆಗಳ ವರದಿಯಾದ ಪ್ರಮಾಣವನ್ನು, ಆರ್ಥಿಕ ಪಟ್ಟಿಗಳ ದಿನಾಂಕದಂದು ಪ್ರಕಟಗೊಂಡ ಸ್ಥಿರ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳನ್ನು ಆ ಅವಧಿಯಲ್ಲಿ ವರದಿಯಾದ ತೆರಿಗೆಗಳು ಮತ್ತು ವೆಚ್ಚಗಳ ಮೊತ್ತವನ್ನು ಭಾದಿಸುತ್ತವೆ. ಲೆಕ್ಕಪತ್ರ ನೀತಿಗಳ ಅನ್ವಯಿಸುವಿಕೆಗೆ

ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳು ಒಳಗೊಂಡಂತೆ ಕ್ಲಿಷ್ಟ ಲೆಕ್ಕಪತ್ರ ಅಂದಾಜು ಮತ್ತು ಆರ್ಥಿಕ ಪಟ್ಟಿಗಳಲ್ಲಿನ ಊಹೆಗಳ ಬಳಕೆ ಅವಶ್ಯವಾಗಿರುತ್ತದೆ. ಲೆಕ್ಕಪತ್ರ ಅಂದಾಜುಗಳ ಕಾಲದಿಂದ ಕಾಲಕ್ಕೆ ಬದಲಾವಣೆಯಾಗಬಹುದು. ನೈಜ ಪರಿಣಾಮಗಳು ಆ ಅಂದಾಜುಗಳಿಗಿಂತ ವಿಭಿನ್ನವಾಗಿರುತ್ತವೆ. ಆಡಳಿತ ಮಂಡಳಿಯು ಅಂದಾಜುಗಳ ಸುತ್ತ ಇರುವ ಪರಿಸ್ಥಿತಿಗಳಲ್ಲಿನ ಬದಲಾವಣೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದರಿಂದ ಅಂದಾಜುಗಳಲ್ಲಿ ಸಮಂಜಸ ಬದಲಾವಣೆಗಳಾಗುತ್ತಿವೆ. ಬದಲಾವಣೆಗಳನ್ನು ಮಾಡಲಾದ ಅವಧಿಯಲ್ಲಿ ಅಂದಾಜುಗಳಲ್ಲಿನ ಬದಲಾವಣೆಗಳು ಆರ್ಥಿಕ ಪಟ್ಟಿಗಳಲ್ಲಿ ಬಿಂಬಿತವಾಗುತ್ತವೆ ಮತ್ತು ಅವುಗಳ ಪರಿಣಾಮಗಳು ಆರ್ಥಿಕ ಪಟ್ಟಿಗಳ ಟಿಪ್ಪಣಿಗಳಲ್ಲಿ ತಿಳಿಯಪಡಿಸುತ್ತವೆ.

ಲೆಕ್ಕಶೀರ್ಷಿಕೆ "ಸಾಮಗ್ರಿಗಳ ಸರಬರಾಜಿನಲ್ಲಿ ಹಕ್ಕುಬಾಧ್ಯತೆ" ಮತ್ತು "ಸಂಡ್ರಿ ಕ್ರೆಡಿಟರ್ಸ್/ ನಿಯಂತ್ರಣ ಲೆಕ್ಕಪತ್ರ"ದಡಿಯಲ್ಲಿ ಸಾಮಗ್ರಿಗಳ ಸರಬರಾಜಿಗೆ ಸಂಬಂಧಿಸಿದಂತೆ, ಯಾವುದೇ ಕ್ಲೇಮು ಮಾಡಿಲ್ಲದ ಹಕ್ಕುಬಾಧ್ಯತೆ/ ಚಾಲ್ತಿಯಲ್ಲಿರುವ ಹಕ್ಕುಬಾಧ್ಯತೆಗಳು, ಯಾವುದೇ ವಿವಾದವಿಲ್ಲದೇ 10 ವರ್ಷಗಳಿಗೂ ಮೀರಿದ ಅವಧಿಗೆ ಪ್ರಸ್ತುತ ಆರ್ಥಿಕ ವರ್ಷವು ಮುಕ್ತಾಯದಲ್ಲಿದ್ದಂತೆ ಲೆಕ್ಕಪತ್ರ ಪುಸ್ತಕಗಳಲ್ಲಿ ಇರುವುದು ಮುಂದುವರಿದರೆ, ಅವುಗಳನ್ನು ಇತರೆ ಆದಾಯಕ್ಕೆ ವರ್ಗಾಯಿಸಲಾಗುವುದು.

1.4. ದಾಸ್ತಾನುಗಳ ಮೌಲ್ಯೀಕರಣ:

ಎ. ದಾಸ್ತಾನುಗಳನ್ನು ಕಡಿಮೆ ಮೌಲ್ಯ ಅಥವಾ ನಿವ್ವಳ ಸಿದ್ಧಿತ ಮೌಲ್ಯದಂತೆ ಮೌಲ್ಯೀಕರಿಸಲಾಗುತ್ತದೆ. ಮೌಲ್ಯವನ್ನು ಸರಾಸರಿ ದರದ ಆಧಾರದಂತೆ ಗೊತ್ತುಪಡಿಸಲಾಗುತ್ತದೆ.

ಬಿ. ದಾಸ್ತಾನುಗಳ ಮೌಲ್ಯವು ದಾಸ್ತಾನನ್ನು ಪ್ರಸ್ತುತ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸಿ. ನಿರುಪಯುಕ್ತತೆ ಅನುಮೋದನಾ ಸಮಿತಿಯಿಂದ ನಿರುಪಯುಕ್ತ/ ಬಳಕೆಯಲ್ಲಿಲ್ಲದ ಎಂದು ಗುರುತಿಸಿರುವ ದಾಸ್ತಾನುಗಳ ಮೌಲ್ಯವನ್ನು, ನಿಗದಿತ ದರಪಟ್ಟಿಯಲ್ಲಿ ಲಭ್ಯವಿದ್ದಲ್ಲಿ, ನಿರುಪಯುಕ್ತ ದರದಂತೆ ಹಾಗೂ ಲಭ್ಯವಿಲ್ಲದ ಪ್ರಕರಣಗಳಲ್ಲಿ ಅಂತಹ ದಾಸ್ತಾನಿನ ಮೌಲ್ಯವನ್ನು, ಮೂಲ ಮೌಲ್ಯದ ಶೇಕಡಾ ೨೦ರ ದರದ ಪ್ರಕಾರ ಇಳಿತಗೊಳಿಸಿ, ಉಳಿದ ಶೇಕಡಾ 10ರಷ್ಟನ್ನು ಅವುಗಳನ್ನು ಕಳಚುವವರೆಗೂ ಉಳಿಸಿಕೊಳ್ಳಲಾಗುತ್ತದೆ.

ಡಿ. ಬಳಕೆಯಲ್ಲಿಲ್ಲದ ಸ್ವತ್ತುಗಳ ತಗ್ಗಿದ ಮೌಲ್ಯದ ಮೇಲೆ ೮೦%ರಷ್ಟು ದರದಂತೆ, ಬಳಕೆಯಲ್ಲಿಲ್ಲದ/ ನಿರುಪಯುಕ್ತ ಸ್ವತ್ತುಗಳ ಮೇಲೆ, ನಿರ್ದಿಷ್ಟವಲ್ಲದ ಆಧಾರದ ಮೇಲೆ ಅವಕಾಶ ಕಲ್ಪಿಸಲಾಗಿದೆ.

1.5. ನಗದು ಹರಿವಿನ ವಿವರಣಾ ಪಟ್ಟಿ:

ನಗದು ಹರಿವುಗಳನ್ನು ಪರೋಕ್ಷ ವಿಧಾನವನ್ನು ಉಪಯೋಗಿಸಿ ವರದಿ ಮಾಡಲಾಗುತ್ತದೆ, ಆ ಮೂಲಕ ಆ ಅವಧಿಯ ಲಾಭವನ್ನು ನಗದು –ರಹಿತ ಸ್ವರೂಪದ ವ್ಯವಹಾರಗಳ ಪರಿಣಾಮಗಳಿಗೆ, ಯಾವುದೇ ಮೂಂದೂಡಲ್ಪಡದ ಬಹುದಾದ ಅಥವಾ ಹಿಂದಿನ ಅವಧಿಯ ಸಂಚಯನಗಳು ಅಥವಾ ಮುಂದಿನ ಅವಧಿಯ ಕಾರ್ಯ ಚಟುವಟಿಕೆಗಳ ನಗದು ರಸೀದಿ ಅಥವಾ ಪಾವತಿಗಳ ಮತ್ತು ಆದಾಯದ ಬಾಬ್ತುಗಳು ಅಥವಾ ವೆಚ್ಚಗಳು ನಗದು ಹರಿವಿನ ಹೂಡಿಕೆ ಅಥವಾ ಬಂಡವಾಳ ಪೂರೈಕೆಯೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ. ಕಂಪನಿಯ ಕಾರ್ಯಚಟುವಟಿಕೆ, ಹೂಡಿಕೆ ಮತ್ತು ಬಂಡವಾಳ ಪೂರೈಕೆಯ ಚಟುವಟಿಕೆಗಳನ್ನು ನಗದು ಹರಿವಿನ ಪಟ್ಟಿಯಲ್ಲಿ ಪ್ರತ್ಯೇಕಿಸಲಾಗಿದೆ.

1.6 ಹಿಂದಿನ ಅವಧಿಯ ಬಾಬ್ತುಗಳು:

ಕಂಪನಿಯು,– ಹಿಂದಿನ ಅವಧಿಯ ಗಣನೀಯವಾದ ತಪ್ಪುಗಳನ್ನು ಆವಿಷ್ಕಾರಗೊಂಡಾಗ ಅವುಗಳನ್ನು ಪೂರ್ವಾನ್ವಯವಾಗಿ ಮೊದಲ ಆರ್ಥಿಕ ವಿವರಣಾ ಪಟ್ಟಿಯ ಅನುಮೋದನೆ ನೀಡುವಾಗ ಈ ಕೆಳಕಂಡಂತೆ ಸರಿಪಡಿಸಲಾಗುವುದು.

ಎ) ತಪ್ಪು ಸಂಭವಿಸಿದ ಅವಧಿಯ/ ಅವಧಿಗಳ ಹಿಂದಿನ ಅವಧಿಗಳ ತುಲನಾತ್ಮಕ ಮೊತ್ತಗಳನ್ನು ಪುನಃ ಮಂಡಿಸುವುದು ಅಥವಾ

ಬಿ) ಮಂಡಿಸಿದ ಅವಧಿಗಿಂತ ಬಹಳ ಮುಂಚೆ ಒಂದು ವೇಳೆ ತಪ್ಪು ಸಂಭವಿಸಿದ್ದರೆ, ಮಂಡಿಸಿದ ಹಿಂದಿನ ಅವಧಿಯ ಸ್ವತ್ತುಗಳೂ, ಬಾಧ್ಯತೆಗಳು ಮತ್ತು ಸ್ವಾಮ್ಯಗಳ' ಪ್ರಾರಂಭಿಕ ಉಳಿಕೆಗಳನ್ನು ಪುನ: ಮಂಡಿಸುವುದು.

1.7 ಆದಾಯ ತೆರಿಗೆ ಮತ್ತು ಮುಂದೂಡಲ್ಪಟ್ಟ ತೆರಿಗೆ

ಪ್ರಸ್ತುತ ಅವಧಿ ಮತ್ತು ಹಿಂದಿನ ಅವಧಿಗಳ ಪ್ರಸ್ತುತ ಆದಾಯ ತೆರಿಗೆಯನ್ನು ಪಾವತಿಸಲು ನಿರೀಕ್ಷಿಸಿದ ಅಥವಾ ತೆರಿಗೆ ಪ್ರಾಧಿಕಾರಗಳಿಂದ ವಸೂಲು ಮಾಡಲಾದ ಮೊತ್ತದಿಂದ ಕಂಡು ಹಿಡಿಯಲಾಗುತ್ತದೆ. ಆದಾಯ ತೆರಿಗೆ ವೆಚ್ಚವು ಪ್ರಸ್ತುತ ಮತ್ತು ಮುಂದೂಡಲ್ಪಟ್ಟ ತೆರಿಗೆಯನ್ನು ಒಳಗೊಂಡಿರುತ್ತದೆ. ಆದಾಯ ತೆರಿಗೆ ವೆಚ್ಚವು ನಿವ್ವಳ ಬೆಲೆಯಲ್ಲಿ ನೇರವಾಗಿ ಗುರುತಿಸಿದ ಬಾಬ್ತುಗಳಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಹೊರತುಪಡಿಸಿ, ಲಾಭ ಮತ್ತು ನಷ್ಟದ ತಃಖ್ತೆಯ ನಿವ್ವಳ ಲಾಭದಿಂದ ಕಂಡುಹಿಡಿಯಲಾಗುತ್ತದೆ. ನೇರವಾಗಿ ಗುರುತಿಸಿದ ಬಾಬ್ತುಗಳಲ್ಲಿ ಇತರ ಸಮಗ್ರ ಆದಾಯದಿಂದ ಕಂಡುಹಿಡಿಯಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಸ್ವತ್ತುಗಳೂ ಮತ್ತು ಹೊಣೆಗಾರಿಕೆಗಳ ತೆರಿಗೆ ಮೂಲಗಳ ನಡುವೆ ಉದ್ಭವಿಸುವ ಎಲ್ಲಾ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ಆರ್ಥಿಕ ತಃಖ್ತೆಗಳಲ್ಲಿ ಅವುಗಳನ್ನು ತರಲಾದ ಮೊತ್ತಗಳಿಗೆ ಸಂಬಂಧಿಸಿ, ಕಂಡುಹಿಡಿಯಲಾಗುತ್ತದೆ. ವರದಿ ಮಾಡುವ ಪ್ರತೀ ದಿನಾಂಕದಂದು ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳನ್ನು ಪುನರ್ ಪರಿಶೀಲನೆ ಮಾಡಲಾಗುತ್ತದೆ ಮತ್ತು ಅದನ್ನು ಸಂಬಂಧಪಟ್ಟ ತೆರಿಗೆ ಲಾಭವನ್ನು ಅರಿಯುವ ಸಂಭವವಿಲ್ಲ ಎಂಬುವಷ್ಟರ ಮಟ್ಟಿಗೆ ಕಡಿಮೆಗೊಳಿಸಲಾಗುತ್ತದೆ. ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಅಧಿನಿಯಮಿತಗೊಂಡ ಅಥವಾ ಬ್ಯಾಲೆನ್ಸ್ ಶೀಟ್‌ನ ದಿನಾಂಕದಿಂದ ಸ್ವತಂತ್ರವಾಗಿ ಅಧಿನಿಯಮಿತಗೊಂಡ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಉಪಯೋಗಿಸಿಕೊಂಡು ಲೆಕ್ಕಮಾಡಲಾಗುತ್ತದೆ ಮತ್ತು ಇವುಗಳಲ್ಲಿ ತಾತ್ಕಾಲಿಕ ವ್ಯತ್ಯಾಸಗಳನ್ನು ಯಾವ ವರ್ಷಗಳಲ್ಲಿ ವಸೂಲಿ ಮಾಡಬೇಕೆಂದು ಅಥವಾ ಇತ್ಯರ್ಥಪಡಿಸಬೇಕೆಂದು ಅಂದುಕೊಳ್ಳಲಾಗಿದೆಯೋ ಆ ವರ್ಷಗಳಲ್ಲಿನ ಕಂದಾಯ ಪಾವತಿಸಬೇಕಾದ ಆದಾಯಕ್ಕೆ ಅನ್ವಯಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳ ಮೇಲಿನ ತೆರಿಗೆ ದರಗಳಲ್ಲಿನ ಅಧಿನಿಯಮಿತ ಬದಲಾವಣೆಗಳ ಪರಿಣಾಮ ಅಥವಾ ಸ್ವತಂತ್ರ ಅಧಿನಿಯಮಿತ ದಿನಾಂಕವನ್ನು ಒಳಗೊಂಡ ಅವಧಿಯಲ್ಲಿನ ಆದಾಯ ಅಥವಾ ವೆಚ್ಚವೆಂದು ಗುರುತಿಸಲಾಗುತ್ತದೆ. ಭವಿಷ್ಯದಲ್ಲಿ ಲಭ್ಯವಾಗುವ ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತನ್ನು ಎಷ್ಟರ ಮಟ್ಟಿಗೆ ಕಂಡುಹಿಡಿಯಲಾಗುತ್ತದೆಯೆಂದರೆ ತೆರಿಗೆ ಕಟ್ಟಬೇಕಾದ ಲಾಭ ಭವಿಷ್ಯದಲ್ಲಿ ದೊರೆಯುವ ಸಂಭವವಿರುತ್ತದೆ. ಇದಕ್ಕೆ ಪ್ರತಿಯಾಗಿ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ತೆರಿಗೆ ನಷ್ಟಗಳನ್ನು ಉಪಯೋಗಿಸಿಕೊಳ್ಳಬಹುದು.

ಕಂಪನಿಯು, ನ್ಯಾಯಯುತವಾಗಿ ಕಂಡುಹಿಡಿಯಲಾದ ಮೊತ್ತಗಳನ್ನು ಪರಿಗಣಿಸುವಲ್ಲಿ ನಿರ್ಬಂಧಿತ ಅಧಿಕಾರವನ್ನು ಹೊಂದಿದ್ದು, ಪ್ರಸ್ತುತ ತೆರಿಗೆ ಸ್ವತ್ತುಗಳು ಮತ್ತು ಪ್ರಸ್ತುತ ತೆರಿಗೆ ಬಾಧ್ಯತೆಗಳನ್ನು ತುಂಬಿಕೊಡುತ್ತದೆ ಮತ್ತು ಅದನ್ನು ನಿವ್ವಳ ಆಧಾರದಲ್ಲಿ ಇತ್ಯರ್ಥ ಪಡಿಸಲು ಅಥವಾ ಸ್ವತ್ತನ್ನು ನಗದೀಕರಿಸುವುದು ಮತ್ತು ಬಾಧ್ಯತೆಯನ್ನು ಏಕಕಾಲದಲ್ಲಿ ಇತ್ಯರ್ಥಪಡಿಸಲು ಉದ್ದೇಶಿಸುತ್ತದೆ.

1.8 ಆಸ್ತಿ, ಸ್ಥಾವರ ಮತ್ತು ಉಪಕರಣಗಳು(ಪಿಪಿಇ)

ಎ. ಕಂಪನಿಯು ಎಲ್ಲಾ ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಗುರುತಿಸಿ ಲೆಕ್ಕಹಾಕಲು ವೆಚ್ಚ ಪದ್ಧತಿಯ ಮಾದರಿಯನ್ನು ಅನುಸರಿಸುತ್ತಿದೆ. ಪಿಪಿಇಗಳ ಮೌಲ್ಯೀಕರಣದಲ್ಲಿ ಸಂಚಿತ ಸವಕಳಿ ಹಾಗೂ ದುರ್ಬಲಗೊಂಡಿರುವ ಆಸ್ತಿಗಳನ್ನು ಕಳೆದು ತೋರಿಸಲ್ಪಡುತ್ತದೆ. ಪಿಪಿಇ ಮೌಲ್ಯ ಪರಿಗಣಿಸಲು ಖರೀದಿ ವೆಚ್ಚ ,ಸಾಲದ ವೆಚ್ಚ ಮತ್ತು ಪಿಪಿಇಯನ್ನು ಆ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಮತ್ತು ನೇರವಾಗಿ ಹೊರಿಸಬಹುದಾದ ವೆಚ್ಚವನ್ನು ಆಡಳಿತ ಮಂಡಳಿಯು ಉದ್ದೇಶಿಸಿರುವ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಮರ್ಥವಾಗುವಂತೆ ಮಾಡುವುದು ಅದರ ಅಗತ್ಯವಾಗಿರುತ್ತದೆ.

ಬಿ. ಬಂಡವಾಳ ಕಾಮಗಾರಿಗಳಿಗೆ ನೇರವಾಗಿ ಪರಿಣಾಮ ಬೀರುವ ಬೃಹತ್ ಕಾಮಗಾರಿ ವಿಭಾಗಗಳು ಹಾಗೂ ಕಾಮಗಾರಿ ವೃತ್ತಗಳಲ್ಲಿನ ಸಿಬ್ಬಂದಿ ಮತ್ತು ಇತರೆ ಆಡಳಿತ ವೆಚ್ಚವನ್ನು ಆಯಾ ವಿಭಾಗಗಳು ನಿರ್ವಹಿಸುವ ಬಂಡವಾಳ ಕಾಮಗಾರಿಗಳಿಗೆ ಹಂಚಲಾಗುತ್ತದೆ ಮತ್ತು ಆಸ್ತಿಗಳ ಮೌಲ್ಯದ ಭಾಗವಾಗಿರುತ್ತದೆ. ಕಾಮಗಾರಿಗಳ ಮುಂಚಿನ ಪೂರ್ಣಗೊಳಿಸುವುಕೆಗಾಗಿ ನೀಡುವ ಪೋತ್ಸಾಹ ಧನವನ್ನು ಸಹಾ ಬಂಡವಾಳ ಕಾಮಗಾರಿಗಳ ವೆಚ್ಚಗಳಿಗೆ ಗುತ್ತಿಗೆದಾರರು ಕ್ಲೆಮ್ ಮಾಡಿದಾಗ ಸೇರಿಸಲಾಗುತ್ತದೆ.

ಸಿ. ಕ.ವಿ.ನಿ. ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ನಿಗಮವು ಅಧೀನಪಡಿಸಿಕೊಂಡಿರುವ ಮೂರನೇ ಪಕ್ಷಕಾರರಿಂದ ಒದಗಿಸಲ್ಪಟ್ಟಿರುವ ಆಸ್ತಿಗಳನ್ನು ವಾಸ್ತವಿಕ ಮೌಲ್ಯದ ಅನುಪಸ್ಥಿತಿಯಲ್ಲಿ, ನಿಗಮವು ಅನುಮೋದಿಸಿರುವ ನ್ಯಾಯೋಚಿತ ಮೌಲ್ಯದ ಪ್ರಕಾರ ಲೆಕ್ಕಪುಸ್ತಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಡಿ. ಭೂ ವೆಚ್ಚವು ಸ್ವಾಧೀನ ವೆಚ್ಚ (ಹೆಚ್ಚುವರಿ ಪರಿಹಾರ ಸೇರಿದಂತೆ), ಅರಣ್ಯೀಕರಣಕ್ಕಾಗಿ ಮತ್ತು ಸಾಮಾಜಿಕ ಅರಣ್ಯೀಕರಣಕ್ಕಾಗಿ ಯೋಜನೆಗಳಿಂದ ಬಾಧಿತರಾದ ಸ್ಥಳೀಯ ಜನರು/ ಕುಟುಂಬಗಳಿಗೆ ನೀಡಲಾದ ಪರಿಹಾರವನ್ನು ಒಳಗೊಂಡಿರುತ್ತದೆ.

ಇ. ಆಯವ್ಯಯ ಪಟ್ಟಿಯ ದಿನಾಂಕದಂದು ಬಾಕಿ ಉಳಿದಿರುವ ಪಿಪಿಇಗೆ ಸಂಬಂಧಿಸಿದ ಮುಂಗಡಗಳನ್ನು ಇತರ ಪ್ರಸಕ್ತ'ವಲ್ಲದ ಆಸ್ತಿಗಳಡಿಯಲ್ಲಿ ಬಂಡವಾಳ ಮುಂಗಡಗಳೆಂಬಂತೆ ವರ್ಗೀಕರಿಸಲಾಗುತ್ತದೆ. ಬಳಕೆಗೆ ಸಿದ್ಧವಾಗುವ ಮುಂಚಿನ ಸ್ವತ್ತುಗಳ ಬೆಲೆಯನ್ನು 'ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ'ಯಡಿಯಲ್ಲಿ ತೋರಿಸಲಾಗುತ್ತದೆ.

ಎಫ್.ಪಿಪಿಇಗೆ ಸಂಬಂಧಿಸಿದ ತರುವಾಯ ವೆಚ್ಚಗಳು ಸದರಿ ವೆಚ್ಚದಿಂದ ಪಿಪಿಇಯ ಭವಿಷ್ಯದಲ್ಲಿ ಆರ್ಥಿಕ ಲಾಭವನ್ನು ಹೆಚ್ಚಿಸುವಂತಿದ್ದಲ್ಲಿ ಸದರಿ ವೆಚ್ಚವನ್ನು ವಿಶ್ವಾಸನೀಯವಾಗಿ ಲೆಕ್ಕ ಹಾಕಬಹುದಾದಾಗ ಮಾತ್ರ ಸದರಿ ಪಿಪಿಇಗೆ ಸಂಬಂಧಿಸಿದ ತರುವಾಯ ವೆಚ್ಚಗಳನ್ನು ಬಂಡವಾಳೀಕರಿಸಲಾಗುವುದು.

ಜಿ. ದುರಸ್ಥಿ ಮತ್ತು ನಿರ್ವಹಣಾ ವೆಚ್ಚಗಳು ಉಂಟಾದಾಗ ಅವುಗಳನ್ನು ಲಾಭಗಳು ಮತ್ತು ನಷ್ಟಗಳ ತಃಖ್ತೆಯಲ್ಲಿ ಅಂಗೀಕರಿಸಲಾಗುತ್ತದೆ.

ಎಚ್.ಪಿಪಿಇಯ ಯಾವುದೇ ಒಂದು ಬಾಬ್ತು ಮತ್ತು ಆರಂಭಿಕವಾಗಿ ಅಂಗೀಕರಿಸಲಾದ ಯಾವುದೇ ಪ್ರಮುಖ ಭಾಗವು ವಿಲೇವಾರಿ ಆಧಾರದ ಮೇಲೆ ಅಥವಾ ಅದರ ಬಳಕೆ ಅಥವಾ ವಿಲೇವಾರಿಯಿಂದ ಭವಿಷ್ಯದಲ್ಲಿ ಯಾವುದೇ ಆರ್ಥಿಕ ಲಾಭಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲದಿದ್ದರೆ, ಅದನ್ನು ಅಂಗೀಕರಿಸುವುದಿಲ್ಲ. ಸ್ವತ್ತನ್ನು ಅಮಾನ್ಯಗೊಳಿಸುವುದರಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟ (ನಿವ್ವಳ ವಿಲೆ ಹುಟ್ಟುವಳಿ ಮತ್ತು ಸ್ವತ್ತಿನ ಸಾಗಣೆ ಮೊತ್ತದ ವ್ಯತ್ಯಾಸವನ್ನು ಲೆಕ್ಕ ಹಾಕಲಾಗುತ್ತದೆ)ವೂ ಸಹ, ಸ್ವತ್ತನ್ನು ಅಂಗೀಕರಿಸದೇ ಇದ್ದಾಗ, ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಸೇರುತ್ತದೆ.

ಐ. ಆಸ್ತಿ ಸ್ಥಗಿತಗೊಳಿಸುವ ಪ್ರಸ್ತುತ ವೆಚ್ಚವನ್ನು ಆಸ್ತಿ ಅಂದಾಜು ವೆಚ್ಚದ ಮೌಲ್ಯದಲ್ಲಿ ಪರಿಗಣಿಸಿ ಪಿ.ಪಿ.ಇ.ಗೆ ಆಸ್ತಿ ಸ್ಥಗಿತಗೊಳಿಸುವ ವೆಚ್ಚವನ್ನು ಬಂಡವಾಳೀಕರಣ ಮಾಡಲಾಗುವುದಿಲ್ಲ.

ಜೆ. **Ind ASಗೆ ಬದಲಾವಣೆ:**

IND-ASಗೆ ಬದಲಾವಣೆಯಾಗುವಾಗ, ಕಂಪನಿಯು ದಿನಾಂಕ 1ನೇ ಏಪ್ರಿಲ್, 2015ರಲ್ಲಿದ್ದಂತೆ, ಹಾಗೂ ಹಿಂದಿನ **ಉಂಂಕ**ನುಸಾರ ಲೆಕ್ಕ ಹಾಕಿದಂತೆ ತನ್ನ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮುಂದುವರಿಯುವ ಮೌಲ್ಯವನ್ನು ಆರಿಸಿಕೊಂಡಿದ್ದು ಮತ್ತು ಆ ಮುಂದುವರಿಸಿದ ಮೌಲ್ಯವನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳ ಭಾವಿತ ವೆಚ್ಚವೆಂದು ಪರಿಗಣಿಸಿ ಉಪಯೋಗಿಸಿಕೊಳ್ಳಲಾಗುವುದು.

1.9 ಸವಕಳಿ:–

ಎ. ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಗೊತ್ತುಪಡಿಸಿರುವ ಪ್ರಕಾರ ಹಾಗೂ ಕ.ವಿ.ನಿ.ಆಯೋಗವು ಕಾಲಕಾಲಕ್ಕೆ ಅಳವಡಿಸಿಕೊಳ್ಳುವ ಪ್ರಕಾರ ಸವಕಳಿಯನ್ನು ನೇರ ಲೆಕ್ಕಾಚಾರದ ಪದ್ಧತಿಯಂತೆ ವಿಧಿಸಲಾಗುತ್ತದೆ. ಸಿಇಆರ್‌ಸಿಯನುಸಾರ, ಸವಕಳಿ ದರಗಳು ಈ ಕೆಳಗಿನಂತಿವೆ:

ಕ್ರ. ಸಂ.	ವಿವರಗಳು	ಸವಕಳಿ ದರಗಳು
1.	ಕಟ್ಟಡಗಳು ಮತ್ತು ರಸ್ತೆಗಳು	3.34%
2.	ಆಂತರಿಕ ವೈರಿಂಗ್, ಆಪ್ಟಿಕ್ ಫೈಬರ್, ಸಂವಹನ ಸಾಮಗ್ರಿಗಳು, ಪೀಠೋಪಕರಣಗಳು ಮತ್ತು ಅಳವಡಿಕೆಗಳು, ಕ್ಯಾಲ್ಕುಲೇಟರ್‌ಗಳು, ಟೈಪ್‌ರೈಟರ್‌ಗಳು, ನಗದು ರಿಜಿಸ್ಟ್ರೆಕ್ಸ್ ಯಂತ್ರಗಳು, ನಗದು ಪೆಟ್ಟಿಗೆ, ಡ್ಯೂಪ್ಲಿಕರ್‌ಗಳು, ಜೆರಾಕ್ಸ್ ಮತ್ತು ಕಾಪಿಯರ್ ಯಂತ್ರಗಳು	6.33%
3.	ಟ್ರಕ್‌ಗಳು, ಟೆಂಪೋಗಳು, ಟ್ರಕ್ಕರ್‌ಗಳು, ಬಸ್‌ಗಳು, ಜೀಪ್‌ಗಳು, ವ್ಯಾನ್‌ಗಳು, ಮೋಟಾರ್ ಕಾರ್‌ಗಳು ಮತ್ತು ಇತರೆ ವಾಹನಗಳು	9.50%
4.	ಕಂಪ್ಯೂಟರ್‌ಗಳು ಮತ್ತು ಅಂತಹ ಇತರ ಐಟಿ ಸಾಮಗ್ರಿಗಳು	15.00%
5.	ಮರದ ರಚನೆಗಳಂತಹ ತಾತ್ಕಾಲಿಕ ರಚನೆ	100.00%
6.	ಮೇಲೆ ಸೇರಿಸಿರದ ಇತರ ಎಲ್ಲಾ ಸ್ವತ್ತುಗಳು	5.28%

ಬಿ. ಆಸ್ತಿಗಳ ಮೌಲ್ಯದ ಶೇ.೯೦ರಷ್ಟರ ದರದಲ್ಲಿ ಸವಕಳಿಯನ್ನು ಸಂಚಿತಪಡಿಸಿಕೊಂಡು, ಉಳಿದ ಶೇ.10ರಷ್ಟನ್ನು ಉಳಿಕೆ ಮೌಲ್ಯವೆಂದು ಉಳಿಸಿಕೊಳ್ಳಲಾಗುತ್ತದೆ.

ಸಿ. 1.4.2007ರಿಂದ ಸೇರ್ಪಡೆಯಾದ ಆಸ್ತಿಗಳಿಗೆ, ಸೇರ್ಪಡೆಯಾದ ತಿಂಗಳಿನಿಂದಲೇ ಸವಕಳಿಯನ್ನು ಒದಗಿಸಲಾಗಿದೆ. 31.3.2007ರವರೆಗೆ ಸೇರ್ಪಡೆಯಾದ ಆಸ್ತಿಗಳಿಗೆ, ತದನಂತರದ ವರ್ಷದಿಂದ ಸವಕಳಿಯನ್ನು ಒದಗಿಸಲಾಗಿದೆ.

ಡಿ ವಿಸರ್ಜಿಸಿದ/ ಕಳಚಿದ ಆಸ್ತಿಗಳ ಸವಕಳಿಯನ್ನು, ಹಿಂದಿನ ತಿಂಗಳವರೆಗೆ ಒದಗಿಸಲಾಗಿದೆ.

ಈ. ರೂ.೫೦೦/–ವರೆಗಿನ ಪ್ರತಿಯೊಂದು ಆಸ್ತಿಯ ಸವಕಳಿಯನ್ನು, ಅಂತಹ ಆಸ್ತಿಯನ್ನು ಬಳಕೆಗೆ ತಂದ ವರ್ಷದಲ್ಲಿ ಪೂರ್ಣ ಪ್ರಮಾಣದಲ್ಲಿ ಸವಕಳಿಯನ್ನು ಒದಗಿಸಲಾಗಿದೆ.

ಎಫ್.(i) ಭೋಗ್ಯಾಧಾರಿತ ಸ್ಥಳಗಳಲ್ಲಿನ ಸಿವಿಲ್ ನಿರ್ಮಾಣ ರಚನೆಗಳನ್ನು ಹೊರತುಪಡಿಸಿದ ಇತರ ಆಸ್ತಿ, ರಚನೆಗಳ ಸವಕಳಿಯನ್ನು, ಭೋಗ್ಯಾಧಾರಿತ ಅವಧಿ ಅಥವಾ ಅಂತಹ ಆಸ್ತಿ, ರಚನೆಗಳ ಬಾಳಿಕೆ ಅವಧಿಯಲ್ಲಿನ ಶೇಕಡಾ ೯೦ರ ಪ್ರಮಾಣದಂತೆ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

(ii) ಸಿವಿಲ್ ನಿರ್ಮಾಣ ರಚನೆಗಳ ಸವಕಳಿಯನ್ನು ಬಾಳಿಕೆ ಅವಧಿಯಲ್ಲಿನ ಶೇಕಡಾ 100ರ ಪ್ರಮಾಣಾದಂತೆ, ಅಥವಾ ಭೋಗ್ಯಾಧಾರಿತ ಅವಧಿ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ಜಿ. ಕಾರ್ಯವಿಮುಕ್ತಿಗೊಳಿಸಿದ ಆಸ್ತಿಗಳ (ಬಳಕೆಯಲ್ಲಿಲ್ಲದ ಆಸ್ತಿಗಳು) ಹಾಗೂ ದುರಸ್ತಿಗಾಗಿ ಬಿಡುಗಡೆಗೊಳಿಸಿದ ಆಸ್ತಿಗಳ ಸವಕಳಿಯನ್ನು, ಅಂತಹ ಆಸ್ತಿಗಳ ಇಳಿತಗೊಂಡ ಮೌಲ್ಯದ ಮೇಲೆ ಟಿಪ್ಪಣಿ:1.9ಎ ರಲ್ಲಿ ಸೂಚಿಸಿದ ದರಗಳಂತೆ ಒದಗಿಸಲಾಗಿದೆ.

ಹೆಚ್. ಠೇವಣಿ ವಂತಿಗೆ ಹಾಗೂ ಗ್ರಾಹಕ ನಿರ್ಮಿತ ಆಸ್ತಿಗಳು, ಅನುದಾನಿತ ಆಸ್ತಿಗಳ ಸವಕಳಿಯನ್ನು, ವಂತಿಗೆ/ ಅನುದಾನದ ಮೂಲಕ ಸ್ವಾಧೀನಪಡಿಸಿಕೊಂಡ ಆಸ್ತಿಗಳಿಗೆ ಒದಗಿಸಿದ ಸವಕಳಿಯ ಪ್ರಮಾಣದಂತೆ ಆದಾಯವೆಂದು ಹೊಂದಾಣಿಕೆ ಮಾಡಲಾಗಿದೆ.

ಐ. ವಿಲೇವಾರಿಯ ಬಗೆಗಿನ ಲಾಭ ಮತ್ತು ನಷ್ಟಗಳನ್ನು ಮಾರಾಟ ಹುಟ್ಟುವಳಿಗಳನ್ನು ಸಾಗಣೆ ಮೊತ್ತದೊಂದಿಗೆ ಹೋಲಿಸಿ ಕಂಡುಹಿಡಿಯಲಾಗುವುದು. ಇವುಗಳು ಇತರ ಲಾಭ/ (ನಷ್ಟ)ಗಳೊಳಗೆ ಲಾಭ ಅಥವಾ ನಷ್ಟದಲ್ಲಿ ಸೇರುತ್ತವೆ.

1.10 ಕಂದಾಯ ಮಾನ್ಯತೆ:

ಎ. ಸ್ವಾಮ್ಯ ಹಾಗೂ ಇತರ ತತ್ಸಂಬಂಧ ವಿಷಯಾಂಶಗಳ ಮೇಲೆ ಫಲಿತವಾಗಿರುವ ಅಂದಾಜು ಗಳಿಕೆಯನ್ನು ಆಧರಿಸಿ ಗೊತ್ತುಪಡಿಸಿಕೊಂಡಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕ.ವಿ.ನಿ.ಆಯೋಗ),

ಕಾಲಕಾಲಕ್ಕೆ ತನ್ನ ಬಹುವಾರ್ಷಿಕ ವಿದ್ಯುತ್ ದರದಲ್ಲಿ ಅಧಿಸೂಚಿಸುವ ವಿದ್ಯುತ್ ದರಗಳಂತೆ ಸಂಚಿತ ಆಧಾರದ ಪ್ರಕಾರ ವಿದ್ಯುತ್ ಪ್ರಸರಣೆಯ ಕಂದಾಯವನ್ನು ಮಾನ್ಯಗೊಳಿಸಲಾಗುತ್ತದೆ.

ಬಿ. ಅಂತರ್ ರಾಜ್ಯ ಪ್ರಸರಣ ಶುಲ್ಕಗಳ (ISTS) ಮಾರ್ಗಗಳಿಂದ ವಾರ್ಷಿಕ ಪ್ರಸರಣಾ ಶುಲ್ಕವನ್ನು (YTC) ಕಾಲಕಾಲಕ್ಕೆ CERC ಆದೇಶದ ಅನ್ವಯ ಸಂಚಿತ ಆಧಾರದ ಮೇಲೆ ಲೆಕ್ಕೀಕರಿಸಲಾಗುತ್ತಿದೆ.

ಸಿ. ಕಾರ್ಯಾನುಷ್ಠಾನಗೊಂಡ ಕಾಮಗಾರಿಗಳು/ ಕ.ವಿ.ನಿ.ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ಮೂರನೇ ಪಕ್ಷಕಾರರು ನೀಡಿದ ವಂತಿಗೆಯಿಂದ ನಿರ್ಮಿಸಿ ನಿಗಮದ ಅಸ್ತಿತ್ವದಲ್ಲಿರುವ ಆಸ್ತಿಗಳನ್ನು, ಅವುಗಳ ಪೂರ್ಣ ಮೌಲ್ಯದ ಪ್ರಕಾರ ಲೆಕ್ಕಪುಸ್ತಕದಲ್ಲಿ ಒಳಪಡಿಸಲಾಗಿದೆ. ಬಂಡವಾಳ ಅನುದಾನ/ ನಿರ್ದಿಷ್ಟ ಆಸ್ತಿಗಳಿಗೆ ಸಂಬಂಧಿಸಿದ ಅನುದಾನ ಹಾಗೂ ಬಂಡವಾಳ ಆಸ್ತಿಗಳ ವೆಚ್ಚದ ಪ್ರಯುಕ್ತ ಗ್ರಾಹಕರಿಂದ ಕೊಡುಗೆ ಇವುಗಳನ್ನು ಆಸ್ತಿಗಳ ಮೌಲ್ಯದ ವೆಚ್ಚದಿಂದ ಕಡಿಮೆಗೊಳಿಸಿಲ್ಲ, ಆದರೆ ಮುಂದೂಡಲ್ಪಟ್ಟ ಆದಾಯವೆಂದು ಪರಿಗಣಿಸಿ, "ವಂತಿಗೆ ಮತ್ತು ಬಂಡವಾಳ ಆಸ್ತಿಗಳ ನಿಮಿತ್ತ ಅನುದಾನ"ವೆಂದು ವರ್ಗೀಕರಿಸಿ, ನಂತರದಲ್ಲಿ ವಂತಿಗೆ/ ಅನುದಾನದಿಂದ ಗಳಿಸಿದ ಆಸ್ತಿಗಳಿಗೆ ಕಲ್ಪಿಸುವ ಸವಕಳಿಗೆ ಸಮನಾದ ಆದಾಯ ಎಂದು ಹೊಂದಾಣಿಕೆ ಮಾಡಲಾಗಿದೆ.

ಡಿ. ನಗದು ಆಧಾರದಲ್ಲಿ ಲೆಕ್ಕೀಕರಿಸುವ ಮೇಲ್ವಿಚಾರಣ ಶುಲ್ಕಗಳು, ಪರಿಶೀಲನ ಶುಲ್ಕಗಳು, ಪರೀಕ್ಷ ಶುಲ್ಕಗಳು, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು ಮತ್ತು ಮಂಡಪ ಕೀಪರ್ ಶುಲ್ಕಗಳನ್ನು ಹೊರತುಪಡಿಸಿ ಉಳಿದ ಇತರೆ ಸೇವೆಗಳಿಂದ ಬಂದ ಆದಾಯಗಳನ್ನು ಕಂಪನಿಯು ಪೂರ್ಣಗೊಂಡ ಹಂತದ ಆಧಾರದ ಅನ್ವಯ ಲೆಕ್ಕೀಕರಿಸಲಾಗುತ್ತಿದೆ.

ಇ. ಬಡ್ಡಿ ಆದಾಯವನ್ನು ಪರಿಣಾಮಕಾರಿ ಬಡ್ಡಿ ವಿಧಾನವನ್ನು ಬಳಸಿ, ಕಂಡು ಹಿಡಿಯಲಾಗುವುದು.

1.11 ಗುತ್ತಿಗೆಗಳು

ಗುತ್ತಿಗೆದಾರರಾಗಿ,

ಕಂಪನಿಯು ಸ್ವತಂತ್ರವಾಗಿ ಮಾಲೀಕತ್ವದ ಎಲ್ಲಾ ಹೊಣೆಗಳನ್ನು ಮತ್ತು ಪ್ರತಿಫಲಗಳನ್ನು ಪಡೆದಿರುವ ಗುತ್ತಿಗೆಗಳನ್ನು ಆರ್ಥಿಕ ಗುತ್ತಿಗೆಗಳೆಂದು ವರ್ಗೀಕರಿಸಲಾಗುವುದು. ಸ್ವಾಧೀನ ಪಡಿಸಿಕೊಂಡಾಗ ಅಂತಹ ಸ್ವತ್ತುಗಳನ್ನು ನ್ಯಾಯಯುತ ಮೌಲ್ಯ ಅಥವಾ ಗುತ್ತಿಗೆಯ ಪ್ರಾರಂಭದಲ್ಲಿ ಕಡಿಮೆ ಗುತ್ತಿಗೆ ಪಾವತಿಯ ಪ್ರಸ್ತುತ ಮೌಲ್ಯದ ಆಧಾರಿತ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೂಲಧನವನ್ನಾಗಿ ಪರಿವರ್ತಿಸಲಾಗುವುದು.

ಕಾರ್ಯಪ್ರವೃತ್ತ ಗುತ್ತಿಗೆಗಳಡಿಯಲ್ಲಿನ ಗುತ್ತಿಗೆ ಪಾವತಿಗಳನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುತ್ತಿಗೆಯ ಅವಧಿಯ ಮೇಲೆ ನೇರಗೆರೆ ಆಧಾರಿತವಾದ ವೆಚ್ಚವೆಂಬಂತೆ ಅಂಗೀಕರಿಸಲಾಗುವುದು.

ಗುತ್ತಿಗೆ ಸ್ವತ್ತುಗಳಿಗೆ ಮಾಡಲಾದ ಅಭಿವೃದ್ಧಿ ವೆಚ್ಚವನ್ನು ಸ್ವತ್ತಿನ ಉಳಿದ ಗುತ್ತಿಗೆಯ ಅವಧಿಯಲ್ಲಿ ಸಮಾನ ಕಂತಿನಲ್ಲಿ ತೀರಿಸಲಾಗುವುದು.

ಗುತ್ತಿಗೆ ನೀಡುವವರಾಗಿ,

ಕಂಪನಿಯು ಗುತ್ತಿಗೆ ನೀಡುವವರಾಗಿದ್ದಾಗ, ಗುತ್ತಿಗೆ ಪ್ರಾರಂಭವಾದಾಗಿನಿಂದ, ಗುತ್ತಿಗೆ ಆದಾಯವನ್ನು, ನಿರೀಕ್ಷಿತ ಹಣದುಬ್ಬರ ವೆಚ್ಚ ಏರಿಕೆಗಳನ್ನು ಸರಿದೂಗಿಸಲು ನಿರೀಕ್ಷಿತ ಸಾಮಾನ್ಯ ಹಣದುಬ್ಬರದೊಂದಿಗೆ, ಅಲ್ಲಯೇ ಹೆಚ್ಚಲು ರಚನೆಗೊಂಡಿಲ್ಲದ ಹೊರತಾಗಿ, ನೇರಗೆರೆ ಆಧಾರದ ಮೇಲೆ ಆದಾಯವೆಂದು ಅಂಗೀಕರಿಸಲಾಗುವುದು.

1.12 ಅನುದಾನ ಲೆಕ್ಕೀಕರಣ:–

ಎ) ಅನುದಾನವನ್ನು ಪರಿಗಣಿಸುವಲ್ಲಿ ಎಲ್ಲಾ ಸಂಯೋಜಿತ ಷರತ್ತುಗಳನ್ನು ಅನುಸರಿಸಲಾಗುತ್ತಿದೆ ಎಂಬ ಯುಕ್ತ ಆಶ್ವಾಸನೆ ಇದ್ದಾಗ ಅನುದಾನವನ್ನು ಪರಿಗಣಿಸಿ ಅಂಗೀಕರಿಸಲಾಗುತ್ತಿದೆ. ಆದಾಯ ಸಂಬಂಧಿಸಿದ ಅನುದಾನವನ್ನು ಉದ್ದೇಶಿಸಲಾಗಿರುವ ಸಂಬಂಧಿತ ವೆಚ್ಚಕ್ಕೆ ಖರ್ಚು ಮಾಡಲಾದ ಅವಧಿಗಳ ವ್ಯವಸ್ಥಿತ ಆಧಾರದ ಅನ್ವಯ ಆದಾಯವೆಂದು ಪರಿಗಣಿಸಿ ಅಂಗೀಕರಿಸಲಾಗಿರುತ್ತದೆ. ಒಂದು ಆಸ್ತಿಗೆ ಸಂಬಂಧಿಸಿದ ಅನುದಾನವನ್ನು ಸಂಬಂಧಿಸಿದ ಆಸ್ತಿಯ ನಿರೀಕ್ಷಿತ ಉಪಯುಕ್ತ ಬಳಕೆಯ ಮೇಲಿನ ಆದಾಯದ ಅವಧಿಯ ಸಮಾನ ಮೊತ್ತಕ್ಕೆ ಪರಿಗಣಿಸಿ ಅಂಗೀಕರಿಸಲಾಗುತ್ತದೆ.

ಬಿ) ಕಂದಾಯ/ ಸಂಯುಕ್ತ ಅನುದಾನಗಳನ್ನು ಅವುಗಳಿಗೆ ಲಗತ್ತಿಸಿದ ಬಾಧ್ಯತೆಗಳನ್ನು ಪೂರೈಸಿದ ಮೇಲೆ ಆದಾಯವೆಂದು ಪರಿಗಣಿಸಬೇಕು ಮತ್ತು ಅದನ್ನು ಸ್ವೀಕರಿಸುವುದು ನಿರ್ದಿಷ್ಟವಾದ ಮೇಲೆ ಆದಾಯವೆಂದು ಪರಿಗಣಿಸುವುದು.

1.13 ಉದ್ಯೋಗಿ ಸೌಲಭ್ಯಗಳು:

ಎ. ಅಲ್ಪಾವಧಿಯ ಉದ್ಯೋಗಿ ಸೌಲಭ್ಯಗಳು:

ಅಲ್ಪಾವಧಿಯ ಉದ್ಯೋಗಿ ಸೌಲಭ್ಯಗಳಾದ ವೇತನ, ಕೂಲಿ ಮತ್ತು ಇತರೆ ಸೌಲಭ್ಯಗಳನ್ನು ಸೇವೆ ಸಲ್ಲಿಸಿದ ವರ್ಷದಲ್ಲಿನ ಲಾಭ ಮತ್ತು ನಷ್ಟದ ತಖ್ತೆಃಯಲ್ಲಿ ರಿಯಾಯಿತಿ ನೀಡದ ಮೊತ್ತದ ಆಧಾರದಲ್ಲಿ ವೆಚ್ಚವೆಂದು ಪರಿಗಣಿಸಿ ಅಂಗೀಕರಿಸಲಾಗುತ್ತದೆ. ಸದರಿ ಅಲ್ಪಾವಧಿಯ ಸೌಲಭ್ಯಗಳನ್ನು ಸೇವೆ ಸಲ್ಲಿಸಿದ ವರ್ಷದ ಅವಧಿಗೆ ಅಂಗೀಕರಿಸಿ ಸಂಬಂಧಿಸಿದ ಅವಧಿಯ ಲಾಭ ಮತ್ತು ನಷ್ಟ ತಖ್ತೆಃಯಲ್ಲಿ ಲೆಕ್ಕೀಕರಿಸಲಾಗಿದೆ.

ಬಿ. ಉಪದಾನ ಪಿಂಚಣಿ ಯೋಜನೆ

ದಿನಾಂಕ 01.04.2006ರಂದು ಅಥವಾ ನಂತರ ನಿಗಮದಲ್ಲಿ ಕೆಲಸಕ್ಕೆ ಸೇರಿರುವ ಉದ್ಯೋಗಿಗಳು **"ನೂತನ ವ್ಯಾಖ್ಯಾನಿತ ಉಪದಾನ ಪಿಂಚಣಿ ಯೋಜನೆ"** ಹಾಗೂ ಕಂಪನಿಯು, ಸಂಬಳದ ಮೇಲೆ ಪಾವತಿಸುವ/ ಒದಗಿಸುವ ನಿರ್ದಿಷ್ಟ ದರದ ಕೊಡುಗೆಯ ಯೋಜನೆಗೆ ಒಳಪಡುತ್ತಾರೆ.

ಸಿ. ವ್ಯಾಖ್ಯಾನಿಸಿದ ಸೌಲಭ್ಯಗಳ ಯೋಜನೆಗಳು

ದಿನಾಂಕ 31.3.2006 ರವರೆಗೆ ಕೆಲಸಕ್ಕೆ ಸೇರಿದ ಉದ್ಯೋಗಿಗಳನ್ನು ಒಳಪಡುವ ವಿವರಿತ ಉಪದಾನ ಹಾಗೂ ಪಿಂಚಣಿ ಸೌಲಭ್ಯ ನಿಮಿತ್ತದ ವೆಚ್ಚವನ್ನು, ಖಓಆ–೦ಖ-19ರ ಪ್ರಕಾರ ಕಾಲಕಾಲಕ್ಕೆ ಕ.ವಿ.ಪ್ರ.ನಿ.ನಿ. ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಉಪದಾನ ನ್ಯಾಸವು (ಕೆ.ಇ.ಪಿ.ಜಿ.ಐ) ಸೂಚಿಸುವ ವಾಸ್ತವಿಕ ಮೌಲ್ಯಮಾಪನವನ್ನು ಆಧರಿಸಿದ ದರ/ ಮೊಬಲಗಿನ ಪ್ರಕಾರ ಒದಗಿಸಲಾಗುತ್ತದೆ. ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

ಇ. ರಜೆ ನಗದೀಕರಣ

ದೀರ್ಘಾವಧಿ ಸೌಲಭ್ಯ– ಗಳಿಕೆ ರಜೆ ನಗದೀಕರಣವನ್ನು ಯೋಜಿತ ಯೂನಿಟ್ ಕ್ರೆಡಿಟ್ ಕ್ರಮಬದ್ಧತೆ ಲೆಕ್ಕಾಚಾರದ ಪ್ರಕಾರ ವಾಸ್ತವಿಕ ಮೌಲ್ಯಾಧಾರದಂತೆ ಗೊತ್ತುಪಡಿಸಿಕೊಂಡು ಅಗತ್ಯಪಡಿಸುವಂತೆ ಪ್ರತಿ ಆರ್ಥಿಕ ವರ್ಷಾಂತ್ಯದಲ್ಲಿ ಅವಕಾಶ ಕಲ್ಪಿಸಲಾಗುತ್ತದೆ. ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

ಈ. ಕುಟುಂಬ ಹಿತ ನಿಧಿ:–

'ನೌಕರರ ಕುಟುಂಬ ಹಿತ ನಿಧಿ' ಯೋಜನೆಯನ್ನು ದಿನಾಂಕ: 01.07.1978 ರಿಂದ ಜಾರಿಗೆ ಬರುವಂತೆ ಪಂಚಯಿಸಲಾಗಿದೆ. ಪ್ರತಿಯೊಬ್ಬ ನೌಕರನಿಂದ 200/– ರೂ.ಗಳನ್ನು ಕಡಿತಗೊಳಿಸಿ, ಈ ನಿಧಿಗೆ ಸಂದಾಯ ಮಾಡಲಾಗುತ್ತದೆ. ನೌಕರನು ಸೇವಾವಧಿಯಲ್ಲಿದ್ದಾಗಲೇ ಮರಣ ಹೊಂದಿದರೆ, ಅವನು ಕನಿಷ್ಠ 12 ತಿಂಗಳುಗಳು ಮಾತ್ರ 2,400/– ಹಣವನ್ನು ಸಂದಾಯಮಾಡಿದ್ದರೆ, ಅವನ ನ್ಯಾಯಸಮ್ಮತ ಉತ್ತರಾಧಿಕಾರಿಗೆ ರೂ.2,00,000/–ಗಳನ್ನು ನೀಡಲಾಗುತ್ತದೆ. ಯೋಜನೆಯನುಸಾರ, ಕಂಪನಿಯು, ನೌಕರರ ಸಾವು/ ನಿವೃತ್ತಿಯಾದ ಪಕ್ಷದಲ್ಲಿ, ಯೋಜನೆಯ ಷರತ್ತುಗಳನುಸಾರವಾಗಿ ಈ ನಿಧಿಗೆ ಕೊಡುಗೆ ನೀಡುತ್ತದೆ. ವಿಮಾ ಕಂತಿನ ಸಂಪಾದನೆಗಳು ಅಥವಾ ನಷ್ಟಗಳನ್ನು ಅವುಗಳು ಕಂಡುಬರುವ ಅವಧಿಯ ಇತರೆ ಸಮಗ್ರ ಆದಾಯದಲ್ಲಿ ಗುರುತಿಸಲಾಗುತ್ತದೆ ಹಾಗೂ ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

ಎಫ್. ಪಿಂಚಣಿ ಸುರಕ್ಷಾ ನಿಧಿ:

"ಕೆಇಬಿ ಪಿಂಚಣಿದಾರರ ಕುಟುಂಬ ಲಾಭ/ ಸುರಕ್ಷಾನಿಧಿ"ಯನ್ನು ದಿನಾಂಕ:08.10.1998ರಂದು ಸ್ಥಾಪಿಸಲಾಯಿತು. ಈ ಯೋಜನೆಯ ಅನುಸಾರ, ಪ್ರತಿಯೊಬ್ಬ ಪಿಂಚಣಿದಾರ/ ಕುಟುಂಬ ಪಿಂಚಣಿದಾರ ಈ ನಿಧಿಗೆ ರೂ.100/–ಗಳ ಮಾಸಿಕ ದೇಣಿಗೆಯನ್ನು ನೀಡಬೇಕು. ನಿಧಿಯ ಸದಸ್ಯ ಕನಿಷ್ಠ 12 ತಿಂಗಳುಗಳಿಗೆ ದೇಣಿಗೆ ನೀಡಿ ನಂತರ, ತೀರಿಕೊಂಡಾಗ ನಾಮನಿರ್ದೇಶಿತರಿಗೆ ನಿಧಿಯಿಂದ ಒಟ್ಟು ಹಣವಾದ 30,000 ರೂ.ಗಳನ್ನು ನೀಡಲಾಗುತ್ತದೆ. ಕಂಪನಿಯು ಈ ನಿಧಿಗೆ ಯಾವುದೇ ದೇಣಿಗೆಯನ್ನು ನೀಡುವುದಿಲ್ಲ.

1.14 ವಿದೇಶಿ ವಿನಿಮಯ ವ್ಯವಹಾರಗಳು

ಎ. ಕಾರ್ಯಪ್ರವೃತ್ತ ವಿನಿಮಯ

ಕಂಪನಿಯ ಕಾರ್ಯಪ್ರವೃತ್ತ ಕರೆನ್ಸಿಯೆಂದರೆ ಭಾರತೀಯ ರೂಪಾಯಿ, ಈ ಆರ್ಥಿಕ ಪಟ್ಟಿಗಳನ್ನು ಭಾರತೀಯ ರೂಪಾಯಿಗಳಲ್ಲಿ ನೀಡಲಾಗುತ್ತದೆ.

ಬಿ. ವ್ಯವಹಾರಗಳು ಮತ್ತು ಬದಲಾವಣೆಗಳು

ವಿದೇಶಿ ಕರೆನ್ಸಿ ವರ್ಗದ ಆರ್ಥಿಕ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಬ್ಯಾಲೆನ್ಸ್ ಶೀಟ್ ದಿನಾಂಕದಲ್ಲಿರುವಂತೆ ಪರಿಣಾಮಕಾರಿಯಾಗಿ ಯುಕ್ತ ಕಾರ್ಯ ಪ್ರವೃತ್ತ ಕರೆನ್ಸಿಗೆ ಬದಲಾಯಿಸಲಾಗುವುದು. ಈ ಇಂತಹ ಬದಲಾವಣೆಗಳಿಂದ ದೊರೆಯುವ ಲಾಭಗಳು ಅಥವಾ ನಷ್ಟಗಳನ್ನು ಲಾಭ ಮತ್ತು ನಷ್ಟದ ಪಟ್ಟಿಯಲ್ಲಿ ನಿವ್ವಳ ಲಾಭದಲ್ಲಿ ಸೇರಿಸಲಾಗುವುದು.

ವಿದೇಶಿ ಕರೆನ್ಸಿ ಬದಲಾವಣೆಯಿಂದ ಇತ್ಯರ್ಥಗೊಳಿಸಿದ ವ್ಯವಹಾರಿಕ ಲಾಭ ಅಥವಾ ನಷ್ಟಗಳನ್ನು, ವ್ಯವಹಾರವು ಇತ್ಯರ್ಥವಾದ ಅವಧಿಯಲ್ಲಿನ ನಿವ್ವಳ ಲಾಭವನ್ನು ಕಂಡುಹಿಡಿಯುವುದರಲ್ಲಿ ಪರಿಗಣಿಸ'ಲಾಗುತ್ತದೆ. ಕಂದಾಯ, ವೆಚ್ಚ ಮತ್ತು ವಿದೇಶಿ ಕರೆನ್ಸಿ ವರ್ಗಗಳಲ್ಲಿರುವ ಹಣದ ಹರಿವಿನ ಬಾಬ್ತುಗಳನ್ನು ವ್ಯವಹಾರ ನಡೆಸಿದ ದಿನಾಂಕದಂದು ಜಾರಿಯಲ್ಲಿ ಬಂದಿರುವಂತೆ ವಿನಿಮಯ ದರವನ್ನು ಉಪಯೋಗಿಸಿಕೊಂಡು ಯುಕ್ತ ಕಾರ್ಯಪ್ರವೃತ್ತ ಕರೆನ್ಸಿಗಳಿಗೆ ಬದಲಾವಣೆ ಮಾಡಬೇಕು.

1.15 ಸಾಲದ ವೆಚ್ಚಗಳು

ನಿರ್ಮಿತ/ ಅರ್ಜಿತ ಅರ್ಹತಾದಾಯಕ ಆಸ್ತಿಗಳಿಗೆ ಸಂಬಂಧಿಸಿದ ಸಾಲದ ವೆಚ್ಚಗಳನ್ನು, ಅಂತಹ ಆಸ್ತಿಗಳ ಮೌಲ್ಯದ ಭಾಗವೆಂದು ಬಂಡವಾಳೀಕರಿಸಲಾಗುತ್ತದೆ. ಅರ್ಹತಾದಾಯಕ ಆಸ್ತಿ ಎಂದರೆ, ಉದ್ದೇಶಿತ ಬಳಕೆಗಾಗಿ ಸಿದ್ಧವಾಗಲು ಸಾಕಷ್ಟು ಅವಶ್ಯಕ ಅವಧಿಯನ್ನು ತೆಗೆದುಕೊಳ್ಳುವಂತಹದ್ದು, ಸಾಲ ಪಡೆಯುವ ವೆಚ್ಚಗಳೆಂದರೆ ತನ್ನ ಉದ್ದೇಶಿತ ಉಪಯೋಗಕ್ಕೆ ಸಿದ್ಧವಾಗಲು ಸಾಕಷ್ಟು ಸಮಯವನ್ನು ತೆಗೆದುಕೊಳ್ಳುವ ಸ್ವತ್ತಿನ ವೆಚ್ಚದ ಭಾಗವಾಗಿ ಬಂಡವಾಳವಾಗುವ ಅರ್ಹದಾಯ ಸ್ವತ್ತಿನ ಆರ್ಜನೆ, ನಿರ್ಮಾಣ, ತಯಾರಿಕೆಗೆ ನೇರವಾಗಿ ಕಾರಣವಾಗುವ' ಯೋಗ್ಯವಾದ ವೆಚ್ಚಗಳು, ಕಂಪನಿಯು ಅಂತಹ ಖರ್ಚಿನ ಮೇಲೆ ಉಂಟಾಗುವ ವೆಚ್ಚಕ್ಕೆ ಬಂಡವಾಳೀಕರಣದ ದರವನ್ನು ಅನ್ವಯಿಸುವುದರ ಮೂಲಕ ಮೂಲಧನೀಕರಣಕ್ಕೆ ಅರ್ಹವಾದ ಸಾಲಪಡೆಯುವ ವೆಚ್ಚದ ಮೊತ್ತವನ್ನು ಕಂಡುಹಿಡಿಯಲಾಗುತ್ತದೆ. ಮೂಲಧನೀಕರಣದ ದರವನ್ನು ಅರ್ಹದಾಯಕ ಸ್ವತ್ತಿನ ಖರೀದಿಗೆ ನಿರ್ದಿಷ್ಟವಾಗಿ ಮಾಡಲಾದ ಸಾಲ ಪಡೆಯುವಿಕೆಯನ್ನು ಹೊರತುಪಡಿಸಿ, ಆ ಅವಧಿಯಲ್ಲಿ ಬಾಕಿಯಿರುವ ಕಂಪನಿಯ ಸಾಲಗಳಿಗೆ ಅನ್ವಯಿಸುಬಹುದಾದ ಸಾಲ ವೆಚ್ಚದ ಅಂದಾಜು ದರವನ್ನು ಆಧರಿಸಿ ಕಂಡುಹಿಡಿಯಲಾಗುವುದು. ಕಂಪನಿಯು ಆ ಅವಧಿಯಲ್ಲಿ ಬಂಡವಾಳೀಕರಣಗೊಳಿಸುವ ಸಾಲದ ವೆಚ್ಚದ ಮೊತ್ತವು ಅವಧಿಯಲ್ಲಿ ಉಂಟಾಗುವ ಸಾಲದ ವೆಚ್ಚದ ಮೊತ್ತವನ್ನು ಮೀರಬಾರದು. ಇತರ ಎಲ್ಲಾ ಸಾಲದ ವೆಚ್ಚಗಳನ್ನು, ಅವುಗಳು ಸಂಭವಿಸದ ಅವಧಿಯಲ್ಲಿ ಖರ್ಚು ಮಾಡಲಾಗುವುದು.

1.16 ಪ್ರತೀ ಷೇರಿನ ಸಂಪಾದನೆ

ಪ್ರತೀ ಷೇರಿನ ಮೂಲ ಸಂಪಾದನೆ

ಪ್ರತೀ ಷೇರಿನ ಮೂಲ ಸಂಪಾದನೆಯನ್ನು ಆರ್ಥಿಕ ವರ್ಷದ ಅವಧಿಯಲ್ಲಿ ಬಾಕಿಯಿರುವ ಸ್ವಾಮ್ಯ ಷೇರುಗಳ ವೇಯಿಟೆಡ್ ಸರಾಸರಿ ಸಂಖ್ಯೆಯಿಂದ ಕಂಪನಿಯ ಸ್ವಾಮ್ಯ ಷೇರುದಾರರಿಗೆ ಆರೋಪಯೋಗ್ಯವಾದ ಲಾಭವನ್ನು ಭಾಗಿಸುವುದರಿಂದ ಲೆಕ್ಕ ಹಾಕಲಾಗುತ್ತದೆ.

ಪ್ರತೀ ಷೇರಿನ ಗುಣತಗ್ಗಿದ ಸಂಪಾದನೆ

ಪ್ರತೀ ಷೇರಿನ ಗುಣತಗ್ಗಿದ ಸಂಪಾದನೆಯು ಎಲ್ಲಾ ಗುಣತಗ್ಗಿದ' ಸಾಮರ್ಥ್ಯ ಸ್ವಾಮ್ಯ ಷೇರುಗಳ ಬದಲಾವಣೆಯನ್ನು ಪರಿಭಾವಿಸಿ, ಬಾಕಿಯಿರುವ ಆರ್ಥಿಕ ಸ್ವಾಮ್ಯ ಷೇರುಗಳು ಒಳಗೊಂಡಂತೆ, ಸ್ವಾಮ್ಯ ಷೇರುಗಳ ವೇಹಿಟೆಡ್ ಸರಾಸರಿ ಸಂಖ್ಯೆ ಮತ್ತು ಅನಂತರದ ಆದಾಯದ ಬಡ್ಡಿಯ ತೆರಿಗೆಯ ಪರಿಣಾಮ ಮತ್ತು ಗುಣತಗ್ಗಿದ ಸಾಮರ್ಥಿಕ ಸ್ವಾಮ್ಯ ಷೇರುಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರತೀ ಷೇರಿನ ಮೂಲ ಸಂಪಾದನೆಯ ನಿರ್ಧರಣೆಯಲ್ಲಿ ಉಪಯೋಗಿಸುವ ಸ್ವಾಮ್ಯ ಷೇರುಗಳ ಸಂಖ್ಯೆಯನ್ನು ಹೊಂದಾಣಿಕೆ ಮಾಡಲಾಗುತ್ತದೆ.

1.17 ಪಿ.ಪಿ.ಇ. ಮತ್ತು ಸ್ಪರ್ಶಾತೀತ ಆಸ್ತಿಗಳ ದುರ್ಬಲತೆ: (Impairment of PPE and Intangible Assets)

ಕಂಪನಿಯ ಸ್ವತ್ತುಗಳನ್ನು ಮುಂದುವರಿಸುವ ಮೊತ್ತದ ಯಾವುದೇ ದುರ್ಬಲತೆಯ ಸೂಚನೆಗಳಿವೆಯೇ ಎಂಬುದನ್ನು ನಿರ್ಧರಿಸಲು ಪ್ರತಿ ಆಯವ್ಯಯ ದಿನಾಂಕದಲ್ಲಿ ಪಿ.ಪಿ.ಇ.ಗಳ ಮತ್ತು ಸ್ಪರ್ಶಾತೀತ ಆಸ್ತಿಗಳನ್ನು ಮುಂದುವರಿಸುವ ಮೌಲ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಯಾವುದೇ ಸೂಚನೆಗಳು ಅಸ್ತಿತ್ವದಲ್ಲಿದ್ದಲ್ಲಿ, ಸ್ವತ್ತುಗಳನ್ನು ಮರುಪಡೆದುಕೊಳ್ಳುವ ಮೊತ್ತವನ್ನು ಅಂದಾಜಿಸಲಾಗಿದೆ. ಆಸ್ತಿಯನ್ನು ಸಾಗಿಸುವ ಮೊತ್ತವು ಮರುಪಡೆದುಕೊಳ್ಳುವ ಮೊತ್ತವನ್ನು ಮೀರಿದ ಸಂದರ್ಭಗಳಲ್ಲಿ ದುರ್ಬಲ ನಷ್ಟವನ್ನು ಗುರುತಿಸಲಾಗುತ್ತದೆ. ಮರುಪಡೆಯಬಹುದಾದ ಮೊತ್ತವು ನಿವ್ವಳ ಮಾರಾಟ ದರ ಮತ್ತು ಅವುಗಳ ಬಳಕೆಯ ಮೌಲ್ಯಕ್ಕಿಂತ ಹೆಚ್ಚಾಗಿದೆ. ಸೂಕ್ತ ರಿಯಾಯಿತಿ ಅಂಶದ ಆಧಾರದ ಮೇಲೆ ಅವುಗಳ ಪ್ರಸ್ತುತ ಮೌಲ್ಯಕ್ಕೆ ಭವಿಷ್ಯದ ನಗದು ಹರಿವುಗಳನ್ನು ರಿಯಾಯಿತಿ ಮಾಡುವ ಮೂಲಕ ಬಳಕೆಯಲ್ಲಿರುವ ಮೌಲ್ಯವನ್ನು ನಿಗದಿ ಮಾಡಲಾಗುತ್ತದೆ. ಹಿಂದಿನ ಲೆಕ್ಕಪತ್ರ ಅವಧಿಗಳಲ್ಲಿ ಒಂದು ಸ್ವತ್ತಿಗಾಗಿ ಗುರುತಿಸಲ್ಪಟ್ಟ ದುರ್ಬಲ ನಷ್ಟವು ಇನ್ನು ಮುಂದೆ ಅಸ್ತಿತ್ವದಲ್ಲಿರುವುದಿಲ್ಲ ಅಥವಾ ಕಡಿಮೆಯಾಗಬಹುದೆಂಬ ಸೂಚನೆಯಿರುವಾಗ, ದುರ್ಬಲ ನಷ್ಟದ ಅಂತಹ ಹಿಮ್ಮುಖವು ಲಾಭ ಮತ್ತು ನಷ್ಟ ತಖ್ತೆ:ಯಲ್ಲಿ ಗುರುತಿಸಲ್ಪಟ್ಟಿದೆ.

1.18 ಅವಕಾಶಗಳು, ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರು ಆಸ್ತಿಗಳು:

(ಎ) ಹಿಂದಿನ ವ್ಯವಹರಣೆಗಳ ನಿಮಿತ್ತ ನಿಗಮವು ಪ್ರಸಕ್ತ ಹೊಣೆಗಾರಿಕೆಗಳನ್ನು ಹೊಂದಿರುವ ಪ್ರಯುಕ್ತ ಆ ನಿಮಿತ್ತವಾಗಿ ಅವಕಾಶವನ್ನು ಸಮ್ಮತಿಸಲಾಗಿದ್ದು, ಅಂತಹ ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಸಂಪನ್ಮೂಲದ ಲಭ್ಯತೆಯು ಅವಶ್ಯವಾಗಿದ್ದು, ಆ ಮಟ್ಟಿಗೆ ಒಂದು ಭರವಸಾಪೂರ್ವಕ ಅಂದಾಜನ್ನು ಒದಗಿಸಬಹುದಾಗಿರುತ್ತದೆ. ಆಸ್ತಿ–ಹೊಣೆ ಪಟ್ಟಿ ದಿನಾಂಕದಂದಿಗೆ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಅಗತ್ಯವಾಗುವಂತೆ ಅತ್ಯುತ್ತಮ ಅಂದಾಜನ್ನು ಆಧರಿಸಿ ಅವಕಾಶವನ್ನು ಗೊತ್ತುಪಡಿಸಲಾಗಿದೆ. ಇವನ್ನು ಪ್ರತಿ ಆಸ್ತಿ–ಹೊಣೆ ಪಟ್ಟಿ ದಿನಾಂಕದಂದು ಪರಿಶೀಲನೆಗೊಳಪಡಿಸಿ, ವ್ಯವಸ್ಥೆಯ ಪ್ರಸಕ್ತ ಅಂದಾಜನ್ನು ಬಿಂಬಿಸಲು ಹೊಂದಾಣಿಕೆ ಮಾಡಲಾಗುತ್ತದೆ.

(ಬಿ) ಸಾದಿಲ್ವಾರು ಹೊಣೆಗಾರಿಕೆಗಳನ್ನು ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಬಿಂಬಿಸಿಲ್ಲ, ಆದರೆ ಟಿಪ್ಪಣಿಗಳಲ್ಲಿ ಬಿಂಬಿಸಲಾಗಿದೆ. ಹಿಂದಿನ ಘಟನೆಗಳಿಂದ ಉಂಟಾದ ಸಂಭವನೀಯ ಬಾಧ್ಯತೆ ಸಾದಿಲ್ವಾರು ಹೊಣೆಗಾರಿಕೆಯಾಗಿದೆ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು ಅನಿರ್ದಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಿಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದು ಗುರುತಿಸಿರುವುದಿಲ್ಲ, ಏಕೆಂದರೆ (1) ಆರ್ಥಿಕ ಪ್ರಯೋಜನಗಳನ್ನು ಹೊಂದುವಂತಹ ಸಂಪನ್ಮೂಲಗಳ ಹೊರಹರಿವು ಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಅಗತ್ಯವಿರುತ್ತದೆ ಎಂಬುದು ಸಂಭಾವ್ಯವಲ್ಲ ಅಥವಾ (2) ಹೊಣೆಗಾರಿಕೆಯ ಪ್ರಮಾಣವನ್ನು ಸಾಕಷ್ಟು ವಿಶ್ವಾಸಾರ್ಹತೆಯಿಂದ ಅಳೆಯಲಾಗುವುದಿಲ್ಲ.

(ಸಿ) ಸಾದಿಲ್ವಾರು ಆಸ್ತಿಗಳ ಹಿಂದಿನ ಘಟನೆಗಳಿಂದ ಉದ್ಭವಿಸುವ ಒಂದು ಸಂಭವನೀಯ ಆಸ್ತಿ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು ಅನಿರ್ದಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಿಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದನ್ನು ಆರ್ಥಿಕ ವಿವರಣಾ ಪಟ್ಟಿಯಲ್ಲಿ ಗುರುತಿಸಿರುವುದಿಲ್ಲ, ಆರ್ಥಿಕ ಪ್ರಯೋಜನಗಳ ಒಳಹರಿವು ಸಾಧ್ಯವಾದಾಗ ಸಾದಿಲ್ವಾರು ಆಸ್ತಿಗಳ ವಿವರಗಳನ್ನು ಟಿಪ್ಪಣಿಗಳಲ್ಲಿ ಬಹಿರಂಗಗೊಳಿಸಲಾಗುತ್ತದೆ.

(ಡಿ) ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರು ಆಸ್ತಿಗಳನ್ನು ಹಣಕಾಸು ವಿವರಣ ಪಟ್ಟಿಯಲ್ಲಿ ಸೂಕ್ತವಾಗಿ ಬಹಿರಂಗಪಡಿಸಲು/ ಗುರುತಿಸಲು ನಿರಂತರವಾಗಿ ಮೌಲ್ಯಮಾಪನ ಮಾಡಲಾಗುತ್ತದೆ.

1.19 ಸ್ಪರ್ಶಾತೀತ ಆಸ್ತಿಗಳು

ಸ್ಪರ್ಶಾತೀತ ಆಸ್ತಿಗಳ ವೆಚ್ಚವು ಸಂಚಿತ ಋಣಮುಕ್ತತೆಯನ್ನು ಕಳೆದ ಮತ್ತು ನಿವ್ವಳ ದುರ್ಬಲತ್ಲೆ ಯಾವುದಾದರೂ ಇದ್ದರೆ ಸಮೀಕರಿಸಿ ತೋರಿಸಿದೆ. ನಿರೀಕ್ಷಿತ ಭವಿಷ್ಯದ ಆರ್ಥಿಕ ಪ್ರಯೋಜನಗಳನ್ನು ಕಂಪನಿಗೆ ಹರಿಯುವ ಸಾಧ್ಯತೆ ಇದ್ದಲ್ಲಿ ಸ್ಪರ್ಶಾತೀತ ಮತ್ತು ಅದರ ವೆಚ್ಚವನ್ನು ವಿಶ್ವಾಸಾರ್ಹವಾಗಿ ಮಾಪನ ಮಾಡಬಹುದು ಎಂದಾದಲ್ಲಿ ಆಸ್ತಿಗಳನ್ನು ಗುರುತಿಸಲಾಗುತ್ತದೆ. ಸ್ಪರ್ಶಾತೀತ ಆಸ್ತಿಗಳನ್ನು (ಪರವಾನಗಿಯ ಒಪ್ಪಂದದಡಿ ಹಕ್ಕುಗಳನ್ನು ಒಳಗೊಂಡಿದೆ ಮತ್ತು ತಂತ್ರಾಂಶ ಪರವಾನಗಿಗಳನ್ನು) ನೇರ ಸಾಲಿನ ವಿಧಾನದಲ್ಲಿ ಮೂರು ವರ್ಷಗಳಿಗೊಮ್ಮೆ ಋಣಮುಕ್ತತೆ ಮಾಡಲಾಗುತ್ತದೆ.

1.20 ಆರ್ಥಿಕ ಸಾಧನಗಳು:

ಒಂದು ಆರ್ಥಿಕ ಸಾಧನವು ಒಂದು ಘಟಕದ ಆರ್ಥಿಕ ಆಸ್ತಿಯ ಉಗಮವಾಗಿಸುವ ಒಂದು ಒಪ್ಪಂದ ಮತ್ತು ಆರ್ಥಿಕ ಹೊಣೆಗಾರಿಕೆ ಅಥವಾ ಮತ್ತೊಂದು ಘಟಕದ ಸ್ವಾಮ್ಯ ಸಾಧನವಾಗಿದೆ.

ಹಣಕಾಸಿನ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳು ಸರಿದೂಗಿಸಲ್ಪಟ್ಟಿವೆ ಮತ್ತು ನಿವ್ವಳ ಮೊತ್ತವನ್ನು ಆಯವ್ಯಯ ಪಟ್ಟಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ಕಂಪನಿಯು ಕಾನೂನಾತ್ಮಕ ಹಕ್ಕನ್ನು ಹೊಂದಿರುವಾಗ ಮಾತ್ರ ಗುರುತಿಸಲಾದ ಮೊತ್ತವನ್ನು ಸರಿದೂಗಿಸಲಾಗುತ್ತದೆ ಮತ್ತು ನಿವ್ವಳ ಆಧಾರದ ಮೇಲೆ ನೆಲೆಗೊಳ್ಳಲು ಅಥವಾ ಸ್ವತ್ತುಗಳನ್ನು ಕೈಗೂಡಿಸಿಕೊಳ್ಳಲು ಹೊಣೆಗಾರಿಕೆಗಳನ್ನು ಏಕಕಾಲದಲ್ಲಿ ಇತ್ಯರ್ಥಗೊಳಿಸಲು ಉದ್ದೇಶಿಸಿದೆ.

ಆರ್ಥಿಕ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗೀಕರಣವನ್ನು ಕಂಪನಿಯು ಆರಂಭದಲ್ಲಿ ನಿರ್ಧರಿಸುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ ಆರ್ಥಿಕ ಆಸ್ತಿಗಳಿಗಾಗಿ ಯಾವುದೇ ಮರುವರ್ಗೀಕರಣವನ್ನು ಮಾಡಲಾಗುವುದಿಲ್ಲ ಇದನ್ನು FVTOCI ನಲ್ಲಿ ಸ್ವಾಮ್ಯ ಸಾಧನಗಳನ್ನಾಗಿ ವರ್ಗೀಕರಿಸಲಾಗಿದೆ ಮತ್ತು ಆರ್ಥಿಕ ಆಸ್ತಿಗಳು/ ಹೊಣೆಗಾರಿಕೆಗಳನ್ನು FVTPL ನಲ್ಲಿ ನಿರ್ದಿಷ್ಟವಾಗಿ ಗೊತ್ತುಪಡಿಸಿದೆ. ಆದಾಗ್ಯೂ, ಇತರ ಆರ್ಥಿಕ ಆಸ್ತಿಗಳನ್ನು ಕಂಪನಿಯ ವ್ಯಾಪಾರಿ ಮಾದರಿಯಲ್ಲಿ ಬದಲಾವಣೆಯಾದ ಸಂದರ್ಭದಲ್ಲಿ ಮರುವರ್ಗೀಕರಿಸಬಹುದಾಗಿದೆ. ಕಂಪನಿಯು ಆರ್ಥಿಕ ಆಸ್ತಿಗಳನ್ನು ಮರುವರ್ಗೀಕರಿಸಿದಾಗ, ಅಂತಹ ಮರುವರ್ಗೀಕರಣಗಳನ್ನು ಮುಂದಿನ ವರದಿ ಅವಧಿಯ ಮೊದಲ ದಿನದಿಂದ ನಿರೀಕ್ಷಿತವಾಗಿ ಮಾಡಲಾಗುತ್ತದೆ. ಕಂಪನಿಯು ಹಿಂದೆ ಗುರುತಿಸಲಾದ ದುರ್ಬಲತೆ ಗಳಿಕೆಗಳು ಅಥವಾ ನಷ್ಟಗಳನ್ನೊಳಗೊಂಡಂತೆ ಯಾವುದೇ ಗಳಿಕೆಗಳು, ನಷ್ಟಗಳನ್ನು ಪುನರಾವರ್ತಿಸುವುದಿಲ್ಲ.

ಎ. ಆರ್ಥಿಕ ಸ್ವತ್ತುಗಳು/ ಆಸ್ತಿಗಳು

ಆರ್ಥಿಕ ಸ್ವತ್ತುಗಳು ಸ್ವಾಮ್ಯ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಗಳು, ವ್ಯಾಪಾರ ಸ್ವೀಕೃತಿಗಳು, ನಗದು ಮತ್ತು ನಗದು ಸಮಾನ ಮತ್ತು ಇತರ ಹಣಕಾಸಿನ ಸ್ವತ್ತುಗಳನ್ನು ಒಳಗೊಂಡಿರುತ್ತವೆ.

ಆ ಹಣಕಾಸಿನ ಸ್ವತ್ತುಗಳು ಮತ್ತು ಅದರ ಒಪ್ಪಂದದ ನಗದು ಹರಿವಿನ ಗುಣಲಕ್ಷಣಗಳನ್ನು ನಿರ್ವಹಿಸಲು ವ್ಯವಹಾರ ಮಾದರಿ (ಅಂದರೆ) ವ್ಯವಹಾರಗಳ ಸ್ವಭಾವವನ್ನು ಅವಲಂಬಿಸಿ, ಆರ್ಥಿಕ ಸ್ವತ್ತುಗಳನ್ನು ಮೊದಲಿಗೆ ನ್ಯಾಯೋಚಿತ ಮೌಲ್ಯದಲ್ಲಿ ಅಳೆಯಲಾಗುತ್ತದೆ ಮತ್ತು ತದನಂತರ ಈ ಕೆಳಗಿನವುಗಳಲ್ಲಿ ಅಳತೆ ಮತ್ತು ವರ್ಗೀಕರಣ ಮಾಡಲಾಗುತ್ತದೆ.

ಎ) ಋಣಮುಕ್ತತೆಯ ವೆಚ್ಚ; ಅಥವಾ

ಬಿ) ಇತರ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯ (Fair Value Through Other Comprehensive Income (FVTOCI)); ಅಥವಾ

ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ (FVTPL)

ಮಿತವ್ಯಯದ ವೆಚ್ಚವು ಪ್ರಾರಂಭದಲ್ಲಿ ಗುರುತಿಸಲಾದ ನ್ಯಾಯೋಚಿತ ಮೌಲ್ಯದ ವ್ಯವಹಾರ ವೆಚ್ಚದ ಹೊರೆಯ ಮೊತ್ತವನ್ನು ಹೆಚ್ಚು ಕಡಿಮೆ ಪ್ರತಿನಿಧಿಸುತ್ತದೆ.

IND-AS ವಹಿವಾಟಿನ ದಿನಾಂಕದಂದು ಕಂಪನಿಯು ಆರ್ಥಿಕ ಸ್ವತ್ತುಗಳ ವರ್ಗೀಕರಣ ಮತ್ತು ಮಾಪನ ಉದ್ದೇಶಕ್ಕಾಗಿ ಸತ್ಯ ಮತ್ತು ಸನ್ನಿವೇಶಗಳನ್ನು ಮೌಲ್ಯಮಾಪನ ಮಾಡಿದೆ. ಆ ಪ್ರಕಾರವಾಗಿ, ಆ ಹಣಕಾಸಿನ ಆಸ್ತಿಗಳನ್ನು ಹೊರತುಪಡಿಸಿ ಅದರ ಒಪ್ಪಂದದ ನಿಶ್ಚಿತ ದಿನಾಂಕಗಳಲ್ಲಿ ನಿರ್ದಿಷ್ಟ ನಗದು ಹರಿವು ಹೆಚ್ಚಳವಾಗಿಸುವುದನ್ನು ಹೊರತುಪಡಿಸಿ ಹಣಕಾಸಿನ ಆಸ್ತಿಗಳನ್ನು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ (FVTPL) ದಲ್ಲಿ ಮಾಪನ ಮಾಡಲಾಗುತ್ತದೆ, ಕೇವಲ ಅಸಲು ಮತ್ತು ಬಡ್ಡಿಯ ಮೇಲಿನ ಪಾವತಿಗಳನ್ನು ಮಾತ್ರ ಪ್ರತಿನಿಧಿಸುವುದನ್ನು ವ್ಯವಹಾರದ ಮಾದರಿಯನ್ನು ಅವಲಂಬಿಸಿ ಈ ಕೆಳಗೆ ವಿವರಿಸಿದಂತೆ ಅಳೆಯಲಾಗುತ್ತದೆ.

ವರ್ಗೀಕರಣ	ವ್ಯವಹಾರ ಮಾದರಿ
ಋಣಮುಕ್ತತೆಯ ವೆಚ್ಚ	ಕಂಪನಿಯ ಉದ್ದೇಶವು ಒಪ್ಪಂದದ ನಗದು ಹರಿವುಗಳನ್ನು ಅವಧಿ ಮುಕ್ತಾಯ/ ಪರಿಪಕ್ವದ ದಿನಾಂಕದ ವರೆಗೆ ಹಿಡಿದಿಟ್ಟುಕೊಳ್ಳುವುದು ಮತ್ತು ಸಂಗ್ರಹಿಸುವುದು ಆಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕಂಪನಿಯು ತನ್ನ ಒಪ್ಪಂದದ ಪರಿಪಕ್ವತೆಯ ಮುಂಚೆ ಅದರ ನ್ಯಾಯಯುತ ಮೌಲ್ಯ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಸಾಧನಗಳನ್ನು ಮಾರಾಟ ಮಾಡಲು ಉದ್ದೇಶಿಸುವುದಿಲ್ಲ.
FVTOCI	ಕಂಪನಿಯ ಉದ್ದೇಶವು ತನ್ನ ಒಪ್ಪಂದದ ನಗದು ಹರಿವುಗಳನ್ನು ಅವಧಿ ಸಂಗ್ರಹಿಸುವುದು ಮತ್ತು ಆರ್ಥಿಕ ಸ್ವತ್ತುಗಳನ್ನು ಮಾರಾಟ ಮಾಡುವುದಾಗಿದೆ.

ಅಂಗಸಂಸ್ಥೆಗಳ ಸ್ವಾಮ್ಯ ಹೂಡಿಕೆಯನ್ನು ಸಾಗಿಸುವ ವೆಚ್ಚದಲ್ಲಿ ತೆಗೆದುಕೊಳ್ಳಲಾಗುತ್ತದೆ (ಅಂದರೆ) ಹಿಂದಿನ ಉಂಂಕ ನ ಮುಂದುವರಿದ ವೆಚ್ಚವನ್ನು IND-AS ಪರಿವರ್ತನೆಯ ದಿನಾಂಕದಂದು ಇತರ ಸ್ವಾಮ್ಯ ಹೂಡಿಕೆಗಳ ಈಗಿಖಔಅಖ ದಲ್ಲಿ ನ್ಯಾಯಯುತ ಮೌಲ್ಯದಲ್ಲಿ ಬದಲಾವಣೆಯನ್ನು ಅಳೆಯಲು ಕಂಪನಿಯು ಆರಂಭಿಕ ಗುರುತಿಸುವಿಕೆ ಸಮಯದಲ್ಲಿ ಒಂದು ಮಾರ್ಪಡಿಸಲಾಗದ ಆಯ್ಕೆಯನ್ನು ಬಳಸಿದೆ. ಅದರ ಪ್ರಕಾರವಾಗಿ, ಕಂಪನಿಯು ತನ್ನ ಆರ್ಥಿಕ ಸ್ವತ್ತುಗಳ ಮಾಪನಕ್ಕಾಗಿ ಈ ಕೆಳಗಿನಂತೆ ವರ್ಗೀಕರಿಸುತ್ತದೆ.

ವರ್ಗೀಕರಣ	ಆರ್ಥಿಕ ಸ್ವತ್ತುಗಳ ಹೆಸರು
ಋಣಮುಕ್ತತೆಯ ವೆಚ್ಚ	ವ್ಯಾಪಾರ ಸಂದಾಯಗಳು, ಸಾಲಗಳು ಮತ್ತು ಮುಂಗಡಗಳು, ಠೇವಣಿಗಳು, ಸ್ವೀಕರಿಸಬಹುದಾದ ಬಡ್ಡಿ, ತುಂಬದ ಆದಾಯ ಮತ್ತು ನಗದು ರೂಪದಲ್ಲಿ ವಸೂಲು ಮಾಡಬಹುದಾದ ಮುಂಗಡಗಳು.
FVTOCI	ಆರಂಭಿಕ ಗುರುತಿಸುವಿಕೆಯ ಸಮಯದಲ್ಲಿ ಒಂದು ಆಯ್ಕೆಯ ಚಲಾವಣೆಯಾಗಿ ಅಂಗಸಂಸ್ಥೆಗಳನ್ನು ಹೊರತುಪಡಿಸಿ ಕಂಪನಿಗಳಲ್ಲಿ ಸ್ವಾಮ್ಯ ಸಾಧನ.
FVTPL	ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ, ಮುಂದಿನ ವಿನಿಮಯ ಒಪ್ಪಂದಗಳು

ನಗದು ಹರಿವುಗಳಿಗೆ ಒಪ್ಪಂದದ ಹಕ್ಕುಗಳ ಅವಧಿ ಮೀರಿದಾಗ ಅಥವಾ ಸದರಿ ಸ್ವತ್ತುಗಳನ್ನು ವರ್ಗಾವಣೆ ಮಾಡಿದಾಗ ಆರ್ಥಿಕ ಸ್ವತ್ತುಗಳನ್ನು ಅಮಾನ್ಯ (derecognized) ಗೊಳಿಸಲಾಗಿದೆ (ಅಂದರೆ) ಆರ್ಥಿಕ ವಿವರಣ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಮೂರನೆಯ ವ್ಯಕ್ತಿಯೊಂದಿಗೆ ಆರ್ಥಿಕ ಸ್ವತ್ತಿನಿಂದ ಉಂಟಾಗುವ ನಗದು ಹರಿವುಗಳನ್ನು ಸರಿದೂಗಿಸಲು ಸಹ ಕಂಪನಿಯು ಸ್ವತ್ತುಗಳನ್ನು ಅಮಾನ್ಯ (derecognized) ಗೊಳಿಸುತ್ತದೆ ಮತ್ತು ವರ್ಗಾವಣೆಯ ನಂತರ:

ಎ) ಆರ್ಥಿಕ ಸ್ವತ್ತಿನ ಗಮನಾರ್ಹ ಅಪಾಯ ಮತ್ತು ಪ್ರತಿಫಲಗಳು, ಅಥವಾ

ಬಿ) ಆರ್ಥಿಕ ಸ್ವತ್ತಿನ ನಿಯಂತ್ರಣ

ಆದಾಗ್ಯೂ ಕಂಪನಿಯು ವರ್ಗಾವಣೆಗೊಂಡ ಆರ್ಥಿಕ ಸ್ವತ್ತು ಮತ್ತು ಅದಕ್ಕೆ ಸಂಬಂಧಿಸಿದ' ಹೊಣೆಗಾರಿಕೆಯನ್ನು ಅದರ ಮುಂದುವರಿದ ಒಳಗೊಳ್ಳುವಿಕೆಯ ಮಟ್ಟಿಗೆ ಗುರುತಿಸುತ್ತದೆ, ಅವುಗಳನ್ನು ಅವುಗಳ ಹಕ್ಕುಗಳು ಮತ್ತು ಆರ್ಥಿಕ ಸ್ವತ್ತಿನ ಬಾಧ್ಯತೆಗಳ ಆಧಾರದ ಮೇಲೆ ಅಳೆಯಲಾಗುತ್ತದೆ. ಕಂಪನಿಯು ಅಮಾನ್ಯ ಅವಶ್ಯಕತೆಗಳನ್ನು ಭವಿಷ್ಯಾನ್ವಯವಾಗಿ ಅನ್ವಯಿಸಿದೆ.

ಅದರ ಆರ್ಥಿಕ ಸ್ವತ್ತು ಅಥವಾ ಅದರ ಭಾಗಶ:, ಸಾಗಿಸುವ ಮೊತ್ತದ ನಡುವಿನ ವ್ಯತ್ಯಾಸವನ್ನು ಗುರುತಿಸುವ ದಿನಾಂಕದಂದು ಅಳತೆ ಮಾಡಲಾಗುವುದು ಮತ್ತು ಯಾವುದೇ ಹೊಸ ಸ್ವತ್ತು ಸೇರಿದಂತೆ ಸ್ವೀಕರಿಸಿದ ಪ್ರತಿಫಲ (consideration)ವು ಯಾವುದೇ ಹೊಸ ಹೊಣೆಗಾರಿಕೆಯನ್ನು ಕಡಿಮೆ ಪಡೆಯುತ್ತದೆ ಎಂದು ಪರಿಭಾವಿಸಲಾದುದನ್ನು ಲಾಭ ಮತ್ತು ನಷ್ಟ ವಿವರಣಾ ಪಟ್ಟಿಯಲ್ಲಿ ಗುರುತಿಸಲಾಗುತ್ತದೆ.

ದುರ್ಬಲ ಉದ್ದೇಶಗಳಿಗಾಗಿ ಗಮನಾರ್ಹ ಆರ್ಥಿಕ ಸ್ವತ್ತುಗಳನ್ನು ಪ್ರತಿ ವರದಿಯ ದಿನಾಂಕದಂದು ವೈಯಕ್ತಿಕ ಆಧಾರದ ಮೇಲೆ ಪರೀಕ್ಷಿಸಲಾಗುತ್ತದೆ. ಇತರ ಹಣಕಾಸು ಸ್ವತ್ತುಗಳನ್ನು ಸಾಮೂಹಿಕವಾಗಿ ಗುಂಪಿನಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ, ಅದು ಇದೇ ಕ್ರೆಡಿಟ್ ಅಪಾಯದ ಗುಣಲಕ್ಷಣಗಳನ್ನು ಹಂಚಿಕೊಳ್ಳುತ್ತದೆ. ಈ ಪ್ರಕಾರವಾಗಿ ದುರ್ಬಲಗೊಳಿಸುವ ಪರೀಕ್ಷೆಯನ್ನು ಈ ಕೆಳಗಿನ ಆಧಾರದ ಮೇಲೆ ಪೂರ್ವಾನ್ವಯವಾಗಿ ಮಾಡಲಾಗುತ್ತದೆ.

ಆರ್ಥಿಕ ಸ್ವತ್ತುಗಳ ಹೆಸರು	ದುರ್ಬಲತೆ ಪರೀಕ್ಷಾ ವಿಧಾನ
ವ್ಯಾಪಾರ ಸ್ವೀಕೃತಿಗಳು	ನಿರೀಕ್ಷಿತ ಕ್ರೆಡಿಟ್ ನಷ್ಟ ಮಾದರಿಯನ್ನು ಅನ್ವಯಿಸಿದೆ. ನಿರೀಕ್ಷಿತ ಕ್ರೆಡಿಟ್ ನಷ್ಟವು ಭವಿಷ್ಯದ ಆರ್ಥಿಕ ಪರಿಸ್ಥಿತಿಗಳ ಪ್ರಸ್ತುತ ಸ್ಥಿತಿಗತಿ ಮತ್ತು ಮುನ್ಸೂಚನೆಗಳನ್ನು ಪ್ರತಿಬಿಂಬಿಸುವ ಐತಿಹಾಸಿಕ ದರಗಳ ಆಧಾರದ ಮೇಲೆ ಅವಕಾಶವನ್ನು ಬಳಸಿಕೊಳ್ಳುವ ಮೂಲಕ ಸ್ವತ್ತುಗಳ ಜೀವಿತಾವಧಿ ಮೇಲೆ ನಿರೀಕ್ಷಿಸಲಾದ ಕ್ರೆಡಿಟ್ ನಷ್ಟವನ್ನು ಅಂದಾಜಿಸಲಾಗುವುದು. ಅದು ಉದ್ಯಮದ ಸ್ವರೂಪ, ಗ್ರಾಹಕರ ವಿಭಾಗ, ಹಿಂದಿನ ಕಾರಣ ಸ್ಥಿತಿ ಮತ್ತು ನಿರೀಕ್ಷಿತ ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಈ ಸ್ವತ್ತುಗಳಂದ ನಿರೀಕ್ಷಿಸಲಾದ ಲಾಭ ನಷ್ಟದ ಅಂದಾಜು ಮಾಡಲಾಗುವುದು.

ಇತರೆ ಹಣಕಾಸಿನ ಸ್ವತ್ತುಗಳು	ಕ್ರೇಡಿಟ್ ಅಪಾಯವು ಗಮನಾರ್ಹವಾಗಿ ಹೆಚ್ಚಾಗದೆ ಇದ್ದಲ್ಲಿ, 12 ತಿಂಗಳನ ಇಸಿಎಲ್ ಅನ್ನು ಹಾನಿಯ ನಷ್ಟಕ್ಕಾಗಿ ಪೂರೈಸುವುದು. ಅಂಗೀಕಾರದ ಪ್ರಾರಂಭದಿಂದ ಕ್ರೇಡಿಟ್ ಅಪಾಯದಲ್ಲಿ ಗಮನಾರ್ಹ ಬದಲಾವಣೆಯಾದಾಗ ಜೀವಿತಾವಧಿಯ ಪೂರ್ವ ನಿಯೋಜಿತ ಸಂಭವನೀಯತೆ ಆಧಾರದ ಮೇಲೆ ದುರ್ಬಳಕೆಯನ್ನು ಅಳೆಯಲಾಗುವುದು. ಆರಂಭಿಕ ಅಂಗೀಕಾರದಿಂದ ನಗದು ಲಾಭದ ಅಪಾಯದಲ್ಲಿ ಅಲ್ಲಿ ಧೀರ್ಘಕಾಲಿಕವಾಗಿ ಗಮನಾರ್ಹವಾಗಿ ಹೆಚ್ಚಳವಾಗಿರುವುದಿಲ್ಲ, ಒಂದು ವೇಳೆ, ನಂತರದ ಅವಧಿಯಲ್ಲಿ ಅಂತಹ ಪ್ರಕರಣದ ಲಾಭದ ಗುಣಮಟ್ಟದಲ್ಲಿ ಸುಧಾರಿಸುವುದು, ನಂತರ 12 ತಿಂಗಳನ ನಿರೀಕ್ಷಿತ ಲಾಭ ನಷ್ಟದ ಆಧಾರದ ಮೇಲೆ ನಷ್ಟದ ಹಾನಿ ಭರ್ತಿಯನ್ನು ಘಟಕವು ಹಿಂದಿರುಗಿಸುತ್ತದೆ. ಆದಾಗ್ಯೂ ಪಾವತಿಯಾಗದ ಆದಾಯವು ವ್ಯಾಪಾರದ ಕರಾರುಗಳಿರುವಂತೆ ಸಂಬಂಧದಲ್ಲಿ ನಷ್ಟದ ಪರೀಕ್ಷಾ ವಿಧಾನವನ್ನು ಬಳಸಿರುವುದು.

ಜಿ. ನಗದು ಮತ್ತು ನಗದು ತತ್ಸಮಾನಗಳು:

ನಗದು ಹರಿವಿನ ಲೆಕ್ಕಪರಿವರಣೆಯಲ್ಲಿ ಮಂಡಿಸುವುದರ ಉದ್ದೇಶಕ್ಕಾಗಿ, ನಗದು ಮತ್ತು ನಗದು ತತ್ಸಮಾನಗಳನ್ನೊಳಗೊಂಡು ಕೈಯಲ್ಲಿರುವ ನಗದು, ಬ್ಯಾಂಕಿನಲ್ಲಿ ಠೇವಣಿ ಇಡಲಾದ ನಗದಿನೊಂದಿಗೆ ಹಣಕಾಸು ಸಂಸ್ಥೆಗಳು ಆಹ್ವಾನಿಸುವ ಇತರೆ ಅಲ್ಪಾವಧಿ ಠೇವಣಿಗಳು, ಹೆಚ್ಚಿನ ಚಾಲ್ತಿ ಹೂಡಿಕೆಗಳೊಂದಿಗೆ ಮೂರು ತಿಂಗಳನ ಮೂಲ ಮುಕ್ತಾಯ ಅವಧಿ ಅಥವಾ ಅದಕ್ಕೂ ಕಡಿಮೆ ಇರುವುದನ್ನು ನಗದು ಹಣವಾಗಿ ಪರಿವರ್ತಿಸುವುದು ಮತ್ತು ಮೌಲ್ಯದಲ್ಲಿನ ಬದಲಾವಣೆಗಳ ಗಮನಾರ್ಹವಲ್ಲದ ಅಪಾಯಕ್ಕೊಳಪಟ್ಟಿರುತ್ತವೆ.

ಸಿ. **ವ್ಯವಹಾರದ ಸ್ವೀಕೃತಿಗಳು:**

ವ್ಯವಹಾರ ಸ್ವೀಕೃತಿಯನ್ನು ಮೂಲತ ನ್ಯಾಯಯುತ ಬೆಲೆಯಲ್ಲಿ ಪರಿಗಣಿಸಲಾಗುತ್ತಿದ್ದು ತರುವಾಯ, ವ್ಯವಹಾರ ಸ್ವೀಕೃತಿಯನ್ನು ಪರಿಗಣಿಸುವಾಗ ತಗ್ಗಿದ ಬೆಲೆಯನ್ನು ಪರಿಣಾಮಕಾರಿ ಬಡ್ಡಿ ವಿಧಾನದನ್ವಯ, ದುರ್ಬಲತೆಯ ಅವಕಾಶಗಳನ್ನು ಕಡಿಮೆಗೊಳಿಸಿ ಬಿಂಬಿಸಲಾಗುವುದು.

1.21 ಆರ್ಥಿಕ ಹೊಣೆಗಾರಿಕೆಗಳು:

ಆರ್ಥಿಕ ಹೊಣೆಗಾರಿಕೆಗಳು, ಸಾಲಗಳು, ವ್ಯಾಪಾರ ಸಂದಾಯಗಳು, ಹಣಕಾಸು ಉತ್ಪನ್ನ ಸಾಧನಗಳು, (Derivative Financial Instruments) ಆರ್ಥಿಕ ಖಾತರಿ ಬಾದ್ಯತೆಗಳು ಮತ್ತು ಇತರೆ ಆರ್ಥಿಕ ಹೊಣೆಗಾರಿಕೆಗಳನ್ನು ಒಳಗೊಂಡಿರುತ್ತವೆ.

ಕಂಪನಿಯು ಆರ್ಥಿಕ ಹೊಣೆಗಾರಿಕೆಗಳನ್ನು ಈ ಕೆಳಕಂಡಂತೆ ಮಾಪನ ಮಾಡಲಾಗುತ್ತದೆ.

ಮಾಪನಾ ಆಧಾರ	ಆರ್ಥಿಕ ಹೊಣೆಗಾರಿಕೆಗಳ ಹೆಸರು
ಋಣಮುಕ್ತತೆಯ ವೆಚ್ಚ	ಸಾಲಗಳು, ವ್ಯಾಪಾರ ಸಂದಾಯಗಳು, ಒದಗಿಬಂದ ಬಡ್ಡಿ, ಭದ್ರತಾ ಠೇವಣಿ ಮತ್ತು ವ್ಯಾಪಾರಕ್ಕಲ್ಲದ ಇತರೆ ಹಣಕಾಸಿನ ಹೊಣೆಗಾರಿಕೆಗಳು
FVTPL	ಉತ್ಪನ್ನ ಒಪ್ಪಂದಗಳಾಗಿದ್ದ ವಿದೇಶಿ ವಿನಿಮಯ ಮುಂಗಡ ಒಪ್ಪಂದಗಳು ಹೆಡ್ಜ್ ಲೆಕ್ಕಪತ್ರ ನಿರ್ವಹಣೆ ಮತ್ತು IND-AS. 109 ಮತ್ತು ಇತರ ಆರ್ಥಿಕ ಹೊಣೆಗಾರಿಕೆಗಳಿಗೆ ಅರ್ಹತೆ ಹೊಂದಿರುವುದಿಲ್ಲ.

ಆರ್ಥಿಕ ಹೊಣೆಗಾರಿಕೆಗಳನ್ನು ಅದು ಅಳಿಸಿದಾಗ ಮಾತ್ರ ಅಮಾನ್ಯಗೊಳಿಸ/ನಿರ್ಲಕ್ಷಿಸಲಾಗುತ್ತದೆ (ಅಂದರೆ) ಒಪ್ಪಂದದ ಪ್ರಕಾರ ಬಾಧ್ಯತೆಯು ನಿಗದಿತವಾದಾಗ ಅಥವಾ ರದ್ದುಗೊಳಿಸಿದಾಗ ಅಥವಾ ಅವಧಿ ಮೀರಿದಾಗ.

ಹಣಕಾಸಿನ ಹೊಣೆಗಾರಿಕೆಗಳು ಅಥವಾ ಅದರ ಭಾಗವನ್ನು ಅಮಾನ್ಯ (derecognise) ಗೊಳಿಸಿದ ಮೇಲೆ, ಅಳಸಲಾದ ಅಥವಾ ಇನ್ನೊಂದು ಪಕ್ಷಕ್ಕೆ ವರ್ಗಾಯಿಸಲಾದ ಆರ್ಥಿಕ ಹೊಣೆಗಾರಿಕೆಗಳನ್ನು ಸಾಗಿಸುವ ಮೊತ್ತ ಮತ್ತು ನಗದುಅಲ್ಲದ ಸ್ವತ್ತುಗಳ ವರ್ಗಾವಣೆ ಅಥವಾ ಭಾವಿಸಲಾದ ಹೊಣೆಗಳ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟ ತಖ್ತೆ:ಯಲ್ಲಿ ಗುರುತಿಸಲಾಗಿದೆ.

1.22 **ಆರ್ಥಿಕ .ಸಾಧನಗಳನ್ನು ಸರಿದೂಗಿಸುವುದು**

ಆರ್ಥಿಕ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ನಿವ್ವಳ ಮೊತ್ತವನ್ನು ಕಂಪನಿಯು ಕಾನೂನಾತ್ಮಕ ಹಕ್ಕನ್ನು ಹೊಂದಿರುವಾಗ ಮಾತ್ರ ಸರಿದೂಗಿಸಿ ಗುರುತಿಸಲಾದ ಮೊತ್ತವನ್ನು ಆಯವ್ಯಯ ಪಟ್ಟಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ನಿವ್ವಳ ಆಧಾರದ ಮೇಲೆ ನೆಲೆಗೊಳ್ಳಲು ಅಥವಾ ಆಸ್ತಿಗಳನ್ನು ಕೈಗೂಡಿಸಿಕೊಳ್ಳಲು ಹೊಣೆಗಾರಿಕೆಗಳನ್ನು ಏಕಕಾಲದಲ್ಲಿ ಇತ್ಯರ್ಥಗೊಳಿಸುವ ಉದ್ದೇಶವಿದ್ದಾಗ ಮಾತ್ರ ಸರಿದೂಗಿಸಲಾಗುತ್ತದೆ.

ಟಿಪ್ಪಣಿ –2 ಆಸ್ತಿ, ಸ್ಥಾವರ ಮತ್ತು ಉಪಕರಣಗಳು

(ಮೊಬಲಗು ರೂ.ಗಳಲ್ಲಿ)

		ಒಟ್ಟು ಆಸ್ತಿ					ಸವಕಳಿ				ನಿವ್ವಳ ಆಸ್ತಿ	
ವಿವರಗಳು	ಲೆಕ್ಕ ಸಂಕೇತ	01 ನೇ ಎಪ್ರಿಲ್ 2017 ರಂದು ಇದ್ದಂತೆ	ಸೇರ್ಪಡೆ	ಕಡಿತ/ ಹೊಂದಾಣಿಕೆ	31ನೇ ಮಾರ್ಚ್ 2018 ರಂದು ಇದ್ದಂತೆ	ಲೆಕ್ಕ ಸಂಕೇತ	01 ನೇ ಎಪ್ರಿಲ್ 2017 ರಂದು ಇದ್ದಂತೆ	ಸೇರ್ಪಡೆ	ಕಡಿತ/ ಹೊಂದಾಣಿಕೆ	31ನೇ ಮಾರ್ಚ್ 2018 ರಂದು ಇದ್ದಂತೆ	01 ನೇ ಎಪ್ರಿಲ್ 2017 ರಂದು ಇದ್ದಂತೆ	31ನೇ ಮಾರ್ಚ್ 2018 ರಂದು ಇದ್ದಂತೆ
ಭೂಮಿ ಮತ್ತು ಹಕ್ಕು	10.1	281 72 07 396	80 20 46 915	–2 62 57 725	359 29 96 586	12.1					281 72 07 396	359 29 96 586
ಕಟ್ಟಡಗಳು	10.2	566 36 12 266	45 77 81 334	–3 70 14 862	608 43 78 738	12.2	1 70 19 26 621	18 54 08 206	– 51 14 534	1 88 22 20 293	396 16 85 645	420 21 58 445
ಹೈಡ್ರಾಲಿಕ್ಸ್ ವರ್ಕ್ಸ್	10.3	73 81 53 862	8 54 06 664	1 56 31 991	83 91 92 517	12.3	22 63 48 759	4 20 02 525	61 126	26 84 12 410	51 18 05 103	57 07 80 107
ಇತರೆ ಸಿವಿಲ್ ಕಾಮಗಾರಿಗಳು	10.4	72 15 46 905	23 38 17 782	7 14 42 173	102 68 06 860	12.4	13 77 85 602	3 51 88 228	56 626	17 30 30 456	58 37 61 303	85 37 76 404
ಸ್ಥಾವರ ಮತ್ತು ಯಂತ್ರೋಪಕರಣಗಳು	10.5	7815 05 63 316	707 93 84 406	–77 88 75 070	8445 10 72 652	12.5	33 38 29 93 129	3 84 48 05 084	–41 17 41 764	36 81 60 56 449	4476 75 70 187	4763 50 16 203
ಮಾರ್ಗಗಳು ಮತ್ತು ಕೇಬಲ್ ಜಾಲ	10.6	6163 23 22 642	1458 57 21 845	32 45 79 008	7654 26 23 495	12.6	24 49 77 57 769	3 19 94 12 366	11 79 31 060	27 81 51 01 195	3713 45 64 873	4872 75 22 300
ವಾಹನಗಳು	10.7	8 38 39 451	7 24 176	– 23 81 355	8 21 82 272	12.7	4 78 54 803	45 45 066	– 19 15 847	5 04 84 022	3 59 84 648	3 16 98 250
ಪೀಠೋಪಕರಣಗಳು	10.8	19 12 70 670	1 15 81 581	6 09 544	20 34 61 795	12.8	9 13 19 511	1 05 38 764	– 4 20 818	10 14 37 457	9 99 51 159	10 20 24 338
ಕಛೇರಿ ಸಲಕರಣೆಗಳು	10.9	4 42 05 536	17 53 690	– 22 97 069	4 36 62 157	12.9	2 30 12 317	20 28 076	– 17 84 552	2 32 55 841	2 11 93 219	2 04 06 316
ಒಟ್ಟು		15004 27 22 044	2325 82 18 393	–43 45 63 367	17286 63 77 072		6010 89 98 511	732 39 28 315	–30 29 28 703	6712 99 98 123	8993 37 23 533	10573 63 78 949
ಹಿಂದಿನ ವರ್ಷ		14047 89 76 101	990 61 49 750	–34 24 03 807	15004 27 22 044		5366 31 86 701	669 05 27 426	–24 47 15 616	6010 89 98 511	8681 57 89 400	8993 37 23 533

*** ಸಂಸ್ಥೆಯು ಅದರ ಎಲ್ಲಾ ಆಸ್ತಿ, ಸ್ಥಾವರ ಮತ್ತು ಉಪಕರಣಗಳು ಮತ್ತು ಸ್ಪರ್ಶಾತೀತ ಆಸ್ತಿಗಳನ್ನು ಹಿಂದಿನ ಗ್ಯಾಪ್ (GAAP) ಪ್ರಕಾರ ಅಳೆಯಲಾದ ಸಾಗಣೆ ಮೊತ್ತವನ್ನು ಪರಿಗಣಿಸಿ. ಇಂಡ್ ಎ ಎಸ್ ಗೆ ಪರಿವರ್ತನೆಯಾದ ದಿನಾಂಕದಂದು ಸದರಿ ಮೊತ್ತವನ್ನೆ ಪರಿಗಣಿಸಿ ಲೆಕ್ಕೀಕರಿಸಿದೆ.**

ಸ್ಥಿರ ಆಸ್ತಿಗಳು:

ಟಿಪ್ಪಣಿ 2.1– ಭೂಮಿ ದಾಖಲೆಗಳ ಸಮನ್ವಯ

31.03.2018 ರಂದು ಇದ್ದಂತೆ ಅಂತ್ಯಕ್ಕೆ ಹಿಡುವಳಿ ಭೂಮಿ ರೂ.359,29,96,586/– ಹಾಗೂ ಗುತ್ತಿಗೆ ಆಧಾರಿತ ಭೂಮಿ ರೂ. 11,97,30,473/– ಗಳನ್ನು ಭೂ ದಾಖಾಲಾತಿ ಪತ್ರಗಳನ್ನು ಹಣಕಾಸಿನ ಹೇಳಿಕೆಗಳೊಂದಿಗೆ ಸಮನ್ವಯಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.

ಟಿಪ್ಪಣಿ2.2– ಭೂಮಿ ಮತ್ತು ಹಕ್ಕು ದಾಖಲೆ ಪತ್ರ

ಎ) ನಿಗಮವು ಒಟ್ಟು 7772 ಎಕರೆ 25.80 ಗುಂಟೆ 1321 ಆವರಣಗಳನ್ನು ಆಸ್ತಿಕರಣಗೊಳಿಸಿದೆ (ಇದರಲ್ಲಿ 80.46 ಎಕರೆ 635.84 ಗುಂಟೆ ಕವಿಪ್ರನಿನಿಗೆ ಉಡುಗೊರೆಯಾಗಿ ಬಂದಿರುವುದು ಒಳಗೊಂಡಿದೆ), 187 ಎಕರೆ 26 ಗುಂಟೆ ಅರಣ್ಯ ಇಲಾಖೆಯಿಂದ ಗುತ್ತಿಗೆ ಪಡೆದ ಭೂಮಿ, 839 ಎಕರೆ 31.40 ಗುಂಟೆ ಸರ್ಕಾರಿ ಜಮೀನು ಮತ್ತು 35 ಎಕರೆ 6.8 ಗುಂಟೆ ಖಾಸಗಿಯವರಿಂದ ಗುತ್ತಿಗೆ ಪಡೆದಿರುವ ಭೂಮಿಯನ್ನು ಒಳಗೊಂಡಿದೆ.

1) ಹಕ್ಕು ಪತ್ರವನ್ನು ಒಳಗೊಂಡಂತೆ ಭೂ ದಾಖಲೆಗಳನ್ನು ನವೀಕರಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

2) 1321 ಆವರಣಗಳಲ್ಲಿ 853 ಆವರಣಗಳಿಗೆ ಸಂಬಂಧಿಸಿದ ಸಂಪೂರ್ಣ ದಾಖಲಾತಿಗಳು ಲಭ್ಯವಿದೆ. ನಿಗಮವು ಸಂಬಂಧಿಸಿದ ಕಂದಾಯ ಇಲಾಖೆಯವರೊಂದಿಗೆ ಸಂಪರ್ಕದಲ್ಲಿದ್ದು ದಾಖಲಾತಿಗಳನ್ನು ಪೂರ್ಣಗೊಳಿಸುವ ಪ್ರಕ್ರಿಯೆಯು ಜಾರಿಯಲ್ಲಿದೆ.

3) 7772 ಎಕರೆಗಳಲ್ಲಿ 25.80 ಗುಂಟೆ ಭೂಮಿಯಲ್ಲಿ, 156 ಎಕರೆ 42 ಗುಂಟೆ ಭೂಮಿಯನ್ನು ಇತರರು ಆಕ್ರಮಿಸಿಕೊಂಡಿರುತ್ತಾರೆ. ಭೂಮಿಯನ್ನು ಮರು ಸ್ವಾಧೀನ ಪಡಿಸಿಕೊಳ್ಳಲು ಕಾನೂನು ಪ್ರಕ್ರಿಯೆ ಪ್ರಾರಂಭಿಸಲಾಗಿದೆ

ಬಿ) ರೂ.359,29,96,586/ – ರ ಮೊತ್ತದ ಜಮೀನಿನಲ್ಲಿ ರೂ.1,03,85,214/ – ರ ಮೊತ್ತದ ಜಮೀನನ್ನು ವಿವಿಧ ಸಂಸ್ಥೆಗಳಿಗೆ ಗುತ್ತಿಗೆ ಕೊಟ್ಟಿರುವ ಜಮೀನೂ ಕೂಡಾ ಸೇರಿದೆ.

ಸಿ) ರೂ.359,29,96,586/– ರ ಜಮೀನಿನಲ್ಲಿ ಎಂ.ಇ.ಐ ಲೇಔಟ್‌ನಲ್ಲಿರುವ ಮತ್ತು ಮಂಡೂರ್ ನಲ್ಲಿರುವ ಕವಿಪ್ರನಿನಿಯ 66/11 ಕೆವಿ ಸ್ಟೇಷನ್ ಅನ್ನು ಕಟ್ಟಿದ್ದು ಸದರಿ ಭೂಮಿಯು ಕವಿಪ್ರನಿನಿಯ ಹೆಸರಿನಲ್ಲಿ ನೊಂದಾಯಿಸಬೇಕಾಗಿರುತ್ತದೆ. ಸದರಿ ಜಮೀನಿನ ಮೊತ್ತ ರೂ. 10,48,590/–ನ್ನು ಒಳಗೊಂಡಿರುತ್ತದೆ.

ಡಿ) ರೂ. 6.67 ಕೋಟಿಗೆ ಜಮೀನನ್ನು ಕೆಐಎಡಿಬಿ ಯಿಂದ ಗುತ್ತಿಗೆ ಮತ್ತು ಕ್ರಯದ ಒಪ್ಪಂದದ' ಮೇರೆಗೆ ದಿನಾಂಕ:13.10.2011 ರ ಪ್ರಕಾರ ನಿಡಲಾಗಿದೆ. ಗುತ್ತಿಗೆ ಅವಧಿಯು ಮುಗಿಯುವ ವೇಳೆಗೆ ಕವಿಪ್ರನಿನಿಯ ಹೆಸರಿಗೆ ನೊಂದಾಯಿಸಬೇಕಾಗಿದೆ.

ಇ) ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ಮೆಸ್ಕಾಂನಿಂದ ಗುತ್ತಿಗೆ ಪಡೆಯಲಾದ ಬೆಜಾಯ್ ಮತ್ತು ಬ್ರಹ್ಮಾವರದಲ್ಲಿ ನಿರ್ಮಾಣ ಹಂತದಲ್ಲಿರುವ 2*10 ಎಂವಿಎ 110/11ಕೆವಿ ಸ್ಥಾವರ ಒಳಗೊಂಡಿದೆ.

ಎಫ್)ಜಮೀನಿನ ವೆಚ್ಚದಲ್ಲಿ, ಅಜನಳ್ಳಿ, ಕೆಂಪಗಾಂಡನಹಳ್ಳಿ, ಕಲ್ಲುಬಾಲುಲು ಮತ್ತು ಇಂದ್ಲಾವದಿಪುರದಲ್ಲಿ 5,56,84,860/– ರೂಪಾಯಿಗಳಷ್ಟು ವಿವಿಧ ಭೂಮಿಯನ್ನು ಕರ್ನಾಟಕ ಸರ್ಕಾರದಿಂದ ಹಂಚಿಕೆ ಮಾಡಿರುವುದು ಒಳಗೊಂಡಿದೆ. ಮುಂದುವರೆದು ಸದರಿ ಭೂಮಿಗಳು ಉಪ ಕೇಂದ್ರಗಳ ನಿರ್ಮಾಣಕ್ಕೆ ಸೂಕ್ತವಲ್ಲ ಎಂದು ಕಂಡುಬಂದಿದ್ದು ಆದ್ದರಿಂದ ಅಂತಹ ಭೂಮಿಗೆ ಪಾವತಿಸಿದ ಮೊತ್ತವನ್ನು ಹಿಂಪಡೆಯಲು ದಿನಾಂಕ:12/12/2012 ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆರವರಿಗೆ ಮರುಪಾವತಿ ಮಾಡಲು ಮನವಿ ಸಲ್ಲಿಸಿದೆ.

ಜಿ) ಭೂಮಿಯ ವೆಚ್ಚದಲ್ಲಿ, 252.23 ಎಕರೆ ಭೂಮಿಯನ್ನು ರೂ.53,79,70,746/– ಗಳನ್ನು ಪಾವತಿಸಿ ಕೆಐಎಡಿಬಿ ಯಿಂದ ದಿನಾಂಕ:03.03.2017 ರ ಗುತ್ತಿಗೆ ಕರಾರು ಒಪ್ಪಂದದೊಂದಿಗೆ 99 ವರ್ಷಗಳ ಗುತ್ತಿಗೆ ಅವಧಿಗೆ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಮುಂದುವರೆದು ಕರ್ನಾಟಕ ಸರ್ಕಾರದ ಅಧಿ ಸೂಚನೆ ದಿನಾಂಕ: 09/03/2017 ಸಿಐ 15 ಎಸ್‌ಪಿಕ್ಯೂ 2017ರ ಪ್ರಕಾರ, ಗುತ್ತಿಗೆ ಅವಧಿಯನ್ನು ಮಾರ್ಪಡಿಸಿ ಗುತ್ತಿಗೆ ಮತ್ತು ಮಾರಾಟದ ಅವಧಿಯನ್ನು ಕನಿಷ್ಟ 2 ವರ್ಷಕ್ಕೆ ಮಾರ್ಪಡಿಸಿರುವುದರಿಂದ ಸದರಿ ಗುತ್ತಿಗೆ ಆಧಾರಿತ ಜಮೀನನ್ನು ಸದರಿ ಯೋಜನೆಯ ಸದುದ್ದೇಶಕ್ಕಾಗಿ ಬಳಸಿಕೊಂಡ ನಂತರ ಕರಾರನ್ನು ಮಾರ್ಪಡಿಸಿ ಖರೀದಿ ಪತ್ರವನ್ನು ಮಾಡಿಕೊಳ್ಳಲು ಕ್ರಮ ವಹಿಸಲಾಗುವುದು.

ಹೆಚ್)ಕರ್ನಾಟಕ ಸರ್ಕಾರವು ಕವಿಪ್ರನಿನಿಗೆ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕಾಗಿ, ರಿಯಾಯಿತಿ ದರದಲ್ಲಿ ಭೂಮಿಯನ್ನು ನೀಡಲಾಗಿದ್ದು, ಸದ'ರಿ ಭೂಮಿಯನ್ನು ಸರ್ಕಾರಕ್ಕೆ ಪಾವತಿಸಿದ ಮೊತ್ತದಲ್ಲಿ ಲೆಕ್ಕೀಕರಿಸಲಾಗಿದೆ, ಕವಿಪ್ರನಿನಿಯು ಹಲವು ಪ್ರಕರಣಗಳಲ್ಲಿ ಭೂಮಿಯನ್ನು ವಿವಿಧ ಪಕ್ಷಗಾರರಿಂದ ಉಚಿತವಾಗಿ ಪಡೆದಿರುತ್ತದೆ. ಮುಂದುವರೆದು, ಇಂಡ್ ಎಎಸ್ ಅಳವಡಿಕೆಯಿಂದ ರಿಯಾಯಿತಿ ದರ /ಉಚಿತವಾಗಿ ಪಡೆದ ಭೂಮಿಯನ್ನು ಇಂಡ್ ಎಎಸ್ ನಿಯಮದನ್ವಯ ನ್ಯಾಯೋಚಿತ ಬೆಲೆಯಲ್ಲಿ ಪರಿಗಣಿಸಿ ಬಿಂಬಿಸುವ ಪ್ರಕ್ರಿಯಯನ್ನು ಆರ್ಥಿಕ ವರ್ಷ 2018–19 ರಲ್ಲಿ ಪರಿಗಣಿಸಲಾಗುವುದು.

ಐ) ಬಳ್ಳಾರಿಯಲ್ಲಿ 9.62 ಎಕರೆಯಷ್ಟು ಭೂಮಿಯು ಕವಿಪ್ರನಿನಿಯ ಸ್ವಾಧೀನದಲ್ಲಿದ್ದು, ಸದರಿ ಭೂಮಿಯ ಹಕ್ಕು ಪತ್ರವು ಇನ್ನೂ ಕವಿಪ್ರನಿನಿಗೆ ವರ್ಗಾಯಿಸುವ ಪ್ರಕ್ರಿಯೆಯು ಬಾಕಿಯಿದೆ.

ಜೆ) ಕಂಪನಿಯು 78 ಪ್ರಕರಣಗಳಲ್ಲಿ 265.08 ಎಕರೆ 832.09 ಗುಂಟೆಗಳಷ್ಟು ಭೂಮಿಯನ್ನು ಗುತ್ತಿಗೆ ಆದಾರದಲ್ಲಿ ಪಡೆಯಲಾಗಿದ್ದು, ಕಂಪನಿಯು ಸದರಿ ಪ್ರಕರಣಗಳಲ್ಲಿ ಗುತ್ತಿಗೆ ಒಪ್ಪಂದಕ್ಕೆ ಸಹಿಹಾಕುವ ಪ್ರಕ್ರಿಯೆ ಹಂತದಲ್ಲಿದೆ.

ಕೆ) ಕಂಪನಿಯು 11 ಪ್ರಕರಣಗಳಲ್ಲಿ 3 ಎಕರೆ, 155.04ಗುಂಟೆಗಳಷ್ಟು ಭೂಮಿಯನ್ನು ವಿವಿಧ ಪಕ್ಷದಾರರಿಗೆ ಗುತ್ತಿಗೆ ಆದಾರದಲ್ಲಿ ನೀಡಲಾಗಿದ್ದು ವಿವಿಧ ಪಕ್ಷದಾರರೊಂದಿಗೆ ಗುತ್ತಿಗೆ ಆಧಾರದ ಒಡಂಬಡಿಕೆ/ ಒಪ್ಪಂದ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿದೆ.

ಟಿಪ್ಪಣಿ 2.3–ಭೂಮಿ ಮತ್ತು ಕಟ್ಟಡಗಳು

ಭೂಮಿ ಮತ್ತು ಕಟ್ಟಡಗಳು ವಿದ್ಯುತ್ ಉತ್ಪಾದ'ನಾ ಕೇಂದ್ರಗಳನ್ನು ಒಳಗೊಂಡಿದೆ, ಆದರೆ ಪ್ರತಿಷ್ಟಾಪನೆಗಳನ್ನು ಹೊರತುಪಡಿಸದೆ ಭೂಮಿ ಮತ್ತು ಕಟ್ಟಡವನ್ನು ಕರ್ನಾಟಕ ಸರ್ಕಾರದಿಂದ ನೀಡಲ್ಪಟ್ಟ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಕವಿಪ್ರನಿನಿಯ ಪುನರ್ರಚನಾ ಕಾರ್ಯಕ್ರಮದ ಅನ್ವಯ ಲೆಕ್ಕಪತ್ರದಲ್ಲಿ ನಮೂದಿಸಲಾಗಿದೆ. ನಿಗಮದ ಹೆಸರಿಗೆ ಕೆಲವು ಆಸ್ತಿಗಳ (ರೂ.41,03,69,016/–) ವರ್ಗಾವಣೆಗಾಗಿ ಕೈಗೊಳ್ಳಬೇಕಾದ ನಿಯಾಮಾನುಸರಣೆಗಳು ಬಾಕಿ ಇರುತ್ತದೆ.

ಟಿಪ್ಪಣಿ 2.4 –ಸ್ಥಾವರ ಮತ್ತು ಯಂತ್ರೋಪಕರಣಗಳು

ಎ) ಸ್ಥಾವರ ಮತ್ತು ಯಂತ್ರೋಪಕರಣಗಳ ಮೊತ್ತದಲ್ಲಿ ರೂ.47,01,29,660/– ಗಳನ್ನು ಐಡಿಬಿಐ ನಿಂದ ಗುತ್ತಿಗೆ ಅಧಾರದಲ್ಲಿ ಪಡೆದ ಆಸ್ತಿಗಳ ಹೊರತುಪಡಿಸಿ. ಐಡಿಬಿಐ ನಿಂದ ಗುತ್ತಿಗೆ ಅಧಾರದಲ್ಲಿ ಪಡೆದ ಆಸ್ತಿಗಳ ಗುತ್ತಿಗೆ ಅವಧಿಯು ಮುಗಿಯುತ್ತಿದ್ದಂತೆ ಗುತ್ತಿಗೆ ಒಪ್ಪಂದವನ್ನು ಮುಕ್ತಾಯಗೊಳಿಸುವುದ್ದಕ್ಕಾಗಿ ಮತ್ತು ಆಸ್ತಿಗಳ ಮರು ಸ್ವಾಧೀನತೆಗಾಗಿ ಸಮಾಲೋಚನೆಗಳು ಮುಂದುವರೆದಿವೆ ಗುತ್ತಿಗೆ ದಾರನು ಆಸ್ತಿಗಳ ಮೇಲಿನ ಹಕ್ಕನ್ನು ವರ್ಗಾಯಿಸಲು ರೂ.1,12,50,000/– (ಎಸ್ಕಾಂಗಳ ಸ್ವಾಧೀನದಲ್ಲಿರುವ ರೂ.59,60,000/– ಮೌಲ್ಯದ ಆಸ್ತಿಗಳನ್ನು ಒಳಗೊಂಡಂತೆ) ಮೊತ್ತವನ್ನು ಕೇಳಿದ್ದಾರೆ ನಿಗಮವು ಈ ಪ್ರಸ್ತಾವನೆಗೆ ಇನ್ನು ಒಪ್ಪಿಗೆ ನೀಡಿರುವುದಿಲ್ಲ ಮೌಲ್ಯ ಇತ್ಯರ್ಥವಾದ ನಂತರ 31.12.2003 ರಿಂದ ಪ್ರಾಥಮಿಕ ಹಂತದ ಗುತ್ತಿಗೆ ಅವಧಿಯು ಮುಗಿದ ದಿನದಿಂದ ಬಂಡವಾಳೀಕರಣ ಮತ್ತು ಸವಕಳಿಗೆ ಸಂಬಂಧಪಟ್ಟಂತೆ ಸೂಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಕಂಪನಿಯು ಸದರಿ ಆಸ್ತಿಗಳ ಸಧ್ಯದ ಮೌಲ್ಯವನ್ನು ಮೌಲ್ಯಾಧಾರಿತ ವರದಿಗಾರರಿಂದ ಪಡೆದುಕೊಂಡಿರುವುದಿಲ್ಲ.

ಬಿ) ಆಸ್ತಿ ಅವಧಿಯ ಮುಕ್ತಾಯದ ನಂತರ ಕಂಪನಿಯು ಉಳಸಿಕೊಂಡಿರುವ ಆಸ್ತಿಗಳ ವೆಚ್ಚ ಮತ್ತು ಐಎನ್‌ಜಿ ವೈಶ್ಯ ಬ್ಯಾಂಕ್ (ಈಗ ಕೋಟಕ್ ಮಹೀಂದ್ರಾ ಬ್ಯಾಂಕ್) ಯಿಂದ ಹಿಡುವಳಿ ಆಸ್ತಿಯ ವೆಚ್ಚವನ್ನು ಒಳಗೊಂಡಿರುವುದಿಲ್ಲ ಮತ್ತು ಆಸ್ತಿಗಳು ಅವುಗಳ ಉಳದ ಮೌಲ್ಯವನ್ನು ತಲುಪಿದವು ಮತ್ತು ಹಿಂದಿನ ಕೆಇಬಿ ಅವಧಿಗೆ ಸಂಬಂಧಿಸಿವೆ ಮತ್ತು ಅಂತಹ ಆಸ್ತಿಗಳ ನಿಖರವಾದ ಸ್ಥಳವು ಗುರುತಿಸಲ್ಪಡುವುದಿಲ್ಲ.

ಸಿ) ಕವಿಪ್ರನಿನಿಯ ವಿವಿಧ ವಿದ್ಯುತ್ ಕೇಂದ್ರಗಳಲ್ಲಿ ಎನ್.ಜೆ.ವೈ ಕಾಮಗಾರಿಗಳಿಗೆ ಹೆಚ್ಚುವರಿ ಸ್ವಿಚ್ ಗೇರ್ ಮತ್ತು ಇತರೆ ಉಪಕರಣಗಳನ್ನು ಅಳವಡಿಸಲಾಗಿದ್ದು, ಸದರಿ ಉಪಕರಣಗಳ ಬೆಲೆಯನ್ನು ಎಸ್ಕಾಂಗಳಿಂದ ಹಿಂಪಡೆಯಬೇಕಾಗಿದು, ಸದರಿ ಹೆಚ್ಚುವರಿ ಸ್ವಿಚ್ ಗೇರ್ ಮತ್ತು ಉಪಕರಣಗಳು ಆಸ್ತಿ ಸ್ಥಾವರ ಮತ್ತು ಉಪಕರಣಗಳಲ್ಲಿ ಒಳಗೊಂಡಿದೆ.

ಡಿ) ಕೆ.ಇ.ಜಿ.ಸಿ 2015ಕ್ಕೆ ಅಗತ್ಯವಿರುವ ಅಂತರ ಸಂಪರ್ಕದ ಸಮಯದಲ್ಲಿ ಸಹಿ ಮಾಡಬೇಕಾದ ಸಂಪರ್ಕ ಒಪ್ಪಂದವನ್ನು ಪರಿಶೀಲಿಸುವ ಪ್ರಕ್ರಿಯೆಯ ಹಂತದಲ್ಲಿ ಕಂಪನಿಯಿದೆ.

ಇ) ಸ್ವಯಂ ನಿರ್ವಹಣೆ ಕಾಮಗಾರಿಗಳು ಪೂರ್ಣಗೊಂಡು ಕಮೀಷನ್‌ಗೊಂಡಿರುವ ಕಾಮಗಾರಿಗಳನ್ನು ಕಂಡುಹಿಡುದು ಮತ್ತು ದಾಸ್ತಾನು ಹಸ್ತಾಂತರಿಸಿದ ನಂತರ ವರ್ಗೀಕರಿಸಲಾಗುತ್ತದೆ.

ಟಿಪ್ಪಣಿ 2.5 –ಪಿಪಿಇ ನೋಂದಣಿ ಪುಸ್ತಕ

ಎ) ಹಣಕಾಸು ಹೇಳಿಕೆಗಳಲ್ಲಿ ಹೇಳಲಾದ ಆಸ್ತಿಗಳ ಸಮಗ್ರ ವೆಚ್ಚಕ್ಕೆ ಸ್ಥಿರ ಆಸ್ತಿ ದಾಖಲೆಗಳನ್ನು ಸಮನ್ವಯಗೊಳಿಸುವ ಪ್ರಕ್ರಿಯೆಯನ್ನು ಆರಂಭಿಸಲು ಆಡಳಿತ ಮಂಡಳಿಯು ಪರಿಗಣಿಸುತ್ತಿದೆ.

ಬಿ) ಹಿಂದಿನ ವರ್ಷದಲ್ಲಿ ಕಾರ್ಯರಂಭಗೊಂಡ ಯೋಜನೆಗಳು ಮತ್ತು ಪ್ರಸಕ್ತ ವರ್ಷದಲ್ಲಿ ಬಂಡವಾಳೀಕರಣ/ ಆಸ್ತಿಕರಣ.

ಪ್ರಸಕ್ತ ವರ್ಷದಲ್ಲಿ ಬಂಡವಾಳೀಕರಣ/ ಆಸ್ತಿಕರಣಗೊಳಿಸಿದ ರೂ.150,22,40,076/–ಗಳು ದಿನಾಂಕ: 01.04.2016 ರ ಹಿಂದಿನ ಅವಧಿಯಲ್ಲಿ ಕಾರ್ಯರಂಭಗೊಂಡ ಯೋಜನೆಗಳಿಗೆ ಸಂಬಂಧಿಸಿದ್ದು ಮತ್ತು ಸದರಿ ಯೋಜನೆಗಳಿಗೆ ಸಂಬಂಧಿಸಿದ ಸವಕಳಿ ಮೊತ್ತ ರೂ.4,26,08,127/–ಗಳನ್ನು ಹಿಂದಿನ ಅವಧಿಯ ಅಂಶಗಳೆಂದು ಲೆಕ್ಕೀಕರಿಸಲಾಗಿದೆ (ಟಿಪ್ಪಣಿ ಸಂಖ್ಯೆ 33 ಗಮನಿಸಿ)

ಸಿ) ಪಿಪಿಇಗಳಿಗೆ ಓವರ್‌ಹೆಡ್ ಹಂಚಿಕೆ

ಎ) ಪಿಪಿಇಗೆ ಹಾಕುವ ಸಿಬ್ಬಂದಿ ವೆಚ್ಚ ಮತ್ತು ಬಡ್ಡಿ ವೆಚ್ಚವನ್ನು ಆಸ್ತಿ ಆಧಾರಿತ ಹಂಚಿಕೆ ಮಾಡಲಾಗುವುದು. ಪಿಪಿಇಗೆ ಹಾಕಬೇಕಾಗಿದ್ದ ಕಾರ್ಯಚರಣೆಯ ವೆಚ್ಚವನ್ನು ಪ್ರಾಯೋಗಿಕ ಕಾರ್ಯಚರಣೆ ಮತ್ತು ಅಂತರ್ಗತ ಪ್ರಕೃತಿಯಿಂದಾಗಿ ಪ್ರತ್ಯೇಕ ಆಸ್ತಿ/ ಉಪಕರಣಗಳ ಆಧಾರಿತ ಹಂಚಿಕೆ ಮಾಡಲಾಗಿರುವುದಿಲ್ಲ. ಇಂಡ್ ಎ ಎಸ್ 16 ರ ಅಡಿಯಲ್ಲಿ ಹೇಳದಂತೆ ಸಿಬ್ಬಂದಿ ವೆಚ್ಚದಲ್ಲಿ ಆಡಳಿತ ಒವರ್ ಹೆಡ್ಸ್ ಒಳಗೊಂಡಿರುವುದಿಲ್ಲ.

ಬಿ) ಸ್ವಯಂ ನಿರ್ವಹಣಾ ಕಾರ್ಯಗಳ ಮೇಲೆ ಸಂಗ್ರಹಿಸಲಾದ ಮೇಲ್ವಿಚಾರಣೆಯ ಶುಲ್ಕದ ನಿವ್ವಳ ಸಂಸ್ಥೆಯು ಸ್ಥಾಪನೆ ವೆಚ್ಚದ ಬಂಡವಾಳವನ್ನು ಹೊಂದಿದೆ.

ಡಿ) ಆಸ್ತಿ ಹೂಡಿಕೆ

ಬಂಡವಾಳ ಆಸ್ತಿಯಂತೆ ಬಾಡಿಗೆ ಆದಾಯವನ್ನು ಗಳಸುವ ಉದ್ದೇಶಕ್ಕಾಗಿ ಕಂಪನಿಯು ಪಿಪಿಇ ಅನ್ನು ವರ್ಗೀಕರಿಸಿರುವುದಿಲ್ಲ, ಏಕೆಂದರೆ ಅಂತಹ ಆಸ್ತಿಗಳ ಸಾಗಿಸುವ ಮೌಲ್ಯವು ಅತ್ಯಲ್ಪವಾಗಿರುತ್ತದೆ

ಟಿಪ್ಪಣಿ–2ಎ ಆಸ್ತಿ, ಸ್ಥಾವರ ಮತ್ತು ಉಪಕರಣಗಳು

ಆಸ್ತಿ ಗುಂಪು	ಲೆಕ್ಕ ಸಂಕೇತ	ಇಳತಗೊಂಡ ಆರಂಭಿಕ ಮೌಲ್ಯ	ಏರಿಕೆ ಅಥವಾ ಇಳಕೆ	ಸವಕಳಿ	ಇಳತಗೊಂಡ ಅಂತಿಮ ಮೌಲ್ಯ
ಸ್ಟಾಂಡ್ ಬೈ ಆಸ್ತಿಗಳು/ ಬಿಡುಗಡೆಯಾದ ಮತ್ತು ಪುನಃ ಬಳಸಬಹುದಾದ ಆಸ್ತಿಗಳ ಇಳತಗೊಂಡ ಮೌಲ್ಯ	16.2	17 57 29 870	6 10 57 957	88 71 303	22 79 16 524
ಪರಿವರ್ತಕಗಳನ್ನು ದುರಸ್ತಿಗಾಗಿ ಗುತ್ತಿಗೆದಾರರಿಗೆ/ ಸರಬರಾಜುದಾರರಿಗೆ ನೀಡಲಾಗಿದೆ.	26.604	27 75 37 045	1 77 38 218	1 47 70 936	28 05 04 327
ಒಟ್ಟು		**45 32 66 915**	**7 87 96 175**	**2 36 42 239**	**50 84 20 851**

ಟಿಪ್ಪಣಿ 2ಎ.1

ಎ) ಇಳತಗೊಂಡ ಮೌಲ್ಯ ಒಟ್ಟು ರೂ. 50,84,20,851/– ಗಳಷ್ಟು ಸ್ಟಾಂಡ್ ಬೈ ಆಸ್ತಿಗಳು/ ಬಿಡುಗಡೆಯಾದ ಮತ್ತು ಪುನಃ ಬಳಸಬಹುದಾದ ಆಸ್ತಿಗಳ/ ಪರಿವರ್ತಕಗಳನ್ನು ದುರಸ್ತಿಗಾಗಿ ಗುತ್ತಿಗೆದಾರರಿಗೆ/ ಸರಬರಾಜುದಾರರಿಗೆ ನೀಡಿರುವ ಪುನಃ ಬಳಸಬಹುದಾದ ಆಸ್ತಿಗಳೆಂದು ಮೇಲೆ ತೋರಿಸಲಾಗಿದೆ ಮತ್ತು ಇಳತಗೊಂಡ ಮೌಲ್ಯದ ವಿಧಾನದಲ್ಲಿ ನಿರ್ಧರಿಸಿರುವ ದರಗಳ ಅನ್ವಯ ಸವಕಳಿಯನ್ನು ಮಾಡಲಾಗಿದೆ.

ಬಿ) ಅಂತಹ ಆಸ್ತಿಗಳನ್ನು ಕ್ರಮ ಬದ್ಧಗೊಳಿಸಿ ಮತ್ತು ಪಿಪಿಇಗೆ ಪುನಃ ತಂದ ಮೇಲೆ ಇಳತಗೊಂಡ ಮೌಲ್ಯವನ್ನೇ ಪರಿಗಣಿಸಿ ನೇರ ಸಾಲಿನ ವಿಧಾನದಲ್ಲಿ ಸವಕಳಿಯನ್ನು ಪುನಃ ಸ್ಥಾಪಿಸಿದ ದಿನಾಂಕದಿಂದ ಪರಿಗಣಿಸಲಾಗುವುದು.

ಟಿಪ್ಪಣಿ 2ಬಿ– ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಸಾರಾಂಶ

ವಿವರಗಳು	ಇಳತಗೊಂಡ ಆರಂಭಿಕ ಮೌಲ್ಯ	ಇಳತಗೊಂಡ ಅಂತಿಮ ಮೌಲ್ಯ
ಟಿಪ್ಪಣಿ 2	8993 37 23 533	10573 63 78 949
ಟಿಪ್ಪಣಿ 2 ಎ	45 32 66 915	50 84 20 851
ಒಟ್ಟು	**9038 69 90 448**	**10624 47 99 800**

ಟಿಪ್ಪಣಿ:3 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

(ಮೊಬಲಗು ರೂ.ಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಸಂಕೇತ	31 ಮಾರ್ಚ್ 2018 ರಂದು ಇದ್ದಂತೆ		31 ಮಾರ್ಚ್ 2017 ರಂದು ಇದ್ದಂತೆ	
1	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	14	2236 51 67 443		2291 97 75 393	
	ಉಪ ಮೊತ್ತ			**2236 51 67 443**		**2291 97 75 393**
2	ಬಂಡವಾಳ ಕಾಮಗಾರಿಗೆ ಸಂಬಂಧಿಸಿದ ಸಮಗ್ರ ಗುತ್ತಿಗೆದಾರರ ನಿಯಂತ್ರಣ ಲೆಕ್ಕ	26.605	840 06 93 454		910 32 71 067	
	ಉಪ ಮೊತ್ತ			**840 06 93 454**		**910 32 71 067**
3	ಕಳೆಯಿರಿ: ನಿರ್ಣಯ ಬಾಕಿಯಿರುವ ಬಂಡವಾಳ ಕಾಮಗಾರಿಗಳಿಗೆ ಸಂಬಂಧಿಸಿದ ಬ್ಯಾಂಕ್ ಖಾತ್ರಿ ನಗದೀಕರಣ ಹೊಂದಾಣಿಕೆ	56.202		-43 66 84 559		-40 13 86 383
	ಮೊತ್ತ			**3032 91 76 338**		**3162 16 60 077**

ಟಿಪ್ಪಣಿ 3.1 : ಪ್ರಗತಿಯಲ್ಲಿರುವ ಸ್ವಯಂ ನಿರ್ವಹಣ ಕಾಮಗಾರಿಗಳು ಮತ್ತು ಠೇವಣಿ ವಂತಿಗೆ ಕಾಮಗಾರಿಗಳು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ಒಳಗೊಂಡಿರುವುದಿಲ್ಲ ಸ್ವಯಂ ನಿರ್ವಹಣ ಕಾಮಗಾರಿಗಳು ಮತ್ತು ಠೇವಣಿ ವಂತಿಗೆ ಕಾಮಗಾರಿಗಳ ಜಂಟಿ ಸಾಮಾಗ್ರಿಗಳ ವಿವರಗಳೊಂದಿಗೆ ಕವಿಪ್ರನಿನಿಗೆ ಹಸ್ತಾಂತರಿಸಿದ ನಂತರ ಸದರಿ ಕಾಮಗಾರಿಗಳನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳಾಗಿ ಪರಿಗಣಿಸಲಾಗುವುದು. ಸ್ವಯಂ ನಿರ್ವಹಣ ಕಾಮಗಾರಿಗಳಿಗೆ ಮತ್ತು ಠೇವಣಿ ವಂತಿಗೆ ಕಾಮಗಾರಿಗಳಿಗೆ ಸಂಬಂಧಸಿದ (ಪ್ರಗತಿಯಲ್ಲಿರುವ ಹಾಗೂ ಮುಕ್ತಾಯವಾದ ಕಾಮಗಾರಿಗಳು) ಸ್ಥಿತಿಯನ್ನು ಅರಿಯಲು ಪ್ರತ್ಯೇಕ ಸಮಗ್ರ ಮತ್ತು ವಿವರವಾದ ಮಾಹಿತಿಯುಳ್ಳ ಪುಸ್ತಕವನ್ನು ನಿರ್ವಹಿಸಲು ಆಡಳಿತ ಮಂಡಳಿಯು ಪರಿಗಣಿಸಿದೆ.

ಟಿಪ್ಪಣಿ 3.2 ವರ್ಷದ ಕೊನೆಯಲ್ಲಿ ಬಂಡವಾಳ ವೆಚ್ಚವನ್ನು ಪರಿಗಣಿಸುವಲ್ಲಿ ಗುತ್ತಿಗೆದಾರರಿಂದ ಪೂರ್ಣ ಗೊಂಡ ಕಾಮಗಾರಿಗೆ ಪಡೆದ & ಪಡೆಯಲಾರದ ಬಿಲ್ಲುಗಳನ್ನು ಮಾತ್ರ ಪರಿಗಣಿಸಿ ಲೆಕ್ಕೀಕರಿಸಲಾಗುವುದು.

ಟಿಪ್ಪಣಿ 3.3 : ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೊತ್ತದಲ್ಲಿ ರೂ 1,20,41,039/-. (ಹಿಂದಿನ ವರ್ಷ :ರೂ. 4,11,21,490/-) ಕಾಮಗಾರಿಗಾಗಿ ನೀಡಿರುವ ಇನ್ನು ಉಪಯೋಗಿಸದೆ ಇರುವ ಸಾಮಾಗ್ರಿಗಳನ್ನು ಒಳಗೊಂಡಿದೆ.

ಟಿಪ್ಪಣಿ 3.4 :ಬಂಡವಾಳ ಕಾಮಗಾರಿಗಳ ವಿಷಯದಲ್ಲಿ ಸಮಗ್ರ ಕಾರ್ಯ ಗುತ್ತಿಗೆದಾರರ ನಿಯಂತ್ರಣ ಲೆಕ್ಕ ಖಾತೆಯಲ್ಲಿ ಪಿಎಸ್‌ಡಿಎಫ್ ಕಾಮಗಾರಿಗೆ ಸಂಬಂಧಿಸಿದಂತೆ ರೂ.59,48,06,469/- ನ್ನು ಒಳಗೊಂಡಿದೆ. (ಕವಿಪ್ರನಿನಿ ಭಾಗವನ್ನು ಒಳಗೊಂಡಂತೆ) ಮತ್ತು ಎನ್‌ಸಿಇಎಫ್ ಕಾಮಗಾರಿಗೆ ಸಂಬಂಧಿಸಿದಂತೆ ರೂ.62,20,86,863/- ನ್ನು ಒಳಗೊಂಡಿದೆ (ಕವಿಪ್ರನಿನಿ ಭಾಗವನ್ನು ಒಳಗೊಂಡಂತೆ).

ಟಿಪ್ಪಣಿ 3.5 : ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಲ್ಲಿ ಮತ್ತು ಸಮಗ್ರ ಕಾರ್ಯ ಗುತ್ತಿಗೆದಾರರ ನಿಯಂತ್ರಣ ಲೆಕ್ಕ ಖಾತೆಯಲ್ಲಿ ಪಿಎಸ್‌ಡಿಎಫ್ ಅಡಿಯಲ್ಲಿನ ಕಾಮಗಾರಿಗಳನ್ನು ಒಳಗೊಂಡಿದೆ. ಪಿಎಸ್‌ಡಿಎಫ್ ಕಾಮಗಾರಿಗಳನ್ನು ಕಂದಾಯ ಕಾಮಗಾರಿ ಅಥವಾ ಬಂಡವಾಳ ಕಾಮಗಾರಿಗಳ ವರ್ಗೀಕರಿಸುವಿಕೆಯನ್ನು ಖಚಿತಪಡಿಸಿಕೊಳ್ಳಬೇಕಾಗಿರುತ್ತದೆ.

ಟಿಪ್ಪಣಿ 3.6 : ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಲ್ಲಿ ಹೆಚ್ಚುವರಿ ಸ್ವಿಚ್ ಗೇರುಗಳನ್ನು ಮತ್ತು ನಿರಂತರಜ್ಯೋತಿ ಯೋಜನೆ ಅಡಿಯಲ್ಲಿ ಕವಿಪ್ರನಿನಿಯ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಿಗೆ ನೀಡಲಾಗಿರುವ ಇತರ ಉಪಕರಣಗಳನ್ನು ಒಳಗೊಂಡಿದ್ದು, ಸದರಿ ಉಪಕರಣಗಳ ಮೊತ್ತವನ್ನು ಖಚಿತಪಡಿಸಿಕೊಂಡು ಎಸ್ಕಾಂಗಳಿಂದ ವಸೂಲಾತಿ ಮಾಡಬೇಕಾಗಿರುತ್ತದೆ.

ಟಿಪ್ಪಣಿ 3.7 ಮರ/ ಬೆಳೆ/ ಭೂಮಿಯ ಪರಿಹಾರಗಳನ್ನು ನಗದು ಆಧಾರದ ಮೇಲೆ ಲೆಕ್ಕೀಕರಿಸಲಾಗಿರುತ್ತದೆ.

ಟಿಪ್ಪಣಿ: 4: ಇತರೆ ಪ್ರಸಕ್ತವಲ್ಲದ ಹಣಕಾಸಿನ ಆಸ್ತಿಗಳು

(ಮೊಬಲಗು ರೂ.ಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಸಂಕೇತ	31 ಮಾರ್ಚ್ 2018 ರಂದು ಇದ್ದಂತೆ		31 ಮಾರ್ಚ್ 2017 ರಂದು ಇದ್ದಂತೆ	
1	ಸಿಬ್ಬಂದಿಗೆ ಮುಂಗಡ–ಬಡ್ಡಿ ಸಹಿತ (ಸುರಕ್ಷಿತ ಉತ್ತಮವಾದುದೆಂದು ಮಾನ್ಯ ಮಾಡಿದ್ದು)	27.101 ರಿಂದ 27.106	4 02 390		4 01 473	
2	ಮುಂಗಡ ವರಮಾನ ತೆರಿಗೆ ಪಾವತಿ,ಇತರೆ ತೆರಿಗೆ ಪಾವತಿ,ಮೂಲದಲ್ಲಿ ತೆರಿಗೆ ಕಡಿತ.ಇತರೆ ತೆರಿಗೆ ಪಾವತಿ(ನಿವ್ವಳ ಹವಣಿಕೆ)(ಸುರಕ್ಷಿತ ಉತ್ತಮವಾದುದೆಂದು ಮಾನ್ಯ ಮಾಡಿದ್ದು) (ಟಿಪ್ಪಣಿ. 4.1 & 26.1 (iv) ಗಮನಿಸಿ)	27.4 ಮತ್ತು 28.821	53 53 30 726		22 45 10 048	
3	ನೌಕರರಿಂದ ವಸೂಲಾಗಬೇಕಾದ ಮೊತ್ತ (ಟಿಪ್ಪಣಿ. 4.2 & 4.3 ನ್ನು ಗಮನಿಸಿ)	28.401	3 94 77 791		3 57 09 274	
4	ಗುತ್ತಿಗೆದಾರರಿಗೆ ಮುಂಗಡಗಳು	28.411	48 497		13 582	
5	ಬಂಡವಾಳ ಆಸ್ತಿಗಳ ನಷ್ಟ/ ಹಾನಿಯಾದ ಹಕ್ಕು ಕೋರಿಕೆ	28.74	1 50 863		1 50 863	
6	ಇತರೆ ಸ್ವೀಕೃತಿಗಳು (ಟಿಪ್ಪಣಿ. 4.4 ಮತ್ತು4.8ನ್ನು ಗಮನಿಸಿ)	28.8 ಮತ್ತು 28.9	12 15 24 370		13 35 92 696	
7	ಇತರರಲ್ಲಿರುವ ಠೇವಣಿಗಳು (ಟಿಪ್ಪಣಿ 4.5, 4.6 ಮತ್ತು 4.7 6ನ್ನು ಗಮನಿಸಿ) (ಸುರಕ್ಷಿತವಲ್ಲದ ಉತ್ತಮವಾದುದೆಂದು ಮಾನ್ಯ ಮಾಡಿದ್ದು)	28.935	19 08 69 630		98 16 52 238	
8	ಕವಿಪ್ರನಿನಿಯ ಸ್ಥಾವರಗಳಿಗೆ ವಿದ್ಯುತ್ ಸರಬರಾಜನ್ನು ಒದಗಿಸಲು ಎಸ್ಕಾಂಗಳಲ್ಲಿ ಮಾಡಿರುವಂತಹ ಭದ್ರತಾ ಠೇವಣಿ(ಸುರಕ್ಷಿತವಲ್ಲದ ಉತ್ತಮವಾದುದೆಂದು ಮಾನ್ಯ ಮಾಡಿದ್ದು)	28.936, 28.937	20 37 916		8 70 910	
9	ಎಸ್ಕಾಂಗಳಿಂದ ಟಿಬಿಪಿಸಿಎಲ್ ಗೆ ಸ್ವೀಕೃತಿಯಾಗಬೇಕಾಗಿರುವ ಹೆಚ್ಚುವರಿ ನಿಗಧಿತ ಶುಲ್ಕ (ಟಿಪ್ಪಣಿ. 18.4ನ್ನು ಗಮನಿಸಿ)	28.968 ರಿಂದ 28.973	543 84 00 000		543 84 00 000	
	ಒಟ್ಟು ಮೊತ್ತ			**632 82 42 183**		**681 53 01 084**

ಟಿಪ್ಪಣಿ 4.1 : ರೂ.4,54,06,442/– (ಹಿಂದಿನ ವರ್ಷ ರೂ 4,54,06,442/–)ಗಳನ್ನು ಆದಾಯ ತೆರಿಗೆ ಇಲಾಖೆಗೆ ಪ್ರತಿರೋಧವಾಗಿ ಪಾವತಿಸಿದ್ದು ಸದರಿ ಮೊತ್ತವು ವಿಳಂಭವಾಗಿ ಪಾವತಿಸಿದ, ವಿದ್ಯುತ್ ಖರೀದಿಗೆ ಸಂಬಂಧಿಸಿದ ಬಡ್ಡಿಯ ಹವಣಿಕೆಯ ಮೇಲೆ ಆದಾಯ ತೆರಿಗೆ ಕಡಿತಗೊಳಸದಿದ್ದಕ್ಕೆ ಸಂಬಂಧಿಸಿದ್ದು. ಮೌಲ್ಯಮಾಪನ ವರ್ಷ 2004–05, 2005–06 ಮತ್ತು 2006–07 ನೇ ಸಾಲಿಗೆ ಸಂಬಂಧಿಸಿರುತ್ತದೆ. ಸದರಿ ಮೊತ್ತವು ಮುಂಗಡ ಆದಾಯ ತೆರಿಗೆಯಲ್ಲಿ ಒಳಗೊಂಡಿರುತ್ತದೆ.

ಟಿಪ್ಪಣಿ 4.2: 2012–13, 2013–14 ಮತ್ತು 2014–15 ರ ಸಾಲಿನ ಹಣಕಾಸಿನ ವರ್ಷಗಳಲ್ಲಿ ನಿವೃತ್ತ ನೌಕರ/ ಅಧಿಕಾರಿಗಳ ಗಳಿಕೆ ರಜೆಯ ನಗಧೀಕರಣದ ಮೇಲೆ ಟಿಡಿಎಸ್‌ನ ಅಲ್ಪಕಡಿತದ ಮೇಲೆ 31ನೇ ಮಾರ್ಚ್, 2018 ಕ್ಕೆ ನೌಕರರಿಂದ ಮಾಡಲಾಗುವ ವಸೂಲಗಳಿಗೆ ಸಂಬಂಧಿಸಿದಂತೆ ರೂ.2,72,70,111/– (ಹಿಂದಿನ ವರ್ಷ ರೂ.2,69,06,746/–) ಒಳಗೊಂಡಂತೆ ನೌಕಕರಿಂದ ವಸೂಲ ಮಾಡಬಹುದಾದ ಮೊತ್ತ. ಕಂಪನಿಯು ರೂ.3,64,48,286 ರಷ್ಟು ಬಡ್ಡಿಯನ್ನೊಳಗೊಂಡಂತೆ ರೂ. 95,41,540 ರಷ್ಟು ಮೊತ್ತದ ಕೊರತೆಗಾಗಿ ಆದಾಯ ತೆರಿಗೆ ಇಲಾಖೆಯಿಂದ ಮಂಡಿಸಿದ ಟಿ.ಡಿ.ಎಸ್ ಬೇಡಿಕೆಯನ್ನು 2016–17ರ ಅವಧಿಯಲ್ಲಿ ನಿಗಮದಿಂದ ಪಾವತಿಸಲಾಗಿದೆ. ಮತ್ತು ಆದಾಯ ತೆರಿಗೆ ಬೇಡಿಕೆಯ ವಿರುದ್ಧ 20.01.2017 ಮತ್ತು 28.02.2017 ರಂದು ಮೇಲ್ಮನವಿಯನ್ನು ಸಲ್ಲಿಸಲಾಗಿರುತ್ತದೆ. ಆ ವರ್ಷದ ಅವಧಿಯಲ್ಲಿನ ಬಡ್ಡಿ ಅಂಶವನ್ನು ಲಾಭ ಮತ್ತು ನಷ್ಟದ ಖಾತೆಯಲ್ಲಿ ಲೆಕ್ಕೀಕರಿಸಲಾಗಿದೆ. ಕವಿಪ್ರನಿನಿಯು ಆದಾಯ ತೆರಿಗೆಯ ಮೇಲ್ಮನವಿ ಪ್ರಾಧಿಕಾರದಲ್ಲಿ ಸಲ್ಲಿಸಿದ ಮೇಲ್ಮನವಿಗಳಲ್ಲಿ 78 ಪ್ರಕರಣಗಳಲ್ಲಿ ಕವಿಪ್ರನಿನಿಯ ವಾದವನ್ನು ಮನ್ನಿಸಿ ಆದೇಶ ನೀಡಿರುತ್ತದೆ. ಉಳದಂತೆ

ಹಲವು ಪ್ರಕರಣಗಳಲ್ಲಿ ಆದಾಯ ತೆರಿಗೆ ಮೇಲ್ಮನವಿ ಪ್ರಾಧಿಕಾರದ ಆದೇಶವು ಬಾಕಿಯಿದೆ. ಕವಿಪ್ರನಿನಿಯು ನಿವೃತ್ತ ನೌಕರರಿಂದ ಆದಾಯ ತೆರಿಗೆ ಇಲಾಖೆಗೆ ಪಾವತಿಸಿದ ಮೊತ್ತವನ್ನು ಪ್ರತಿ ಮಾಹೆಯಾನ ವಸೂಲಾತಿ ಮಾಡಲಾಗುತ್ತಿದೆ. ಆದಾಗ್ಯೂ ಕಂಪನಿಯ ಪರವಾಗಿ ಎಲ್ಲಾ ಮೇಲ್ಮನವಿಗಳು ವಿಲೇವಾರಿ ಮಾಡಿದಲ್ಲಿ ನಿವೃತ್ತ ನೌಕರರಿಂದ ವಸೂಲಾತಿ ಮಾಡಿದ ಮೊತ್ತವನ್ನು ಹಿಂತಿರುಗಬೇಕಾಗುತ್ತದೆ.

ಟಿಪ್ಪಣಿ 4.3 : ದಾಸ್ತಾನುಗಳ ಕೊರತೆಗೆ ಸಂಬಂಧಿಸಿದಂತೆ ರೂ.2,28,17,791/– (ಹಿಂದಿನ ವರ್ಷ ರೂ 1,24,68,787/–) ಗಳನ್ನು ನೌಕರರಿಂದ ವಸೂಲಾತಿ ಮಾಡಬೇಕಾದ ಮೊತ್ತದಲ್ಲಿ ಬಿಂಬಿಸಲಾಗಿದ್ದು ಸದರಿ ಮೊತ್ತವನ್ನು ನೌಕರರ ಭವಿಷ್ಯದ ಸಂಬಳ/ ಸೇವಾಂತ್ಯ ಸೌಲಭ್ಯಗಳಿಂದ ವಸೂಲಿ ಮಾಡುವುದಕ್ಕೆ ಪ್ರಸ್ತಾಪಿಸಲಾಗಿದೆ.

ಟಿಪ್ಪಣಿ 4.4 :ಸಿಂಗಾನಾಯಕನಹಳ್ಳಿ ಮತ್ತು ಸುಂಕದಕಟ್ಟೆ ಭೂಮಿಯ ಖರೀದಿಗೆ ಪಾವತಿಸಿದ ರೂ.6,62,13,820/– (ಹಿಂದಿನ ವರ್ಷ ರೂ.6,62,13,820/–) ರಷ್ಟು ಭೂಬೆಲೆಯನ್ನು ಕಂದಾಯ ಇಲಾಖೆಯಿಂದ ಇನ್ನೂ ಸ್ವೀಕೃತಿಯಾಗಬೇಕಾಗಿದ್ದು ಸದರಿ ಮೊತ್ತವು ಇತರೆ ಸ್ವೀಕೃತಿಗಳಲ್ಲಿ ಒಳಗೊಂಡಿರುತ್ತದೆ. ರೂ.2,31,91,679/– (ಹಿಂದಿನ ವರ್ಷ ಬಾಕಿ ಇರುವುದಿಲ್ಲ) ರಷ್ಟು ಇತರರಿಗೆ ಒದಗಿಸಲಾದ ಕೆಟ್ಟ ಮತ್ತು ಅನುಮಾನಾಸ್ಪದ ಸಾಲಗಳಿಗೆ ಹವಣಿಕೆ ಮಾಡಲಾಗಿದೆ. (ಇತರೆ ಸ್ವೀಕೃತಿಗಳಲ್ಲಿ ಕಟ್ಟಡದಿಂದ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಹಿಂಪಡೆಯಬಹುದಾದ ಮೊತ್ತವನ್ನು ಒಳಗೊಂಡಿರುತ್ತದೆ).

ಟಿಪ್ಪಣಿ 4.5 : ಕೋಣದಾಸಪುರದ ಉಪಕೇಂದ್ರ (ಸಫಲ್ ಮಾರುಕಟ್ಟೆ ಕಾಂಪ್ಲೆಕ್ಸ್‌ನಲ್ಲಿ) ನಿರ್ಮಾಣಕ್ಕಾಗಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಜಮೀನನ್ನು ಪಡೆಯಲು ಪಾವತಿಸಿದ ರೂ. 17,34,646/– ಗಳು ಇತರರೊಂದಿಗಿನ ಠೇವಣಿಯಲ್ಲಿ ಒಳಗೊಂಡಿರುತ್ತದೆ. ಸದರಿ ಗುತ್ತಿಗೆಯ ಕರಾರು ಪತ್ರವನ್ನು ಈವರೆಗೂ ಮಾಡಿಕೊಳ್ಳಲಾಗಿರುವುದಿಲ್ಲ.

ಟಿಪ್ಪಣಿ4.6 : ಸದೇನಹಳ್ಳಿ, ಮಾರನಾಯಕನಹಳ್ಳಿ ಮತ್ತು ತಿಮ್ಮನಾಯಕನ ಹಳ್ಳಿಯಲ್ಲಿರುವ ಭೂಮಿ ಖರೀದಿಗೆ ಸಂಬಂಧಿಸಿದಂತೆ ರೂ.1,17,92,825 ಕೋಟಿ ರೂಪಾಯಿಗಳಷ್ಟು ಕರ್ನಾಟಕ ಸರ್ಕಾರಕ್ಕೆ ಭೂ ಠೇವಣಿಯನ್ನಾಗಿ ಸದರಿ ಮೊತ್ತವನ್ನು ಪಾವತಿಸಿದ್ದು ಸದರಿ ಮೊತ್ತವು ಇತರರೊಂದಿಗಿನ ಠೇವಣಿಯಲ್ಲಿ ಒಳಗೊಂಡಿರುತ್ತದೆ. ಮುಂದುವರೆದು ಸದರಿ ಭೂಮಿಯು ಉಪಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಸೂಕ್ತವಾಗಿಲ್ಲವೆಂದು ನಂತರದಲ್ಲಿ ಕಂಡುಬಂದಿರುತ್ತದೆ. ಆದ್ದರಿಂದ, ಸಂದಾಯ ಮಾಡಿದ ಮುಂಗಡ ಹಣದ ಮರುಸಂದಾಯ/ಹಿಂದಿರುಗಿಸಲು ಕಂಪನಿಯು ತನ್ನ ಪತ್ರದ ದಿನಾಂಕ 12.12.2012 ರಂದು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರಿಗೆ ನಿವೇದನೆಯನ್ನು ಮಾಡಿಕೊಂಡಿರುತ್ತದೆ.

ಟಿಪ್ಪಣಿ 4.7 : ಕಾರ್ಮಿಕರ ಕಲ್ಯಾಣ ಸೆಸ್ ಮಂಡಳಿಯು ದಿನಾಂಕ: 27.04.2012 ರ ಪತ್ರದಲ್ಲಿ ಕಾರ್ಮಿಕರ ಕಲ್ಯಾಣ ಸೆಸ್‌ನ್ನು (WWC) ಸಾಮಗ್ರಿಗಳ ಮೊತ್ತದ ಮೇಲೆ ಅನ್ವಯಿಸುವುದಿಲ್ಲವೆಂದು ಆದೇಶ ನೀಡಿದ ಅನ್ವಯ ಕಂಪನಿಯು ಸಾಮಗ್ರಿಗಳ ಮೇಲೆ ಗುತ್ತಿಗೆದಾರರಿಂದ ವಸೂಲಾತಿ ಮಾಡಿ ಕಾರ್ಮಿಕ ಕಲ್ಯಾಣ ಸೆಸ್ ಮಂಡಳಿಗೆ ಪಾವತಿಸಿದ ಮೊತ್ತವನ್ನು ಗುತ್ತಿಗೆದಾರರಿಗೆ ಹಿಂತಿರುಗಿಸಿ ತದನಂತರ ಸಾಮಗ್ರಿಗಳ ಮೊತ್ತದ ಮೇಲೆ ಪಾವತಿಸಿದ ಕಾರ್ಮಿಕ ಕಲ್ಯಾಣ ಸೆಸ್ ಮೊತ್ತವನ್ನು ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಹಿಂಪಡೆಯಲು ಮನವಿ ಸಲ್ಲಿಸಿದ್ದು, ಕಾರ್ಮಿಕ ಕಲ್ಯಾಣ ಸಂಸ್ಥೆಯು ದಿನಾಂಕ:17.01.2018 ರ ಪತ್ರದಲ್ಲಿ ಕಾರ್ಮಿಕ ಕಲ್ಯಾಣ ಸೆಸ್ ಮೊತ್ತವು ಸಮಗ್ರ ಗುತ್ತಿಗೆಯ ಮೊತ್ತದ ಮೇಲೆ ಅನ್ವಯಿಸುತ್ತದೆ ಎಂದು ಸ್ಪಷ್ಟೀಕರಿಸಿದ ಅನ್ವಯ ಕಾರ್ಮಿಕ ಕಲ್ಯಾಣ ಸೆಸ್ ಮಂಡಳಿಯಿಂದ ಕವಿಪ್ರನಿನಿಗೆ ಬರಬೇಕಾದ ಬಾಕಿ ಮೊತ್ತ ರೂ.2,31,91,679 ಗಳಿಗೆ ಕಾರ್ಮಿಕ ಕಲ್ಯಾಣ ಸೆಸ್ ಮಂಡಳಿಯು ಹಿಂಪಾವತಿಯನ್ನು ನಿರಾಕರಿಸಿದೆ. ಕಂಪನಿಯು ರೂ.2,31,91,679 ಮೊತ್ತಗಳಷ್ಟು ಅನುಮಾನಾಸ್ಪದ ಸ್ವೀಕೃತಿಗಳೆಂದು ಪರಿಗಣಿಸಿದೆ. ಕವಿಪ್ರನಿನಿಯು ಸದರಿ ವಿಷಯದ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

ಟಿಪ್ಪಣಿ 5 : ಇತರೆ ಪ್ರಸಕ್ತವಲ್ಲದ ಆಸ್ತಿಗಳು

(ಮೊಬಲಗು ರೂ.ಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಸಂಕೇತ	31 ಮಾರ್ಚ್ 2018 ರಂದು ಇದ್ದಂತೆ		31 ಮಾರ್ಚ್ 2017 ರಂದು ಇದ್ದಂತೆ	
1	ಮುಂದೂಡಿದ ವೆಚ್ಚಗಳು ಇನ್ನೂ ಮಂಜೂರಾಗದೆ ಇರುವ ಯೋಜನೆಗಳಿಗೆ ಸಂಬಂಧಿಸಿದ ಸರ್ವೇಕಾರ್ಯ ಸಾಧ್ಯತೆಯ ಅಧ್ಯಯನದ ಪೂರ್ವಭಾವಿ ವೆಚ್ಚಗಳು	17.301		9 94 01 530		12 51 31 893
2	**ಆದಾಯ ತೆರಿಗೆ**					
	ಮೌಲ್ಯ ಮಾಪನ ವರ್ಷ 2014–15ಕ್ಕೆ ಆದಾಯ ತೆರಿಗೆ ಇಲಾಖೆಯಿಂದ ಮರುಪಾವತಿಯಾಗಬೇಕಾದ ಕಾರ್ಪೋರೇಟ್ ತೆರಿಗೆ	28.819		3 06 30 657		3 06 30 657
3	ನಿವ್ವಳ ಮೌಲ್ಯದ ಕಡೆಗೆ ಪ್ರಸ್ತಾವಿತ ಹೊಂದಾಣಿಕೆಗಳು (ಟಿಪ್ಪಣಿ 20.1 & 5.1ನ್ನು ಗಮನಿಸಿ)	53.304 ರಿಂದ 52.309		97 70 78 513		97 70 78 513
4	ಸರಬರಾಜುದಾರರಿಗೆ ಹಾಗೂ ಗುತ್ತಿಗೆದಾರರಿಗೆ ಮುಂಗಡಗಳು (ಸುರಕ್ಷಿತವಲ್ಲದ ಉತ್ತಮವಾದುದೆಂದು ಮಾನ್ಯ ಮಾಡಿದ್ದು) (ಟಿಪ್ಪಣಿ. 5.2ನ್ನು ಗಮನಿಸಿ)	25 ಮತ್ತು 26	2 32 14 982		4 76 50 058	
	ಕಳೆಯಿರಿ:ಕೆಟ್ಟ ಮತ್ತು ಸಂದೇಹಾಸ್ಪದ ಸಾಲಗಳ ಹವಣಿಕೆಯನ್ನು –ಸರಬರಾಜುದಾರರಿಗೆ/ ಗುತ್ತಿಗೆದಾರರಿಗೆ ಮುಂಗಡಗಳು		–1 09 81 108	1 22 33 874	–1 09 81 108	3 66 68 950
	ಮೊತ್ತ			**111 93 44 574**		**116 95 10 013**

ಟಿಪ್ಪಣಿ 5.1 : ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಎನ್ 67 ಪಿಎಸ್ಆರ್ 2017 ರ ಪ್ರಕಾರ ಕವಿಪ್ರನಿನಿಯಿಂದ ವಿಸಕಂಗಳಿಗೆ (ಕರ್ನಾಟಕ ಸರ್ಕಾರದಿಂದ ಸ್ವೀಕೃತಿಯಾಗಬೇಕಾಗಿರುವ ಆರ್ಇ ಸಬ್ಸಿಡಿ ಬಾಕಿ ಮತ್ತು ಕವಿಪ್ರನಿನಿಗೆ ಪಾವತಿಸಬೇಕಾಗಿರುವ ವಿದ್ಯುತ್ ಖರೀದಿ ಬಾಕಿ) ಯ ವರ್ಗಾವಣೆಯಿಂದ ಲೆಕ್ಕೀಕರಿಸಲಾದ ನಿವ್ವಳ ಮೊತ್ತವು, ಪ್ರಸ್ತಾವಿತ ಹೊಂದಾಣಿಕೆಯಿಂದ ನಿವ್ವಳ ಮೌಲ್ಯವನ್ನು ಪ್ರತಿನಿಧಿಸುತ್ತದೆ.

ಟಿಪ್ಪಣಿ 5.2 : ಸರಬರಾಜುದಾರರು ಮತ್ತು ಗುತ್ತಿಗೆದಾರರಿಗೆ ಮುಂಗಡವು ಬೇರೆ ಘಟಕಗಳೊಂದಿಗೆ ಕ್ರಮಬದ್ಧಗೊಳಿಸಬೇಕಾಗಿರುವ ರೂ 1,09,81,108 / –ಗಳನ್ನು ಒಳಗೊಂಡಿದೆ ಹಾಗೂ ಸದರಿ ಮೊತ್ತಕ್ಕೆ ಹವಣಿಕೆಯನ್ನು ಸಹ ಕಲ್ಪಿಸಲಾಗಿದೆ.

ಟಿಪ್ಪಣಿ 6 : ಸರಕುಗಳ ವಿವರ

(ಮೊಬಲಗು ರೂ.ಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಸಂಕೇತ	31 ಮಾರ್ಚ್ 2018 ರಂದು ಇದ್ದಂತೆ		31 ಮಾರ್ಚ್ 2017 ರಂದು ಇದ್ದಂತೆ	
I	ಸಾಮಗ್ರಿ ಮತ್ತು ಬಿಡಿಭಾಗಗಳು					
1	**ಬಳಕೆಯಲ್ಲಿಲ್ಲದ/ನಿರುಪಯುಕ್ತ ಆಸ್ತಿಗಳ ತಗ್ಗಿದ ಮೌಲ್ಯ**	16.1	11 11 07 049		12 90 89 906	
	ಕಳೆಯಿರಿ:ಬಳಕೆಯಲ್ಲಿಲ್ಲದ ಸಾಮಾಗ್ರಿಗಳ ಮೇಲಿನ ಹವಣಿಕೆ		8 88 04 085	**2 23 02 964**	10 32 71 924	**2 58 17 982**
2	ಉಗ್ರಾಣದ ದಾಸ್ತಾನು ಲೆಕ್ಕ	22.610	58 75 87 788		59 10 14 499	
3	ಬಾಡಿಗೆ ಆಧಾರದ ಮೇಲೆ ನೀಡಿದ ಸಾಮಗ್ರಿಗಳು	22.732	11 437		11 437	
4	ಇನ್ನು ತಪಾಸಣೆಯಾಗದ ಬಾಕಿ ಇರುವ ಸಾಮಗ್ರಿಗಳು	22.660	–		19 81 518	
	ಉಪ ಮೊತ್ತ			**58 75 99 225**		**59 30 07 454**
II	ಅಧಿಕವಾಗಿ ಕಂಡುಬಂದ ದಾಸ್ತಾನು / ಕೊರತೆ ಕಂಡುಬಂದ ದಾಸ್ತಾನು ತನಿಖೆಗೆ ಒಳಪಡಬೇಕಿರುವುದು					
1	ಅಧಿಕವಾಗಿ ಕಂಡುಬಂದ ದಾಸ್ತಾನು	22.810	– 17 60 990		– 17 75 578	
2	ದಾಸ್ತಾನಿನಲ್ಲಿ ಕಂಡುಬಂದ ಕೊರತೆ	22.820	95 13 774		1 44 69 443	
	ಕಳೆಯಿರಿ: ದಾಸ್ತಾನು ಕೊರತೆಯ ಸಲುವಾಗಿ ಹವಣಿಕೆ		– 95 13 774		–1 44 69 443	
	ಉಪ ಮೊತ್ತ			– 17 60 990		– 17 75 578
	ಮೊತ್ತ			60 81 41 198		61 70 49 858

ಟಿಪ್ಪಣಿ 6.1 :ಸಾಮಗ್ರಿಗಳ ದಾಸ್ತಾನಿನಲ್ಲಿ ವಾಸ್ತವಿಕ ಬೆಲೆಯ 10% ಮೌಲ್ಯದಲ್ಲಿ ರೂ 1,15,08,475 / ಮೌಲ್ಯದ ನಿರುಪಯುಕ್ತ ಎಂದು ಗುರುತಿಸಲಾದ ಸಾಮಾಗ್ರಿಗಳು ಒಳಗೊಂಡಿವೆ (ಹಿಂದಿನ ವರ್ಷ ರೂ 72,16,460/–).

ಟಿಪ್ಪಣಿ 6.2 :ಸಾಮಗ್ರಿ ದಾಸ್ತಾನಿನಲ್ಲಿ ನಿಧಾನ/3 ವರ್ಷಕ್ಕೂ ಮೇಲ್ಪಟ್ಟು ಚಾಲನೆಯಲ್ಲಿಲ್ಲದ ಸಾಮಾಗ್ರಿಗಳ ಮೊತ್ತ ರೂ.24,41,49,637/ – ವರೆಗೂ ಒಳಗೊಂಡಿದೆ (ಹಿಂದಿನ ವರ್ಷ ರೂ.12,04,46,641/–).

ಟಿಪ್ಪಣಿ 6.3 : ಡಬ್ಲು ಯಡಿವಿ ನಲ್ಲಿ ಬಳಕೆಯಲ್ಲಿಲ್ಲದ / ನಿರುಪಯುಕ್ತ ಆಸ್ತಿಗಳ ಡಬ್ಲು ಯಡಿವಿ ಮೊತ್ತ 80% ನಷ್ಟು ಪ್ರಮಾಣದಲ್ಲಿ ಅಡ್ಹೊಕ್ ಆಧಾರದ ಮೇಲೆ ಹವಣಿಕೆಗೆ ಅವಕಾಶ ನೀಡಲಾಗುತ್ತದೆ ಟಿಪ್ಪಣಿ 6.4 :ಬಂಡವಾಳದ ಬಿಡಿಭಾಗಗಳು/ಇನ್ನು ನಿರ್ಮಾಣವಾಗದ ಸಾಮಾಗ್ರಿಗಳನ್ನು ಕಾಮಗಾರಿಗೆ ನೀಡಿರುವ ಸಾಮಾಗ್ರಿಗಳ ದಾಸ್ತಾನಿನಲ್ಲಿ ಒಳಗೊಂಡಿರುತ್ತದೆ.

ಟಿಪ್ಪಣಿ 6.5 : ಈ ವರ್ಷದಲ್ಲಿ ಕಂಪನಿಯು ನಾಲ್ಕು ವಲಯಗಳಿಗೆ ಸಂಬಂಧಿಸಿದಂತೆ (ಬೆಂಗಳೂರು ಮತ್ತು ಬಾಗಲಕೋಟೆ ಹೊರತುಪಡಿಸಿ) ನಿರುಪಯುಕ್ತ ಸಾಮಗ್ರಿಗಳ ಗುರುತಿಸಿ ವರ್ಗೀಕರಿಸಿ ಲೆಕ್ಕೀಕರಿಸುವ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ.

ಟಿಪ್ಪಣಿ 7 : ವ್ಯವಹಾರದ ಸ್ವೀಕೃತಿಗಳು

(ಮೊಬಲಗು ರೂ.ಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಸಂಕೇತ	31 ಮಾರ್ಚ್ 2018 ರಂದು ಇದ್ದಂತೆ		31 ಮಾರ್ಚ್ 2017 ರಂದು ಇದ್ದಂತೆ	
I	(ಅಸುರಕ್ಷಿತ ಮತ್ತು ಯೋಗ್ಯ)					
1	ಪ್ರಸರಣ ಶುಲ್ಕಗಳಿಗೆ ವ್ಯವಹಾರದ ಸ್ವೀಕೃತಿಗಳು					
ಎ)	ಬೆ.ವಿ.ಸ.ಕಂ (ಟಿಪ್ಪಣಿ. 7.2ನ್ನು ಗಮನಿಸಿ)	23.101	112 03 05 192		97 41 91 638	
ಬಿ)	ಮ.ವಿ.ಸ.ಕಂ (ಟಿಪ್ಪಣಿ.. 7.2ನ್ನು ಗಮನಿಸಿ)	23.102	33 38 53 476		39 93 21 784	
ಸಿ)	ಹು.ವಿ.ಸ.ಕಂ	23.103	309 15 00 544		213 09 70 811	
ಡಿ)	ಗು.ವಿ.ಸ.ಕಂ	23.104	85 29 44 630		137 84 63 506	
ಇ)	ಚಾ.ವಿ.ಸ.ನಿ	23.107	84 98 89 058		97 13 82 163	
ಎಫ್)	ದೀರ್ಘಕಾಲದ ಮುಕ್ತ ಪ್ರವೇಶ ಗ್ರಾಹಕ–ದಕ್ಷಿಣ ಪಶ್ಚಿಮ ರೈಲ್ವೆಗಳು	23.108	39 04 530		–	
2	ಅಂತರಾಜ್ಯ ವಿದ್ಯುತ್ ಮಾರಾಟ ಬಾಕಿದಾರರು	23.6	13 27 208		13 27 208	
	ಉಪ ಮೊತ್ತ			**625 37 24 638**		**585 56 57 110**
3	ವ್ಯವಹಾರ ಸ್ವೀಕೃತಿಗಳು–ವಿದ್ಯುತ್ ಸಾಗಾಣಿಕೆ ಶುಲ್ಕ–ಇತರೆ ರಾಜ್ಯಗಳು (ಟಿಪ್ಪಣಿ25.1 ಮತ್ತು. 7.3(ಎ) &7.3(ಬಿ)ನ್ನು ಗಮನಿಸಿ)	28.120		36 57 68 865		145 29 08 293
4	ತೆರೆದ ಪ್ರವೇಶ ಗ್ರಾಹಕರಿಂದ ಮರು ಪಡೆದುಕೊಳ್ಳಬೇಕಾದ ಎಸ್ಎಲ್‌ಡಿಸಿ ವೆಚ್ಚ	28.130		37 282		–
	ಮೊತ್ತ			**661 95 30 785**		**730 85 65 403**

ಟಿಪ್ಪಣಿ 7.1 : ವ್ಯವಹಾರದ ಸ್ವೀಕೃತಿಗಳು

ವಿವರಗಳು	2017–18	2016–17
1) 6 ತಿಂಗಳಿಗೆ ಮೇಲ್ಪಟ್ಟು ಬಾಕಿ ಉಳಿದಿರುವುದು	441 54 22 981	131 55 98 742
2) ಇತರೆ	220 41 07 804	599 29 66 661

ಟಿಪ್ಪಣಿ 7.2 :ಬೆಸ್ಕಾಂ ಮತ್ತು ಮೆಸ್ಕಾಂನಿಂದ ಪಡೆಯಬೇಕಾಗಿರುವ ಪ್ರಸರಣ ಶುಲ್ಕದಲ್ಲಿ ಬೆಸ್ಕಾಂ ಮತ್ತು ಮೆಸ್ಕಾಂ ಕಂಪನಿಯವರು ಪ್ರಸರಣ ಶುಲ್ಕವನ್ನು ಕವಿಪ್ರನಿನಿಗೆ ನಿಗಧಿತ ಅವಧಿಯಲ್ಲಿ ಪಾವತಿಸಿದ ಮೊತ್ತಕ್ಕೆ ರಿಯಾಯಿತಿಯನ್ನು ಪ್ರಸರಣ ಶುಲ್ಕದ ಬಿಲ್ಲಿನಲ್ಲಿ ಮೊತ್ತ ರೂ 69,13,23,430/– (ಹಿಂದಿನ ವರ್ಷ: ರೂ.41,98,15,087/–) ಗಳನ್ನು ಕಡಿತ ಮಾಡಿ ಪಾವತಿಸಿರುತ್ತಾರೆ. ಕವಿಪ್ರನಿನಿಯು ಸದರಿ ರಿಯಾಯಿತಿಯು 2012ರ ಪ್ರಸರಣ ಒಪ್ಪಂದದ ನಿಯಮಕ್ಕೆ ವಿರುದ್ಧವಾಗಿದೆ ಎಂದು ತಿಳಿಸಿ ಕವಿನಿ ಆಯೋಗದ ಮುಂದೆ ದಾವೆ/ ಅರ್ಜಿಯನ್ನು ಸಲ್ಲಿಸಲಾಗಿದೆ. ಬೆಸ್ಕಾಂ ಮತ್ತು ಮೆಸ್ಕಾಂ ಕಂಪನಿಯು ರಿಯಾಯಿತಿಯ ಮೊತ್ತವನ್ನು ಏಕಪಕ್ಷಿಯವಾಗಿ ನಿರ್ಣಯ ಕೈಗೊಂಡು ಪ್ರಸರಣ ಶುಲ್ಕದ ಬಿಲ್ಲಿನಲ್ಲಿ ಕಡಿತಗೊಳಿಸುತ್ತಿದೆ. ಸದರಿ ಕಡಿತಗೊಳಿಸಿದ ಮೊತ್ತವನ್ನು ಸ್ವೀಕೃತವಾಗಬೇಕಾದ ಪ್ರಸರಣ ಶುಲ್ಕದ ಮೊತ್ತದಲ್ಲಿ ಒಳಗೊಂಡಿರುತ್ತದೆ. ಕವಿನಿ ಆಯೋಗವು ದರ ಪಟ್ಟಿ ಆದೇಶ ದಿನಾಂಕ 11.04.2017ರಲ್ಲಿ ರಿಯಾಯಿತಿಯ ಕುರಿತು ಕವಿಪ್ರನಿನಿ ಮತ್ತು ಎಸ್ಕಾಂಗಳ ನಡುವೆ ಉಂಟಾದ 2012 ರ ಪ್ರಸರಣ ಒಪ್ಪಂದದನ್ವಯ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ನಿರ್ದೇಶನ ನೀಡಿದೆ. ಬೆಸ್ಕಾಂ ಮತ್ತು ಮೆಸ್ಕಾಂಗಳು ಪ್ರಸರಣ ಶುಲ್ಕದಲ್ಲಿ ಕಡಿತ ಮಾಡಿದ ರಿಯಾಯಿತಿ ಮೊತ್ತವನ್ನು ಕವಿಪ್ರನಿನಿಗೆ ಪಾವತಿಸಬೇಕು.

ಟಿಪ್ಪಣಿ.7.3(ಎ) : ಅಂತರಾಜ್ಯ ಪ್ರಸರಣ ಮಾರ್ಗಗಳ ಪ್ರಸರಣ ಶುಲ್ಕವನ್ನು 01.04.2014 ರಿಂದ 31.03.2018ರವರೆಗಿನ ಅವಧಿಗೆ ಪಿಜಿಸಿಐಎಲ್ ನಿಂದ ಸಿಇಆರ್‌ಸಿ ನಿರ್ಧರಿಸಿದ ಧರಗಳನ್ವಯ 2011–14 ರ ಒಪ್ಪಂದದ ಅವಧಿಗೆ ಸ್ವೀಕರಿಸಲಾಗಿದೆ. ಕವಿಪ್ರನಿನಿಯು ಪಿಜಿಸಿಐಎಲ್‌ನೊಂದಿಗೆ ಒಪ್ಪಂದ ಮಾಡಿಕೊಂಡ ನಂತರ ಸಿಇಆರ್‌ಸಿಯಲ್ಲಿ 2014–19ರ ಅವಧಿಗೆ ಧರ ನಿರ್ಣಯ ಕೈಗೊಳ್ಳಲು ಅರ್ಜಿ/ ದಾವೆಯನ್ನು ಸಲ್ಲಿಸಿದೆ.

ಟಿಪ್ಪಣಿ 7.3(ಬಿ) : ವ್ಯವಹಾರ ಸ್ವೀಕೃತಿ ಮೊತ್ತ ರೂ.36,57,68,865/– (ಹಿಂದಿನ ವರ್ಷ ರೂ.1,45,29,08,293/–) ಗಳಲ್ಲಿ ಟಿಎನ್‌ಇಬಿ ಯಿಂದ ದಿನಾಂಕ 31.03.2011 ರಿಂದ ಬಾಕಿಯಿರುವ ಮೊತ್ತ ರೂ. 2,52,87,771/– ವೀಲ್ಹಿಂಗ್ ಶುಲ್ಕವು ಒಳಗೊಂಡಿರುತ್ತದೆ. (ಹಿಂದಿನ ವರ್ಷ ರೂ.2,52,87,771/–) (ಸದರಿ ವೀಲ್ಹಿಂಗ್ ಶುಲ್ಕವನ್ನು ಪೂಲಿಂಗ್ ಮತ್ತು ಹಂಚಿಕೆ ಆಧಾರದಲ್ಲಿ ಪರಿಗಣಿಸಲಾಗಿದೆ).

ಟಿಪ್ಪಣಿ 8: ನಗದು ಮತ್ತು ನಗದಿಗೆ ಸಮಾನವಾದದ್ದು

(ಮೊಬಲಗು ರೂ.ಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಸಂಕೇತ	31 ಮಾರ್ಚ್ 2018 ರಂದು ಇದ್ದಂತೆ		31 ಮಾರ್ಚ್ 2017 ರಂದು ಇದ್ದಂತೆ	
I	**ನಗದು ಮತ್ತು ನಗದಿಗೆ ಸಮಾನವಾದದ್ದು**					
1	ಕೈಯಲ್ಲಿರುವ ನಗದು	24.110	1 28 158		2 07 494	
2	ಕೈ ಹಣ	24.210	30 11 500		29 75 500	
3	ಬ್ಯಾಂಕಿನಲ್ಲಿರುವ ಉಳಿಕೆ (ಟಿಪ್ಪಣಿ. 8.1 ನ್ನು ಗಮನಿಸಿ)		125 79 32 547		185 61 43 135	
4	ಕೈಯಲ್ಲಿರುವ ಚೆಕ್ಕು		55 86 897		–	
II	**ಇತರೆ**					
1	ಸರ್ಕಾರಿ ಖಜಾನೆ	24.850	81 976		81 976	
2	ಕೈಯಲ್ಲಿರುವ ಅಂಚೆ ಚೀಟಿಗಳು	24.120	1 56 228		98 330	
3	ಚಾಲನೆಯಲ್ಲಿರುವ ನಿಧಿ	24.5, 24.6	3 62 43 044		10 41 31 000	
	ಮೊತ್ತ			130 31 40 350		196 36 37 435

ಟಿಪ್ಪಣಿ 8.1: ನಿಗಮದ ಉಪಯೋಗಕ್ಕೆ ಲಭ್ಯತೆವಿಲ್ಲದ ರೂ.5,23,940/–(ಹಿಂದಿನ ವರ್ಷ ರೂ. 26,19,116) ಗಳನ್ನು ಪಿಂಚಣಿ ಭದ್ರತಾ ನಿಧಿಗೆ ಮೀಸಲಿಡಲಾಗಿದೆ ಹಾಗೂ ರೂ.13,623/–(ಹಿಂದಿನ ವರ್ಷ ರೂ. 5750) ಗಳನ್ನು ಕುಟುಂಬ ಹಿತ ನಿಧಿಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನವಾದ ರೂ.2,25,29,289/– (ಹಿಂದಿನ ವರ್ಷ ರೂ.3,74,27,424) ಗಳನ್ನು ಅಲ್ಪಾವಧಿ ಓಪನ್ ಆಕ್ಸೆಸ್ಸ್ ಗ್ರಾಹಕರಿಂದ ಯು.ಐ ಚಾರ್ಜ್‌ಗೆ ಪಡೆಯಲಾಗಿದ್ದು ಸದರಿ ಮೊತ್ತವನ್ನು ವಿಸಕಂಗಳೊಂದಿಗೆ ಪಾವತಿಸುವುದು/ಹೊಂದಾಣಿಕೆ ಮಾಡಿಕೊಳ್ಳಬೇಕಾಗಿದೆ. ನಗದು ಮತ್ತು ನಗದು ಸಮಾನತೆ ರೂ.81,976 (ಹಿಂದಿನ ವರ್ಷ ರೂ.81,976) ಸರ್ಕಾರದ ಖಜಾನೆಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನ ಮೌಲ್ಯಗಳ ರೂ.25,000 (ಹಿಂದಿನ ವರ್ಷ ರೂ. 6,04,00,000) ಮತ್ತು ರೂ.52,131 (ಹಿಂದಿನ ವರ್ಷ ರೂ.76,81,20,000) ಅನುಕ್ರಮವಾಗಿ ಜಿಇಸಿ ಮತ್ತು ಪಿಎಸ್‌ಡಿಎಫ್ ಅನುದಾನಗಳನ್ನು ಮೀಸಲಿಡಲಾಗಿದೆ.

ಟಿಪ್ಪಣಿ 9 : ಇತರೆ ಬ್ಯಾಂಕ್ ಉಳಿಕೆಗಳು

(ಮೊಬಲಗು ರೂ.ಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಸಂಕೇತ	31 ಮಾರ್ಚ್ 2018 ರಂದು ಇದ್ದಂತೆ		31 ಮಾರ್ಚ್ 2017 ರಂದು ಇದ್ದಂತೆ	
1	3 ತಿಂಗಳ ಗಡುವಿನ ಮೇಲ್ಪಟ್ಟ ಠೇವಣಿಗಳು	" 20.280 24.882 28.210"	3 98 06 229		2 35 80 058	
2	ನೌಕರರ ಕಲ್ಯಾಣ ನಿಧಿ ಬಾಕಿ (ಟಿಪ್ಪಣಿ 9.1ನ್ನು ಗಮನಿಸಿ)		86 32 74 550		77 69 25 156	
	ಮೊತ್ತ			90 30 80 779		80 05 05 214

ಟಿಪ್ಪಣಿ 9.1 : ಕುಟುಂಬ ಹಿತ ನಿಧಿ ಮತ್ತು ಪಿಂಚಣಿ ಭದ್ರತಾ ನಿಧಿಯ ವಿವರಗಳು

(ಮೊಬಲಗು ರೂ.ಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಸಂಕೇತ	31 ಮಾರ್ಚ್ 2018 ರಂದು ಇದ್ದಂತೆ		31 ಮಾರ್ಚ್ 2017 ರಂದು ಇದ್ದಂತೆ	
1	ಕುಟುಂಬ ಹಿತ ನಿಧಿ	24.882		69 37 70 328		63 62 84 334
2	ಪಿಂಚಣಿ ಭದ್ರತಾ ನಿಧಿ	20.280		15 12 00 000		12 36 00 000
3	ಮೇಲ್ಕಂಡ ನಿಧಿಗಳ ಮೇಲಿನ ಸಂಚಿತ ಬಡ್ಡಿ	20.280, 28.210		1 83 04 222		1 70 40 822
	ಮೊತ್ತ			86 32 74 550		77 69 25 156

ಟಿಪ್ಪಣಿ 10 : ಸಾಲಗಳು

(ಮೊಬಲಗು ರೂ.ಗಳಲ್ಲಿ)

ಕ್ರ.ಸಂ	ವಿವರಗಳು	ಲೆಕ್ಕ ಸಂಕೇತ	31 ಮಾರ್ಚ್ 2018 ರಂದು ಇದ್ದಂತೆ		31 ಮಾರ್ಚ್ 2017 ರಂದು ಇದ್ದಂತೆ	
	ನಗದಾಗಿ/ಇತರೆ ನಮೂನೆಯಲ್ಲಿ ವಸೂಲಿ ಮಾಡಬಹುದಾದ ಮುಂಗಡಗಳು					
1	**ಸುರಕ್ಷಿತ ಉತ್ತಮವಾದುದೆಂದು ಮಾನ್ಯ ಮಾಡಿದ್ದು**					
	ಸಿಬ್ಬಂದಿಗೆ ಮುಂಗಡ–ಬಡ್ಡಿ ಸಹಿತ	27.101 ರಿಂದ 27.106	10 800		23 434	
2	**ಅಸುರಕ್ಷಿತ ಉತ್ತಮವಾದುದೆಂದು ಮಾನ್ಯ ಮಾಡಿದ್ದು**					
ಎ)	ಸಿಬ್ಬಂದಿಗೆ ಮುಂಗಡ –ಬಡ್ಡಿ ರಹಿತ	27.201 ರಿಂದ 27.210	2 31 17 983		2 45 73 104	
